ಮಂಗಳವಾರ, ಡಿಸೆಂಬರ್ 13, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಆರೋಗ್ಯವೆಂದರೆ ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸುಸ್ಥಿತಿ.

ನವ ಭಾರತಕ್ಕಾಗಿ
ನವ ಕರ್ನಾಟಕ

ದೊಡ್ಡ ಜವಾಬ್ದಾರಿ, ದೊಡ್ಡ ಮಹತ್ವಾಕಾಂಕ್ಷೆಗಳು.

"ಭಾರತದ ಜಿ20 ಅಧ್ಯಕ್ಷತೆ ಮಹತ್ವಾಕಾಂಕ್ಷಿ, ನಿರ್ಣಾಯಕ ಹಾಗೂ ಕ್ರಿಯಾ-ಪ್ರಧಾನವಾಗಿರುತ್ತದೆ."
– ಪ್ರಧಾನಮಂತ್ರಿ ನರೇಂದ್ರ ಮೋದಿ

ಭಾರತದ ಜಿ20 ಅಧ್ಯಕ್ಷತೆ ಹೊಸ ಆಲೋಚನೆಗಳು ಹಾಗೂ ಸಂಘಟಿತ ಕ್ರಿಯೆಯನ್ನು ಕ್ಷಿಪ್ರಗೊಳಿಸಲಿದೆ.

ವಿಶ್ವದ ಅತೀ ದೊಡ್ಡ ಪ್ರಜಾಪ್ರಭುತ್ವವಾದ ಭಾರತ ಜಾಗತಿಕ ನಾಯಕತ್ವವನ್ನು ವಹಿಸಿಕೊಂಡು, ಜಿ20 ಕಮ್ಮಟದಲ್ಲಿ ಭಾರತ ತನ್ನ ನಿರ್ಣಾಯಕ ಹಾಗೂ ಕ್ರಿಯಾ-ಪ್ರಧಾನವಾದ ದೃಷ್ಟಿಕೋನದೊಂದಿಗೆ ಸರ್ವರಿಗೂ ಉತ್ತಮ ಭವಿಷ್ಯಕ್ಕೆ ನಾಂದಿ ಹಾಡಲಿದೆ.

ಭಾರತದ ವೈವಿಧ್ಯತೆ, ಸಂಪ್ರದಾಯಗಳು ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ವಿಶ್ವದ ವಿವಿಧ ರಾಷ್ಟ್ರಗಳಿಂದ ಆಗಮಿಸುತ್ತಿರುವ ಅತಿಥಿಗಳಿಗೆ ಪರಿಚಯಿಸಲು ಜಿ20 ಸಭೆಗಳನ್ನು ನಮ್ಮ ದೇಶದ ವಿವಿಧ ನಗರಗಳಲ್ಲಿ ಆಯೋಜಿಸಲಾಗಿದೆ.

ದೇಶದ ಮಾಹಿತಿ ತಂತ್ರಜ್ಞಾನ ರಾಜಧಾನಿ ಬೆಂಗಳೂರಿಗೆ ಆಗಮಿಸುತ್ತಿರುವ ಜಿ20 ಪ್ರತಿನಿಧಿಗಳಿಗೆ ಭಾರತ ಸ್ವಾಗತ ಕೋರುತ್ತದೆ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಡಿಸೆಂಬರ್ 2022ರಲ್ಲಿ ಬೆಂಗಳೂರಿನಲ್ಲಿ ನಡೆಯಲಿರುವ ಜಿ20 ಸಭೆಗಳು

ಡಿಸೆಂಬರ್ 13 ರಿಂದ 15ರವರೆಗೆ	ಡಿಸೆಂಬರ್ 16 & 17
ಹಣಕಾಸು ಹಾಗೂ ಕೇಂದ್ರ ಬ್ಯಾಂಕ್‌ನ ಪ್ರತಿನಿಧಿಗಳ ಸಭೆ	ನಿಯಮಾವಳಿ ರೂಪಿಸುವ ಕಾರ್ಯಕಾರಿ ಗುಂಪಿನ ಸಭೆ

G20 भारत 2023 INDIA
वसुधैव कुटुम्बकम्
ONE EARTH • ONE FAMILY • ONE FUTURE

/@g20org /g20org /g20org /@g20orgindia

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಎಸ್ಸೆಸ್ಸೆಲ್ಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೂ ಇಲ್ಲ ಸೀಟು

ಪಿಯು: ಪ್ರವೇಶಕ್ಕೆ ಪ್ರತ್ಯೇಕ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಪದವಿಪೂರ್ವ ಕಾಲೇಜುಗಳು ನಿಯಮ ಉಲ್ಲಂಘಿಸಿ ಪ್ರತ್ಯೇಕವಾಗಿ ಪ್ರವೇಶ ಪರೀಕ್ಷೆ ನಡೆಸುತ್ತಿದ್ದು, ಇದರಿಂದ ಎಸ್ಸೆಸ್ಸೆಲ್ಸಿಯಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೂ ಸೀಟು ದೊರೆಯುತ್ತಿಲ್ಲ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರತ್ಯೇಕ ಪರೀಕ್ಷಾ ಪದ್ಧತಿ ಅನುಸರಿಸಲಾಗುತ್ತಿದೆ. ಅದರಲ್ಲೂ ವಿಜ್ಞಾನ ವಿಷಯಗಳಿಗೆ ಬಹುತೇಕ ಖಾಸಗಿ ಪಿಯು ಕಾಲೇಜುಗಳು ಪರೀಕ್ಷೆ ನಡೆಸುತ್ತಿವೆ. ಪದವಿಪೂರ್ವ ಶಿಕ್ಷಣ ಇಲಾಖೆಗೆ ಈ ಕುರಿತು ಮಾಹಿತಿ ಇದ್ದರೂ, ಜಾಣಮೌನ ವಹಿಸಿದೆ ಎನ್ನುವುದು ಹಲವು ಪೋಷಕರು ಹಾಗೂ ವಿದ್ಯಾರ್ಥಿಗಳ ದೂರು.

ಕೆಲ ಕಾಲೇಜುಗಳು ಎಸ್ಸೆಸ್ಸೆಲ್ಸಿಯಲ್ಲಿ ಶೇ 95ಕ್ಕಿಂತ ಹೆಚ್ಚು ಅಂಕ ಪಡೆದವರಿಗೆ ನೇರ ಪ್ರವೇಶ ನೀಡಿ, ಅದಕ್ಕಿಂತ ಕಡಿಮೆ ಅಂಕ ಪಡೆದ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳ ಬಹುಆಯ್ಕೆಯ ಪ್ರಶ್ನೆಗಳ ಮೂಲಕ ಪ್ರವೇಶ ಪರೀಕ್ಷೆ ನಡೆಸುತ್ತವೆ. ವಿದ್ಯಾರ್ಥಿಗಳು ಗಳಿಸಿದ ಅಂಕಗಳ ಆಧಾರದ ಮೇಲೆ ನಿಗದಿತ ಸೀಟುಗಳನ್ನು ಭರ್ತಿಮಾಡಿಕೊಳ್ಳಲಾಗುತ್ತಿದೆ. ತಾವು ಅನುಸರಿಸುತ್ತಿರುವ ಇಂತಹ ಪ್ರತ್ಯೇಕ ಪರೀಕ್ಷಾ ಪದ್ಧತಿಯನ್ನು ಹಲವು ಶಿಕ್ಷಣ ಮಂಡಳಿಗಳು ಸಮರ್ಥಿಸಿಕೊಳ್ಳುತ್ತವೆ.

‘ಎಸ್ಸೆಸ್ಸೆಲ್ಸಿಯಲ್ಲಿ ಉತ್ತಮ ಅಂಕ ಸಾಮಾನ್ಯ. ವಿದ್ಯಾರ್ಥಿಗಳ ನೈಜ ಪ್ರತಿಭೆ ಒರೆಗೆ ಹಚ್ಚಲು ಪರೀಕ್ಷೆ ಅನಿವಾರ್ಯ. ಸಿಬಿಎಸ್‌ಸಿ, ಐಸಿಎಸ್‌ಇ ಪಠ್ಯಕ್ರಮದ 10ನೇ ತರಗತಿ ಪರೀಕ್ಷೆಯ ಫಲಿತಾಂಶ ತಡವಾಗಿ ಬರುವ ಕಾರಣ, ಆ ವಿದ್ಯಾರ್ಥಿಗಳಿಗೂ ಕೆಲವು ಸೀಟುಗಳನ್ನು ಮೀಸಲಿರಿಸಲು ಪ್ರವೇಶ ಪರೀಕ್ಷೆ ನಡೆಸಲಾಗುತ್ತಿದೆ’ ಎನ್ನುತ್ತಾರೆ ಬೆಂಗಳೂರಿನ ಪ್ರತಿಷ್ಠಿತ ಖಾಸಗಿ ಕಾಲೇಜೊಂದರ ಪ್ರಾಂಶುಪಾಲ ದೇವರಾಜ್.

‘ಗಣಿತ, ವಿಜ್ಞಾನದಲ್ಲಿ ವಿದ್ಯಾರ್ಥಿಗಳ ತಿಳಿವಳಿಕೆಯ ಮಟ್ಟ ಅರ್ಥೈಸಿಕೊಳ್ಳಲು ಪ್ರವೇಶ ಪರೀಕ್ಷೆ ನಡೆಸುತ್ತೇವೆ. ಕೆಲ ಭಾಗಗಳ ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ನಕಲು ನಡೆಯುತ್ತವೆ. ಪ್ರವೇಶ ಪರೀಕ್ಷೆ ನಡೆಸಿದರೆ ಅರ್ಹ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲು ಸಹಕಾರಿಯಾಗುತ್ತದೆ’ ಎನ್ನುತ್ತಾರೆ ಕಲಬುರಗಿ ಶ್ರೀಗುರು ಪಿಯು ಕಾಲೇಜು ಪ್ರಾಂಶುಪಾಲ ನಿತಿನ ನಾಯಕ್.

‘ಸೀಟುಗಳು ಸೀಮಿತವಾಗಿವೆ. ಹೆಚ್ಚಿನ ವಿದ್ಯಾರ್ಥಿಗಳು ಅರ್ಜಿ ಹಾಕುವುದರಿಂದ ಎಲ್ಲರಿಗೂ ಪ್ರವೇಶ ನೀಡಲು ಆಗದು. ಫಲಿತಾಂಶದ ಬಳಿಕ ಯಾವ ವಿದ್ಯಾರ್ಥಿ ಜೆಇ, ಸಿಇಟಿ, ನೀಟ್ ಪರೀಕ್ಷೆಯಲ್ಲಿ ತೇರ್ಗಡೆ ಆಗಬಹುದು ಎಂದು ಸ್ಪಷ್ಟವಾಗಿ ತಿಳಿಯುತ್ತದೆ’ ಎನ್ನುತ್ತಾರೆ ಗುರುಕುಲ ಕಾಲೇಜು ಪ್ರಾಂಶುಪಾಲ ಹರೀಶ ದೇಶಪಾಂಡೆ.

‘ವಿಜ್ಞಾನ ವಿಷಯಕ್ಕೆ ಪ್ರವೇಶ ಬಯಸುವ ಬಹುತೇಕ ವಿದ್ಯಾರ್ಥಿಗಳು ಶೇ 95ಕ್ಕಿಂತ ಅಧಿಕ ಅಂಕ ಗಳಿಸುತ್ತಾರೆ. ಅವರಲ್ಲೇ ಕೆಲವರನ್ನು ಆಯ್ಕೆ ಮಾಡಲು ಪ್ರವೇಶ ಪರೀಕ್ಷೆ ನಡೆಸುತ್ತೇವೆ. ಉತ್ತಮ ಅಂಕ ಪಡೆದವರಿಗೆ ಶುಲ್ಕದಲ್ಲಿ ವಿನಾಯಿತಿ ನೀಡುತ್ತೇವೆ’ ಎನ್ನುತ್ತಾರೆ ದಾವಣಗೆರೆಯ ಸರ್ ಎಂ.ವಿ. ಪಿಯು ಕಾಲೇಜಿನ ಕಾರ್ಯದರ್ಶಿ ಎಸ್.ಜೆ. ಶ್ರೀಧರ್.

> **ಪಿಯು ಕಾಲೇಜುಗಳು ಪ್ರತ್ಯೇಕ ಪರೀಕ್ಷೆ ನಡೆಸುವ ಕುರಿತು ಮಾಹಿತಿ ಇಲ್ಲ. ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕರಿಂದ ಮಾಹಿತಿ ಪಡೆಯಲಾಗುವುದು**
> **ರಿತೀಶ್‌ಕುಮಾರ್ ಸಿಂಗ್,** ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ

> **ಗಣಿತ, ವಿಜ್ಞಾನ ವಿಷಯದಲ್ಲಿ 100 ಅಂಕ ಬಂದಿತ್ತು. ಪ್ರತಿಷ್ಠಿತ ಕಾಲೇಜಿನ ಪ್ರವೇಶ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದವು. ಆ ಕಾಲೇಜಿಗೆ ಸೇರುವ ಕನಸು ಈಡೇರಲಿಲ್ಲ**
> **ಸಾತ್ವಿಕ್ ಗೌಡ,** ಪಿಯು ವಿದ್ಯಾರ್ಥಿ, ವಿಜಯನಗರ, ಬೆಂಗಳೂರು

ಅಂಕಗಳೇ ಶುಲ್ಕದ ಮಾನದಂಡ

ವಿದ್ಯಾರ್ಥಿಗಳು ಪ್ರವೇಶ ಪರೀಕ್ಷೆಯಲ್ಲಿ ಪಡೆಯುವ ಅಂಕಗಳ ಆಧಾರದಲ್ಲಿ ಹಲವು ಕಾಲೇಜುಗಳು ಶುಲ್ಕ ನಿಗದಿ ಮಾಡುತ್ತಿವೆ. ಶೇ 100 ತೆಗೆದವರಿಗೆ ಸಂಪೂರ್ಣ ವಿನಾಯಿತಿ, ನಂತರ ಶೇಕಡವಾರು ಆಧಾರದಲ್ಲಿ ಶುಲ್ಕದ ಪ್ರಮಾಣ ನಿಗದಿ ಮಾಡಿವೆ. ‘ಹೆಚ್ಚು ಅಂಕ ಕಡಿಮೆ ಶುಲ್ಕ, ಕಡಿಮೆ ಅಂಕ ಹೆಚ್ಚು ಶುಲ್ಕ’ ನೀತಿ ಅನುಸರಿಸುತ್ತಿವೆ.

ಹುಬ್ಬಳ್ಳಿಯ ವಿದ್ಯಾನಿಕೇತನ ಕಾಲೇಜು ಪ್ರವೇಶ ಪರೀಕ್ಷೆಯಲ್ಲಿ ಟಾಪ್–10, ಟಾಪ್–25 ಸ್ಥಾನ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ಶುಲ್ಕದಲ್ಲಿ ರಿಯಾಯಿತಿ ನೀಡುತ್ತಿದೆ.

‘ಪ್ರವೇಶ ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದರೆ ಕಾಲೇಜು ಶುಲ್ಕದಲ್ಲಿ ವಿನಾಯಿತಿ ದೊರೆಯುತ್ತದೆ. ಆರ್ಥಿಕ ಹೊರೆ ತಗ್ಗುತ್ತದೆ. ಕಾಲೇಜಿನ ಟಾಪ್ ಪ್ಲಸ್ ತರಗತಿಗೆ ಆಯ್ಕೆಯಾದರೆ ನೀಟ್‌ನಂತಹ ಪರೀಕ್ಷೆ ಎದುರಿಸಲು ವಿಶೇಷ ತರಬೇತಿ ಕೊಡುತ್ತಾರೆ’ ಎನ್ನುತ್ತಾರೆ ವಿದ್ಯಾರ್ಥಿ ಪೋಷಕ ವಿದ್ಯಾಸಾಗರ ಗೋಗಿ.

ಉನ್ನತ ಶಿಕ್ಷಣ: ಸಮಸ್ಯೆ ಪರಿಹಾರಕ್ಕೆ ಪೋರ್ಟಲ್

ಬೆಂಗಳೂರು: ‘ಉನ್ನತ ಶಿಕ್ಷಣ ಇಲಾಖೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಕುಂದುಕೊರತೆಗಳನ್ನು ಸುಲಭವಾಗಿ ಪರಿಹರಿಸಲು ಸಮಗ್ರ ಪೋರ್ಟಲ್ ಅಭಿವೃದ್ಧಿಪಡಿಸಲಾಗುತ್ತಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥನಾರಾಯಣ ಹೇಳಿದ್ದಾರೆ.

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು, ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಮತ್ತು ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರು ಹಾಗೂ ಬೋಧಕರನ್ನು ಉದ್ದೇಶಿಸಿ ವರ್ಚುವಲ್ ಮೂಲಕ ಅವರು ಸೋಮವಾರ ಮಾತನಾಡಿದರು.

‘ಇಲಾಖೆಯ ಸಿಬ್ಬಂದಿ ಎದುರಿಸುತ್ತಿರುವ ಸಮಸ್ಯೆಗಳನ್ನು ಸಾಧ್ಯವಾದಷ್ಟು ನ್ಯಾಯಾಲಯದ ಹೊರಗೆಯೇ ನಿವಾರಿಸಲು ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ. ಇದರ ಭಾಗವಾಗಿ ಪೋರ್ಟಲ್ ಸಿದ್ಧಪಡಿಸಲಾಗುತ್ತಿದೆ. ಇದನ್ನು ಸುಶಾಸನ ದಿನವಾದ ಡಿಸೆಂಬರ್ 25ರಂದು ಉದ್ಘಾಟಿಸಲಾಗುವುದು’ ಎಂದು ತಿಳಿಸಿದರು.

‘ಉನ್ನತ ಶಿಕ್ಷಣದ ಹಂತದಲ್ಲಿ ‘ಓಪನ್ ಎಲೆಕ್ಟೀವ್ಸ್’ ಕುರಿತು ಜಾಗೃತಿ ಮೂಡಿಸಬೇಕು’ ಎಂದರು.

ಸುದ್ದಿ 2 ನಿಮಿಷ

ಸಾರಿಗೆ ನೌಕರರ ವೇತನ ಪರಿಷ್ಕರಣೆಗೆ ಕ್ರಮ: ಶ್ರೀರಾಮುಲು

ಮಾನ್ವಿ (ರಾಯಚೂರು): ‘ರಾಜ್ಯದ ನಾಲ್ಕು ರಸ್ತೆ ಸಾರಿಗೆ ನಿಗಮಗಳ ಎಲ್ಲ ನೌಕರರ ವೇತನ ಪರಿಷ್ಕರಣೆಗೆ ಶೀಘ್ರವೇ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು ಭರವಸೆ ನೀಡಿದರು.

ಸೋಮವಾರ ಪಟ್ಟಣದಲ್ಲಿ ₹ 6 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ನೂತನ ಬಸ್ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಸಾರಿಗೆ ಸಂಸ್ಥೆಯ ನೌಕರರಿಗೆ 2016ರಿಂದ ವೇತನ ಪರಿಷ್ಕರಣೆ ಆಗಿಲ್ಲ. ಈ ಬೇಡಿಕೆ ಅನ್ವಯ 4 ನಿಗಮಗಳ ನೌಕರರ ವೇತನ ಪರಿಷ್ಕರಣೆಗೆ ₹ 4 ಸಾವಿರ ಕೋಟಿ ಅನುದಾನದ ಅವಶ್ಯಕತೆ ಇದೆ. ಈ ಕುರಿತು ಅಧಿಕಾರಿಗಳು ಹಾಗೂ ಮುಖ್ಯಮಂತ್ರಿ ಜತೆಗೆ ಚರ್ಚಿಸಿದ್ದು, ಶೀಘ್ರದಲ್ಲಿ ವೇತನ ಪರಿಷ್ಕರಣೆ ಬೇಡಿಕೆ ಈಡೇರಲಿದೆ. ಪ್ರತಿ ತಿಂಗಳು ನಿಗದಿತ ಸಮಯಕ್ಕೆ 1ನೇ ತಾರೀಖಿಗೆ ನೌಕರರಿಗೆ ವೇತನ ಪಾವತಿಸಲಾಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ರಾಜ್ಯದ ಹಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಹಲವೆಡೆ ಮಂಗಳವಾರ ಹಾಗೂ ಬುಧವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಪ್ರದೇಶದ ಎಲ್ಲ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಾಮರಾಜನಗರ, ಚಿಕ್ಕಮಗಳೂರು, ಕೊಡಗು, ಮೈಸೂರು, ಶಿವಮೊಗ್ಗ ಜಿಲ್ಲೆಯ ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಸೂಚನೆ ನೀಡಿದೆ.

ಕರಾವಳಿ ತೀರದಲ್ಲಿ ಗಾಳಿಯ ವೇಗವು ಗಂಟೆಗೆ 40– 45 ಕಿ.ಮೀ. ಇರಲಿದ್ದು, 55 ಕಿ.ಮೀವರೆಗೂ ತಲುಪುವ ಸಾಧ್ಯತೆಯಿದೆ. ಈ ಅವಧಿಯಲ್ಲಿ ಮೀನುಗಾರರು ಸಮುದ್ರಕ್ಕೆ ತೆರಳದಂತೆ ಸೂಚಿಸಲಾಗಿದೆ.

ಮೀನುಗಾರರ ರಕ್ಷಣೆ: ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಉಚ್ಚಿಲದಲ್ಲಿ ಕಡಲು ಪ್ರಕ್ಷುಬ್ಧಗೊಂಡಿರುವ ಪರಿಣಾಮ ದೋಣಿ ಮುಳುಗಿದೆ. ದೋಣಿಯಲ್ಲಿದ್ದ 7 ಮೀನುಗಾರರನ್ನು ರಕ್ಷಣೆ ಮಾಡಲಾಗಿದೆ.

ಬೆಂಗಳೂರಿನಲ್ಲಿ ಇನ್ನೂ ಎರಡು ದಿನ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗಲಿದೆ. ಚಳಿಯ ತೀವ್ರತೆ ಹೆಚ್ಚಿರಲಿದೆ ಎಂದು ತಿಳಿಸಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಹಾಸನ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸೋಮವಾರವೂ ಮಳೆಯಾಗಿತ್ತು.

24 ಗಂಟೆಯ ಅವಧಿಯಲ್ಲಿ ಶಿವಮೊಗ್ಗ ಜಿಲ್ಲೆಯ ಹುಂಚದಕಟ್ಟೆ ಹಾಗೂ ಚಾಮರಾಜನಗರದಲ್ಲಿ 4 ಸೆಂ.ಮೀ, ಗಂಗಾವತಿ, ಕೊಳ್ಳೆಗಾಲ, ಜಯಪುರ, ಬಾಳೆಹೊನ್ನೂರು, ಕೊಪ್ಪ, ಕಳಸ, ಚನ್ನಗಿರಿಯಲ್ಲಿ ತಲಾ 3 ಸೆಂ.ಮೀ, ಹೊನ್ನಾವರ, ಕುಷ್ಟಗಿ, ಗಂಗಾವತಿ, ಹುಕ್ಕೇರಿಯಲ್ಲಿ 2 ಸೆಂ.ಮೀ ಮಳೆಯಾಗಿದೆ.

ಕಾಂಗ್ರೆಸ್ ಒಕ್ಕಲಿಗ ಪ್ರಮುಖರ ಸಭೆ 15ರಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ‘ಜಾತಿ’ ಓಲೈಕೆಯ ರಾಜಕೀಯ ಜೋರಾಗುತ್ತಿದ್ದು, ಇದೀಗ ಒಕ್ಕಲಿಗರನ್ನು ಒಟ್ಟುಗೂಡಿಸುವ ರಣತಂತ್ರ ರೂಪಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ.

ಕಾಂಗ್ರೆಸ್‌ನಲ್ಲಿರುವ ಒಕ್ಕಲಿಗ ನಾಯಕರು ಇದೇ 15ರಂದು ನಗರದ ಹೋಟೆಲೊಂದರಲ್ಲಿ ಸಭೆ ಸೇರಿ ಚರ್ಚಿಸಲು ನಿರ್ಧರಿಸಿದ್ದಾರೆ. ಈ ಸಭೆಯ ನೇತೃತ್ವವನ್ನು ಶಾಸಕ ಕೃಷ್ಣ ಬೈರೇಗೌಡ ಮತ್ತು ಮಾಜಿ ಶಾಸಕ ಚೆಲುವರಾಯಸ್ವಾಮಿ ವಹಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಒಕ್ಕಲಿಗ ಉಪ ಪಂಗಡಗಳನ್ನು ಒಳಗೊಂಡ ರಾಜ್ಯದ ಇತರ ಹಿಂದುಳಿದ ವರ್ಗಗಳ ‘ಪ್ರವರ್ಗ–3ಎ’ಗೆ ನೀಡಲಾಗಿರುವ ಮೀಸಲಾತಿ ಪ್ರಮಾಣವನ್ನು ಮುಂಬರುವ ಜನವರಿ 23ರ ಒಳಗೆ ಶೇ 4 ರಿಂದ ಶೇ 12ಕ್ಕೆ ಹೆಚ್ಚಿಸಬೇಕು ಎಂದು ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿ ಪಟ್ಟು ಹಿಡಿದಿದೆ. ಗಡುವಿನೊಳಗೆ ಬೇಡಿಕೆ ಈಡೇರಿಸದಿದ್ದರೆ ರಾಜ್ಯವ್ಯಾಪಿ ಹೋರಾಟ ಹಮ್ಮಿಕೊಳ್ಳುವುದಾಗಿ ಬೆದರಿಕೆ ಒಡ್ಡಿದೆ. ಈ ಮಧ್ಯೆ, ಕಾಂಗ್ರೆಸ್ಸಿನ ಒಕ್ಕಲಿಗ ನಾಯಕರು ಒಟ್ಟುಗೂಡಲು ನಿರ್ಧರಿಸಿದ್ದಾರೆ.

‘ಒಕ್ಕಲಿಗರನ್ನು ಪಕ್ಷದತ್ತ ಸೆಳೆಯಲು ರೂಪಿಸಬೇಕಾದ ಕಾರ್ಯಯೋಜನೆಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲು ಉದ್ದೇಶಿಸಲಾಗಿದೆ. ಸಮುದಾಯದಿಂದ ಆಯ್ಕೆಯಾಗಿರುವ ಶಾಸಕರು, ಮಾಜಿ ಶಾಸಕರು, ಪ್ರಮುಖ ಮುಖಂಡರು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಒಕ್ಕಲಿಗ ಮತಗಳನ್ನು ಪಕ್ಷದ ಕಡೆ ಸೆಳೆಯುವ ಬಗ್ಗೆಯೂ ಸಮಾಲೋಚನೆ ನಡೆಯಲಿದೆ’ ಎಂದೂ ಮೂಲಗಳು ತಿಳಿಸಿವೆ.

ಜಾಮೀನು ಅರ್ಜಿ ಸೆಷನ್ಸ್ ಕೋರ್ಟ್‌ಗೆ?

ಶಿವಮೂರ್ತಿ ಶರಣರ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣ ● ಇಂದು ವಿಚಾರಣೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಮತ್ತು ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅಡಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಚಿತ್ರದುರ್ಗ ಮುರುಘಾ ಮಠದ ಶಿವಮೂರ್ತಿ ಶರಣರ ಜಾಮೀನು ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಮಂಗಳವಾರಕ್ಕೆ (ಡಿ.13) ಮುಂದೂಡಿದೆ.

ಈ ಸಂಬಂಧ ಶಿವಮೂರ್ತಿ ಶರಣರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಶ್ರೀನಿವಾಸ್ ಹರೀಶ್ ಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಶರಣರ ಪರ ಹಿರಿಯ ವಕೀಲ ಸಿ.ವಿ.ನಾಗೇಶ್ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಹಾಜರಾಗಿ, ಎಫ್‌ಐಆರ್ ದಾಖಲಿಸಿದ ನಂತರ ಸಲ್ಲಿಸಿರುವ ಜಾಮೀನು ಅರ್ಜಿಯ ಮಾರ್ಪಾಡು ಮಾಡಲು ಮತ್ತು ಮಾರ್ಪಾಡಾದ ಅರ್ಜಿ ಆಧರಿಸಿ ವಿಚಾರಣೆ ನಡೆಸುವಂತೆ ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಈಗ ಸಲ್ಲಿಸಿರುವ ಜಾಮೀನು ಅರ್ಜಿ ಎಫ್‌ಐಆರ್ ದಾಖಲಾದ ನಂತರ ಹಾಕಿರುವುದು. ಪ್ರಕರಣದಲ್ಲಿ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಹಾಗಾಗಿ, ನ್ಯಾಯಪೀಠ ದೋಷಾರೋಪ ಪಟ್ಟಿಯನ್ನು ಆಧರಿಸಿಯೇ ವಿಚಾರಣೆ ನಡೆಸುತ್ತದೆ. ಒಂದು ವೇಳೆ ಅರ್ಜಿಯನ್ನು ತಿರಸ್ಕರಿಸಿದರೆ ನೀವು ಸುಪ್ರೀಂ ಕೋರ್ಟ್‌ನಲ್ಲೇ ಮೇಲ್ಮನವಿ ಸಲ್ಲಿಸಬೇಕಾಗುತ್ತದೆ. ಆದ್ದರಿಂದ, ಸೆಷನ್ಸ್ ನ್ಯಾಯಾಲಯದಲ್ಲೇ ಪುನಃ ಹೊಸದಾಗಿ ಜಾಮೀನು ಅರ್ಜಿ ಸಲ್ಲಿಸಬಹುದಲ್ಲವೇ’ ಎಂದು ಅದು ಪ್ರಶ್ನಿಸಿತು.

ಇದಕ್ಕೆ ನಾಗೇಶ್, ಅರ್ಜಿದಾರರನ್ನು ಕೇಳಿ ನ್ಯಾಯಪೀಠಕ್ಕೆ ಈ ಕುರಿತಂತೆ ಅಭಿಪ್ರಾಯ ತಿಳಿಸುವುದಾಗಿ ಒಂದು ದಿನದ ಕಾಲಾವಕಾಶ ಕೋರಿದರು. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿತು. ಶರಣರ ಪರ ಸಂದೀಪ್ ಎಸ್.ಪಾಟೀಲ್ ಹಾಜರಿದ್ದರು.

ವಕಾಲತ್ತಿಗೆ ಆಕ್ಷೇಪ: ಇದೇ ವೇಳೆ ಪ್ರಕರಣದ ಸಂತ್ರಸ್ತೆ ಪರ ಹಾಜರಾಗಲು ಸಂತ್ರಸ್ತೆಯ ತಂದೆ ಪರವಾಗಿ ವಕೀಲ ಎಂ.ಎಂ.ಪ್ರಶಾಂತ್ ವಕಾಲತ್ತು ಸಲ್ಲಿಸಿದರು. ಆದರೆ, ಇದಕ್ಕೆ ‘ಒಡನಾಡಿ’ ಸಂಸ್ಥೆಯ ಪರ ವಕೀಲ ಡಿ.ಸಿ.ಶ್ರೀನಿವಾಸ್ ಆಕ್ಷೇಪ ಎತ್ತಿದರು. ವಕಾಲತ್ತು ಸ್ವೀಕರಿಸಿದ ನ್ಯಾಯಪೀಠ ಈ ಕುರಿತು ಯಾವುದೇ ಆದೇಶ ಹೊರಡಿಸಲಿಲ್ಲ.

ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಶಿವಮೂರ್ತಿ ಶರಣರನ್ನು ಪೊಲೀಸರು 2022ರ ಸೆ.1ರಂದು ಬಂಧಿಸಿದ್ದು ಅಂದಿನಿಂದಲೂ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ.

ಮುರುಘಾ ಮಠದ ವಸತಿ ನಿಲಯದ ತನಿಖೆಗೆ ಸೂಚನೆ

ಮೈಸೂರು: ‘ಮುರುಘಾ ಮಠ ನಡೆಸುತ್ತಿರುವ ‘ಬಸವೇಶ್ವರ ನಿರ್ಗತಿಕ ಮಕ್ಕಳ ಕುಟೀರ’ ಹಾಗೂ ‘ಅಕ್ಕಮಹಾದೇವಿ ವಸತಿನಿಲಯ’ದ ಮಕ್ಕಳ ಹಾಜರಾತಿ, ಪೋಷಣೆ ಮತ್ತು ಅವರ ಬಿಡುಗಡೆ ಪ್ರಕ್ರಿಯೆ ಬಗ್ಗೆ ತನಿಖೆ ನಡೆಸಬೇಕು’ ಎಂದು ಚಿತ್ರದುರ್ಗದ ಹೆಚ್ಚುವರಿ ಜಿಲ್ಲಾಧಿಕಾರಿ ಅಲ್ಲಿನ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸೂಚಿಸಿದ್ದಾರೆ.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ಇದೇ 3ರಂದು ಪತ್ರ ಬರೆದಿರುವ ಅವರು, ‘ಮಕ್ಕಳ ಆರೈಕೆ ಮತ್ತು ರಕ್ಷಣಾ ಕಾಯ್ದೆ–2015ರ ಅಡಿ ಕನಿಷ್ಠ ಮಾರ್ಗಸೂಚಿಗಳನ್ನು ಅನುಸರಿಸುವುದು ಕಡ್ಡಾಯ. ಮಠವು 22 ಅನಾಥ ಮಕ್ಕಳಿಗೆ ಆಶ್ರಯ ಕಲ್ಪಿಸಿದ್ದು, ಮಕ್ಕಳ ಬಗ್ಗೆ ಕೆಲವು ಅಂಶಗಳ ಕುರಿತು ತನಿಖೆ ನಡೆಸಿ ಕ್ರಮ ಜರುಗಿಸಬೇಕು’ ಎಂದು ಕೋರಿದ್ದ ಮೈಸೂರಿನ ‘ಒಡನಾಡಿ’ ಸಂಸ್ಥೆಯ ಮನವಿ ಪತ್ರವನ್ನೂ ಲಗತ್ತಿಸಿದ್ದಾರೆ.

‘ಒಡನಾಡಿ’ ಪತ್ರದಲ್ಲೇನಿದೆ?: ‘22 ಮಕ್ಕಳಲ್ಲಿ 7 ಮಕ್ಕಳು ದಾಖಲಾದ ಸಂದರ್ಭದಲ್ಲಿ 6 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದರು. ಪ್ರಸ್ತುತ ಐವರು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿದ್ದಾರೆ. ಮಕ್ಕಳ ಆರೈಕೆ ಮತ್ತು ರಕ್ಷಣಾ ಕಾಯ್ದೆ–2015ರ ಕಾಯ್ದೆ ಪ್ರಕಾರ ವಿಶೇಷ ಸೌಲಭ್ಯಗಳ ಅವಶ್ಯವಿದ್ದು, ದಾಖಲಾತಿ ಸಮಯದಲ್ಲಿ ಅವು ಲಭ್ಯವಿದ್ದವೇ’ ಎಂದು ಪತ್ರದಲ್ಲಿ ಸಂಸ್ಥೆಯು ಕೇಳಿತ್ತು.

‘ಅನಾಥ ಮಕ್ಕಳ ಸ್ಥಿತಿಗತಿ, ಮಕ್ಕಳ ತಂದೆ– ತಾಯಿಗಳ ಪತ್ತೆಗಾಗಿ ಕೈಗೊಂಡ ಕ್ರಮ, ಯಾವ ಕಾರಣಕ್ಕಾಗಿ ಅನಾಥರು ಎಂಬ ವರದಿ ನೀಡಲಾಗಿದೆ. ಮಕ್ಕಳ ಕಲ್ಯಾಣ ಸಮಿತಿ ಕಾಯ್ದೆಯಲ್ಲಿರುವಂತೆ ಜವಾಬ್ದಾರಿ ನಿರ್ವಹಿಸಿದ್ದರೇ? ಬಾಲ ನ್ಯಾಯ ಕಾಯ್ದೆ 53ರ ಅಧಿನಿಯಮದಲ್ಲಿ ಮಠ ನೋಂದಣಿ ಆಗಿದ್ದಲ್ಲಿ ಮಾರ್ಗಸೂಚಿಯಂತೆ ಪುನರ್ವಸತಿ ಒದಗಿಸಲಾಗಿತ್ತೇ?’ ಸೇರಿದಂತೆ 13 ಮಾಹಿತಿಗಳನ್ನು ಕೇಳಿ ಸಂಸ್ಥೆಯು ನ.25ರಂದು ಪತ್ರ ಬರೆದಿತ್ತು.

ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದ ವಿಚಾರಣೆ

ಕೋಲಾರ: ಚಿತ್ರದುರ್ಗದ ಮುರುಘಾ ಮಠದಲ್ಲಿನ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಿಂದಲೂ ವಿಚಾರಣೆ ನಡೆಸಲಾಗುತ್ತಿದೆ ಎಂದು ಆಯೋಗದ ಅಧ್ಯಕ್ಷ ಕೆ.ನಾಗಣ್ಣ ಗೌಡ ತಿಳಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ‘ಪ್ರಕರಣ ಏಕೆ ತಡವಾಗಿ ಬೆಳಕಿಗೆ ಬಂತು? ಘಟನೆ ನಡೆದಾಗ ಡಿವೈಎಸ್ಪಿ ಯಾರಿದ್ದರು, ಅಧಿಕಾರಿಗಳು ಯಾರಿದ್ದರು? ಮಠದಲ್ಲಿನ ಅಧಿಕಾರಿಗಳು ಏಕೆ ಇಷ್ಟು ವರ್ಷ ಮುಚ್ಚಿಟ್ಟಿದ್ದರು? ಪೊಲೀಸರು ಏಕೆ ವಿಫಲರಾದರು, ಕ್ರಮ ವಹಿಸಲು ಉಂಟಾದ ಅಡೆತಡೆ ಏನು? ಮುಂತಾದ ಅಂಶಗಳ ಬಗ್ಗೆ ಮಾಹಿತಿ ಕಲೆಹಾಕುತ್ತಿದೆ. ಈಗಾಗಲೇ ಹಲವರ ಮೇಲೆ ಕ್ರಮವೂ ಆಗಿದೆ’ ಎಂದರು.

> **ಬಾಲಕಿಯರ ಹಾಸ್ಟೆಲ್‌ಗಳಿಗೆ ಕಡ್ಡಾಯವಾಗಿ ಮಹಿಳಾ ಮೇಲ್ವಿಚಾರಕರನ್ನೇ ನಿಯೋಜಿಸಬೇಕು**
> **ಕೆ.ನಾಗಣ್ಣ ಗೌಡ, ಅಧ್ಯಕ್ಷ,** ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಆಡಳಿತಾಧಿಕಾರಿ ನೇಮಕಕ್ಕೆ ಪತ್ರ

ಚಿತ್ರದುರ್ಗ: ಶಿವಮೂರ್ತಿ ಮುರುಘಾ ಶರಣರ ಅನುಪಸ್ಥಿತಿಯಲ್ಲಿ ಮಠ, ಎಸ್‌ಜೆಎಂ ವಿದ್ಯಾಪೀಠದ ಆಡಳಿತವನ್ನು ಜವಾಬ್ದಾರಿ ಮತ್ತು ಅಧಿಕಾರಯುತವಾಗಿ ನಡೆಸಲು ಆಡಳಿತಾಧಿಕಾರಿ ನೇಮಕ ಮಾಡುವಂತೆ ಮಾಜಿ ಸಚಿವ ಎಚ್. ಏಕಾಂತಯ್ಯ ಅವರು ಮುಖ್ಯಮಂತ್ರಿಗೆ ಎರಡನೇ ಪತ್ರ ಬರೆದಿದ್ದಾರೆ.

ನ್ಯಾಯಾಂಗ ಬಂಧನ ವಿಸ್ತರಣೆ: ಶಿವಮೂರ್ತಿ ಶರಣರ ವಿರುದ್ಧ ದೂರು ದಾಖಲಿಸುವಂತೆ ಸಂತ್ರಸ್ತೆಯರಿಗೆ ಕುಮ್ಮಕ್ಕು ಹಾಗೂ ಷಡ್ಯಂತ್ರ ನಡೆಸಿದ ಆರೋಪದಲ್ಲಿ ಬಂಧಿತರಾಗಿರುವ ಮುರುಘಾ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ. ಬಸವರಾಜನ್ ನ್ಯಾಯಾಂಗ ಬಂಧನದ ಅವಧಿಯನ್ನು ನ್ಯಾಯಾಲಯ ಇದೇ 26ರವರೆಗೆ ವಿಸ್ತರಿಸಿದೆ.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಗುಜರಾತ್-ಹಿಮಾಚಲ ಫಲಿತಾಂಶ ಕರ್ನಾಟಕದ ಮೇಲೇನು ಪರಿಣಾಮ
ಭಾಗವಹಿಸುವವರು
ಸಂವಾದ

ಎಲ್. ಗಂಗಾಧರಮೂರ್ತಿ ಪ್ರಧಾನ ಕಾರ್ಯದರ್ಶಿ ಜೆಡಿಎಸ್

ನಿಕೇತ್ ರಾಜ್ ಮೌರ್ಯ ಕಾಂಗ್ರೆಸ್ ವಕ್ತಾರ

ಮೋಹನ ವಿಶ್ವ ಬಿಜೆಪಿ ವಕ್ತಾರ

ಕುಶಲ ಸ್ವಾಮಿ ಮಹಿಳಾ ಘಟಕದ ಅಧ್ಯಕ್ಷೆ, ಎಎಪಿ
ಮಧ್ಯಾಹ್ನ 12ರಿಂದ 1
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

‘ಬೆಳಗಾವಿ ಅಧಿವೇಶನದಲ್ಲಿ ಪೂರ್ಣ ಹಾಜರಾತಿ ಕಡ್ಡಾಯ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಇದೇ 19ರಿಂದ 30ರವರೆಗೆ ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನ ಅತ್ಯಂತ ಮಹತ್ವ ಪಡೆದಿದೆ. ಇದರಲ್ಲಿ ಪೂರ್ಣ ಹಾಜರಾತಿ ಇರಬೇಕೆಂದು ಎಲ್ಲ ಶಾಸಕರಿಗೂ ಸೂಚಿಸಲಾಗಿದೆ’ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದರು.

ಅಧಿವೇಶನದ ಪೂರ್ವಸಿದ್ಧತೆಗಳನ್ನು ಸೋಮವಾರ ಪರಿಶೀಲಿಸಿದ ನಂತರ ಮಾತನಾಡಿದ ಅವರು, ‘ಕೆಲ ಸಚಿವರು, ಶಾಸಕರು ಅಧಿವೇಶನದ ವೇಳೆ ಗೋವಾ, ಮಹಾರಾಷ್ಟ್ರ ಕಡೆಗೆ ಪ್ರವಾಸಕ್ಕೆ ಹೋಗುತ್ತಾರೆ. ಗಂಭೀರ ವಿಷಯಗಳ ಚರ್ಚೆಯಲ್ಲಿ ಗೈರಾಗುತ್ತಾರೆ ಎಂದು ಹಲವರು ದೂರಿದ್ದಾರೆ. ಎಲ್ಲರೂ ಎಲ್ಲ ಕಲಾಪಗಳಲ್ಲೂ ಪಾಲ್ಗೊಳ್ಳುವಂತೆ ಸೂಚನೆ ನೀಡಲಾಗಿದೆ’ ಎಂದರು.

‘ನಾನು ಅಧಿವೇಶನಕ್ಕೆ ಹಾಜರಾಗುವುದಿಲ್ಲ ಎಂದು ಕೆಲವರು ಹೇಳಿದ್ದಾರೆ. ಅದು ತಪ್ಪು. ಅಧಿವೇಶನವನ್ನು ಯಾರೂ ಹಗುರವಾಗಿ ತೆಗೆದುಕೊಳ್ಳಬಾರದು, ಹಗುರವಾಗಿ ಮಾತನಾಡಬಾರದು’ ಎಂದು ಎಚ್.ಡಿ.ಕುಮಾರಸ್ವಾಮಿ ಅವರಿಗೆ ಟಾಂಗ್ ನೀಡಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಸೋಮವಾರ ಧ್ವನಿ ವ್ಯವಸ್ಥೆ ಪರಿಶೀಲಿಸಿದರು –ಪ್ರಜಾವಾಣಿ ಚಿತ್ರ

‘ಆರು ವಿಷಯಗಳ ಕುರಿತು ಚರ್ಚೆ’

ಈ ಅಧಿವೇಶನದಲ್ಲಿ ಮಂಡಿಸಲಾಗುತ್ತಿದೆ. 1) ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕ–2022, 2) ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರ ವಿಧೇಯಕ. ಈ ಎರಡನ್ನೂ ಬೆಂಗಳೂರು ಅಧಿವೇಶನದಲ್ಲಿ ಮಂಡಿಸಿದ್ದೇವೆ. ಇಲ್ಲಿ ಚರ್ಚಿಸಿ ಅಂಗೀಕರಿಸಲಾಗುವುದು. 3) ಕನ್ನಡ ಭೂ ಕಂದಾಯ ವಿಧೇಯಕ 4) ಅನುಸೂಚಿತ ಜಾತಿ– ಪಂಗಡಗಳ ಶಿಕ್ಷಣ ಸಂಸ್ಥೆಗಳ ಸ್ಥಾನಗಳಲ್ಲಿ ಮತ್ತು ರಾಜಾಧೀನ ಸೇವೆಗಳ ನೇಮಕಾತಿಗಳಲ್ಲಿ ಮೀಸಲಾತಿ ವಿಧೇಯಕ 5) ಕರ್ನಾಟಕ ವಿಶೇಷ ಹೂಡಿಕೆ ಪ್ರದೇಶ ವಿಧೇಯಕ 6) ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ. ಇವುಗಳಲ್ಲದೇ ಇನ್ನೂ ಹೊಸ ವಿಷಯಗಳೂ ಚರ್ಚೆಗೆ ಬರಲಿವೆ’ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ವಿವರಿಸಿದರು.

‘ಗ್ರಾಮ ಸ್ವರಾಜ್ಯಕ್ಕಾಗಿ ಬೆಂಗಳೂರು ಚಲೊ’

ಬೆಂಗಳೂರು: ‘ಗ್ರಾಮ ಸ್ವರಾಜ್ಯ ಕನಸು ನನಸು ಮಾಡಲು ಅವಶ್ಯವಿರುವ ಬೇಡಿಕೆಗಳನ್ನು ತ್ವರಿತವಾಗಿ ಈಡೇರಿಸಬೇಕು’ ಎಂದು ಆಗ್ರಹಿಸಿ ರಾಜ್ಯದ ಗ್ರಾಮ ಪಂಚಾಯಿತಿಗಳ ಸದಸ್ಯರು ನಗರದಲ್ಲಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟ ನೇತೃತ್ವದಲ್ಲಿ ‘ಗ್ರಾಮ ಸ್ವರಾಜ್ಯಕ್ಕಾಗಿ ಬೆಂಗಳೂರು ಚಲೊ’ ಘೋಷಣೆಯಡಿ ಹೋರಾಟ ಆರಂಭಿಸಿದ್ದ ಪಂಚಾಯಿತಿ ಸದಸ್ಯರು, ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದರು.

‘1 ಲಕ್ಷಕ್ಕೂ ಹೆಚ್ಚು ಸದಸ್ಯರು ಹಾಗೂ ಅಧಿಕಾರಿಗಳನ್ನು ಒಳಗೊಂಡಿರುವ ರಾಜ್ಯದ ಗ್ರಾಮ ಪಂಚಾಯಿತಿಗಳ ಬೆಳವಣಿಗೆ ಆಶಾದಾಯಕವಾಗಿದೆ. ಇಂಥ ಸಂದರ್ಭದಲ್ಲೇ ಗ್ರಾಮ ಪಂಚಾಯಿತಿ ಆಡಳಿತಕ್ಕೆ ವಿರುದ್ಧವಾಗಿ ನಿಯಮಗಳು, ಸುತ್ತೋಲೆ ಹಾಗೂ ನಿರ್ಣಯಗಳನ್ನು ಹೊರಡಿಸಲಾಗುತ್ತಿದೆ. ಇದನ್ನು ಖಂಡಿಸಿ ಹಲವು ಬಾರಿ ಮನವಿ ಸಲ್ಲಿಸಿದರೂ ಸರ್ಕಾರ ಸ್ಪಂದಿಸಿಲ್ಲ’ ಎಂದು ಪ್ರತಿಭಟನಕಾರರು ಆರೋಪಿಸಿದರು.

ಪ್ರತಿಭಟನೆ ತಾತ್ಕಾಲಿಕ ಅಂತ್ಯ: ಪ್ರತಿಭಟನಾ ಸ್ಥಳಕ್ಕೆ ಸಚಿವ ಎಸ್.ಟಿ. ಸೋಮಶೇಖರ್ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್ ಭೇಟಿ ನೀಡಿ, ‘ಬೇಡಿಕೆ ಈಡೇರಿಕೆಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಭರವಸೆ ನೀಡಿದರು.

‘ತಾತ್ಕಾಲಿಕವಾಗಿ ಪ್ರತಿಭಟನೆ ಅಂತ್ಯಗೊಳಿಸಲಾಗುವುದು’ ಎಂದು ಘೋಷಿಸಿದ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕಾಡಶೆಟ್ಟಿಹಳ್ಳಿ ಸತೀಶ್, ‘ಡಿ. 19ರೊಳಗೆ ಬೇಡಿಕೆ ಈಡೇರಿಸಬೇಕು. ಇಲ್ಲದಿದ್ದರೆ, ಸುವರ್ಣ ಸೌಧದ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಲಾಗುವುದು’ ಎಂದರು.

ಅತ್ಯಾಚಾರ: ವೃದ್ಧನ ಕೊಂದ ಸಂಬಂಧಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘16 ವರ್ಷ ವಯಸ್ಸಿನ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾನೆ’ ಎಂಬ ಕಾರಣಕ್ಕೆ ಕುಪ್ಪಣ್ಣ (73) ಎಂಬುವವರನ್ನು ಕೊಲೆ ಮಾಡಲಾಗಿದ್ದು, ಬಾಲಕಿಯ ಸಂಬಂಧಿಕರೂ ಒಳಗೊಂಡಂತೆ ಮೂವರನ್ನು ಹೆಣ್ಣೂರು ಪೊಲೀಸರು ಬಂಧಿಸಿದ್ದಾರೆ.

‘ತಮಿಳುನಾಡಿನ ಕುಪ್ಪಣ್ಣ ಅವಿವಾಹಿತ. 25 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ. ಟೈಲ್ಸ್ ಜೋಡಣೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದ. ಬಾಲಕಿ ಮೇಲೆ ಭಾನುವಾರ ಅತ್ಯಾಚಾರ ಎಸಗಿದ್ದ. ಅದನ್ನು ನೋಡಿದ್ದ ಸಂಬಂಧಿಕರು, ಕುಪ್ಪಣ್ಣನನ್ನು ಹಿಡಿದು ಥಳಿಸಿ ಕೊಂದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

‘ಬಾಲಕಿ ಮೇಲಿನ ಅತ್ಯಾಚಾರದ ಬಗ್ಗೆ ಸಂಬಂಧಿಕರು ದೂರು ನೀಡಿದ್ದಾರೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಕುಪ್ಪಣ್ಣನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಜೊತೆಗೆ, ಕುಪ್ಪಣ್ಣನನ್ನು ಕೊಂದಿರುವ ಆರೋಪದಡಿ ಬಾಲಕಿಯ ಅಣ್ಣ, ಆತನ ಪತ್ನಿಯ ಸಂಬಂಧಿ ಹಾಗೂ ಸ್ನೇಹಿತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮೂವರನ್ನೂ ಬಂಧಿಸಲಾಗಿದೆ’ ಎಂದು ಹೇಳಿದರು.

ಪಾನೀಯ ಕುಡಿಸಿ ವಿವಸ್ತ್ರಗೊಳಿಸಿದ್ದ: ‘ವೃದ್ಧ ಕುಪ್ಪಣ್ಣ ವಾಸವಿದ್ದ ಮನೆಯ ಸಮೀಪದಲ್ಲೇ ಪೋಷಕರ ಜೊತೆ ಬಾಲಕಿ ನೆಲೆಸಿದ್ದಳು. ಶಾಲೆಗೆ ರಜೆ ಇದ್ದಿದ್ದರಿಂದ ತನ್ನ ಸಮವಸ್ತ್ರ ತೊಳೆದು ಒಣಗಲೆಂದು ಮನೆ ಸಮೀಪದಲ್ಲೇ ಹೊರಗೆ ಹಾಕಿದ್ದಳು. ಭಾನುವಾರ ಸಂಜೆ ಸಮವಸ್ತ್ರ ತರಲೆಂದು ಬಾಲಕಿ ಮನೆಯಿಂದ ಹೊರಗೆ ಬಂದಿದ್ದಳು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಾಲಕಿಯನ್ನು ನೋಡಿದ್ದ ವೃದ್ಧ ಕುಪ್ಪಣ್ಣ, ತಿನಿಸು ನೀಡುವ ಆಮಿಷವೊಡ್ಡಿ ಮಾತನಾಡಿಸಿದ್ದ. ನಂತರ, ಬಾಲಕಿಯನ್ನು ತನ್ನ ಮನೆಗೆ ಕರೆದೊಯ್ದಿದ್ದ. ಮತ್ತು ಬರುವ ಔಷಧ ಬೆರೆಸಿದ್ದ ಪಾನೀಯ ಕುಡಿಸಿದ್ದ. ಅದಾದ ಕೆಲ ನಿಮಿಷಗಳಲ್ಲೇ ಬಾಲಕಿ ಪ್ರಜ್ಞೆ ತಪ್ಪಿದ್ದಳು. ಬಾಲಕಿಯನ್ನು ವಿವಸ್ತ್ರಗೊಳಿಸಿದ್ದ ಕುಪ್ಪಣ್ಣ, ಆಕೆಯ ಮೇಲೆ ಅತ್ಯಾಚಾರ ಎಸಗಿದ್ದನೆಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

‘ಪ್ರಕರಣ ದಾಖಲಾಗುತ್ತಿದ್ದಂತೆ ವೃದ್ಧನ ಮನೆಗೆ ಹೋಗಿ ಪರಿಶೀಲಿಸಿದಾಗ, ಆತ ಮೃತಪಟ್ಟಿದ್ದು ತಿಳಿಯಿತು. ಆತನ ಸಹೋದ್ಯೋಗಿಯಿಂದ ದೂರು ಪಡೆದು ಕೊಲೆ ಪ್ರಕರಣ ದಾಖಲಿಸಿಕೊಳ್ಳಲಾಯಿತು’ ಎಂದು ಹೇಳಿವೆ.

‘ಬಾಲಕಿ ಸ್ಥಿತಿ ನೋಡಿ ಸಿಟ್ಟಿಗೆದ್ದು ಹೊಡೆದರು’

‘ಒಣಗಲು ಹಾಕಿದ್ದ ಸಮವಸ್ತ್ರ ತರಲು ಹೋಗಿದ್ದ ಬಾಲಕಿ ಹಲವು ಗಂಟೆಯಾದರೂ ಮನೆಗೆ ವಾಪಸ್ ಬಂದಿರಲಿಲ್ಲ. ಆತಂಕಗೊಂಡ ಪೋಷಕರು, ಹಲವು ಮನೆಗಳಲ್ಲಿ ಹುಡುಕಾಡಿದ್ದರು. ಕೊನೆಗೆ ವೃದ್ಧನ ಮನೆಯೊಳಗೆ ಹೋಗಿ ನೋಡಿದಾಗ, ಬಾಲಕಿ ವಿವಸ್ತ್ರವಾಗಿ ಬಿದ್ದಿದ್ದನ್ನು ಕಂಡಿದ್ದರು. ಬೆತ್ತಲೆ ಸ್ಥಿತಿಯಲ್ಲಿದ್ದ ಕುಪ್ಪಣ್ಣ, ಸಂಬಂಧಿಕರನ್ನು ನೋಡಿ ತರಾತುರಿಯಲ್ಲಿ ಪಂಚೆ ಸುತ್ತಿಕೊಂಡಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಬಾಲಕಿ ಸ್ಥಿತಿ ನೋಡಿ ಸಿಟ್ಟಾಗಿದ್ದ ಸಂಬಂಧಿಕರು, ಕುಪ್ಪಣ್ಣನನ್ನು ಹಿಡಿದು ಬೆತ್ತಲೆಗೊಳಿಸಿ ಹಿಗ್ಗಾಮುಗ್ಗಾ ಥಳಿಸಿದ್ದರು. ಮರ್ಮಾಂಗಕ್ಕೂ ಹೊಡೆದಿದ್ದರು. ತೀವ್ರ ಹಲ್ಲೆಯಿಂದ ಪ್ರಜ್ಞೆ ತಪ್ಪಿದ್ದ ಆತನನ್ನು ಮನೆಯಲ್ಲೇ ಬಿಟ್ಟು ಠಾಣೆಗೆ ಬಂದು ದೂರು ನೀಡಿದ್ದರು. ಬಾಲಕಿಯನ್ನು ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಲಾಗಿದ್ದು, ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ’ ಎಂದಿವೆ.

ನಿಧನ ವಾರ್ತೆ

ಗಂಡಸಿ ನಾಗರಾಜ್

ಬೆಂಗಳೂರು: ಕನ್ನಡ ಚಿತ್ರರಂಗದ ವಸ್ತ್ರ ವಿನ್ಯಾಸಕ, ನಟ ಗಂಡಸಿ ನಾಗರಾಜ್(65) ಭಾನುವಾರ ರಾತ್ರಿ ನಿಧನರಾದರು.

ಹಾಸನ ಜಿಲ್ಲೆ ಅರಸೀಕೆರೆ ಸಮೀಪದ ಗಂಡಸಿಯವರಾಗಿದ್ದು, ಸುಮಾರು 35 ವರ್ಷಗಳಿಂದ ಚಿತ್ರರಂಗದಲ್ಲಿದ್ದರು. ಅವರಿಗೆ ಕೆಲ ವರ್ಷಗಳ ಹಿಂದೆ ಎರಡೂ ಕಿಡ್ನಿಗಳು ವಿಫಲವಾಗಿದ್ದವು. ಹೀಗಾಗಿ ಅವರು ಡಯಾಲಿಸಿಸ್‌ನಲ್ಲಿದ್ದರು. ಇದರಿಂದ ಚಿತ್ರರಂಗದಿಂದಲೂ ದೂರ ಉಳಿದಿದ್ದರು. ಕೆಲ ದಿನಗಳ ಹಿಂದೆ ಅವರ ಆರೋಗ್ಯದಲ್ಲಿ ಏರುಪೇರಾದ ಕಾರಣ ಪದ್ಮನಾಭನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

‘ಭಂಡ ನನ್ನ ಗಂಡ’ ಸಿನಿಮಾದಲ್ಲಿ ‘ಶೇಖ್ ಅಬ್ದುಲ್ಲ’ ಎಂಬ ಪಾತ್ರದಲ್ಲಿ ಮಿಂಚಿದ್ದ ನಾಗರಾಜ್, ನೂರಾರು ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಹಾಸ್ಯ ನಟರಾಗಿ ನಟಿಸಿದ್ದರು.

ಪರಿಶಿಷ್ಟ ಜಾತಿಯ ಯುವಕನ ಆತ್ಮಹತ್ಯೆ; ನ್ಯಾಯ ದೊರಕಿಸಲು ಆಗ್ರಹ

ಪೆತ್ತಾಂಡ್ಲಹಳ್ಳಿಯಿಂದ ಡಿ.ಸಿ ಕಚೇರಿ ಚಲೊ

ಪ್ರಜಾವಾಣಿ ವಾರ್ತೆ

ಕೋಲಾರ/ನಂಗಲಿ: ಬೈಕ್ ಹಿಂದಿಕ್ಕಿದ ವಿಚಾರವಾಗಿ ಮುಳಬಾಗಿಲು ತಾಲ್ಲೂಕಿನ ಪೆತ್ತಾಂಡ್ಲಹಳ್ಳಿಯ ಒಕ್ಕಲಿಗ ಸಮುದಾಯದ ನಾಲ್ವರು ಥಳಿಸಿದ್ದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡ ಬೇವಹಳ್ಳಿ ಗ್ರಾಮದ ಪರಿಶಿಷ್ಟ ಜಾತಿಯ ಯುವಕ ಉದಯ್ ಕಿರಣ್ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವಂತೆ ಆಗ್ರಹಿಸಿ ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಸೋಮವಾರ ಬೃಹತ್ ಪ್ರತಿಭಟನೆ ನಡೆಯಿತು.

‘ಪೆತ್ತಾಂಡ್ಲಹಳ್ಳಿಯಿಂದ ಜಿಲ್ಲಾಧಿಕಾರಿ ಕಚೇರಿ ಚಲೊ’ ನಡೆಸಿದ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಕೋಲಾರಕ್ಕೆ ಬೈಕ್ ರ‍್ಯಾಲಿಯಲ್ಲಿ ಬಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

‘ಮೃತನ ಕುಟುಂಬಕ್ಕೆ ₹25 ಲಕ್ಷ ಪರಿಹಾರ, ಸದಸ್ಯರೊಬ್ಬರಿಗೆ ಸರ್ಕಾರಿ ನೌಕರಿ, ಕುಟುಂಬ ನಿರ್ವಹಣೆಗೆ 5 ಎಕರೆ ಭೂಮಿ ಹಾಗೂ ಮನೆ ನೀಡಬೇಕು. ಕುಟುಂಬಕ್ಕೆ ರಕ್ಷಣೆ ನೀಡಿ, ದೌರ್ಜನ್ಯ ಎಸಗಿರುವವರನ್ನು ಗಡಿಪಾರು ಮಾಡಬೇಕು’ ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಯುವಕನ ಪೋಷಕರಾದ ವೆಂಕಟೇಶಪ್ಪ, ರೆಡ್ಡೆಮ್ಮ, ಮಾವ ನಾಗರಾಜ್ ಪಾಲ್ಗೊಂಡಿದ್ದರು. ‘ಇನ್ನಾರಿಗೂ ಇಂಥ ಕಷ್ಟ ಬರಬಾರದು. ಮಗನ ಸಾವಿಗೆ ಕಾರಣವಾದವರಿಗೆ ಕಠಿಣ ಶಿಕ್ಷೆಯಾಗಬೇಕು’ ಎಂದು ಅವರು ಒತ್ತಾಯಿಸಿದರು.

ಸಿಪಿಐಎಂ, ಡಿಎಸ್‌ಎಸ್, ಎಸ್‌ಎಫ್‌ಐ, ದಲಿತ ಹಕ್ಕುಗಳ ಸಮಿತಿ ಮುಖಂಡರು, ಕಾರ್ಯಕರ್ತರು ಹಾಗೂ ದಲಿತ ಹೋರಾಟಗಾರರು ಪಾಲ್ಗೊಂಡಿದ್ದರು.



ಮೃತ ಯುವಕ ಉದಯ್ ಕಿರಣ್ ಪೋಷಕರಾದ ರೆಡ್ಡೆಮ್ಮ, ವೆಂಕಟೇಶಪ್ಪ ಹಾಗೂ ಹೋರಾಟಗಾರರು ಕೋಲಾರದಲ್ಲಿ ಸೋಮವಾರ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅವರಿಗೆ ಮನವಿ ಪತ್ರ ಸಲ್ಲಿಸಿದರು

> ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಿ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ. ಕುಟುಂಬಕ್ಕೆ ಪೊಲೀಸ್ ರಕ್ಷಣೆ ನೀಡಲಾಗಿದೆ. ಅಲ್ಲದೇ, ₹ 50 ಸಾವಿರ ಪರಿಹಾರ ನೀಡಿದ್ದು, ಒಂದು ತಿಂಗಳ ಪಡಿತರ ಕೂಡ ಕಳುಹಿಸಿಕೊಟ್ಟಿದ್ದೇವೆ. ಇನ್ನುಳಿದ ಬೇಡಿಕೆಗಳನ್ನು ಮುಖ್ಯಮಂತ್ರಿ ಗಮನಕ್ಕೆ ತರಲಾಗುವುದು
> **ವೆಂಕಟ್ ರಾಜಾ**
> ಜಿಲ್ಲಾಧಿಕಾರಿ, ಕೋಲಾರ

ಮಂಗಳವಾರ, ಡಿಸೆಂಬರ್ 13, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 343 | ಪುಟ 16
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಆಳ-ಅಗಲ
ನಿರ್ಭಯಾ ನಿಧಿ ಕಡೆಗಣನೆ
'ಜಾತಿ, ಧರ್ಮ ಉಲ್ಲೇಖಿಸಿ ಮಾತನಾಡಬೇಡಿ' 7
114 'ನಮ್ಮ ಕ್ಲಿನಿಕ್'ಗೆ ನಾಳೆ ಚಾಲನೆ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,130 ▼	18,497 ▲	₹55,450 (ಬೆಂಗಳೂರು)	₹68,500 (ಬೆಂಗಳೂರು)	82.51 ▼

ಚುನಾವಣಾ ಕಣ: ಕಾಂಗ್ರೆಸ್–ಕಮಲ ತಯಾರಿ

ವಿಧಾನಸಭಾ ಚುನಾವಣೆಗೆ ನಾಲ್ಕು ತಿಂಗಳು ಉಳಿದಿರುವಂತೆ ಬಿಜೆಪಿ – ಕಾಂಗ್ರೆಸ್ ಪಕ್ಷಗಳಲ್ಲಿ ರಾಜಕೀಯ ತಂತ್ರಗಾರಿಕೆ ಬಿರುಸುಗೊಂಡಿದೆ. ನವದೆಹಲಿಯಲ್ಲಿ ಸೋಮವಾರ ರಾಜ್ಯದ ನಾಯಕರ ಸಭೆ ನಡೆಸಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಒಗ್ಗಟ್ಟಿನಿಂದ ಮುಂದಡಿ ಇಡುವಂತೆ ಕಿವಿಮಾತು ಹೇಳಿದ್ದಾರೆ. ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬರಬೇಕೆಂಬ ಉಮೇದಿನಲ್ಲಿರುವ ಬಿಜೆಪಿಯು ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ರಾಜ್ಯಕ್ಕೆ ಕರೆತಂದು ಸಂಘಟನೆಯನ್ನು ಚುರುಕುಗೊಳಿಸುವತ್ತ ಕಾರ್ಯತಂತ್ರ ಹೆಣೆದಿದೆ.

ಮೈ ಚಳಿ ಬಿಡಿ, ಒಗ್ಗಟ್ಟು ತೋರಿ: ಖರ್ಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ 'ಭಾರತ್ ಜೋಡೊ ಯಾತ್ರೆ' (ಭಾರತ ಒಗ್ಗೂಡಿಸಿ) ಯಶಸ್ಸಿನ ನಂತರ ಪಕ್ಷದ ಸಂಘಟನಾ ಚಟುವಟಿಕೆ ವೇಗ ಕಳೆದುಕೊಂಡಿದೆ. ಇದೇ ವೇಳೆ, ಬಿಜೆಪಿ ಹಾಗೂ ಜೆಡಿಎಸ್ ಪಾಳಯದಲ್ಲಿ ಚುರುಕಿನಿಂದ ಚುನಾವಣಾ ತಯಾರಿಗಳು ನಡೆಯುತ್ತಿವೆ. ಕಾಂಗ್ರೆಸ್‌ನ ರಾಜ್ಯ ನಾಯಕರು ಮೈ ಚಳಿ ಬಿಟ್ಟು ಕೆಲಸ ಮಾಡದಿದ್ದರೆ ಕಷ್ಟ' ಎಂದು ಕಾಂಗ್ರೆಸ್ ಹೈಕಮಾಂಡ್ ಎಚ್ಚರಿಸಿದೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಸೋಮವಾರ ಸುಮಾರು ಮೂರು ಗಂಟೆ ನಡೆದ ರಾಜ್ಯ ಕಾಂಗ್ರೆಸ್‌ನ ಹಿರಿಯ ನಾಯಕರ ಸಭೆಯಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚೆಯಾಯಿತು. ಸಭೆಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ, ಚುನಾವಣಾ ನೀತಿ ತಜ್ಞ ಸುನಿಲ್ ಕನುಗೋಲ್ ಅವರು ರಾಜ್ಯ ಘಟಕದ ಲೋಪಗಳ ಬಗ್ಗೆ ಬೊಟ್ಟು ಮಾಡಿದರು ಎಂದು ಮೂಲಗಳು ಹೇಳಿವೆ.

ಈ ಸಭೆಯ ಬಳಿಕ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಜತೆಗೆ ಮಲ್ಲಿಕಾರ್ಜುನ ಖರ್ಗೆ ಹಾಗೂ ಸುನಿಲ್ ಕನುಗೋಲ್ ಪ್ರತ್ಯೇಕ ಸಭೆ ನಡೆಸಿದರು. ಈ ವೇಳೆ, ಪಕ್ಷ ಸಂಘಟನೆಯಲ್ಲಿನ ಲೋಪ, ರಾಜ್ಯ ಕಾಂಗ್ರೆಸ್‌ನ ಬಣ ರಾಜಕಾರಣದ ಬಗ್ಗೆ ಸುದೀರ್ಘವಾಗಿ ಚರ್ಚೆಯಾಯಿತು. ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಿ ಪಕ್ಷವನ್ನು ಅಧಿಕಾರಕ್ಕೆ ತರಬೇಕು ಎಂದು ಉಭಯ ನಾಯಕರಿಗೆ ಖರ್ಗೆ ಕಿವಿಮಾತು ಹೇಳಿದರು ಎಂದು ಮೂಲಗಳು ತಿಳಿಸಿವೆ.

'ಭಾರತ್ ಜೋಡೊ ಯಾತ್ರೆಯಿಂದ ಪಕ್ಷದ ಕಾರ್ಯಕರ್ತರಿಗೆ ದೊಡ್ಡ ಹುರುಪು ಬಂದಿತ್ತು. ಅದರ ನಂತರ, ಪಕ್ಷ ಸಂಘಟನಾ ಚಟುವಟಿಕೆ ಬಹುತೇಕ ನಿಂತ ನೀರಾಗಿದೆ' ಎಂದು ಕನಗೋಲ್ ಸಭೆಯ ಗಮನಕ್ಕೆ ತಂದರು ಎಂದು ಮೂಲಗಳು ತಿಳಿಸಿವೆ.

'ರಾಜ್ಯ ಬಿಜೆಪಿ ಸರ್ಕಾರದ ಬಗ್ಗೆ ಜನರಿಗೆ ದೊಡ್ಡ ಮಟ್ಟದ ಅಸಮಾಧಾನ ಇದೆ. ಆದರೆ, ಇದರ ವಿರುದ್ಧ ಕಾಂಗ್ರೆಸ್ ದೊಡ್ಡ ಮಟ್ಟದ ಹೋರಾಟ ಮಾಡುತ್ತಿಲ್ಲ. ಬಿಜೆಪಿ ಗ್ರಾಫ್ ಕುಸಿಯುತ್ತಿದ್ದರೂ ಕಾಂಗ್ರೆಸ್‌ನ ಸ್ಥಿತಿ ಸುಧಾರಣೆ ಆಗಿಲ್ಲ. ಒಂದು ತಿಂಗಳಿಂದ ಪಕ್ಷವು ದೊಡ್ಡ ಮಟ್ಟದ ಕಾರ್ಯಕ್ರಮಗಳನ್ನು ನಡೆಸಿಲ್ಲ. ಅದೇ ಹೊತ್ತಿಗೆ, ಮುಖ್ಯಮಂತ್ರಿ ಅವರೇ ಜನಸಂಕಲ್ಪ ಯಾತ್ರೆ ಹೆಸರಿನಲ್ಲಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಹೋಗುತ್ತಿದ್ದಾರೆ. ಜೆಡಿಎಸ್ ಪಂಚರತ್ನ ಯಾತ್ರೆ ಮಾಡುತ್ತಿದೆ. ಕಾಂಗ್ರೆಸ್‌ನಲ್ಲಿ ಇನ್ನಷ್ಟು ಚಟುವಟಿಕೆಗಳನ್ನು ನಡೆಸದಿದ್ದರೆ ಹಿನ್ನಡೆ ಖಚಿತ' ಎಂದು ಅವರು ಎಚ್ಚರಿಸಿದರು. ಇದಕ್ಕೆ ಹಿರಿಯ ನಾಯಕರು ಧ್ವನಿಗೂಡಿಸಿದರು ಎಂದು ಮೂಲಗಳು ಹೇಳಿವೆ.

5ನೇ ಪುಟ ನೋಡಿ

ಕ್ಷೇತ್ರಗಳಿಗೆ ಪ್ರತ್ಯೇಕ ಬಸ್ ಯಾತ್ರೆ

ಜನವರಿ ಎರಡನೇ ವಾರದಿಂದ ಜಿಲ್ಲಾವಾರು ಹಾಗೂ 224 ವಿಧಾನಸಭಾ ಕ್ಷೇತ್ರಗಳಿಗೆ ಬಸ್ ಯಾತ್ರೆ ನಡೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಯಾತ್ರೆಯನ್ನು 50 ದಿನಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಬಣ ರಾಜಕಾರಣದ ಗೊಂದಲ ಉಂಟಾಗುವುದನ್ನು ತಡೆಯಲು ಜಿಲ್ಲಾ ಕೇಂದ್ರಗಳಿಗೆ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಜತೆಯಲ್ಲಿ ಹೋಗಲಿದ್ದಾರೆ. ವಿಧಾನಸಭಾ ಕ್ಷೇತ್ರಗಳಿಗೆ ಇಬ್ಬರು ನಾಯಕರು ಪ್ರತ್ಯೇಕವಾಗಿ ತೆರಳಲಿದ್ದಾರೆ. ಇಬ್ಬರು ಒಟ್ಟಿಗೆ ಸಾಗಿದರೆ ಎಲ್ಲ ಕ್ಷೇತ್ರಗಳನ್ನು 50 ದಿನಗಳಲ್ಲಿ ಮುಗಿಸುವುದು ಕಷ್ಟ ಎಂಬ ಅಭಿಪ್ರಾಯಕ್ಕೆ ಸಭೆಯಲ್ಲಿ ಬರಲಾಯಿತು ಎಂದು ಮೂಲಗಳು ತಿಳಿಸಿವೆ.

ಗೆಲುವಿಗೆ ಬಿಜೆಪಿ ಕಾರ್ಯತಂತ್ರ

ಬೆಂಗಳೂರು: ಇನ್ನು ಕೆಲವೇ ತಿಂಗಳಲ್ಲಿ ನಡೆಯುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಸಾಧಿಸಿ, ಶತಾಯಗತಾಯ ಅಧಿಕಾರದ ಗದ್ದುಗೆ ಏರಲು ಗುಜರಾತ್ ಮತ್ತು ಉತ್ತರಪ್ರದೇಶದಲ್ಲಿ ಹೆಣೆದ ಕಾರ್ಯತಂತ್ರವನ್ನೇ ರಾಜ್ಯದಲ್ಲೂ ಪ್ರಯೋಗಿಸಲು ಬಿಜೆಪಿ ಸಿದ್ಧತೆ ನಡೆಸಿದೆ.

ಸಚಿವ ಸಂಪುಟ ವಿಸ್ತರಣೆ, ಟಿಕೆಟ್ ಹಂಚಿಕೆಯಲ್ಲಿ ಯುವಕರಿಗೆ ಆದ್ಯತೆ, ನಾಯಕರ ಒಗ್ಗಟ್ಟಿನ ಮಂತ್ರ, ವಿವಿಧ ಜಾತಿಗಳ ಜನರ ಮತವನ್ನು ಸೆಳೆಯುವ ಸೋಷಿಯಲ್ ಎಂಜಿನಿಯರಿಂಗ್, ರಾಜ್ಯ ಮಟ್ಟದಿಂದ ಬೂತ್ ಮಟ್ಟದವರೆಗೆ ಗೆಲುವಿಗಾಗಿ ಗರಿಷ್ಠ ಪ್ರಮಾಣದ ಪ್ರಯತ್ನ ನಡೆಸುವ ಕಾರ್ಯತಂತ್ರವನ್ನು ರೂಪಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಚುನಾವಣಾ ತಂತ್ರಗಾರಿಕೆಯ ಮೊದಲ ಹೆಜ್ಜೆಯಾಗಿ ಸದ್ಯವೇ ಸಚಿವ ಸಂಪುಟದ ವಿಸ್ತರಣೆ ಮಾಡುವ ಸಾಧ್ಯತೆಯೂ ಇದೆ. ಈ ಸಂಬಂಧ ವರಿಷ್ಠರ ಮಟ್ಟದಲ್ಲಿ ಚರ್ಚೆಯೂ ನಡೆದಿದೆ.

ಇದಲ್ಲದೇ ರಾಜ್ಯದಲ್ಲಿ ಅಭಿವೃದ್ಧಿಪರ ಯೋಜನೆಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರಿಂದ ಉದ್ಘಾಟಿಸುವ ಕಾರ್ಯಕ್ರಮಗಳನ್ನು ನಿರಂತರವಾಗಿ ಹಮ್ಮಿಕೊಳ್ಳಲಾಗುವುದು. ಇದಕ್ಕಾಗಿ ಪ್ರತಿ ಹದಿನೈದು ದಿನಗಳಿಗೊಮ್ಮೆ ಅವರು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ. ಅಲ್ಲದೇ, ಗೃಹ ಸಚಿವ ಅಮಿತ್ ಶಾ ಅವರು ವಾರಕ್ಕೊಮ್ಮೆ ಭೇಟಿ ನೀಡಲಿದ್ದಾರೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರನ್ನು ಗರಿಷ್ಠ ಪ್ರಮಾಣದಲ್ಲಿ ತೊಡಗಿಸಿಕೊಳ್ಳಲು ನಿರ್ಧರಿಸಲಾಗಿದೆ. ಹಲವು ಕೇಂದ್ರ ಸಚಿವರಿಗೆ ವಿಧಾನಸಭಾ ಕ್ಷೇತ್ರಗಳನ್ನು ಹಂಚಿಕೆ ಮಾಡಿ ಉಸ್ತುವಾರಿ ನೀಡಲಾಗುವುದು ಎಂದು ಮೂಲಗಳು ತಿಳಿಸಿವೆ.

'ಟಿಕೆಟ್ ಹಂಚಿಕೆಯ ವೇಳೆಯಲ್ಲಿ ಯಾವುದೇ ಹಿರಿಯರಿಗೆ ಟಿಕೆಟ್ ನೀಡದೇ ಇದ್ದಾಗ, ಅದರಿಂದ ಬೇಸರಗೊಂಡರೆ ಅವರನ್ನು ಸಮಾಧಾನಪಡಿಸಬೇಕು. ಬಂಡಾಯವೆದ್ದು ಪಕ್ಷ ಬಿಡಲು ಮುಂದಾದರೆ ಅವರ ಮನವೊಲಿಸಿ ಪಕ್ಷದಲ್ಲೇ ಉಳಿಯುವಂತೆ ನೋಡಿಕೊಳ್ಳಬೇಕು ಎಂದು ಇತ್ತೀಚೆಗೆ ದೆಹಲಿಯಲ್ಲಿ ನಡೆದ ಸಭೆಯಲ್ಲಿ ವರಿಷ್ಠರು ಸೂಚಿಸಿದ್ದಾರೆ' ಎಂದು ಬಿಜೆಪಿಯ ಹಿರಿಯ ಮುಖಂಡರೊಬ್ಬರು ತಿಳಿಸಿದರು.

'ಹಿಮಾಚಲ ಪ್ರದೇಶದಲ್ಲಿ ಬಂಡಾಯ ಎದ್ದವರನ್ನು ಸಮಾಧಾನಪಡಿಸದೇ ನಿರ್ಲಕ್ಷ್ಯ ಮಾಡಿದ್ದರಿಂದ ಅಲ್ಲಿ ಪಕ್ಷ ಸೋತಿತು. ಆ ಲೋಪ ಕರ್ನಾಟಕದಲ್ಲಿ ಮರುಕಳಿಸದಂತೆ ಎಚ್ಚರವಹಿಸಬೇಕು. ಆ ಚುನಾವಣೆ ನಮಗೆ ಪಾಠ ಆಗಬೇಕು ಎಂದು ವರಿಷ್ಠರು ಹೇಳಿದರು. ಅಲ್ಲಿ ಸುಮಾರು 13 ಮಂದಿ ಟಿಕೆಟ್ ಸಿಗದ ಕಾರಣಕ್ಕೆ ಬಂಡಾಯವೆದ್ದಿದ್ದರು. ಅವರಲ್ಲಿ ಕೆಲವರು ಕಾಂಗ್ರೆಸ್‌ನಿಂದ ಮತ್ತೆ ಕೆಲವರು ಸ್ವತಂತ್ರವಾಗಿ ಸ್ಪರ್ಧಿಸಿದರು. ಒಟ್ಟಾರೆ ಇದರಿಂದ ಬಿಜೆಪಿಗೆ ಆರರಿಂದ ಏಳು ಕಡೆಗಳಲ್ಲಿ ಸೋಲುಂಟಾಯಿತು' ಎಂದು ಹೇಳಿದರು.

5ನೇ ಪುಟ ನೋಡಿ

ರಾಜ್ಯದಲ್ಲಿ ಜೀಕಾ ವೈರಸ್ ಪತ್ತೆ

ಬೆಂಗಳೂರು/ಮಾನ್ವಿ: ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ 5 ವರ್ಷದ ಬಾಲಕಿಯಲ್ಲಿ ಜೀಕಾ ವೈರಸ್ ದೃಢಪಟ್ಟಿದೆ. ರಾಜ್ಯದಲ್ಲೇ ಇದು ಮೊದಲ ಪ್ರಕರಣವಾಗಿದೆ.

ಆರೋಗ್ಯ ಇಲಾಖೆಯ ತಜ್ಞರು, ಅಧಿಕಾರಿಗಳು ಸೋಮವಾರ ತಾಲ್ಲೂಕಿನ ನೀರಮಾನ್ವಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಬರುವ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಕೆಲ ದಿನಗಳ ಹಿಂದೆ ಅನಾರೋಗ್ಯ ಪೀಡಿತ ಬಾಲಕಿಯನ್ನು ಬಳ್ಳಾರಿಯ ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

'ಡಿ.5ರಂದು ರೋಗಲಕ್ಷಣ ಹೊಂದಿದ್ದ ಮೂವರ ಮಾದರಿಗಳನ್ನು ಸಂಗ್ರಹಿಸಿ ಪುಣೆಯ ರಾಷ್ಟ್ರೀಯ ವೈರಾಣು ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಡಿ. 8ರಂದು ವರದಿ ಬಂದಿದ್ದು, ಒಬ್ಬರಿಗೆ ಸೋಂಕು ಇರುವುದು ದೃಢಪಟ್ಟಿದೆ' ಎಂದು ಆರೋಗ್ಯ ಸಚಿವ ಕೆ. ಸುಧಾಕರ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸೋಂಕಿತ ಬಾಲಕಿ ಯಾವುದೇ ಪ್ರಯಾಣದ ಹಿನ್ನೆಲೆ ಹೊಂದಿಲ್ಲ. ಇದು ಸಹ ಸೊಳ್ಳೆಯಿಂದ ಹರಡುವ ರೋಗವಾಗಿದೆ. ಡೆಂಗಿ ಮತ್ತು ಚಿಕೂನ್‌ಗುನ್ಯಾ ಮಾದರಿಗಳ ಪರೀಕ್ಷೆ ನಡೆಸಿದಾಗ ಈ ಪ್ರಕರಣ ದೃಢಪಟ್ಟಿದೆ ಎಂದು ತಿಳಿಸಿದರು.

ಜನರು ಆತಂಕ ಪಡುವ ಅಗತ್ಯವಿಲ್ಲ. ರಾಜ್ಯದಾದ್ಯಂತ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ನಿರಂತರ ನಿಗಾವಹಿಸಲಾಗಿದೆ. ವೈರಸ್ ನಿಯಂತ್ರಣ ಸಂಬಂಧ ಆರೋಗ್ಯ ಇಲಾಖೆಯಿಂದ ಶೀಘ್ರ ಮಾರ್ಗಸೂಚಿ ಪ್ರಕಟಿಸಲಾಗುವುದು ಎಂದು ತಿಳಿಸಿದರು.

'ಹಳೆ ಪಿಂಚಣಿ ಯೋಜನೆ ಜಾರಿ ಪ್ರಸ್ತಾವ ಇಲ್ಲ'

ನವದೆಹಲಿ (ಪಿಟಿಐ): ಹಳೆಯ ಪಿಂಚಣಿ ಯೋಜನೆಯನ್ನು (ಒಪಿಎಸ್) ಮತ್ತೆ ಜಾರಿಗೊಳಿಸುವ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಭಾಗವತ್ ಕರಾಡ್ ಲೋಕಸಭೆಗೆ ಸೋಮವಾರ ತಿಳಿಸಿದ್ದಾರೆ.

ರಾಜಸ್ಥಾನ, ಛತ್ತೀಸಗಢ ಮತ್ತು ಜಾರ್ಖಂಡ್ ರಾಜ್ಯಗಳು ತಮ್ಮ ಉದ್ಯೋಗಿಗಳಿಗೆ ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿಗೊಳಿಸುವುದಾಗಿ ಕೇಂದ್ರ ಸರ್ಕಾರ/ಪಿಂಚಣಿ ನಿಧಿ ನಿರ್ವಹಣೆ ಮತ್ತು ಅಭಿವೃದ್ಧಿ ಪ್ರಾಧಿಕಾರಕ್ಕೆ (ಪಿಎಫ್‌ಆರ್‌ಡಿಎ) ಮಾಹಿತಿ ನೀಡಿವೆ. ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ಅಡಿ ಸಂಗ್ರಹ ಆಗಿರುವ ಮೊತ್ತವನ್ನು ಹಿಂದಿರುಗಿಸುವಂತೆಯೂ ಕೇಳಿವೆ. ಆದರೆ, ಎನ್‌ಪಿಎಸ್‌ನಲ್ಲಿ ಇರುವ ಹಣವನ್ನು ರಾಜ್ಯ ಸರ್ಕಾರಗಳಿಗೆ ಹಿಂದಿರುಗಿಸಲು ಪಿಎಫ್‌ಆರ್‌ಡಿಎ ಕಾಯ್ದೆ 2013ರ ಅಡಿಯಲ್ಲಿ ಅವಕಾಶ ಇಲ್ಲ ಎಂದು ಪ್ರಾಧಿಕಾರವು ಸಂಬಂಧಪಟ್ಟ ರಾಜ್ಯಗಳಿಗೆ ಸೂಚನೆ ನೀಡಿದೆ ಎಂದು ಅವರು ತಿಳಿಸಿದ್ದಾರೆ.

ಹಳೆಯ ಪಿಂಚಣಿ ವ್ಯವಸ್ಥೆ ಜಾರಿಗೊಳಿಸುವ ಸಂಬಂಧ ಪಂಜಾಬ್ ಸರ್ಕಾರವು ನವೆಂಬರ್ 18ರಂದು ಅಧಿಸೂಚನೆ ಹೊರಡಿಸಿದೆ. ಆದರೆ, ಎನ್‌ಪಿಎಸ್‌ನಲ್ಲಿ ಇರುವ ಹಣವನ್ನು ಹಿಂದಿರುಗಿಸುವಂತೆ ಪಂಜಾಬ್ ಸರ್ಕಾರದಿಂದ ಯಾವುದೇ ಪ್ರಸ್ತಾವ ಬಂದಿಲ್ಲ ಎಂದು ಅವರು ಹೇಳಿದ್ದಾರೆ. ಎನ್‌ಪಿಎಸ್ 2004ರಿಂದ ಜಾರಿಯಲ್ಲಿದೆ.

ಎರಡೂ ಕಡೆಯವರಿಗೆ ಗಾಯ • ಪರಿಸ್ಥಿತಿ ಈಗ ಶಾಂತ

ಭಾರತ–ಚೀನಾ ಸೈನಿಕರ ಸಂಘರ್ಷ

ನವದೆಹಲಿ (ಪಿಟಿಐ): ಅರುಣಾಚಲ ಪ್ರದೇಶದಲ್ಲಿನ ತವಾಂಗ್ ವಲಯದ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿ ಭಾರತದ ಸೈನಿಕರು ಮತ್ತು ಚೀನಾ ಸೈನಿಕರ ಮಧ್ಯೆ ಈಚೆಗೆ ಸಂಘರ್ಷ ನಡೆದಿದೆ. ಸಂಘರ್ಷದಲ್ಲಿ ಎರಡೂ ಕಡೆಯ ಸೈನಿಕರಿಗೆ ಗಾಯಗಳಾಗಿವೆ ಎಂದು ಭಾರತೀಯ ಸೇನೆಯು ಹೇಳಿದೆ.

ಪಶ್ಚಿಮ ಲಡಾಖ್‌ನ ಗಾಲ್ವಾನ್ ಕಣಿವೆ ಮತ್ತು ಪ್ಯಾಂಗಾಂಗ್ ಸರೋವರದ ಬಳಿ ನಡೆದಿದ್ದ ದೀರ್ಘಾವಧಿ ಸಂಘರ್ಷದ ನಂತರ ನಡೆದ ಮೊದಲ ಸಂಘರ್ಷ ಇದಾಗಿದೆ.

'ತವಾಂಗ್ ವಲಯದಲ್ಲಿನ ಯಾಂಗ್‌ಟ್ಸೆ ಬಳಿ ಡಿಸೆಂಬರ್ 9ರಂದು ಚೀನಾದ ಸೈನಿಕರು ಎಲ್‌ಎಸಿಯನ್ನು ದಾಟಿ ಬಂದಿದ್ದರು. ಆದರೆ ಅಲ್ಲಿಯೇ ಇದ್ದ ನಮ್ಮ ಸೈನಿಕರು ಇದನ್ನು ಪ್ರತಿಭಟಿಸಿದರು. ಇದರಿಂದ ಎರಡೂ ಕಡೆಯ ಸೈನಿಕರ ಮಧ್ಯೆ ಸಂಘರ್ಷ ನಡೆಯಿತು. ಎರಡೂ ಕಡೆಯವರಿಗೆ ಸಣ್ಣ–ಪುಟ್ಟ ಗಾಯಗಳಾದವು' ಎಂದು ಸೇನೆಯ ಪ್ರಕಟಣೆ ಹೇಳಿದೆ.

ಎರಡೂ ಕಡೆಯ ಎಷ್ಟು ಸೈನಿಕರಿಗೆ ಗಾಯಗಳಾಗಿವೆ ಎಂಬ ಮಾಹಿತಿಯನ್ನು ಸೇನೆಯು ನೀಡಿಲ್ಲ. ಆದರೆ, ಚೀನಾ ಸೈನಿಕರಿಗೆ ಹೆಚ್ಚಿನ ಗಾಯಗಳಾಗಿವೆ ಎಂದು ಮೂಲಗಳು ಹೇಳಿವೆ.

'ಕೆಲವೇ ಸಮಯದಲ್ಲಿ ಎರಡೂ ಕಡೆಯ ಸೈನಿಕರು ಸಂಘರ್ಷವನ್ನು ನಿಲ್ಲಿಸಿದ್ದಾರೆ. ನಂತರ ಎರಡೂ ಕಡೆಯವರು ಕಮಾಂಡರ್ ಮಟ್ಟದ ಸಭೆ ನಡೆಸಿದ್ದಾರೆ. ಸಂಘರ್ಷ ತಡೆಯಲು ಮತ್ತು ಶಾಂತಿ ಕಾಪಾಡಲು ಇರುವ ಸಿದ್ಧಕ್ರಮಗಳನ್ನು ಪಾಲಿಸಲಾಗಿದೆ' ಎಂದು ಸೇನೆಯು ವಿವರಿಸಿದೆ.

'ತವಾಂಗ್ ವಲಯದಲ್ಲಿ ಹಾದು ಹೋಗುವ ಎಲ್‌ಎಸಿ ಬಗ್ಗೆ ಎರಡೂ ದೇಶಗಳ ಮಧ್ಯೆ ಸಹಮತವಿಲ್ಲ. ಹೀಗಾಗಿ ಚೀನಾ ತನ್ನದೆಂದು ಹೇಳಿಕೊಳ್ಳುವ ಪ್ರದೇಶದವರೆಗೂ ಗಸ್ತು ನಡೆಸುತ್ತದೆ. ನಮ್ಮ ಸೈನಿಕರೂ, ನಾವು ನಮ್ಮದೆಂದು ಪ್ರತಿಪಾದಿಸುವ ಪ್ರದೇಶದವರೆಗೆ ಗಸ್ತು ನಡೆಸುತ್ತಾರೆ. 2006ರವರೆಗೂ ಇಂತಹ ಸ್ಥಿತಿ ಇರಲಿಲ್ಲ. 2006ರ ನಂತರ ಚೀನಾ ಸೈನಿಕರು ಹೀಗೆ ಮಾಡುತ್ತಿದ್ದಾರೆ. ಹೀಗೆ ಎರಡೂ ಕಡೆಯ ಸೈನಿಕರು ಎದುರು ಬದುರಾದಾಗ ಚಕಮಕಿ ನಡೆಯುತ್ತದೆ' ಎಂದು ಸೇನೆಯು ವಿವರಿಸಿದೆ.

ಮುಖ್ಯಾಂಶಗಳು

- ಅರುಣಾಚಲ ಪ್ರದೇಶದ ತವಾಂಗ್ ವಲಯದಲ್ಲಿ ಸಂಘರ್ಷ
- ಯಾಂಗ್‌ಟ್ಸೆ ಬಳಿಯ ಎಲ್‌ಎಸಿಯಲ್ಲಿ ಎದುರು ಬದುರಾಗಿದ್ದ ಸೈನಿಕರು

ಎಸ್‌ಸಿಎಸ್‌ಪಿ– ಟಿಎಸ್‌ಪಿ ಅನುದಾನ ಬಳಸದಿದ್ದರೆ ಶಿಸ್ತುಕ್ರಮ: ಎಚ್ಚರಿಕೆ

ನಿಧಿ ದುರ್ಬಳಕೆಯಾದರೆ ಎಫ್‌ಐಆರ್

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದ (ಎಸ್‌ಟಿ) ಜನರ ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನವನ್ನು ಉದ್ದೇಶಪೂರ್ವಕವಾಗಿ ಬಳಸದ ಅಧಿಕಾರಿಗಳ ಮೇಲೆ ಚಾಟಿ ಬೀಸಲು ಮುಂದಾಗಿರುವ ರಾಜ್ಯ ಸರ್ಕಾರ, ಕರ್ತವ್ಯ ನಿರ್ಲಕ್ಷ್ಯದ ತೀವ್ರತೆ ಪರಿಗಣಿಸಿ ಕ್ರಿಮಿನಲ್ ಪ್ರಕರಣ ದಾಖಲಿಸುವ ಎಚ್ಚರಿಕೆ ನೀಡಿದೆ.

ಪರಿಶಿಷ್ಟರ ಜನಸಂಖ್ಯೆಗೆ ಅನುಗುಣವಾಗಿ 'ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ' (ಎಸ್‌ಸಿಎಸ್‌ಪಿ-ಟಿಎಸ್‌ಪಿ) ಅಡಿಯಲ್ಲಿ ಪ್ರತಿವರ್ಷ ಬಜೆಟ್‌ನಲ್ಲಿ ಅನುದಾನ ಮೀಸಲಿಡಲಾಗುತ್ತಿದೆ. 'ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಕಾಯ್ದೆ 2014ರ ಏಪ್ರಿಲ್ 1ರಿಂದ ಜಾರಿಗೆ ಬಂದಿದ್ದು, ಅನುದಾನ ವೆಚ್ಚ ಮಾಡದ ಅಧಿಕಾರಿಗಳಿಗೆ ಆರು ತಿಂಗಳಿಗೆ ಕಡಿಮೆ ಇಲ್ಲದಂತೆ ಜೈಲು ಶಿಕ್ಷೆ ವಿಧಿಸಲು ಕಾಯ್ದೆಯಲ್ಲಿ ಅವಕಾಶವಿದೆ.

ಆದರೆ, ಕಾಯ್ದೆ ಜಾರಿಗೆ ಬಂದ ಬಳಿಕ ಅನುದಾನ ವೆಚ್ಚವಾಗದ ಪ್ರಕರಣಗಳು ಪ್ರತಿವರ್ಷ ಸುದ್ದಿಯಾಗುತ್ತಿದ್ದರೂ ಒಬ್ಬನೇ ಒಬ್ಬ ಅಧಿಕಾರಿ ಮೇಲೆ ಕ್ರಮ ತೆಗೆದುಕೊಂಡ ನಿದರ್ಶನ ಇಲ್ಲ. ಇದೀಗ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಯೋಜನೆಯಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ನಿರ್ಲಕ್ಷ್ಯ ತೋರಿದ ಅಥವಾ ಅನುದಾನ ದುರ್ಬಳಕೆ ಮಾಡಿದ ದೂರುಗಳ ವಿಚಾರಣೆ ನಡೆಸಿ ಶಿಸ್ತು ಕ್ರಮ ತೆಗೆದುಕೊಳ್ಳಲು ನಿರ್ಧರಿಸಿದೆ.

ಎಸ್‌ಸಿಎಸ್‌ಪಿ- ಟಿಎಸ್‌ಪಿ ಅಡಿ ಮೀಸಲಿಟ್ಟ ಅನುದಾನದಲ್ಲಿ ವಿವಿಧ ಇಲಾಖೆಗಳ ಮೂಲಕ ಕಾರ್ಯಕ್ರಮಗಳು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಒಟ್ಟು ₹29,165.81 ಕೋಟಿ ಮೀಸಲಿಡಲಾಗಿದೆ. ಕೆಲವು ಪ್ರಕರಣಗಳಲ್ಲಿ ಈ ಅನುದಾನವನ್ನು ಪರಿಶಿಷ್ಟರ ಅಭಿವೃದ್ಧಿಗೆ ಬಳಸದೆ ಸಾಮಾನ್ಯ ವರ್ಗದವರಿಗೆ ಬಳಸಿರುವ ದೂರುಗಳಿವೆ. ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆಗಾಗಿ ಸಮಾಜ ಕಲ್ಯಾಣ ಇಲಾಖೆಯಡಿ ಎಸ್‌ಸಿಎಸ್‌ಪಿ-ಟಿಎಸ್‌ಪಿ ಕೋಶ ಆರಂಭಿಸಲಾಗಿದ್ದು, ದೂರುಗಳ ಬಗ್ಗೆ ಈ ಕೋಶ ಕ್ರಮವಹಿಸಲಿದೆ.

5ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

'ಸಚಿವರ 3 ಮಂತ್ರಗಳ ಭಾಗ ಈ ಸುತ್ತೋಲೆ'

'ಪಾರದರ್ಶಕತೆ ಕಾಯ್ದುಕೊಳ್ಳಬೇಕು, ಯಾರಾದರೂ ತಪ್ಪು ಮಾಡಿದರೆ ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಪ್ರಕ್ರಿಯೆಗಳನ್ನು ಸರಳೀಕರಿಸಬೇಕು ಎಂಬ ಮೂರು ಮಂತ್ರಗಳನ್ನು ಇಲಾಖೆಯ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ ಅವರು ಹೇಳಿದ್ದಾರೆ. ಆ ಮಂತ್ರಗಳ ಭಾಗವಾಗಿ ಹಾಗೂ ಅನುದಾನವನ್ನು ಯಾರಾದರೂ ದುರ್ಬಳಕೆ ಮಾಡಿದರೆ ಅಥವಾ ನಿರ್ಲಕ್ಷ್ಯ ತೋರಿಸಿದರೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಸಚಿವರು ಸೂಚಿರುವುದರಿಂದ ಈ ಸುತ್ತೋಲೆ ಹೊರಡಿಸಲಾಗಿದೆ' ಎಂದು ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿ ಪಿ. ಮಣಿವಣ್ಣನ್ 'ಪ್ರಜಾವಾಣಿ'ಗೆ ತಿಳಿಸಿದರು.


ಪಿ. ಮಣಿವಣ್ಣನ್

ಅನಿರ್ದಿಷ್ಟಾವಧಿ ಧರಣಿ

ಮಹಾತ್ಮ ಗಾಂಧಿ ಅವರ ಗ್ರಾಮ ಸ್ವರಾಜ್ಯ ಕನಸು ನನಸು ಮಾಡಲು ಅವಶ್ಯವಿರುವ ಬೇಡಿಕೆಗಳನ್ನು ತ್ವರಿತವಾಗಿ ಈಡೇರಿಸಬೇಕು ಎಂದು ಆಗ್ರಹಿಸಿ ರಾಜ್ಯದ ಗ್ರಾಮ ಪಂಚಾಯಿತಿಗಳ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದಾರೆ – ಪ್ರಜಾವಾಣಿ ಚಿತ್ರ

₹25 ಸಾವಿರ ಕೋಟಿ 'ರಸ್ತೆ-ಗುಂಡಿ'ಪಾಲು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳಿಗೆ ಮುಕ್ತಿಯೇ ಇಲ್ಲ. ವರ್ಷ ವರ್ಷವೂ ರಸ್ತೆ ಅಭಿವೃದ್ಧಿ, ದುರಸ್ತಿ ಮಾಡುತ್ತಿದ್ದರೂ ಅವ್ಯವಸ್ಥೆಯಿಂದ ನಿತ್ಯ ಯಾತನೆ. ವರ್ಷವಿಡೀ ರಸ್ತೆ ಕಾಮಗಾರಿ. ಶಾಶ್ವತ ಪರಿಹಾರವಂತೂ ಇಲ್ಲ. 7 ವರ್ಷಗಳಲ್ಲಿ ₹25 ಸಾವಿರ ಕೋಟಿಗೂ ಹೆಚ್ಚು ಹಣ ರಸ್ತೆ ಅಭಿವೃದ್ಧಿಗೆಂದೇ ವಿನಿಯೋಗವಾಗಿದೆ.

ಬಿಬಿಎಂಪಿ ವ್ಯಾಪ್ತಿಯ 27 ವಿಧಾನ ಸಭೆ ಕ್ಷೇತ್ರಗಳಲ್ಲಿ 2015–16ನೇ ಸಾಲಿನಿಂದ 2022ರ ಮಾರ್ಚ್‌ವರೆಗೆ ₹18 ಸಾವಿರ ಕೋಟಿಯನ್ನು ರಸ್ತೆ ನಿರ್ಮಾಣ, ಡಾಂಬರು ಸೇರಿ ರಸ್ತೆಗೆ ಸಂಬಂಧಿಸಿದ ಕಾಮಗಾರಿಗಳಿಗೇ ವಿನಿಯೋಗಿಸಲಾಗಿದೆ.

ವಿವರ 3A

ಗುಜರಾತ್: ಭೂಪೇಂದ್ರ ಪಟೇಲ್ ಪ್ರಮಾಣ

ಅಹಮದಾಬಾದ್: ಎರಡನೇ ಅವಧಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ಭೂಪೇಂದ್ರ ಪಟೇಲ್ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು 7

ಚಿನಕುರಳಿ

ಪ್ರಕಾಶ್ ಶೆಟ್ಟಿ

182 ಬ್ಯಾಕ್‌ಲಾಗ್ ಹುದ್ದೆಗಳಿಗೆ ಭರ್ತಿಗೆ ನೇರ ನೇಮಕಾತಿ

ಜಲಸಂಪನ್ಮೂಲ: ನಕಲಿ ಅಭ್ಯರ್ಥಿಗಳ ಮೇಲುಗೈ?

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಜಲಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಇದ್ದ 182 ಬ್ಯಾಕ್‌ಲಾಗ್ ಹುದ್ದೆಗಳಿಗೆ ನಡೆಯುತ್ತಿರುವ ನೇರ ನೇಮಕಾತಿ ಪ್ರಕ್ರಿಯೆಯಲ್ಲಿ ದಾಖಲಾತಿ ಪರಿಶೀಲನೆಗೆ ಸಿದ್ಧಪಡಿಸಿದ 1:2 ಪಟ್ಟಿಯಲ್ಲೇ ಶೇ 50ಕ್ಕಿಂತ ಹೆಚ್ಚು ಪುನರಾವರ್ತಿತ, ನಕಲಿ ಅಭ್ಯರ್ಥಿಗಳೇ ಇದ್ದಾರೆ ಎಂದು ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ದೂರಿದ್ದಾರೆ.

ಜಲಸಂಪನ್ಮೂಲ ಇಲಾಖೆಯಲ್ಲಿ ಖಾಲಿ ಉಳಿದಿದ್ದ ಗ್ರೂಪ್-ಸಿ ವೃಂದದ ದ್ವಿತೀಯ ದರ್ಜೆ ಸಹಾಯಕರ ಪರಿಶಿಷ್ಟ ಜಾತಿ ಬ್ಯಾಕ್‌ಲಾಗ್‌ನ ಹುದ್ದೆಗಳ ನೇಮಕಾತಿಗೆ ಇದೇ ವರ್ಷದ ಸೆ.23ರಂದು ಜಲ ಸಂಪನ್ಮೂಲ ಅಭಿವೃದ್ಧಿ ಸಂಸ್ಥೆಯ ಮುಖ್ಯ ಎಂಜಿನಿಯರ್ ಅಧಿಸೂಚನೆ ಹೊರಡಿಸಿದ್ದರು. ದ್ವಿತೀಯ ಪಿಯುಸಿ, ಸಿಬಿಎಸ್‌ಇ, ಐಸಿಎಸ್‌ಇ 12ನೇ ತರಗತಿ ಅಥವಾ ತತ್ಸಮಾನ ಕೋರ್ಸ್‌ಗಳನ್ನು ಪೂರೈಸಿದ, 18ರಿಂದ 40 ವರ್ಷದ ವಯೋಮಿತಿಯ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು 28 ದಿನಗಳ ಕಾಲಾವಕಾಶ ನೀಡಲಾಗಿದೆ.

182 ಹುದ್ದೆಗಳಿಗೆ ಆಯ್ಕೆ ಬಯಸಿ 20 ಸಾವಿಕ್ಕೂ ಹೆಚ್ಚು ಅರ್ಜಿಗಳು ಸಲ್ಲಿಕೆಯಾಗಿದ್ದವು. ಸಲ್ಲಿಕೆಯಾದ ಅರ್ಜಿಗಳಲ್ಲಿ ಗರಿಷ್ಠ ಅಂಕ ಪಡೆದ 364 ಅಭ್ಯರ್ಥಿಗಳಿಗೆ 1:2 ಆಧಾರದಲ್ಲಿ ದಾಖಲೆಗಳ ಪರಿಶೀಲನೆಗೆ ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಹಾಕಿದ ಬಹುತೇಕರು ಗಳಿಸಿದ ಅಂಕ ಶೇ 100 ಎಂದು ನಮೂದಿಸಿದ್ದಾರೆ. ನಮೂದಿಸಿದ ಅಂಕಗಳ ಆಧಾರದಲ್ಲಿ ಅಭ್ಯರ್ಥಿಗಳ ಪಟ್ಟಿ ತಯಾರಿಸಲಾಗಿದೆ. ಉಳಿದ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳದೇ 1:2 ಆಧಾರದಲ್ಲಿ ದಾಖಲಾತಿ ಪರಿಶೀಲನೆಗೆ ಕರೆಯಲಾಗಿದೆ. ಹಾಗಾಗಿ, ಇತರೆ ಪ್ರತಿಭಾವಂತ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಗೆ ಹಾಜರಾಗಲು ಅವಕಾಶ ದೊರೆತಿಲ್ಲ ಎನ್ನುವುದು ಉದ್ಯೋಗಾಕಾಂಕ್ಷಿಗಳ ಆರೋಪ.

ಬಹುತೇಕರು ಪಿಯುಸಿ ಅಥವಾ ತತ್ಸಮಾನ ಕೋರ್ಸ್‌ಗಳಲ್ಲಿ ಶೇ 100ರಷ್ಟು ಅಂಕ ಪಡೆದಿರುವುದಾಗಿ ಪ್ರಮಾಣ ಪತ್ರ ಸಲ್ಲಿಸಿದ್ದಾರೆ. ಇಂತಹ ಒಬ್ಬೊಬ್ಬ ಅಭ್ಯರ್ಥಿಯ ಹೆಸರಿನಲ್ಲಿ 10ರಿಂದ 20 ಅರ್ಜಿಗಳು ಸಲ್ಲಿಕೆಯಾಗಿವೆ. ಅವರೆಲ್ಲರ ಪುನರಾವರ್ತಿತ ಹೆಸರುಗಳೂ ದಾಖಲಾತಿ ಪರಿಶೀಲನೆಯ ಪಟ್ಟಿಯಲ್ಲಿವೆ.

ಅರ್ಜಿ ಭರ್ತಿಯಲ್ಲೂ ಉಡಾಫೆ: ದಾಖಲಾತಿ ಪರಿಶೀಲನಾ ಪಟ್ಟಿಯಲ್ಲಿರುವ ಹಲವರು ಅರ್ಜಿ ಭರ್ತಿಮಾಡುವಾಗ ವಿಚಿತ್ರ ಮಾಹಿತಿ ನೀಡಿದ್ದಾರೆ. ಶೇ 99.67 ಅಂಕ ಪಡೆದಿರುವ ಕಲಬುರಗಿಯ ಅಭ್ಯರ್ಥಿ ತನ್ನ ಹೆಸರು ಅಣ್ಣಾ ಎಂದು, ತಾಯಿ ಹೆಸರು ಅಮ್ಮ, ತಂದೆಯ ಹೆಸರು ಅಪ್ಪ ಎಂದು ನಮೂದಿಸಿದ್ದಾರೆ. ಐಟಿಐನಲ್ಲಿ ಅವರು ಪಡೆದ ಅಂಕಗಳು 600ಕ್ಕೆ 595 ಎಂದಿದೆ. ಅವರ ಹೆಸರೇ ಪಟ್ಟಿಯಲ್ಲಿ 10ಕ್ಕೂ ಹೆಚ್ಚು ಬಾರಿ ಇದೆ.

ವಿಜಯಪುರದ ಮತ್ತೊಬ್ಬ ಅಭ್ಯರ್ಥಿ ಜಾತಿಯ ಕಾಲಂನಲ್ಲಿ ವೀರಶೈವ ಲಿಂಗಾಯತ ಎಂದು ನಮೂದಿಸಿದ್ದಾರೆ. ಅಂಕಗಳು ಶೇ 100 ಇದೆ. ರಾಯಚೂರಿನ ಅಭ್ಯರ್ಥಿಯೊಬ್ಬರ ಹೆಸರು ಪಟ್ಟಿಯಲ್ಲಿ ಆರು ಕಡೆ ಇದೆ. ಮತ್ತೊಬ್ಬ ಅಭ್ಯರ್ಥಿ ಪಿಯುಸಿ ಉತ್ತೀರ್ಣ ದಿನಾಂಕವನ್ನು 2030 ಎಂದು ನಮೂದಿಸಿದ್ದಾರೆ. ಕೆಲ ವೀರಶೈವ ಲಿಂಗಾಯತರು ಬೇಡ ಜಂಗಮ ಪ್ರಮಾಣಪತ್ರದ ಮೂಲಕ ಬ್ಯಾಕ್‌ಲಾಗ್ ಹುದ್ದೆಗೆ ಅರ್ಜಿ ಸಲ್ಲಿಸಿದ್ದಾರೆ.

'ಬಹುತೇಕರು ನಕಲಿ ದಾಖಲೆಗಳನ್ನು ಅಪ್‌ಲೋಡ್ ಮಾಡಿದ್ದಾರೆ. ಹಲವರ ಹೆಸರು ಪುನರಾವರ್ತಿತವಾಗಿವೆ. ಅಂತಹ ಅರ್ಜಿಗಳೆಲ್ಲ ಮೊದಲೇ ವಜಾ ಮಾಡಿದ್ದರೆ 1:2 ಕೋಟಾದಲ್ಲಿ ಇನ್ನಷ್ಟು ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಯ ಅವಕಾಶ ದೊರಕುತ್ತಿತ್ತು' ಎನ್ನುತ್ತಾರೆ ಜಗಳೂರು ತಾಲ್ಲೂಕಿನ ಅಭ್ಯರ್ಥಿ ಎಸ್.ಎನ್. ನಾಯಕ್.

> ಅಭ್ಯರ್ಥಿಗಳ ಹೆಸರು ಪುನರಾವರ್ತನೆಯಾಗಿದ್ದರೆ, ಹೆಚ್ಚಿನ ಅಭ್ಯರ್ಥಿಗಳು ನಕಲಿ ದಾಖಲೆಗಳನ್ನು ಸಲ್ಲಿಸಿದ್ದರೆ ಅವುಗಳನ್ನು ವಜಾಗೊಳಿಸುತ್ತೇವೆ, ಇನ್ನಷ್ಟು ಅಭ್ಯರ್ಥಿಗಳಿಗೆ ಪರಿಶೀಲನೆಗೆ ಕರೆಯುತ್ತೇವೆ
> **ಗೋವಿಂದ ಕಾರಜೋಳ**
> ಜಲಸಂಪನ್ಮೂಲ ಸಚಿವ

ಹೆಚ್ಚು ಬಡ್ಡಿ ಆಮಿಷ: ಕಂಪನಿ ಮೇಲೆ ನಿಗಾ– ಸಚಿವ ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚು ಬಡ್ಡಿ ನೀಡುವ ಆಮಿಷವೊಡ್ಡಿ ಹಣ ಸಂಗ್ರಹಿಸುವ ಕಂಪನಿಗಳ ಮೇಲೆ ನಿಗಾ ಇಡಲು ಅಗತ್ಯ ಕ್ರಮ ಜರುಗಿಸಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ಸೋಮವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, ಇತ್ತೀಚಿನ ದಿನಗಳಲ್ಲಿ ವಂಚಕ ಕಂಪನಿಗಳಿಂದ ಜನರು ಮೋಸ ಹೋಗುತ್ತಿದ್ದಾರೆ. ಪದೇ ಪದೇ ಇಂತಹ ಘಟನೆಗಳು ನಡೆಯುತ್ತಿದ್ದರೂ ಜನ ಪಾಠ ಕಲಿತಂತಿಲ್ಲ ಎಂದು ಅವರು ಹೇಳಿದರು.

ಈ ರೀತಿಯ ಕಂಪನಿಗಳ ಮೇಲೆ ಕಣ್ಣಿಡಲು ಇಡಲು ಏನೆಲ್ಲ ವ್ಯವಸ್ಥೆ ಮಾಡಬಹುದು ಎಂಬ ಬಗ್ಗೆ ಚಿಂತನೆ ನಡೆಸಲಾಗುತ್ತಿದೆ. ಪ್ರತ್ಯೇಕ ತಂಡವನ್ನು ರಚಿಸುವ ಅಗತ್ಯವೂ ಇದೆ ಎಂದು ಅಶೋಕ ತಿಳಿಸಿದರು.

ಗಾಲ್ಫ್ ಅಸೋಸಿಯೇಷನ್: ದೂರು ವಜಾ

ಬೆಂಗಳೂರು: ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನ ನಾಲ್ವರು ಪದಾಧಿಕಾರಿಗಳ ವಿರುದ್ಧ ಮಾಜಿ ಸದಸ್ಯರೊಬ್ಬರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯಡಿ ದಾಖಲಿಸಿದ್ದ ದೂರನ್ನು ಹೈಕೋರ್ಟ್ ರದ್ದುಪಡಿಸಿದೆ.

ತಮ್ಮ ವಿರುದ್ಧ ಮಾಜಿ ಸದಸ್ಯ ಎ.ಎಂ.ಸುರೇಶ್ ರಾಜ್ ಎಂಬುವರು ದಾಖಲಿಸಿದ್ದ ದೂರು ರದ್ದುಪಡಿಸುವಂತೆ ಕೋರಿ ಡಾ.ಎಂ.ಜಿ. ಭಟ್ ಸೇರಿ ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನ ನಾಲ್ವರು ಪದಾಧಿಕಾರಿಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಅಜೀವ ಸದಸ್ಯತ್ವ ನೀಡದೆ ಹೋದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿ ಪ್ರಕರಣ ದಾಖಲಿಸುವುದಾಗಿ ಸುರೇಶ್ ರಾಜ್ ಬೆದರಿಕೆ ಹಾಕಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ್ದೇನೆ ಎಂಬ ಕಾರಣಕ್ಕೆ ತನಗೆ ಸದಸ್ಯತ್ವ ನೀಡಿಲ್ಲ ಎಂಬುದು ಅವರ ಕಲ್ಪನೆ ಮಾತ್ರ. ಆದ್ದರಿಂದ, ಅರ್ಜಿದಾರರ ವಿರುದ್ಧ ಪ್ರಕರಣ ಮುಂದುವರಿಸುವುದು ಕಾನೂನು ಪ್ರಕ್ರಿಯೆ ದುರ್ಬಳಕೆಯಾಗಲಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ ಜೀವನ್ ಬಿಮಾ ನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ದೂರನ್ನು ರದ್ದುಪಡಿಸಿದೆ.

ವಿ.ವಿ ಪುರಂ ಸಜ್ಜನ್‌ರಾವ್ ವೃತ್ತದ ಈಗಿನ ದೃಶ್ಯ

ಅಭಿವೃದ್ಧಿಯಾದ ನಂತರ ತಿಂಡಿ ಬೀದಿ ಕಾಣುವುದು ಹೀಗೆ

ಸಜ್ಜನ್ ರಾವ್ ವೃತ್ತದಲ್ಲಿ ಮಾದರಿ ತಿಂಡಿ ಬೀದಿ: ಇಂದು ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿ.ವಿ ಪುರಂನಲ್ಲಿರುವ ತಿಂಡಿ ಬೀದಿಯನ್ನು ₹6 ಕೋಟಿ ವೆಚ್ಚದಲ್ಲಿ ವಿನೂತನ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಬಿಬಿಎಂಪಿ ದಕ್ಷಿಣ ವಲಯದ ದಕ್ಷಿಣ ವಲಯ ಆಯುಕ್ತ ಜಯರಾಮ್ ರಾಯಪುರ ತಿಳಿಸಿದರು.

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿ.ವಿ ಪುರಂನಲ್ಲಿನ ತಿಂಡಿ ಬೀದಿಯಲ್ಲಿ ಸಮರ್ಪಕ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತದೆ. ಜನರನ್ನು ಆಕರ್ಷಿಸುವ ನಿಟ್ಟಿನಲ್ಲಿ ಸಜ್ಜನ್ ರಾವ್ ವೃತ್ತ ಮತ್ತು ಮಿನರ್ವ ವೃತ್ತದ ನಡುವಿನ ಸುಮಾರು 209 ಮೀಟರ್ ಉದ್ದದ ರಸ್ತೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗುವುದು ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ವಿವರ ನೀಡಿದರು.

ಕಮರ್ಷಿಯಲ್ ಸ್ಟ್ರೀಟ್ ಹಾಗೂ ಚರ್ಚ್ ಸ್ಟ್ರೀಟ್‌ಗಿಂತ ಭಿನ್ನವಾಗಿ ತಿಂಡಿ ಬೀದಿಯನ್ನು ನಿರ್ಮಿಸಲಾಗುವುದು. ತಿಂಡಿ ಬೀದಿಯಲ್ಲಿ ಸಂಜೆ 6 ಗಂಟೆಯ ನಂತರ ವಾಹನಗಳ ಸಂಚಾರ ನಿಷೇಧಿಸಲಾಗುವುದು ಎಂದು ತಿಳಿಸಿದರು.

ತಿಂಡಿ ಬೀದಿಯಲ್ಲಿ ಜನರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಅಲ್ಲಲ್ಲಿ ಆಸನಗಳ ವ್ಯವಸ್ಥೆ, ರಸ್ತೆಯ ಎರಡೂ ಬದಿ 900 ಮಿ.ಮೀ. ಆರ್.ಸಿ.ಸಿ ಕಾಲುವೆ ನಿರ್ಮಾಣ, 6 ಕಡೆ ಕೈತೊಳೆಯುವ ವ್ಯವಸ್ಥೆ, ಎರಡೂ ಕಡೆ 300 ಮಿ.ಮೀನ ಒಳಚರಂಡಿ ಪೈಪ್‌ಲೈನ್ ಅಳವಡಿಕೆ, ಬೀದಿ ದೀಪಗಳ ಅಳವಡಿಕೆ, ಎರಡೂ ಕಡೆ ಮಳಿಗೆಗಳ ಮುಂಭಾಗ ಕೆನೋಪಿಗಳ ಅಳವಡಿಕೆ, ಹಸಿ ಕಸ/ಒಣ ಕಸ ಹಾಕಲು ಬಿನ್‌ಗಳ ವ್ಯವಸ್ಥೆ, ಎರಡೂ ಕಡೆ ಡಕ್ಟ್ ಅಳವಡಿಕೆ ಮಾಡಲಾಗುವುದು. ಸುಂದರ ಸಸಿಗಳನ್ನು ನೆಟ್ಟು, ಬೀದಿ ನಾಟಕ ಮಾಡಲು ಸ್ಥಳಾವಕಾಶ ಕಲ್ಪಿಸಲಾಗುವುದು. ರಸ್ತೆ ಮಾರ್ಗವನ್ನು 7 ಮೀಟರ್‌ನಿಂದ 5 ಮೀಟರ್‌ಗೆ ಕಿರಿದಾಗಿಸಿ, ರಸ್ತೆಯ ಎರಡೂ ಬದಿ ಸುಮಾರು 3.5 ಮೀ. ಅಗಲದ ವಿಶಾಲವಾದ ಪಾದಚಾರಿ ಮಾರ್ಗ ನಿರ್ಮಾಣ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ತಿಂಡಿ ಬೀದಿ ಅಭಿವೃದ್ಧಿ ಕಾಮಗಾರಿಗೆ ಮಂಗಳವಾರ ಗುದ್ದಲಿ ಪೂಜೆ ಮಾಡಲಾಗುವುದು. ಈ ತಿಂಡಿ ಬೀದಿಯಲ್ಲಿ 39 ಮಳಿಗೆಗಳು ಹಾಗೂ ಬೀದಿ ವ್ಯಾಪಾರಿಗಳಿದ್ದು, ಎಲ್ಲರೊಂದಿಗೆ ಈ ಕಾಮಗಾರಿ ಬಗ್ಗೆ ಚರ್ಚಿಸಲಾಗಿದೆ. ನಾಲ್ಕು ತಿಂಗಳಲ್ಲಿ ಕಾಮಗಾರಿಯನ್ನು ಪೂರ್ಣಗೊಳಿಸಲು ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ದಕ್ಷಿಣ ವಲಯ ಮುಖ್ಯ ಎಂಜಿನಿಯರ್ ಮೋಹನ್ ಕೃಷ್ಣ, ಕಾರ್ಯಪಾಲಕ ಎಂಜಿನಿಯರ್ ಮಹಂತೇಶ್ ಇದ್ದರು.

'ಕನಿಷ್ಠ ₹28,200 ವೇತನ ನಿಗದಿಗೊಳಿಸಿ'

ಬೆಂಗಳೂರು: ಗಾರ್ಮೆಂಟ್ಸ್ ನೌಕರರ ವೇತನ ಪರಿಷ್ಕರಣೆಗೊಳಿಸಿ, ತಿಂಗಳಿಗೆ ಕನಿಷ್ಠ ₹28,200 ನಿಗದಿಗೊಳಿಸಬೇಕು ಎಂದು ಗಾರ್ಮೆಂಟ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಆಗ್ರಹಿಸಿದೆ.

'ಈ ಉದ್ಯಮದಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನವನ್ನು ಪರಿಷ್ಕರಣೆ ಮಾಡಬೇಕು ಎಂದು ಹೈಕೋರ್ಟ್‌ನ ಆದೇಶವಿದ್ದರೂ ಸರ್ಕಾರ ವಿಳಂಬ ನೀತಿ ಅನುಸರಿಸಿ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದೆ. ಕಳೆದ 43 ವರ್ಷಗಳ ಇತಿಹಾಸದಲ್ಲಿ ಸರಾಸರಿ 9 ವರ್ಷಗಳಿಗೊಮ್ಮೆ ವೇತನ ಪರಿಷ್ಕರಣೆ ಮಾಡಿದ್ದು, ತಿಂಗಳಿಗೆ ಕೇವಲ ₹10,441 ನೀಡುತ್ತಿದೆ' ಎಂದು ಯೂನಿಯನ್ ಅಧ್ಯಕ್ಷೆ ಆರ್. ಪ್ರತಿಭಾ ಸೋಮವಾರ ಸುದ್ದಿಗೋಷ್ಠಿಯಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಗಾರ್ಮೆಂಟ್ಸ್ ಉದ್ಯಮದ ಸುಮಾರು 4ಲಕ್ಷ ಕಾರ್ಮಿಕರಲ್ಲಿ ಶೇ 80ರಷ್ಟು ಮಹಿಳೆಯರೇ ಕಾರ್ಯನಿರ್ವಹಿಸುತ್ತಿದ್ದಾರೆ. 5 ವರ್ಷಗಳಿಗೊಮ್ಮೆ ಅನುಸೂಚಿತ ಉದ್ಯಮಗಳ ಕನಿಷ್ಠ ವೇತನ ಪರಿಷ್ಕರಣೆ ಮಾಡಬೇಕೆಂಬ ಕಾನೂನು ಇದೆ. ಆದರೆ ಈ ಉದ್ಯಮದಲ್ಲಿ ಕಳೆದ 8 ವರ್ಷಗಳಿಂದ ವೇತನ ಪರಿಷ್ಕರಣೆಯೇ ಆಗಿಲ್ಲ. ಸರ್ಕಾರ ಗಾರ್ಮೆಂಟ್ಸ್ ಉದ್ಯಮಿಗಳ ಪ್ರಭಾವಕ್ಕೆ ಮಣಿದು ಅವರ ಪರವಾಗಿ ಕೆಲಸ ಮಾಡುತ್ತಿದೆ' ಎಂದು ಆರೋಪಿಸಿದರು.

ಯೂನಿಯನ್ ಗೌರವ ಅಧ್ಯಕ್ಷೆ ಮೈತ್ರೇಯಿ ಮಾತನಾಡಿ, '2018ರ ಫೆಬ್ರುವರಿಯಲ್ಲಿ ಸರ್ಕಾರ ಹೆಲ್ಪರ್ ವರ್ಗಕ್ಕೆ ದಿನಕ್ಕೆ ₹445 ವೇತನ ನಿಗದಿಪಡಿಸಿ ಕರಡು ಆದೇಶ ಹೊರಡಿಸಿತ್ತು. ಆದರೆ ಉದ್ಯಮಿಗಳ ಪ್ರಬಲ ಲಾಬಿಗೆ ಮಣಿದ ಸರ್ಕಾರ ಒಂದು ತಿಂಗಳಲ್ಲಿ ಅದನ್ನು ಹಿಂಪಡೆದಿತ್ತು. ಕಾರ್ಮಿಕ ಸಂಘಟನೆಗಳು ಇದನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದವು. 2021ರಲ್ಲಿ ಹೈಕೋರ್ಟ್ ಕಾರ್ಮಿಕರ ಪರವಾಗಿ ತೀರ್ಪು ನೀಡಿದರೂ ನಿಗದಿಪಡಿಸಿದ ವೇತನ ಜಾರಿ ಮಾಡುವಲ್ಲಿ ಸರ್ಕಾರ ಹಿಂದೇಟು ಹಾಕುತ್ತಿದೆ' ಎಂದು ತಿಳಿಸಿದರು.

'ನಮ್ಮೆಲ್ಲ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಕರಪತ್ರಗಳನ್ನು ಹಂಚುವುದು, ಪೋಸ್ಟ್‌ಕಾರ್ಡ್ ಅಭಿಯಾನ, ಕಾರ್ಖಾನೆ ಮಟ್ಟದಲ್ಲಿ ಜಾಗೃತಿ ಸಭೆ ಮತ್ತು ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗುವುದು. ಜನವರಿಯಲ್ಲಿ ಗಾರ್ಮೆಂಟ್ಸ್ ಉದ್ಯಮವನ್ನು ಸ್ಥಗಿತಗೊಳಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಉಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–560001

ಹೆಚ್‌ಸಿಸಿ ಸಂ.47/2020 ದಿನಾಂಕ: 09.12.2022

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು ತನ್ನ ಅಧೀನ ನ್ಯಾಯಾಲಯಗಳಿಗೆ ಒಟ್ಟು 234 ಸಂಖ್ಯೆಗಳ Auto Duplex Ink Tank Printers ಖರೀದಿಸಿ, ಅಳವಡಿಸಲು ನಿರ್ಧರಿಸಿದ್ದು, ಅದಕ್ಕಾಗಿ ಟೆಂಡರ್‌ನ್ನು e-Procurement Portal ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್‌ನ್ನು ದಿನಾಂಕ: **26.12.2022ರ 4.00 ಗಂಟೆಯೊಳಗೆ** ಆಸಕ್ತರು ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು **https://eproc.karnataka.gov.in** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/– (ಎನ್.ಜಿ.ದಿನೇಶ)
ರಿಜಿಸ್ಟ್ರಾರ್ (ಗಣಕ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು

ವಾಸಾಸಂಇ/ಉನಿ–ಸಿ.ಪಿ/3484/ಎಂಸಿಎ/2022–23

ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್, ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 20–1/2022–23
ದಿನಾಂಕ: 07.12.2022 (2ನೇ ಕರೆ)

(ರಸ್ತೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿ–ಲಕೋಟೆ** ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ದಿನಾಂಕ: **07.12.2022 ರಿಂದ 21.12.2022ರ ಸಂಜೆ 4.00 ಗಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ ದಿನಾಂಕ: **12.12.2022 (ಸಂಜೆ 3.00 ಗಂಟೆಗೆ ಕಛೇರಿ ವೇಳೆಯಲ್ಲಿ).** (2) ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: **21.12.2022 (ಸಂಜೆ 4.00 ಗಂಟೆಯವರೆಗೆ).** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **23.12.2022 ಬೆಳಿಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ 377/ಎಂಸಿ&ಎ/2022–23

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಕಾರ್ಯಪಾಲಕ ಅಭಿಯಂತರರ ಕಛೇರಿ,

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ.
Ph No. : **08156-270058**, E-mail ID: **eerdwsd.ckb2@gmail.com**

ಸಂ.:ಕಾಪಾಅ/ಗ್ರಾ.ಕು.ನೀ&ನೈ.ವಿ/ಚಿ.ಪುರ/ತಾ.ಶಾ/ಟೆಂಡರ್/2022–23/ಟೆಂ.ಪ್ರ ಸಂಖ್ಯೆ–37 ದಿನಾಂಕ: 07.12.2022

(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ: 37/2022–23 ದಿನಾಂಕ: 07.12.2022

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ SDP ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರವ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 12 ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಸುವ ಕಾಮಗಾರಿಗಳನ್ನು ನಿರ್ವಹಿಸಲು ಐಟಂವಾರು ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್‌ಗಳನ್ನು ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ್ದು, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ. ಇ–ಪ್ರೋಕ್ಯೂರ್‌ಮೆಂಟ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ www.eproc.karnataka.gov.in ಮೂಲಕ ಅರ್ಜಿಯನ್ನು ಸಲ್ಲಿಸಲು ಕೋರಲಾಗಿದೆ.
(1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 07.12.2022ರ ಸಂಜೆ 4.30 ಗಂಟೆಯನಂತರ. (2) ಭರ್ತಿ ಮಾಡಿದ ಟೆಂಡರ್ ಸಲಲ್ಲಿಸಲು ಕೊನೆಯ **ದಿನಾಂಕ: 19.12.2022ರ ಸಂಜೆ 5.30 ಗಂಟೆವರೆಗೆ.** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 21.12.2022 ರಂದು ಬೆಳಗ್ಗೆ 11.00 ಗಂಟೆಗೆ.** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22.12.2022 ಬೆಳಗ್ಗೆ 11.00 ಗಂಟೆಗೆ.**

ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ385/ಎಂ.ಸಿ.ಎ/2022–23.

ಕೋವಿಡ್‌-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 19/SBC/22 ದಿನಾಂಕ: 05.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಉಪ–ಕಾಮಗಾರಿ–1:** ವರಿಷ್ಠ ವಿಭಾಗೀಯ ಇಂಜಿನಿಯರ್/ ಪೂರ್ವ ವಿಭಾಗದಲ್ಲಿ 1). ಕುಪ್ಪಂನಲ್ಲಿ 0.39 ಕಿ.ಮೀ. ಗೆ ಟ್ರ್ಯಾಕ್ ಮಶೀನ್ ಸ್ಲೈಡಿಂಗ್‌ನ ನಿರ್ಮಾಣ, ಹಾಗೂ 2). ಸಿಟಿಆರ್(ಪಿ) 30.80 ಕಿ.ಮೀ. ಮತ್ತು 3.05 ಕಿ.ಮೀ. ಗೆ ಸಂಬಂಧಿಸಿದಂತೆ ಲೋಡಿಂಗ್ & ಅನ್‌ಲೋಡಿಂಗ್ ಒಳಗೊಂಡಂತೆ ಮಶಿನ್ ಕ್ರಷ್ ಬಾಲಾಸ್ಟ್‌ಗಳನ್ನು ಟೇಕಲ್ (ಟಿಸಿಎಲ್) ಉಗ್ರಾಣದಿಂದ ಶೇಖರಿಸುವುದು ಹಾಗೂ ಪೂರೈಕೆ ಮಾಡುವುದು. **ಉಪ–ಕಾಮಗಾರಿ–2:** 1). ಬಂಗಾರಪೇಟೆ–ಮಾರಿಕುಪ್ಪಂನಲ್ಲಿ 15.709 ಕಿ.ಮೀ. ವರೆಗೆ ಸ್ಲೀಪರ್ ಸಾಂದ್ರತೆಯನ್ನು ಹೆಚ್ಚಿಸುವುದು, 2). ಟಿಟಿಆರ್ – ಕ್ರಾಸಿಂಗ್‌ಗಳು 12ರಲ್ಲಿ 1 (6 ನಂ.), ಕ್ರಾಸಿಂಗ್‌ಗಳು 8.5 ರಲ್ಲಿ 1 (8 ನಂ.) ಮತ್ತು ಟ್ರ್ಯಾಪ್ ಸ್ವಿಚ್ – 1 ನಂ. ಒಟ್ಟು 15 ಸೆಟ್‌ಗಳು (26213.5 ಕ್ಯುಮೀ.) (ಒಟ್ಟು – 38.193.5 ಕ್ಯುಮೀ.) ಈ ಕೆಲಸಗಳಿಗೆ ಸಂಬಂಧಿಸಿದಂತೆ ಮಶಿನ್ ಕ್ರಷ್ ಬಾಲಾಸ್ಟ್‌ಗಳನ್ನು ಟೇಕಲ್ (ಟಿಸಿಎಲ್) ಉಗ್ರಾಣದಿಂದ ಶೇಖರಿಸುವುದು.	ರೂ. 3,40,17,328/-
2	**ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಎಡಿಇಎನ್ / ಬಂಗಾರಪೇಟೆ: ಉಪ–ಕಾಮಗಾರಿ–1:** ಚಿಂತಾಮಣಿ (ಸಿಎಂವೈ) ನಿಲ್ದಾಣದ ಉನ್ನತೀಕರಣಕ್ಕೆ ಸಂಬಂಧಿಸಿದಂತೆ, ಪ್ರಸ್ತಾವನೆಯ ಪ್ಲಾಟ್‌ಫಾರ್ಮ್ ಶೆಲ್ಟರ್, ವಾಟರ್ ಬೂತ್‌ಗಳು, ಸರ್ಕ್ಯುಲೇಟಿಂಗ್ ಪ್ರದೇಶದ ಅಭಿವೃದ್ಧಿ ಮತ್ತು ಬಂಗಾರಪೇಟೆ ಪ್ಲಾಟ್‌ಫಾರ್ಮ್ ಸಂ. 5 ಮತ್ತು 6 ರಲ್ಲಿ ಪೇ ಅಂಡ್ ಯೂಸ್ ಶೌಚಾಲಯಗಳನ್ನು ಒದಗಿಸುವ ಕೆಲಸ. **ಉಪ–ಕಾಮಗಾರಿ–2:** ಕೃಷ್ಣರಾಜಪುರಂ – ಪ್ರಸ್ತಾವನೆಯ ಪ್ರಕಾರ ಕೃಷ್ಣರಾಜಪುರಂ (ಕೆಜೆಎಂ) ನಿಲ್ದಾಣದಲ್ಲಿ ಪ್ರಯಾಣಿಕರ ಕಾಯುವ ಕೊಠಡಿಯ ನಿರ್ಮಾಣ. **ಉಪ–ಕಾಮಗಾರಿ–3:** ಕೃಷ್ಣರಾಜಪುರಂ/ದೇಸವಾಲ – ಕೃಷ್ಣರಾಜಪುರಂ ಡೀಸಲ್ ಷೆಡ್‌ನ ಲೆಗ್ ಲೈನ್‌ನಲ್ಲಿ ರೀಟೈನಿಂಗ್ ಗೋಡೆಯ ನಿರ್ಮಾಣ. ನಿರ್ವಹಣಾ ಅವಧಿ – 12 ತಿಂಗಳುಗಳು.	ರೂ. 2,29,28,657/-
3	**ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಉಪ–ಕಾಮಗಾರಿ–1:** ಕುಪ್ಪಂ (ಕೆಪಿಎನ್) ಮತ್ತು ಟೇಕಲ್ (ಟಿಸಿಎಲ್) ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ ಅಡಗುತಾಣದ ಪೂರೈಕೆ, ಟೇಕಲ್ (ಟಿಸಿಎಲ್) ನಲ್ಲಿ ಬೋರ್‌ವೆಲ್‌ನೊಂದಿಗೆ ಪೇ & ಯೂಸ್ ಶೌಚಾಲಯಗಳನ್ನು ಒದಗಿಸುವ ಕೆಲಸ. **ಉಪ–ಕಾಮಗಾರಿ–2:** ಬೈಯಪ್ಪನಹಳ್ಳಿ – ಬೈಯಪ್ಪನಹಳ್ಳಿ (ಬಿವೈಪಿಎಲ್) ಯಲ್ಲಿರುವ ಕಾಲೊನಿಯಲ್ಲಿ ರಸ್ತೆಗಳು, ನೀರಿನ ಸರಬರಾಜು, ಒಳಚರಂಡಿ ಮುಂತಾದವುಗಳ ಅಭಿವೃದ್ಧಿ. **ಉಪ–ಕಾಮಗಾರಿ–3:** ಎಡಿಇಎನ್/ಬಿಡಬ್ಲ್ಯೂಟಿ: ಎಸ್‌ಎಸ್‌ಇ/ಪಿ.ವೇ/ ಬಂಗಾರಪೇಟೆಯ ಸಾಮಗ್ರಿ ಉಗ್ರಾಣಕ್ಕೆ ಪ್ರಸ್ತಾವನೆಯಂತೆ ಎಸ್‌ಎಸ್‌ಇ/ಪಿ.ವೇಯ ಪೂರೈಕೆ ಮತ್ತು ಎಸ್‌ಎಸ್‌ಇ/ಪಿ.ವೇ/ಕುಪ್ಪಂ & ಕೋಲಾರದಲ್ಲಿ ಎಸ್‌ಎಸ್‌ಇ/ಪಿ.ವೇ ಸಾಮಗ್ರಿ ಉಗ್ರಾಣದ ನವೀಕರಣ. ನಿರ್ವಹಣಾ ಅವಧಿ – 6 ತಿಂಗಳುಗಳು.	ರೂ. 2,52,52,367/-
4	**ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಉಪ–ಕಾಮಗಾರಿ–1:** ಪ್ರತ್ಯೇಕವಾದ ಸ್ಥಳಗಳಿಗೆ ಒಟ್ಟು 20.859 ಕಿ.ಮೀ.ಯ ಉದ್ದದ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ (313/000–322/800 ಡೌನ್ ಲೈನ್, 336/000–341/300 ಅಪ್ ಲೈನ್ ಡಬ್ಲ್ಯೂಎಫ್‌ಡಿ ಲೆಗ್, ಕೆಜೆಎಂ ಲೆಗ್, ಶಂಟಿಂಗ್ ನೆಕ್, ಸಾಟಲೈಟ್ ಗುಡ್ಸ್ ಟರ್ಮಿನಲ್‌ನ ರಸ್ತೆ 12. ಕೆಜೆಎಂ ಡೀಸಲ್ ಷೆಡ್ ಲೈನ್, ಕೆಜೆಎಂ ನ ರಸ್ತೆ 1 & 2) **ಉಪ–ಕಾಮಗಾರಿ–2:** ಬೆಂಗಳೂರು – ಜೋಲಾರ್‌ಪೇಟೆ ವಿಭಾಗ – ವರಿಷ್ಠ ವಿಭಾಗೀಯ ಇಂಜಿನಿಯರ್/ಇ/ಎಸ್‌ಬಿಸಿ ವಿಭಾಗದ ಬಂಗಾರಪೇಟೆ – ಕೋಲಾರ ವಿಭಾಗದಲ್ಲಿ 132/200 ರಿಂದ 148/500 ಎಸ್‌ಎಲ್ ವರಗೆ ಒಟ್ಟು 16.3 ಕಿ.ಮೀ. ಉದ್ದಕ್ಕೆ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ ಕಾಮಗಾರಿ.	ರೂ. 3,14,31,953/-
5	**ಬೆಂಗಳೂರು–ಜೋಲಾರ್‌ಪೇಟೆ ವಿಭಾಗ: ಉಪ–ಕಾಮಗಾರಿ–1:** ಪ್ರಸ್ತಾವನೆಯ ಪ್ರಕಾರ ಓಹೆಚ್‌ಇ ಮಾಸ್ಟ್ ನಂ. 231ಬಿ/16 ರಿಂದ 231ಬಿ/19 ನಡುವೆ ಸ್ಲೋಪ್ ಸ್ಟಬಿಲೈಜೇಷನ್ ಕೆಲಸ. **ಉಪ–ಕಾಮಗಾರಿ–2:** ಎಡಿಇಎನ್/ಬಂಗಾರಪೇಟೆ ಉಪ ವಿಭಾಗದ ಎಂಎಆರ್–ಪಿಯು ಘಾಟ್ ವಿಭಾಗದ ಕಟಿಂಗ್ ನ ಲಾಂಡ್‌ಸ್ಲೈಡ್ ಸ್ಥಳಗಳಲ್ಲಿ ಮಾಸ್ಟ್ ಸಂ. 236/18 ರಿಂದ 236/30 (ಡೌನ್ ಲೈನ್) ನಡುವೆ ಪ್ರಸ್ತಾವನೆಯಂತೆ ಸ್ಲೋಪ್ ಸ್ಟಬಿಲೈಜೇಷನ್ ಕೆಲಸ. ನಿರ್ವಹಣಾ ಅವಧಿ – 12 ತಿಂಗಳುಗಳು.	ರೂ. 9,24,82,198/-
6	**ಕೆಎಸ್‌ಆರ್ ಬೆಂಗಳೂರು:** ವಿಭಾಗೀಯ ಕಚೇರಿಯಲ್ಲಿರುವ ಬಿಲ್ಡಿಂಗ್ ಮೇಲ್ಛಾವಣಿಗೆ ಬೇಕಾದ ಅಭಿವೃದ್ಧಿ ಕೆಲಸ. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮುಂಗಾರು ಅವಧಿ ಯಾವುದು ನಂತರದಲ್ಲಿ ಬರುತ್ತದೋ ಅದು.	ರೂ. 79,28,373/-
7	**ಕೆಎಸ್‌ಆರ್ ಬೆಂಗಳೂರು:** ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಮುಖ್ಯ ದ್ವಾರದಲ್ಲಿ ಪ್ರಸ್ತಾವನೆಯಂತೆ ಸರ್ಕ್ಯುಲೇಟಿಂಗ್ ಪ್ರದೇಶದ ಅಭಿವೃದ್ಧಿ ಮತ್ತು ಉನ್ನತೀಕರಣ. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮುಂಗಾರು ಅವಧಿ ಯಾವುದು ನಂತರದಲ್ಲಿ ಬರುತ್ತದೋ ಅದು.	ರೂ. 2,12,35,700/-
8	**ಕೆಎಸ್‌ಆರ್ ಬೆಂಗಳೂರು: ಉಪ–ಕಾಮಗಾರಿ–1:** ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ ಸ್ಟೇಷನ್ ಕಟ್ಟಡಕ್ಕೆ ವಾಟರ್ ಪ್ರೂಫಿಂಗ್ ಟ್ರೀಟ್‌ಮೆಂಟ್‌ನ ಒದಗಿಸುವಿಕೆ ಮತ್ತು ಹಾನಿಗೊಳಗಾದ ಗಟರ್‌ಗಳನ್ನು ಮಾರ್ಪಡಿಸುವಿಕೆ. **ಉಪ–ಕಾಮಗಾರಿ–2:** ಕೆಎಸ್‌ಆರ್ ಬೆಂಗಳೂರು : ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ ಪ್ಲಾಟ್‌ಫಾರ್ಮ್ ನಂ. 1ರಲ್ಲಿರುವ ಪುರುಷರ ಮತ್ತು ಮಹಿಳೆಯರ ಸಾಮಾನ್ಯ ನಿರೀಕ್ಷಣಾ ಕೊಠಡಿ, ಎಸಿ ನಿರೀಕ್ಷಣಾ ಕೊಠಡಿ – ಪ್ಲಾಟ್‌ಫಾರ್ಮ್ ನಂ. 1, 7 ಮತ್ತು 8 ನವೀಕರಣ. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮುಂಗಾರು ಅವಧಿ ಯಾವುದು ನಂತರದಲ್ಲಿ ಬರುತ್ತದೋ ಅದು.	ರೂ. 2,45,21,511/-
9	**ಕೆಎಸ್‌ಆರ್ ಬೆಂಗಳೂರು: ಉಪ–ಕಾಮಗಾರಿ–1:** ನಂದಿ ಕಾಲೋನಿಯಲ್ಲಿ ಪ್ರಸ್ತಾವನೆಯ ಪ್ರಕಾರ ಶಿಥಿಲಗೊಂಡ ವಸತಿ ಕಟ್ಟಡಗಳಿಗೆ ಹೊಸ ಬಾಗಿಲುಗಳು, ಬಾತ್‌ರೂಂ ಫಿಟಿಂಗ್‌ಗಳು ಇತ್ಯಾದಿ ಹಾಗೂ ಲೀಕೇಜ್ ಪ್ರೂಫಿಂಗ್ ಅನ್ನು ಒದಗಿಸುವುದು. **ಉಪ–ಕಾಮಗಾರಿ–2:**ಕೆಎಸ್‌ಆರ್ ಬೆಂಗಳೂರು–ನಂದಿ ಕಾಲೊನಿಯ ಟೈಪ್–5 ಮತ್ತು ಎಂಜಿ ಕಾಲೊನಿಯ ವಸತಿ ಕಟ್ಟಡಗಳಿಗೆ ಬೇಕಾದ ಅಭಿವೃದ್ಧಿ ಕೆಲಸಗಳು. ನಿರ್ವಹಣಾ ಅವಧಿ 6 ತಿಂಗಳುಗಳು ಅಥವಾ ಒಂದು ಮುಂಗಾರು ಅವಧಿ ಯಾವುದು ನಂತರದಲ್ಲಿ ಬರುತ್ತದೋ ಅದು.	ರೂ. 2,65,62,677/-
10	**ಬೆಂಗಳೂರು ದಂಡು:** ಪ್ರಸ್ತಾವನೆಯಂತೆ 50 ಹಾಸಿಗೆಗಳನ್ನೊಳಗೊಂಡ ಆರ್‌ಪಿಎಫ್ ಸೇನಾ ಸಾಲುಮನೆಯ ನಿರ್ಮಾಣ. ನಿರ್ವಹಣಾ ಅವಧಿ 12 ತಿಂಗಳುಗಳು.	ರೂ. 86,42,998/-
11	**ಬೆಂಗಳೂರು– ಧರ್ಮಾವರಂ ವಿಭಾಗ: ಉಪ–ಕಾಮಗಾರಿ–1:** ಪ್ರಸ್ತಾವನೆಯ ಪ್ರಕಾರ ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ (ಎಸ್‌ಎಸ್‌ಪಿಎನ್), ಪೇಣುಕೊಂಡ (ಪಿಕೆಡಿ), ನಾರಾಯಣಪುರ (ಎನ್‌ಆರ್‌ವೈಪಿ), ಬಸಂಪಲ್ಲಿ (ಬಿಎಸ್‌ಪಿಎಲ್) ನಿಲ್ದಾಣಗಳಲ್ಲಿ ವಾಟರ್ ಪೆಡೆಸ್ಟ್ರಿಯಲ್‌ಗಳು, ಪ್ಲಾಟ್‌ಫಾರ್ಮ್ ಶೌಚಾಲಯಗಳು ಮತ್ತು ರನ್ನಿಂಗ್ ರೋಮ್ ಶೌಚಾಲಯಗಳಿಗೆ ಬೇಕಾದ ಅಭಿವೃದ್ಧಿ ಕೆಲಸಗಳು. **ಉಪ–ಕಾಮಗಾರಿ–2:** ಶ್ರೀ ಸತ್ಯಸಾಯಿ ಪ್ರಶಾಂತಿ ನಿಲಯಂ: ಪ್ಲಾಟ್‌ಫಾರ್ಮ್ ನಂ. 1 (48 ಮೀ.), ಪ್ಲಾಟ್‌ಫಾರ್ಮ್ ನಂ. 2 ಮತ್ತು 3 (48 ಮೀ.), ಪ್ರತೀ ಪ್ಲಾಟ್‌ಫಾರ್ಮ್‌ನಲ್ಲಿ 3 ಬೇ ನಂತೆ ಐಆರ್‌ಎಸ್ ಮಾದರಿ ಪ್ಲಾಟ್‌ಫಾರ್ಮ್‌ನ ಪೂರೈಕೆ. ನಿರ್ವಹಣಾ ಅವಧಿ 6 ತಿಂಗಳುಗಳು.	ರೂ. 1,18,36,817/-
12	**ಯಶವಂತಪುರ:** ಯಲಹಂಕ–ಧರ್ಮಾವರಂ – ಹಳಿಗಳ ಮೇಲೆ ಕಸವನ್ನು ಎಸೆಯುವುದನ್ನು ತಪ್ಪಿಸುವ ಸಲುವಾಗಿ 2400 ಮೀಟರ್ (ಕಿ.ಮೀ. 220/800–221/250 ಎಲ್‌ಹೆಚ್‌ಎಸ್) ಉದ್ದದ ಗಡಿಯ ಗೋಡೆಗಳನ್ನು ನಿರ್ಮಿಸುವುದು. ನಿರ್ವಹಣಾ ಅವಧಿ 6 ತಿಂಗಳುಗಳು.	ರೂ. 2,97,33,544/-
13	**ಬೆಂಗಳೂರು–ತುಮಕೂರು ವಿಭಾಗ:** ದೊಡ್ಡಬೆಲೆ (ಡಿಬಿಎಲ್) ಮತ್ತು ಮುದ್ದಲಿಂಗನಹಳ್ಳಿ (ಎಂಡಿಎಲ್‌ಎಲ್) ನಿಲ್ದಾಣಗಳ ನಡುವಿನ ರೈಲ್ವೆ ಕಿಮೀ. 42/530 ರಲ್ಲಿ ಪ್ರಸ್ತಾವನೆಯಂತೆ ಕಲ್‌ವರ್ಟ್‌ನ ನಿರ್ಮಾಣ. ನೆಲದಡಿಯ ಪೈಪ್‌ಲೈನ್ ಕ್ರಾಸಿಂಗ್ 3.5 ಮೀ ಡೈಯಾ (ಓಡಿ), ಅಳತೆ 1x5.50ಮೀx4.50ಮೀ ಆರ್‌ಸಿಸಿ ಬಾಕ್ಸ್ ಗಾಗಿ ರೋಲಿಂಗ್ ಇನ್ / ಲಾಂಚಿಂಗ್ ಮಾದರಿಯಂತೆ ಮಾಡಬೇಕಾದ ಡಿಪಾಸಿಟ್ ಕೆಲಸಗಳು. ನಿರ್ವಹಣಾ ಅವಧಿ – 6 ತಿಂಗಳುಗಳು.	ರೂ. 2,43,87,291/-
14	**ಬೈಯಪ್ಪನಹಳ್ಳಿ – ಧರ್ಮಾವರಂ ವಿಭಾಗ:** ಮಾಕಳಿದುರ್ಗ(ಎಂಕೆಎಲ್) – ತೊಂಡೇಭಾವಿ (ಟಿಡಿವಿ) ನಿಲ್ದಾಣಗಳ ನಡುವೆ ಪ್ರಸ್ತಾವನೆಯಂತೆ ರೈಲ್ವೆ ಕಿಮೀ. 58/025ರಲ್ಲಿ ಹೊಸ ಸೇತುವೆಯನ್ನು ನಿರ್ಮಾಣ ಮಾಡುವುದು. ಎತ್ತಿನಹೊಳೆ ಪೈಪ್‌ಲೈನ್ (2.30 ಮೀ ಐಡಿ), ಕ್ರಾಸಿಂಗ್ ಅಳತೆ 1 x 4.40 ಮೀ x 3.75 ಮೀ ಆರ್‌ಸಿಸಿ ಬಾಕ್ಸ್‌ಗಾಗಿ ರೋಲಿಂಗ್ ಇನ್ / ಲಾಂಚಿಂಗ್ ಮಾದರಿಯಂತೆ ಮಾಡಬೇಕಾದ ಡಿಪಾಸಿಟ್ ಕೆಲಸಗಳು. ನಿರ್ವಹಣಾ ಅವಧಿ – 6 ತಿಂಗಳುಗಳು.	ರೂ. 1,58,03,898/-
14	**ಬೆಂಗಳೂರು–ಸೇಲಂ ವಿಭಾಗ:** ಶಿವಾಡಿ – ತೊಪ್ಪೂರು (ಎಸ್‌ಝಡ್‌ವಿ–ಟಿಪಿಪಿ) ಯ ನಡುವೆ ಕಿ.ಮೀ. 47/800 ರಿಂದ 48/000 ರವರೆಗೆ ಕಟಿಂಗ್‌ಗಳ ಸ್ಲೋಪ್‌ಗಳನ್ನು ಬಲಪಡಿಸುವುದು ಹಾಗೂ ಸುರಕ್ಷತೆಗೊಳಿಸುವುದು. ನಿರ್ವಹಣಾ ಅವಧಿ – 12 ತಿಂಗಳುಗಳು.	ರೂ. 6,43,41,329/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **28.12.2022, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/534/AAD/PRB/SWR/2022-23 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು

S.W.Railways | sw_rly | SWRRLY | southwesternrailway | SWRRLY

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ / ಫ್ಯಾಕ್ಸ್: 080–27934470/ 27935412
E-mail: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/20/2022–23 **ದಿನಾಂಕ: 09–12–2022**

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14(ಎ) ರಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ದಿನಾಂಕ: 30–01–2018 ರಂದು ಅನುಮೋದನೆಯಾದ ಮಹಾಯೋಜನೆಯಂತೆ **ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿರುವ ಜಮೀನುಗಳನ್ನು ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ** ಮಾಡಲು ಕೋರಿ ಈ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ / ಸೂಚನೆ / ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಸೂಚನೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕಣ್ಣೂರಹಳ್ಳಿ ಗ್ರಾಮದ ಸ.ನಂ. ಗಳ ವಿವರ

ಕ್ರ. ಸಂ.	ಜಮೀನಿನ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1	ರವೀಂದ್ರ ಸಿ.ಹೆಚ್. ಬಿನ್ ಹುಲ್ಲೂರಪ್ಪ	71/1	01-18
2	ರಾಮಕೃಷ್ಣಪ್ಪ ಬಿನ್ ಕುಮಾರಪ್ಪ	71/2	01-25
3	ಮೆ॥ ವಿ.ಆರ್. ವೆಂಚರ್ಸ್ ಇದರ ಪರವಾಗಿ ಪಾಲುದರರಾದ ಕಿಶೋರ್ ಆರ್. ಬಿ. ರಮೇಶ್ ನಾಯ್ಡು	72/1	00-06 ½
4	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	75/2	00-15
5	ಎ) ಬಿ.ಎಸ್. ಪದ್ಮನಾಭ ಪ್ರಸಾದ್ ಬಿನ್ ಲೇ. ಸತ್ಯನಾರಾಯಣ ಎ) ರಾಮಪ್ಪ ಬಿನ್ ಲೇ. ಅಪ್ಪಯ್ಯಣ್ಣ ಬಿ) ರಾಮಾಂಜಿನಿ ಬಿನ್ ಲೇ. ಅಪ್ಪಯ್ಯಣ್ಣ ಸಿ) ಅಶ್ವತಮ್ಮ ಕೋಂ. ಲೇ. ಬಸವರಾಜು ಡಿ) ಮಂಜುಳ ಬಿನ್ ಲೇ. ಚಿಕ್ಕತಾಯಪ್ಪ ಇ) ಆಂಜನಮ್ಮ ಬಿನ್ ಲೇ. ಚಿಕ್ಕತಾಯಪ್ಪ ಎಫ್) ಸವಿತ ಬಿನ್ ಲೇ. ಚಿಕ್ಕತಾಯಪ್ಪ	75/3	00-37 ½
6	ಮೆ॥ ವಿ.ಆರ್. ವೆಂಚರ್ಸ್ ಇದರ ಪರವಾಗಿ ಕಿಶೋರ್ ಆರ್. ಬಿನ್ ರಮೇಶ್ ನಾಯ್ಡು	75/4	00-16 ½
7	ವಿ. ಬಸವರಾಜು ಬಿನ್ ಬಿ. ವೆಂಕಟಸ್ವಾಮಪ್ಪ	75/5	00-08 ½
8	ಎ) ಶ್ರೀನಿವಾಸ್ ಗೌಡ ಕೆ.ಎಂ. ಬಿನ್ ಕೆರೆ ಮುನಿಯಪ್ಪ ಬಿ) ನಾಗರಾಜು ಬಿನ್ ಕೆರೆ ಮುನಿಯಪ್ಪ ಸಿ) ನಾರಾಯಣಸ್ವಾಮಿ ಎಂ. ಬಿನ್ ಕೆರೆ ಮುನಿಯಪ್ಪ ಡಿ) ಸುರೇಶ್ ಕುಮಾರ್ ಟಿ.ಎಂ. ಬಿನ್ ಕೆರೆ ಮುನಿಯಪ್ಪ	75/6	00-10
9	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	75/7	00-16 ½
10	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	75/8	00-08 ½
11	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	75/10	00-10
12	ಆದಿಲಕ್ಷ್ಮಿ ಕೋಂ. ಸಿ ತುಳಸಿಕುಮಾರ	82/1	00-05 ¼
13	ವನಿತಾಶ್ರೀ ಕೋಂ ಮಹೇಶ್ ಕುಮಾರ್ ಹೆಚ್.ಡಿ	82/2	00-05 ½
14	ಬಿ ನಾಗರಾಜು ಬಿನ್ ಲೇ. ಭತ್ಯಪ್ಪ	82/3	00-05 ¼
15	ಮುನಿವೆಂಕಟಮ್ಮ ಕೋಂ. ಲೇ. ಮುನಿಯಲ್ಲಪ್ಪ	83/1	00-03
16	ರಮೇಶ್ ನಾಯ್ಡು ಬಿನ್ ವೆಂಕಟಪ್ಪ ಆರ್.	83/7	00-02
17	ರಮೇಶ್ ನಾಯ್ಡು ಬಿನ್ ವೆಂಕಟಪ್ಪ ಆರ್.	83/8	00-03
18	ಮುನಿವೆಂಕಟಮ್ಮ ಕೋಂ. ಲೇ. ಮುನಿಯಲ್ಲಪ್ಪ	83/11	00-09 ½
19	ವೆಂಕಟೇಶಪ್ಪ ಬಿನ್ ಕುಮಾರಪ್ಪ	84/1	00-05
20	ಬಸವರಾಜು ಬಿನ್ ಕುಮಾರಪ್ಪ	84/2	00-05
21	ಡಿ. ಚಂದ್ರಶೇಖರ್ ಬಿನ್ ಎಂ. ದಾಸಪ್ಪ	84/3	00-09
22	ಎ) ರವೀಂದ್ರ ಸಿ.ಹೆಚ್. ಬಿನ್ ಹುಲ್ಲೂರಪ್ಪ ಬಿ) ಮಂಜುನಾಥ್ ಕೆ.ಹೆಚ್. ಬಿನ್ ಹುಲ್ಲೂರಪ್ಪ	84/4	00-14
23	ರಾಮಕೃಷ್ಣಪ್ಪ ಬಿನ್ ಕುಮಾರಪ್ಪ	84/7	00-17
24	ಕೆ.ಎ. ವೇಣುಗೋಪಾಲ ಬಿನ್ ಅಪ್ಪಾಜಿ	84/8	00-08 ½
25	ಕೆ.ಎ. ಜಗದೀಶ ಬಿನ್ ಅಪ್ಪಾಜಿ	84/9	00-08 ½
26	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/2	00-17
27	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/3	00-15
28	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/4	00-06
29	ಹೆಚ್. ಮೀನಾ ಬಿನ್ ಹುಲ್ಲೂರಪ್ಪ	85/5	00-07
30	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/6	00-06
31	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/7	00-28
32	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/8ಎ	0-16
33	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/8ಬಿ	00-17
34	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/9	00-07
35	ನಾಗರಾಜ್ ಆರ್ ಬಿನ್ ರಾಜಣ್ಣ	85/10	00-35 ½
36	ಶಾರದಮ್ಮ ಕೋಂ ಚಿನ್ನಸ್ವಾಮಿ	85/11	00-35 ¾
37	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	85/12	00-35 ½
38	ವಿ. ರಮೇಶ್	86/1	00-13
39	ರಾಮಮೂರ್ತಿ ಎಲ್ ಬಿನ್ ಲಕ್ಷ್ಮಯ್ಯ	86/2	00-06
40	ಅನಿಲ್ ಕುಮಾರ್ ಬಿನ್ ಲಕ್ಷ್ಮಯ್ಯ	86/3	00-06
41	ನಿತಿನ್ ಎಲ್. ಬಿನ್ ಲಕ್ಷ್ಮಯ್ಯ	86/4	00-06
42	ಮುನಿಚಿಕ್ಕಣ್ಣ ಬಿನ್ ಲಕ್ಷ್ಮಯ್ಯ	86/5	00-06
43	ಸರೋಜಮ್ಮ ಕೋಂ ಲೇ. ವೆಂಕಟೇಶಪ್ಪ	87/2	00-05 ¼
44	ಎನ್. ರಮೇಶ್ ಬಿನ್ ನರಸಿಂಹಯ್ಯ	89/1	00-29
45	ಎ) ರಮೇಶ್ ನಾಯ್ಡು ಬಿನ್ ವೆಂಕಟಪ್ಪ ಆರ್. ಬಿ) ರಮೇಶ್ ಎನ್. ಬಿನ್ ನರಸಿಂಹಯ್ಯ ಸಿ) ಸುರೇಶ್ ಎನ್. ಬಿನ್ ನರಸಿಂಹಯ್ಯ ಡಿ) ಎನ್. ಹರೀಶ್ ಬಿನ್ ನರಸಿಂಹಯ್ಯ	89/2	01-04
46	ಡಿ.ಸಿ. ಸುಬ್ರಮಣ್ಯ ಬಿನ್ ಲೇ. ಚಿನ್ನಸ್ವಾಮಿ	89/3	00-34
47	ಎ) ಸುರೇಶ್ ಎನ್. ಬಿನ್ ನರಸಿಂಹಯ್ಯ ಬಿ) ಎನ್. ಹರೀಶ್ ಬಿನ್ ನರಸಿಂಹಯ್ಯ	89/4	01-04
48	ಕಿಶೋರ್ ಆರ್. ಬಿನ್ ರಮೇಶ್ ನಾಯ್ಡು	89/5	00-19
49	ಅಮರಾವತಿ ಡಿ.ವಿ. ಕೋಂ ಕಪಿಲ್ ದೇವ್ ಉಳ್ಳಾಲ್	89/6	00-06
50	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	121/1ಬಿ1	00-08
51	ಎಂ. ವೆಂಕಟೇಶ್ ಬಿನ್ ಕೆ.ವಿ. ಮುನಿರಾಮಯ್ಯ ಶೆಟ್ಟಿ	121/1ಬಿ3	00-07 ¾
52	ಚಿಕ್ಕಮುನಿಯಮ್ಮ	121/2ಇ	00-02
53	ಚಿಕ್ಕಮುನಿಯಮ್ಮ ಕೋಂ ಹೆಚ್.ಬಿ. ಕೆಂಪಯ್ಯ	121/5ಎ	00-01
54	ಬಿ. ಮುನಿಯಪ್ಪ	121/5ಬಿ	00-23
55	ಎನ್. ಕೃಷ್ಣಮೂರ್ತಿ ಬಿನ್ ಮುನಿಯಪ್ಪ	121/6	00-20
56	ಎ) ಬಸವರಾಧ್ಯ ಬಿನ್ ಗುರುನಂಜಪ್ಪ ಬಿ) ನಾಗರಾಜು ಬಿನ್ ಸಿದ್ದಪ್ಪ ಸಿ) ಎಂ. ಗಿರಿಜಮ್ಮ ಕೋಂ ಜಿ. ನಂಜುಂಡಾರಾಧ್ಯ ಡಿ) ಹನುಮಕ್ಕ ಕೋಂ ಲೇ. ಮುನಿಶಾಮಿ ಇ) ಗಿರಿಜಮ್ಮ ಕೋಂ ನಂಜುಂಡ ಆರಾಧ್ಯ	130/1ಎ3	01-07 ½

ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಗಣಗಲು ಗ್ರಾಮದ ಸ.ನಂ. ಗಳ ವಿವರ

ಕ್ರ. ಸಂ.	ಜಮೀನಿನ ಮಾಲೀಕರ ಹೆಸರು	ಸ.ನಂ.	ವಿಸ್ತೀರ್ಣ ಎ–ಗುಂ
1	ಎನ್. ಚಂದ್ರಪ್ಪ ಬಿನ್ ಲೇ. ನಾರಾಯಣಪ್ಪ	23/1	00-13
2	ಎ) ರಮೇಶ್ ನಾಯ್ಡು ಬಿನ್ ಲೇ. ವೆಂಕಟಪ್ಪ ಆರ್. ಬಿ) ವೆಂಕಟಾಚಲಪತಿ ಬಿ.ವಿ. ಬಿನ್ ವೆಂಕಟಗಿರಿಯಪ್ಪ ಸಿ) ವೇದಾ ಎಂ.ಎಲ್. ಕೋಂ ಪ್ರಶಾಂತ್ ಟಿ.ಸಿ.	23/11	00-16

ಷರಾ:– ಪ್ರಶ್ನಿತ ಜಮೀನುಗಳು ಹೊಸಕೋಟೆ ನಗರಸಭೆಗೆ ಹೊಂದಿಕೊಂಡಿದ್ದು, ನಗರೀಕರಣದ ಎಲ್ಲೆಗೆ ಲಗತ್ತಾಗಿರುತ್ತದೆ ಹಾಗೂ ಸದರಿ ಜಮೀನುಗಳ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು / ಬರುತ್ತಿದ್ದು, ಸದರಿ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾ ಬದ್ಧವಾದ ವಸತಿ ಬಡಾವಣೆಯನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಉತ್ತಮವಾದ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒಳಗೊಂಡ ವಸತಿ ನಿವೇಶನಗಳನ್ನು ಒದಗಿಸಿ ಕೊಡುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಕಾರಿಯಾಗುವುದೆಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ ಎಂದು ಅರ್ಜಿದಾರರು ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3491/ಅಡ್ವಟೋರ್/2022–23

ನಗರದಲ್ಲಿ ಇಂದು

ರಾಮು ವಿಠಲಾಚಾರ್

ಭಜನೆ, ಪ್ರವಚನ ಮತ್ತು ಸಂಕೀರ್ತನೆ: ಭಜನೆ: ಅಲಕಾನಂದ ಭಜನಾ ಮಂಡಳಿ, ವಿಷ್ಣು ರಹಸ್ಯ ಪ್ರವಚನ: ರಾಮ ವಿಠಲಾಚಾರ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮೀಗಳ ಮಠ, 6ನೇ ಅಡ್ಡರಸ್ತೆ, ಪ್ರಕಾಶನಗರ, ಸಂಜೆ 6

'ಕಲಿ ಕಂಠೀರವ' ನಾಟಕ ಪ್ರದರ್ಶನ: ನಿರ್ದೇಶನ: ಬಿ. ಶಾಂತಕುಮಾರ್, ಆಯೋಜನೆ: ಉದಯಭಾನು ಕಲಾಸಂಘ, ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 6.30

ಹೆನ್ರಿಕ್ ಇಬ್ಸನ್ ಅವರ 'ಎ ಡಾಲ್ಸ್ ಹೌಸ್' ನಾಟಕ ಪ್ರದರ್ಶನ: ನಿರ್ದೇಶನ: ಪ್ರವೀಣ್ ಕುಮಾರ್ ಎಡಮಂಗಲ್, ಆಯೋಜನೆ: ಅಭಿನಯ ತರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 7

'ಕಾವೇರಿ ಕೈಮಗ್ಗದ 10 ಶೋರೂಂ ಆರಂಭ'

ಬೆಂಗಳೂರು: 'ಕಾವೇರಿ ಕೈಮಗ್ಗದ ಉತ್ಪನ್ನಗಳನ್ನು ಗ್ರಾಹಕರಿಗೆ ತಲುಪಿಸುವ ಉದ್ದೇಶದಿಂದ ಹೊಸದಾಗಿ 10 ಶೋರೂಂ ಆರಂಭಿಸಲಾಗುವುದು' ಎಂದು ಕಾವೇರಿ ಕೈಮಗ್ಗ ನಿಗಮದ ನೂತನ ಅಧ್ಯಕ್ಷ ಚಿಕ್ಕಬಳ್ಳಾಪುರದ ಬಿ.ಜೆ. ಗಣೇಶ್ ತಿಳಿಸಿದರು.

ನಿಗಮದ ಅಧ್ಯಕ್ಷರಾಗಿ ಸೋಮವಾರ ಅಧಿಕಾರ ವಹಿಸಿಕೊಂಡ ಬಳಿಕ ಮಾತನಾಡಿದ ಅವರು, 'ಮೊದಲು 76 ಶೋರೂಂಗಳಿದ್ದುವು. ಕಾರಣಾಂತರಗಳಿಂದ ಅವುಗಳ ಸಂಖ್ಯೆ ಕುಸಿದು, ಈಗ ಬೆಂಗಳೂರು ಸೇರಿದಂತೆ ಇತರೆಡೆ ಕೇವಲ ಐದು ಮಾತ್ರ ಇವೆ. ಈ ಸಂಖ್ಯೆ ಹೆಚ್ಚಿಸುವ ಮೂಲಕ ಕೈಮಗ್ಗ ಉತ್ಪನ್ನಗಳನ್ನು ಜನರಿಗೆ ತಲುಪಿಸಲು ಆಡಳಿತ ಮಂಡಳಿ ಶ್ರಮಿಸಲಿದೆ' ಎಂದರು.

'ಮುಂದಿನ ದಿನಗಳಲ್ಲಿ ರಾಜ್ಯದಾದ್ಯಂತ ಪ್ರವಾಸ ಕೈಗೊಂಡು, ಕೈಮಗ್ಗ ನೇಕಾರರು ಉತ್ಪಾದಿಸುತ್ತಿರುವ ಉತ್ಪನ್ನಗಳನ್ನು ಖರೀದಿಸಿ ನಿಗಮದ ಮೂಲಕ ರಫ್ತು ಮಾಡುವ ಚಿಂತನೆಯಿದೆ. ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರ ಜೊತೆ ಚರ್ಚಿಸಲಾಗಿದೆ. ನಿಗಮಕ್ಕೆ ಶೀಘ್ರದಲ್ಲಿ ನವ ಚೈತನ್ಯ ನೀಡಿ ಪ್ರಗತಿಯತ್ತ ಕೊಂಡೊಯ್ಯಲಾಗುವುದು' ಎಂದರು.

ನಿಗಮದ ನೂತನ ಉಪಾಧ್ಯಕ್ಷ ಹಾವೇರಿಯ ನಾರಾಯಣಪ್ಪ ಗಡ್ಡದ, ಆಡಳಿತ ಮಂಡಳಿ ಸದಸ್ಯರಾದ ನಾಮದೇವಪ್ಪ ರಾಜಪ್ಪ ಹುಗ್ಗಿ, ಕೆ.ಎಂ. ಮೋಹನ್, ದಶರಥ ಮನ್ನಾಪೂರ ಮತ್ತು ಆನಂದ ಶ್ರೀಶೈಲ ಕಂಪು ಮತ್ತಿತರರು ಇದ್ದರು.

ಚರ್ಮ ಗಂಟು: ₹30 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚರ್ಮಗಂಟು ರೋಗದಿಂದ ಜಾನುವಾರುಗಳು ಮೃತಪಟ್ಟ ಪ್ರಕರಣಗಳಲ್ಲಿ ಮಾಲೀಕರಿಗೆ ಪರಿಹಾರ ನೀಡಲು ₹ 30 ಕೋಟಿ ಬಿಡುಗಡೆ ಮಾಡಲಾಗಿದೆ' ಎಂದು ಪಶು ಸಂಗೋಪನೆ ಸಚಿವ ಪ್ರಭು ಬಿ. ಚವ್ಹಾಣ ತಿಳಿಸಿದ್ದಾರೆ.

ಈ ಹಿಂದೆ ₹ 2 ಕೋಟಿ ನೀಡಲಾಗಿತ್ತು. ಮೃತಪಟ್ಟ ಜಾನುವಾರುಗಳ ಮಾಲೀಕರ ಆರ್ಥಿಕ ಸ್ಥಿತಿಯನ್ನು ಅರಿತು ಪರಿಹಾರ ಧನ ಬಿಡುಗಡೆ ಮಾಡಲಾಗಿದೆ ಎಂದವರು ಹೇಳಿದ್ದಾರೆ.

ತಕ್ಷಣ ಸ್ಪಂದಿಸುವಂತೆ ಸೂಚನೆ

'ರೋಗ ಕಾಣಿಸಿಕೊಂಡ ಜಾನುವಾರುಗಳ ಚಿಕಿತ್ಸೆಗೆ ಬರುವ ರೈತರು ಹಾಗೂ ದೂರವಾಣಿ ಕರೆಗಳಿಗೆ ಸ್ಪಂದಿಸಿ, ಸೂಕ್ತ ಚಿಕಿತ್ಸೆ ನೀಡುವಂತೆ ಪಶು ವೈದ್ಯಾಧಿಕಾರಿಗಳು ಮತ್ತು ಪಶುಸಂಗೋಪನೆ ಇಲಾಖೆ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದ್ದಾರೆ.

ಚರ್ಮಗಂಟು ರೋಗದಿಂದ ಉಂಟಾಗುವ ಜಾನುವಾರುಗಳ ಮರಣದಿಂದ ಅವುಗಳ ಮಾಲೀಕರಿಗೆ ಉಂಟಾಗುವ ನಷ್ಟವನ್ನು ಭರಿಸಲು ಆಗಸ್ಟ್ 1ರಿಂದ ಅನ್ವಯ ಆಗುವಂತೆ ಪ್ರತಿ ರಾಸುಗಳಿಗೆ ಗರಿಷ್ಠ ₹ 20 ಸಾವಿರ, ಎತ್ತುಗಳಿಗೆ ₹ 30 ಸಾವಿರ, ಪ್ರತಿ ಕರುವಿಗೆ ₹ 5 ಸಾವಿರ ಪರಿಹಾರ ನೀಡಲಾಗುತ್ತಿದೆ. ಚರ್ಮಗಂಟು ರೋಗಕ್ಕೆ ರಾಜ್ಯದಲ್ಲಿ 17 ಸಾವಿರ ಜಾನುವಾರುಗಳು ಮೃತಪಟ್ಟಿವೆ.

'ರಾಜ್ಯದಲ್ಲಿ 2 ಲಕ್ಷ ರಾಸುಗಳು ಚರ್ಮಗಂಟು ರೋಗದಿಂದ ಬಳಲುತ್ತಿದ್ದು, ಈ ಪೈಕಿ 1.50 ಲಕ್ಷ ರಾಸುಗಳು ಚೇತರಿಕೆಯಾಗಿವೆ. 53 ಲಕ್ಷಕ್ಕೂ ಹೆಚ್ಚಿನ ರಾಸುಗಳಿಗೆ ಲಸಿಕೆ ನೀಡಲಾಗಿದೆ. ಲಭ್ಯವಿರುವ 40 ಲಕ್ಷ ಡೋಸ್ ಲಸಿಕೆಯನ್ನು ಜಾನುವಾರುಗಳಿಗೆ ನೀಡಲಾಗುತ್ತಿದೆ. ಚರ್ಮಗಂಟು ರೋಗ ನಿಯಂತ್ರಣಕ್ಕೆ ಬೇಕಾದ ಔಷಧ, ಚಿಕಿತ್ಸೆ ನೀಡಲಾಗುತ್ತಿದೆ. ರೈತರು ಆತಂಕಕ್ಕೆ ಒಳಗಾಗಬೇಕಿಲ್ಲ. ಮೃತಪಟ್ಟ ಜಾನುವಾರುಗಳ ಮಾಲೀಕರ ಬ್ಯಾಂಕ್ ಖಾತೆಗೆ ನೇರವಾಗಿ ಪರಿಹಾರ ಧನ ವಿತರಣೆ ಮಾಡಲಾಗುತ್ತಿದೆ' ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಸುರಂಗ ಕೊರೆದು ಹೊರಬಂದ 'ವಾಮಿಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೊಟ್ಟಿಗೆರೆ–ನಾಗವಾರ ಮೆಟ್ರೊ ರೈಲು ಮಾರ್ಗದಲ್ಲಿ ಮತ್ತೊಂದು ಸುರಂಗ ಕೊರೆಯುವ ಕಾಮಗಾರಿಯನ್ನು ಬೆಂಗಳೂರು ಮೆಟ್ರೊ ರೈಲು ನಿಗಮ(ಬಿಎಂಆರ್‌ಸಿಎಲ್) ಪೂರ್ಣಗೊಳಿಸಿದೆ.

ಸುರಂಗ ಕೊರೆಯುವ ಯಂತ್ರ(ವಾಮಿಕ) ಡೇರಿ ವೃತ್ತದ ನಿಲ್ದಾಣದಿಂದ ಲಕ್ಕಸಂದ್ರ ನಿಲ್ದಾಣದ ವರೆಗೆ 742.60 ಮೀಟರ್ ಸುರಂಗವನ್ನು ಯಶಸ್ವಿಯಾಗಿ ಕೊರೆದು ಸೋಮವಾರ ಹೊರಬಂದಿದೆ. 2022ರ ಏಪ್ರಿಲ್ 24ರಂದು ಡೇರಿ ವೃತ್ತದ ನಿಲ್ದಾಣದಿಂದ ಕಾಮಗಾರಿ ಆರಂಭಿಸಿತ್ತು.

ಈ ಮೊದಲು 'ವಾಮಿಕ' ಟಿಬಿಎಂ, ದಕ್ಷಿಣ ರ‍್ಯಾಂಪ್‌ನಿಂದ ಡೇರಿ ವೃತ್ತದ ತನಕ 613.20 ಮೀಟರ್ ಸುರಂಗ ಕೊರೆದಿತ್ತು. ಈಗ ಲಕ್ಕಸಂದ್ರ ಮತ್ತು ಲ್ಯಾಂಗ್‌ಫೋರ್ಡ್ ಟೌನ್ ನಿಲ್ದಾಣಗಳ ನಡುವೆ ಸುರಂಗ ಕೊರೆಯುವ ಕಾಮಗಾರಿಗೆ ಈ ಯಂತ್ರವನ್ನು ನಿಯೋಜಿಸಲಾಗುವುದು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಗೊಟ್ಟಿಗೆರೆ–ನಾಗವಾರ ಮಾರ್ಗದಲ್ಲಿ ಡೇರಿ ವೃತ್ತದಿಂದ ನಾಗವಾರ ತನಕ ಸುರಂಗ ಮಾರ್ಗ ನಿರ್ಮಾಣವಾಗುತ್ತಿದೆ. ಸುರಂಗ ಕೊರೆಯುವ ಕಾಮಗಾರಿ ಅಂತಿಮ ಹಂತದಲ್ಲಿದೆ ಎಂದು ವಿವರಿಸಿದ್ದಾರೆ.

ಸುರಂಗ ಕೊರೆದು ಹೊರ ಬಂದ 'ವಾಮಿಕ' ಟಿಬಿಎಂ ಯಂತ್ರ

ಅಪಘಾತ : ಸ್ಥಳದಲ್ಲೇ ಮೂವರ ಸಾವು

ಆನೇಕಲ್ : ತಾಲ್ಲೂಕಿನ ಅತ್ತಿಬೆಲೆ ಪೊಲೀಸ್ ಠಾಣೆ ವ್ಯಾಪ್ತಿಯ ಆನೇಕಲ್-ಅತ್ತಿಬೆಲೆ ರಸ್ತೆಯ ಮಾಯಸಂದ್ರದ ಬಳಿ ನಡೆದು ಹೋಗುತ್ತಿದ್ದ ಕೂಲಿ ಕಾರ್ಮಿಕರಿಗೆ ವಾಹನವೊಂದು ಡಿಕ್ಕಿ ಹೊಡೆದು ಉತ್ತರ ಭಾರತ ಮೂಲದ ಮೂವರು ಕೂಲಿ ಕಾರ್ಮಿಕರು ಸ್ಥಳದಲ್ಲೆ ಮೃತಪಟ್ಟಿದ್ದಾರೆ.

ಶೆಟ್ಟಹಳ್ಳಿ ಸಮೀಪದ ವೇರ್‌ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ ಈ ಮೂವರು ಕೆಲಸ ಮುಗಿಸಿಕೊಂಡು ರಾತ್ರಿ 10.30ರ ಸುಮಾರಿನಲ್ಲಿ ಮನೆಗೆ ತೆರಳುತ್ತಿದ್ದವರಿಗೆ ವಾಹನವೊಂದು ಡಿಕ್ಕಿ ಹೊಡೆದು ನಿಲ್ಲಿಸದೇ ಪರಾರಿಯಾಗಿದೆ. ಸ್ಥಳಕ್ಕೆ ಡಿವೈಎಸ್ಪಿ ಲಕ್ಷ್ಮೀನಾರಾಯಣ್, ಸರ್ಕಲ್ ಇನ್‌ಸ್ಪೆಕ್ಟರ್ ಕೆ.ವಿಶ್ವನಾಥ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸಿಸಿ ಕ್ಯಾಮರಗಳಲ್ಲಿ ವಾಹನಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಅಪಘಾತ ಮಾಡಿದ ವಾಹನವನ್ನು ಪತ್ತೆ ಹಚ್ಚಲಾಗುವುದು ಎಂದು ತಿಳಿಸಿದ್ದಾರೆ.

ಮುಂದುವರಿದ ಕೆರೆ ಕಾಮಗಾರಿಗೆ ಶಾಸಕ ಎಸ್‌.ಆರ್‌.ವಿಶ್ವನಾಥ್ ಚಾಲನೆ

₹ 17 ಕೋಟಿ ವೆಚ್ಚದಲ್ಲಿ ಕೆರೆ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಯಲಹಂಕ: ಹೋಬಳಿಯ ಆವಲಹಳ್ಳಿ ಕೆರೆ ಹಾಗೂ ಬಿಬಿಎಂಪಿ ವ್ಯಾಪ್ತಿಯ ಯಲಹಂಕ, ಅಲ್ಲಾಳಸಂದ್ರ ಸೇರಿ 6 ಕೆರೆಗಳ ಮುಂದುವರಿದ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ₹ 17 ಕೋಟಿ ವೆಚ್ಚದಲ್ಲಿ ಕ್ಷೇತ್ರ ವ್ಯಾಪ್ತಿಯ ಯಲಹಂಕ, ಅಲ್ಲಾಳಸಂದ್ರ, ಆವಲಹಳ್ಳಿ, ಶಿವನಹಳ್ಳಿ, ಚಿಕ್ಕಬೆಟ್ಟಹಳ್ಳಿ ಹಾಗೂ ವಡೇರಹಳ್ಳಿ ಕೆರೆಗಳ ಮುಂದುವರಿದ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ವಡೇರಹಳ್ಳಿ ಮತ್ತು ಶಿವನಪುರ ಕೆರೆಗಳ ಅಭಿವೃದ್ಧಿ ಕಾಮಗಾರಿಯನ್ನು ಹೊಸದಾಗಿ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಯಲಹಂಕ ಹೋಬಳಿಯ ಕೆರೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್‌.ಆರ್‌. ವಿಶ್ವನಾಥ್ ಚಾಲನೆ ನೀಡಿದರು.

ಕೆರೆಗಳ ಒತ್ತುವರಿಯಾಗಲು ಬಿಡದೆ, ಎಲ್ಲ ಕೆರೆಗಳನ್ನು ಪುನಶ್ಚೇತನಗೊಳಿಸಲಾಗಿದೆ. ಮೂಲ ಸೌಕರ್ಯಗಳನ್ನು ಒದಗಿಸಲಾಗಿದೆ. ಹಾಳಾಗಿದ್ದ ವಾಕಿಂಗ್ ಟ್ರ್ಯಾಕ್ ದುರಸ್ತಿ, ವಿದ್ಯುತ್ ದೀಪ, ತಂತಿಬೇಲಿ ಅಳವಡಿಕೆ, ಮತ್ತೊಂದು ಸೆಟ್ ತೆರೆದ ಜಿಮ್ ಮತ್ತು ಆಟದ ಸಾಮಗ್ರಿಗಳ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಲ್ಲದೇ ಅರಣ್ಯ ಇಲಾಖೆ ವತಿಯಿಂದ 250 ಸಸಿಗಳನ್ನು ನೆಡಲಾಗಿದೆ ಎಂದರು.

ಪಾಲಿಕೆ ಮಾಜಿ ಸದಸ್ಯರಾದ ಚಂದ್ರಮ್ಮ ಕೆಂಪೇಗೌಡ, ಎಂ.ಸತೀಶ್, ಜಲಸಿರಿ ಪ್ರತಿಷ್ಠಾನದ ಅಧ್ಯಕ್ಷ ಅ.ಬ. ಶಿವಕುಮಾರ್, ಕಾರ್ಯಾಧ್ಯಕ್ಷ ಮು. ಕೃಷ್ಣಮೂರ್ತಿ, ಬಿಜೆಪಿ ಮುಖಂಡರಾದ ಸಿ.ವೆಂಕಟೇಶ್, ವಿ.ವಿ. ರಾಮಮೂರ್ತಿ, ಎ.ಎಸ್.ರಾಜ, ಈಶ್ವರಪ್ಪ, ಅಟ್ಟೂರು ಶ್ರೀನಿವಾಸ್, ನರಸಿಂಹಮೂರ್ತಿ, ಹರಿನಾಥ್ ಉಪಸ್ಥಿತರಿದ್ದರು.

ಬೆಂಗಳೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ನಡೆದ ಮಾನವ ಹಕ್ಕುಗಳು ಹಾಗೂ ಉತ್ತಮ ಆಡಳಿತ ಎಂಬ ವಿಚಾರ ಸಂಕಿರಣವನ್ನು ಕುಲಪತಿ ಪ್ರೊ.ಎಸ್‌ಎಂ.ಜಯಕರ ಉದ್ಘಾಟಿಸಿದರು

'ಕೆರೆ ಕಣ್ಮರೆ: ನೆರೆ ಸೃಷ್ಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಕೆರೆಗಳು ಕಣ್ಮರೆಯಾಗಿ ಆ ಸ್ಥಳದಲ್ಲಿ ದೊಡ್ಡ ಅಪಾರ್ಟ್‌ಮೆಂಟ್‌ಗಳು ನಿರ್ಮಾಣ ಆಗುತ್ತಿವೆ. ಅತಿ ಮಳೆಯಾದ ವೇಳೆ ನೆರೆ ಉಂಟಾಗಿ ಜನರು ತೊಂದರೆಗೆ ಸಿಲುಕುತ್ತಿದ್ದಾರೆ. ಅದು ಮಾನವ ಹಕ್ಕುಗಳ ಉಲ್ಲಂಘನೆ ಅಲ್ಲವೇ' ಎಂದು ಲೋಕಾಯುಕ್ತ ಬಿ.ಎಸ್.ಪಾಟೀಲ್ ಪ್ರಶ್ನಿಸಿದರು.

ಬೆಂಗಳೂರು ವಿಶ್ವವಿದ್ಯಾಲಯ ರಾಷ್ಟ್ರೀಯ ಸೇವಾ ಯೋಜನೆ ಹಾಗೂ ರಾಜ್ಯ ಎನ್‌ಎಸ್‌ಎಸ್ ಘಟಕ ಮತ್ತು ವಿಶ್ವವಿದ್ಯಾಲಯ ಕಾನೂನು ಕಾಲೇಜು ಆಶ್ರಯದಲ್ಲಿ ಮಾನವ ಹಕ್ಕುಗಳು ಹಾಗೂ ಉತ್ತಮ ಆಡಳಿತ ಎಂಬ ವಿಚಾರಸಂಕಿರಣದಲ್ಲಿ ಮಾತನಾಡಿದರು.

'ಭಾರತದಲ್ಲಿ ಶೇ 70ರಷ್ಟು ಜನರು ಹಳ್ಳಿಯಲ್ಲಿ ವಾಸ ಮಾಡುತ್ತಾರೆ. ಎಷ್ಟೋ ಜನರಿಗೆ ತಮ್ಮ ಮಾನವ ಹಕ್ಕುಗಳ ಅರಿವೇ ಇರುವುದಿಲ್ಲ. ಇವರೆಲ್ಲರಿಗೂ ಮಾನವ ಹಕ್ಕುಗಳ ಅರಿವು ಮೂಡಿಸುವಂತಹ ಜವಾಬ್ದಾರಿಯುತವಾದ ಕೆಲಸ ರಾಜ್ಯದಿಂದ ಆಗಬೇಕು' ಎಂದು ಸಲಹೆ ನೀಡಿದರು.

'ಹಳ್ಳಿಗಳಲ್ಲಿ ಶೌಚಾಲಯಗಳ ವ್ಯವಸ್ಥೆ ಇಲ್ಲ. ನೀರಿನ ಸೌಕರ್ಯ ಹಾಗೂ ಚರಂಡಿ ವ್ಯವಸ್ಥೆ ಇಲ್ಲ. ಉತ್ತಮ ಶಿಕ್ಷಣ, ಆರೋಗ್ಯ ಹಾಗೂ ಪೌಷ್ಟಿಕತೆಯ ಆಹಾರ ದೊರಕದಿರುವುದು ಮಾನವ ಹಕ್ಕುಗಳ ಉಲ್ಲಂಘನೆ' ಎಂದು ತಿಳಿಸಿದರು.

ಕುಲಪತಿ ಪ್ರೊ.ಎಸ್.ಎಂ.ಜಯಕರ ಅವರು ಮಾತನಾಡಿ, ಮಾನವ ಹಕ್ಕು ಹಾಗೂ ಜನರ ಘನತೆ ಕಾಪಾಡುವ, ಎತ್ತಿ ಹಿಡಿಯುವ ಕೆಲಸ ಮಾಡಬೇಕು ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಎಸ್.ಎಂ.ಜಯಕರ, ರಾಜ್ಯ ಎನ್.ಎಸ್.ಎಸ್. ಅಧಿಕಾರಿ ಪ್ರತಾಪ್ ಲಿಂಗಯ್ಯ, ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಪ್ರಾಂಶುಪಾಲ ಪ್ರೊ.ವಿಸುರೇಶ್ ವಿ. ನಾಡಗೌಡ, ಎನ್‌ಎಸ್‌ಎಸ್ ಸಂಯೋಜನಾಧಿಕಾರಿ ಪ್ರೊ.ಎಚ್.ಆರ್ ರವೀಶ್ ಉಪಸ್ಥಿತರಿದ್ದರು.

19ರಿಂದ ಅನಿರ್ದಿಷ್ಟಾವಧಿ ನಿರಶನ

ಸಾರಿಗೆ ನೌಕರರಿಂದ ಬೆಳಗಾವಿ ಡಿಸಿ ಕಚೇರಿ ಮುಂದೆ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ಮುಷ್ಕರದ ಸಮಯದಲ್ಲಿ ವಜಾಗೊಂಡಿರುವ ನೌಕರರನ್ನು ಯಾವುದೇ ನಿಬಂಧನೆಗಳನ್ನು ವಿಧಿಸದೇ ಪುನರ್ ನೇಮಿಸಿಕೊಳ್ಳಬೇಕು ಎಂದು ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆ ಆಗ್ರಹಿಸಿದೆ.

ಬೆಳಗಾವಿ ಚಳಿಗಾಲದ ಅಧಿವೇಶನದ ಸಮಯದಲ್ಲಿ ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಡಿ. 19ರಿಂದ ಬೆಳಗಾವಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಸಾರಿಗೆ ನೌಕರರು ಮತ್ತು ಅವರ ಕುಟುಂಬ ಸದಸ್ಯರಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದೆ.

'ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕು ನಿಗಮಗಳ ನೌಕರರಿಗೆ ಸರ್ಕಾರಿ ನೌಕರರಂತೆ ಸಮಾನ ವೇತನವನ್ನು ನೀಡಬೇಕು. ಸಂಸ್ಥೆಯಲ್ಲಿ ನಾಲ್ಕು ವರ್ಷಕ್ಕೊಮ್ಮೆ ಮಾಡುವ ಚೌಕಾಸಿ ವೇತನ ಪರಿಷ್ಕರಣಾ ಪದ್ಧತಿಯನ್ನು ಕೈಬಿಟ್ಟು, ಇತರೆ ಇಲಾಖೆಗಳ ಮತ್ತು ವೇತನ ಆಯೋಗದ ಮಾದರಿಯನ್ನು ಅಳವಡಿಸಿಕೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಕೂಟದ ಅಧ್ಯಕ್ಷ ಆರ್. ಚಂದ್ರಶೇಖರ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಮುಖ್ಯಾಂಶಗಳು

- ವಜಾಗೊಂಡವರ ಮರು ನೇಮಕಕ್ಕೆ ಆಗ್ರಹ
- ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆಯಿಂದ ಪ್ರತಿಭಟನೆ ಎಚ್ಚರಿಕೆ

'ಮುಷ್ಕರದ ಸಮಯದಲ್ಲಿ ನಾಲ್ಕು ನಿಗಮಗಳ ಸಾರಿಗೆ ನೌಕರರು ಮತ್ತು ಅವರ ಕುಟುಂಬಗಳ ಸದಸ್ಯರ ಮೇಲೆ ದಾಖಲಿಸಿರುವ ಪೊಲೀಸ್ ಪ್ರಕರಣಗಳನ್ನು ಹಿಂಪಡೆಯಬೇಕು. ನಿಗಮಗಳಲ್ಲಿ ಕೂಡಲೇ ಕಾರ್ಮಿಕ ಸಂಘಗಳ ಚುನಾವಣೆ ನಡೆಸಬೇಕು. ಸಾರಿಗೆ ಸಂಸ್ಥೆಗಳಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ ಖಾಸಗಿ ಚಾಲಕರನ್ನು ಮತ್ತು ಅದರ ನಿರ್ವಹಣೆಯ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಿರುವುದು ಖಂಡನೀಯ' ಎಂದರು.

ವೇದಿಕೆ ಪ್ರಧಾನ ಕಾರ್ಯದರ್ಶಿ ನಾಗರಾಜು ಮಾತನಾಡಿ, 'ಸಂಸ್ಥೆಯ ಇತರೆ ವಾಹನಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಚಾಲಕರನ್ನು ನೇಮಿಸಿಕೊಳ್ಳಲಾಗುತ್ತಿದೆ. ಕೆಲ ಮಾರ್ಗಗಳಲ್ಲಿ ಖಾಸಗಿ ವಾಹನಗಳ ಚಾಲನೆಗೆ ಅನುಮತಿ ನೀಡುವ ಮೂಲಕ ಮುಂದಿನ ದಿನಗಳಲ್ಲಿ ಸಾರಿಗೆ ಸಂಸ್ಥೆಯನ್ನು ಖಾಸಗೀಕರಣ ಮಾಡುವ ಯತ್ನ ನಡೆಯುತ್ತಿದೆ. ಅದನ್ನು ಕೈಬಿಡಬೇಕು' ಎಂದು ಒತ್ತಾಯಿಸಿದರು.

'ಸಾರಿಗೆ ಸಚಿವರು ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ ಜನವರಿಯಲ್ಲಿ ಅನಿರ್ದಿಷ್ಟಾವಧಿ ಸಾರಿಗೆ ಮುಷ್ಕರಕ್ಕೆ ಕರೆ ನೀಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ
ನವಭಾರತಕ್ಕಾಗಿ ನವಕರ್ನಾಟಕ
ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್, ಚಾಮರಾಜನಗರ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು


ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಬಸವರಾಜ ಎಸ್. ಬೊಮ್ಮಾಯಿ ಅವರಿಂದ
ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ ಮತ್ತು ಹನೂರು ವಿಧಾನಸಭಾ ಕ್ಷೇತ್ರಗಳಲ್ಲಿ
ಅಭಿವೃದ್ಧಿಯ ನವ ಪರ್ವ
ಅಂದಾಜು ₹ 1099.15 ಕೋಟಿ ವೆಚ್ಚದಲ್ಲಿ ವಿವಿಧ ಇಲಾಖೆಗಳ
ಒಟ್ಟಾರೆ 132 ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನೆ
ದಿನಾಂಕ: 13.12.2022 ಮಂಗಳವಾರ

ಸಮಯ: ಬೆಳಗ್ಗೆ 10.30 ಗಂಟೆಗೆ
ಸ್ಥಳ: ಡಾ|| ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣ, ಚಾಮರಾಜನಗರ
ಅಧ್ಯಕ್ಷತೆ
ಶ್ರೀ ಸಿ. ಪುಟ್ಟರಂಗಶೆಟ್ಟಿ
ಮಾನ್ಯ ಶಾಸಕರು
ಚಾಮರಾಜನಗರ ವಿಧಾನಸಭಾ ಕ್ಷೇತ್ರ

ಸಮಯ: ಮಧ್ಯಾಹ್ನ 01.00 ಗಂಟೆಗೆ
ಸ್ಥಳ: ಮಹದೇಶ್ವರ ಕ್ರೀಡಾಂಗಣ, ಹನೂರು
ಅಧ್ಯಕ್ಷತೆ
ಶ್ರೀ ಆರ್. ನರೇಂದ್ರ
ಮಾನ್ಯ ಶಾಸಕರು
ಹನೂರು ವಿಧಾನಸಭಾ ಕ್ಷೇತ್ರ

ಶ್ರೀ ವಿ. ಸೋಮಣ್ಣ, ಮಾನ್ಯ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು ಸನ್ಮಾನ್ಯ ಮುಖ್ಯಮಂತ್ರಿಗಳೊಂದಿಗೆ ಸಮಾಲೋಚಿಸುತ್ತಿರುವುದು.

ಘನ ಉಪಸ್ಥಿತಿ
ಶ್ರೀ ವಿ. ಸೋಮಣ್ಣ, ಮಾನ್ಯ ವಸತಿ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು

ಡಾ|| ಅಶ್ವಥ್ ನಾರಾಯಣ. ಸಿ.ಎನ್. – ಮಾನ್ಯ ಉನ್ನತ ಶಿಕ್ಷಣ ಇಲಾಖೆ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮ ಶೀಲತೆ ಮತ್ತು ಜೀವನೋಪಾಯ ಇಲಾಖೆ ಸಚಿವರು
ಶ್ರೀ ಬಿ. ಶ್ರೀರಾಮುಲು – ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರು
ಶ್ರೀ ಆರ್. ಅಶೋಕ – ಮಾನ್ಯ ಕಂದಾಯ ಸಚಿವರು
ಶ್ರೀ ಗೋವಿಂದ ಎಂ. ಕಾರಜೋಳ – ಮಾನ್ಯ ಜಲಸಂಪನ್ಮೂಲ ಸಚಿವರು
ಶ್ರೀ ಪ್ರಭು ಬಿ ಚೌವ್ಹಾಣ್ – ಮಾನ್ಯ ಪಶುಸಂಗೋಪನೆ ಸಚಿವರು
ಶ್ರೀ ಕೋಟ ಶ್ರೀನಿವಾಸ ಪೂಜಾರಿ – ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಶ್ರೀ ಸಿ.ಸಿ. ಪಾಟೀಲ್ – ಮಾನ್ಯ ಲೋಕೋಪಯೋಗಿ ಇಲಾಖೆ ಸಚಿವರು
ಡಾ|| ಕೆ. ಸುಧಾಕರ್ – ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು
ಶ್ರೀ ಬಿ.ಎ. ಬಸವರಾಜ (ಬೈರತಿ) – ಮಾನ್ಯ ನಗರಾಭಿವೃದ್ಧಿ ಸಚಿವರು
ಶ್ರೀ ಬಿ.ಸಿ. ಪಾಟೀಲ್ – ಮಾನ್ಯ ಕೃಷಿ ಸಚಿವರು
ಶ್ರೀ ಮುನಿರತ್ನ – ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಶ್ರೀ ಆಚಾರ್ ಹಾಲಪ್ಪ ಬಸಪ್ಪ – ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ & ಮಕ್ಕಳ ಕಲ್ಯಾಣ, ವಿಕಲಚೇತನ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು
ಶ್ರೀ ವಿ. ಸುನೀಲ್ ಕುಮಾರ್ – ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಮುಖ್ಯ ಅತಿಥಿಗಳು
ಶ್ರೀ ವಿ. ಶ್ರೀನಿವಾಸ ಪ್ರಸಾದ್ – ಮಾನ್ಯ ಲೋಕಸಭಾ ಸದಸ್ಯರು, ಚಾಮರಾಜನಗರ
ಶ್ರೀ ಸಿ.ಎಸ್. ನಿರಂಜನ್ ಕುಮಾರ್ – ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕೆ ನಿಗಮ ನಿಯಮಿತ, ಹಾಗೂ ಶಾಸಕರು, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ
ಶ್ರೀ ಎನ್. ಮಹೇಶ್ – ಮಾನ್ಯ ಶಾಸಕರು, ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ

"ಎಲ್ಲ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು" ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಜಿಲ್ಲೆಯ ಮಾನ್ಯ ವಿಧಾನ ಪರಿಷತ್ ಸದಸ್ಯರುಗಳು, ವಿವಿಧ ನಿಗಮ–ಮಂಡಳಿ–ಪ್ರಾಧಿಕಾರಗಳ ಅಧ್ಯಕ್ಷರು, ನಗರಸಭೆ ಅಧ್ಯಕ್ಷರು ಹಾಗೂ ಸದಸ್ಯರು ಮತ್ತು ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಬಿಬಿಎಂಪಿಯಿಂದ ಪ್ರತಿವರ್ಷ ವೆಚ್ಚ | ವಾರ್ಡ್ ರಸ್ತೆಗಳ ಕಾಮಗಾರಿಗೆ ಹಣ | ಗುಂಡಿ ಮುಕ್ತವಾಗದ ರಸ್ತೆಗಳು | ಹೊಸ ರಸ್ತೆಯಲ್ಲ ಮೇಲ್ಮೈ ಅಭಿವೃದ್ಧಿ | ಕಾಂಕ್ರೀಟ್, ಡಾಂಬರಿಗೆ ಹೆಚ್ಚು ವೆಚ್ಚ

₹25 ಸಾವಿರ ಕೋಟಿ 'ರಸ್ತೆ–ಗುಂಡಿ'ಪಾಲು

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳಿಗೆ ಮುಕ್ತಿಯೇ ಇಲ್ಲ. ವರ್ಷ ವರ್ಷವೂ ರಸ್ತೆ ಅಭಿವೃದ್ಧಿ, ದುರಸ್ತಿ ಮಾಡುತ್ತಿದ್ದರೂ ಅವ್ಯವಸ್ಥೆಯಿಂದ ನಿತ್ಯ ಯಾತನೆ. ವರ್ಷವಿಡೀ ರಸ್ತೆ ಕಾಮಗಾರಿ. ಶಾಶ್ವತ ಪರಿಹಾರವಂತೂ ಇಲ್ಲ. ಏಳು ವರ್ಷಗಳಲ್ಲಿ ₹25 ಸಾವಿರ ಕೋಟಿಗೂ ಹೆಚ್ಚು ಹಣ ರಸ್ತೆ ಅಭಿವೃದ್ಧಿಗೆಂದೇ ವಿನಿಯೋಗವಾಗಿದೆ.

ಬಿಬಿಎಂಪಿ ವ್ಯಾಪ್ತಿಯ 27 ವಿಧಾನಸಭೆ ಕ್ಷೇತ್ರಗಳಲ್ಲಿ 2015–16ನೇ ಸಾಲಿನಿಂದ 2022ರ ಮಾರ್ಚ್‌ವರೆಗೆ ₹18 ಸಾವಿರ ಕೋಟಿಯನ್ನು ರಸ್ತೆ ನಿರ್ಮಾಣ, ಡಾಂಬರು ಸೇರಿ ರಸ್ತೆಗೆ ಸಂಬಂಧಿಸಿದ ಕಾಮಗಾರಿಗಳಿಗೇ ವಿನಿಯೋಗಿಸಲಾಗಿದೆ. 27 ವಿಧಾನಸಭೆ ಕ್ಷೇತ್ರಗಳಲ್ಲಿ ರಸ್ತೆಗಾಗಿಯೇ ₹11 ಸಾವಿರ ಕೋಟಿ ವೆಚ್ಚವಾಗಿದೆ. ಇದಲ್ಲದೆ, ಕೆಆರ್‌ಐಡಿಎಲ್ ಮಾಡಿರುವ ₹13 ಸಾವಿರ ಕೋಟಿ ವೆಚ್ಚದಲ್ಲಿ ಅರ್ಧಕ್ಕಿಂತ ಹೆಚ್ಚು ಹಣ ರಸ್ತೆ ಕಾಮಗಾರಿಗಾಗಿಯೇ ಬಳಕೆಯಾಗಿದೆ.

ಇವೆರಡೂ ಸೇರಿ ₹18 ಸಾವಿರ ಕೋಟಿಗೂ ಹೆಚ್ಚು ಹಣವನ್ನು ರಸ್ತೆ ಕಾಮಗಾರಿಗಾಗಿ ವೆಚ್ಚ ಮಾಡಲಾಗಿದೆ. ಇನ್ನು, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾದ ಹೊಸದರಲ್ಲಿ ₹2,400 ಕೋಟಿಯನ್ನು ರಸ್ತೆ ಕಾಮಗಾರಿಗಾಗಿ ನೀಡಿದ್ದರು. ಅದನ್ನೂ ವ್ಯಯಮಾಡಲಾಗಿದೆ. ಪ್ರತಿಯೊಂದು ಕಾಮಗಾರಿಗೆ ನೀಡಲಾಗಿರುವ ಕೋಡ್, ಕಾರ್ಯಾದೇಶದ ವಿವರ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ರಸ್ತೆ ಕಾಮಗಾರಿಗಾಗಿ ಹಣ ವೆಚ್ಚ ಮಾಡಿರುವುದು ಇಷ್ಟಕ್ಕೇ ಮುಗಿದಿಲ್ಲ. ಈ ವರ್ಷದ ಜುಲೈನಲ್ಲಿ ಅಮೃತ ನಗರೋತ್ಥಾನ ಯೋಜನೆಯಲ್ಲಿ ಅನುಮೋದನೆಯಾಗಿರುವ ₹6 ಸಾವಿರ ಕೋಟಿಯಲ್ಲಿ ಅರ್ಧದಷ್ಟನ್ನು ರಸ್ತೆಗಾಗಿಯೇ ವ್ಯಯ ಮಾಡಲಾಗುತ್ತಿದೆ. ಇದಲ್ಲದೆ, ಈ ಬಾರಿಯ ಬಿಬಿಎಂಪಿ ಬಜೆಟ್‌ನಲ್ಲಿ ತೋರಲಾಗಿರುವ ಕಾಮಗಾರಿಯ ವೆಚ್ಚ ಇನ್ನೂ ಅಧಿಕೃತವಾಗಬೇಕಿದೆ. ಇದೆಲ್ಲ ಸೇರಿದರೆ ರಸ್ತೆಗೆ ಬಿಬಿಎಂಪಿ ಮಾಡುವ ವೆಚ್ಚ ₹25 ಸಾವಿರ ಕೋಟಿಯನ್ನೂ ಮೀರುತ್ತದೆ.

ನಗರದ ಎಂಟು ವಲಯದಲ್ಲಿರುವುದು 13 ಸಾವಿರ ಕಿ.ಮೀ. ರಸ್ತೆ. ಇದರಲ್ಲಿ ವಾರ್ಡ್ ರಸ್ತೆಗಳ ಉದ್ದ 11 ಸಾವಿರ ಕಿ.ಮೀ. ಇದಕ್ಕಾಗಿ ₹25 ಸಾವಿರಕ್ಕೂ ಹೆಚ್ಚು ಹಣ ವ್ಯಯಮಾಡಲಾಗಿದೆ. ಆದರೆ ಬೆಂಗಳೂರು ನಗರದಲ್ಲಿ ಗುಂಡಿ ಇಲ್ಲದ, ಪಾದಚಾರಿ ಮಾರ್ಗ ಸೇರಿ ಇತರೆ ಸಮಸ್ಯೆ ಇಲ್ಲದ ಒಂದು ರಸ್ತೆಗೂ ಹುಡುಕಾಡಬೇಕು.

27 ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿ ರಸ್ತೆಗಳ ಅಭಿವೃದ್ಧಿ, ಪಾದಚಾರಿ ಮಾರ್ಗ ದುರಸ್ತಿ, ಶೋಲ್ಡರ್ ಡ್ರೈನ್ ನಿರ್ಮಾಣ, ನಿರ್ವಹಣೆ ಎಂದು 11,963 ಕಾಮಗಾರಿಗಳನ್ನು ನಿರ್ವಹಿಸಲಾಗಿದೆ. ಇದಕ್ಕಾಗಿ ಮಾಡಿರುವ ವೆಚ್ಚ ₹11,118 ಕೋಟಿ. ಇದರಲ್ಲಿ ಯೋಜನೆಯ ಕೇಂದ್ರ ವಿಭಾಗದ ನಾಲ್ಕು ಸಾವಿರ ಕೋಟಿ ವೆಚ್ಚದ ರಸ್ತೆ ಕಾಮಗಾರಿಗಳೂ ಸೇರಿವೆ.

ಯಶವಂತಪುರ, ಕೆ.ಆರ್.ಪುರ, ಆರ್.ಆರ್. ನಗರಕ್ಕೆ ಅಗ್ರಸ್ಥಾನ

7 ವರ್ಷದಲ್ಲಿ ಎಲ್ಲ ವೆಚ್ಚದಲ್ಲೂ ರಸ್ತೆಗೇ ಸಿಂಹಪಾಲು

ಬಿಜೆಪಿ ಶಾಸಕರ ಕ್ಷೇತ್ರದಲ್ಲಿ ಹೆಚ್ಚು ವ್ಯಯ....

ಬಿಬಿಎಂಪಿ ವ್ಯಾಪ್ತಿಯ 27 ವಿಧಾನಸಭೆ ಕ್ಷೇತ್ರಗಳಲ್ಲಿ 2013ರ ಏಪ್ರಿಲ್‌ನಿಂದ 2022ರ ಮಾರ್ಚ್‌ವರೆಗೆ ₹29 ಸಾವಿರ ಕೋಟಿ ವೆಚ್ಚ ಮಾಡಲಾಗಿದೆ. ಇದರಲ್ಲಿ ರಸ್ತೆ ಸೇರಿ ಎಲ್ಲ ರೀತಿಯ ವಾರ್ಡ್ ಮಟ್ಟದ ಕಾಮಗಾರಿಗಳು ಸೇರಿವೆ. ₹29 ಸಾವಿರ ಕೋಟಿಯಲ್ಲಿ ಬಿಜೆಪಿ ಶಾಸಕರ ಪಾಲು ಅತಿಹೆಚ್ಚು. ಇದಲ್ಲದೆ, ಕಾಂಗ್ರೆಸ್‌ನಲ್ಲಿದ್ದು ನಂತರ ಬಿಜೆಪಿ ಶಾಸಕರಾದ ಮೂವರು ಶಾಸಕರದ್ದೇ ಸಿಂಹಪಾಲು. ಪ್ರಥಮ ಸ್ಥಾನದಲ್ಲಿ ಎಸ್.ಟಿ. ಸೋಮಶೇಖರ್ ಇದ್ದರೆ, ನಂತರದ ಎರಡು ಸ್ಥಾನ ಬೈರತಿ ಬಸವರಾಜು ಹಾಗೂ ಮುನಿರತ್ನ ಅವರದ್ದು. ಇನ್ನು ಕಾಂಗ್ರೆಸ್ ಶಾಸಕರ ಪೈಕಿ ಕೃಷ್ಣಬೈರೇಗೌಡ ಕ್ಷೇತ್ರದಲ್ಲಿ ಅತಿ ಹೆಚ್ಚು ವೆಚ್ಚವಾಗಿದೆ. ನಂತರದ ಸ್ಥಾನ ಅಖಂಡ ಶ್ರೀನಿವಾಸಮೂರ್ತಿ ಹಾಗೂ ರಾಮಲಿಂಗಾರೆಡ್ಡಿ ಅವರದ್ದು. 2013ರಿಂದ ಒಂದು ಬಾರಿ ಕಾಂಗ್ರೆಸ್, ಇನ್ನೊಂದು ಬಾರಿ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಹಾಗೂ ಈಗ ಬಿಜೆಪಿ ಅಧಿಕಾರದಲ್ಲಿ ಇರುವುದರಿಂದ ಅವರ ಪಕ್ಷದ ಸರ್ಕಾರದಲ್ಲಿ ಹೆಚ್ಚಿನ ಅನುದಾನ ಶಾಸಕರಿಗೆ ಸಿಕ್ಕಿದೆ. ಕಾಂಗ್ರೆಸ್–ಜೆಡಿಎಸ್‌ನಿಂದ ವಲಸೆ ಬಂದ ಶಾಸಕರ ಕ್ಷೇತ್ರಗಳಲ್ಲಿ ಎಲ್ಲ ಅವಧಿಯಲ್ಲೂ ಹೆಚ್ಚೇ ವೆಚ್ಚವಾಗಿದೆ.

■ ರಸ್ತೆ ಕಾಮಗಾರಿಗೆ ಆಗಿರುವ ವೆಚ್ಚ (ಏಪ್ರಿಲ್ 2015ರಿಂದ ಮಾರ್ಚ್ 2022)
■ ವಿಧಾನಸಭೆ ಕ್ಷೇತ್ರದಲ್ಲಿ ಆಗಿರುವ ಎಲ್ಲ ಕಾಮಗಾರಿಗಳ ಒಟ್ಟಾರೆ ವೆಚ್ಚ (ಏಪ್ರಿಲ್ 2013ರಿಂದ ಮಾರ್ಚ್ 2022)

ಕ್ಷೇತ್ರ	ಸಂಖ್ಯೆ	ರಸ್ತೆ ಕಾಮಗಾರಿಗೆ ಆಗಿರುವ ವೆಚ್ಚ	ಒಟ್ಟಾರೆ ವೆಚ್ಚ	ಹಾಲಿ ಶಾಸಕ
ಯಶವಂತಪುರ	153	₹554.99 ಕೋಟಿ	₹2,146.52 ಕೋಟಿ	ಎಸ್.ಟಿ. ಸೋಮಶೇಖರ್, ಬಿಜೆಪಿ
ಕೆ.ಆರ್.ಪುರ	151	₹750.43 ಕೋಟಿ	₹2,068.95 ಕೋಟಿ	ಬೈರತಿ ಬಸವರಾಜು, ಬಿಜೆಪಿ
ರಾಜರಾಜೇಶ್ವರಿ ನಗರ	154	₹322.08 ಕೋಟಿ	₹2,034.3 ಕೋಟಿ	ಮುನಿರತ್ನ, ಬಿಜೆಪಿ
ಬೆಂಗಳೂರು ದಕ್ಷಿಣ	176	₹534.94 ಕೋಟಿ	₹1,822.4 ಕೋಟಿ	ಎಂ. ಕೃಷ್ಣಪ್ಪ, ಬಿಜೆಪಿ
ಗೋವಿಂದರಾಜ ನಗರ	166	₹197.19 ಕೋಟಿ	₹1,555.17 ಕೋಟಿ	ವಿ. ಸೋಮಣ್ಣ, ಬಿಜೆಪಿ
ಬ್ಯಾಟರಾಯನಪುರ	152	₹252.02 ಕೋಟಿ	₹1,510.87 ಕೋಟಿ	ಕೃಷ್ಣಬೈರೇಗೌಡ, ಕಾಂಗ್ರೆಸ್
ಬಿಟಿಎಂ ಲೇಔಟ್	172	₹167.22 ಕೋಟಿ	₹1,094.14 ಕೋಟಿ	ರಾಮಲಿಂಗಾರೆಡ್ಡಿ, ಕಾಂಗ್ರೆಸ್
ಚಿಕ್ಕಪೇಟೆ	169	₹157.69 ಕೋಟಿ	₹744.03 ಕೋಟಿ	ಉದಯ್ ಗರುಡಾಚಾರ್, ಬಿಜೆಪಿ
ಮಹಾಲಕ್ಷ್ಮಿ ಲೇಔಟ್	156	₹203.04 ಕೋಟಿ	₹1,384.87 ಕೋಟಿ	ಗೋಪಾಲಯ್ಯ, ಬಿಜೆಪಿ
ಯಲಹಂಕ	150	₹255.97 ಕೋಟಿ	₹1,071.54 ಕೋಟಿ	ಎಸ್.ಆರ್. ವಿಶ್ವನಾಥ್, ಬಿಜೆಪಿ
ಗಾಂಧಿನಗರ	164	₹343.59 ಕೋಟಿ	₹733.39 ಕೋಟಿ	ದಿನೇಶ್ ಗುಂಡೂರಾವ್, ಕಾಂಗ್ರೆಸ್
ಮಹದೇವಪುರ	174	₹266.38 ಕೋಟಿ	₹1,184.19 ಕೋಟಿ	ಅರವಿಂದ ಲಿಂಬಾವಳಿ, ಬಿಜೆಪಿ
ಸರ್ವಜ್ಞನಗರ	160	₹155.53 ಕೋಟಿ	₹851.54 ಕೋಟಿ	ಕೆ.ಜೆ. ಜಾರ್ಜ್, ಕಾಂಗ್ರೆಸ್
ಹೆಬ್ಬಾಳ	158	₹173.54 ಕೋಟಿ	₹714.67 ಕೋಟಿ	ಬೈರತಿ ಸುರೇಶ್, ಕಾಂಗ್ರೆಸ್
ಬೊಮ್ಮನಹಳ್ಳಿ	175	₹341.45 ಕೋಟಿ	₹1,179.18 ಕೋಟಿ	;ಸತೀಶ್ ರೆಡ್ಡಿ, ಬಿಜೆಪಿ
ಪದ್ಮನಾಭನಗರ	171	₹96.32 ಕೋಟಿ	₹843.34 ಕೋಟಿ	ಆರ್. ಅಶೋಕ, ಬಿಜೆಪಿ
ಸಿ.ವಿ. ರಾಮನ್ ನಗರ	161	₹142.23 ಕೋಟಿ	₹713.75 ಕೋಟಿ	ಎಸ್.ರಘು, ಬಿಜೆಪಿ
ದಾಸರಹಳ್ಳಿ	155	₹342.03 ಕೋಟಿ	₹1135.73 ಕೋಟಿ	ಆರ್. ಮಂಜುನಾಥ್, ಜೆಡಿಎಸ್
ಜಯನಗರ	173	₹119.48 ಕೋಟಿ	₹811.44 ಕೋಟಿ	ಸೌಮ್ಯಾ ರೆಡ್ಡಿ, ಕಾಂಗ್ರೆಸ್
ರಾಜಾಜಿನಗರ	165	₹133.90 ಕೋಟಿ	₹693.35 ಕೋಟಿ	ಎಸ್. ಸುರೇಶ್‌ಕುಮಾರ್, ಬಿಜೆಪಿ
ಪುಲಕೇಶಿನಗರ	159	₹194.45 ಕೋಟಿ	₹1,100.29 ಕೋಟಿ	ಅಖಂಡ ಶ್ರೀನಿವಾಸಮೂರ್ತಿ, ಕಾಂಗ್ರೆಸ್
ಚಾಮರಾಜಪೇಟೆ	168	₹164.60 ಕೋಟಿ	₹742.07 ಕೋಟಿ	ಜಮೀರ್ ಅಹಮದ್‌ಖಾನ್, ಕಾಂಗ್ರೆಸ್
ಮಲ್ಲೇಶ್ವರ	157	₹174.91 ಕೋಟಿ	₹651.62 ಕೋಟಿ	ಸಿ.ಎನ್. ಅಶ್ವತ್ಥನಾರಾಯಣ, ಬಿಜೆಪಿ
ಬಸವನಗುಡಿ	170	₹34.67 ಕೋಟಿ	₹621.17 ಕೋಟಿ	ರವಿಸುಬ್ರಮಣ್ಯ, ಬಿಜೆಪಿ
ಶಾಂತಿನಗರ	163	₹141.92 ಕೋಟಿ	₹559.74 ಕೋಟಿ	ಎನ್.ಎ. ಹ್ಯಾರಿಸ್, ಕಾಂಗ್ರೆಸ್
ಶಿವಾಜಿನಗರ	162	₹137.07 ಕೋಟಿ	₹596.37 ಕೋಟಿ	ರಿಜ್ವಾನ್ ಅರ್ಷದ್, ಕಾಂಗ್ರೆಸ್
ವಿಜಯನಗರ	167	₹70.31 ಕೋಟಿ	₹531.7 ಕೋಟಿ	ಎಂ. ಕೃಷ್ಣಪ್ಪ, ಕಾಂಗ್ರೆಸ್

ಯಾವ ಕಾಮಗಾರಿ?

ವಾರ್ಡ್‌ರಸ್ತೆಗಳಲ್ಲಿ ಕಾಂಕ್ರೀಟ್, ಡಾಂಬರು ರಸ್ತೆಗಳ ನಿರ್ಮಾಣ. ಪಾದಚಾರಿ ಮಾರ್ಗ ದುರಸ್ತಿ. ರಸ್ತೆ ಗುಂಡಿಗಳನ್ನು ಮುಚ್ಚುವುದು.

ವಾರ್ಡ್ ರಸ್ತೆಗೆ ಮಾತ್ರ...

40 ಅಡಿ ಅಗಲದ ಒಂದು ಕಿ.ಮೀ. ರಸ್ತೆಗೆ ಡಾಂಬರು ಹಾಕಿ, ಸಬಲೀಕರಣಗೊಳಿಸಲು ₹80 ಲಕ್ಷದಿಂದ ₹1 ಕೋಟಿ ವೆಚ್ಚವಾಗುತ್ತದೆ. ಬಿಬಿಎಂಪಿಯಲ್ಲಿ ಒಟ್ಟು 13 ಸಾವಿರ ಕಿ.ಮೀ. ಉದ್ದ ರಸ್ತೆಗಳಿವೆ. ಇದರಲ್ಲಿ ಮುಖ್ಯ ಹಾಗೂ ಉಪಮುಖ್ಯರಸ್ತೆ, ಹೊರ ವರ್ತುಲ ರಸ್ತೆ, ವರ್ತುಲ ರಸ್ತೆ, ಟೆಂಡರ್ ಶ್ಯೂರ್ ರಸ್ತೆ, ವೈಟ್ ಟಾಪಿಂಗ್ ರಸ್ತೆ, ಮೇಲುರಸ್ತೆ, ಬಿಡಿಎಯಿಂದ ನಿರ್ಮಾಣವಾಗಿರುವ ಮೇಲ್ಸೇತುವೆ, ರಸ್ತೆಗಳು, ಸ್ಮಾರ್ಟ್ ಸಿಟಿ ರಸ್ತೆಗಳೂ ಸೇರಿವೆ. ಆದರೆ, ಬಿಬಿಎಂಪಿ ₹25 ಸಾವಿರ ಕೋಟಿ ವೆಚ್ಚ ಮಾಡಿರುವುದು 11 ಸಾವಿರ ಕಿ.ಮೀಯಷ್ಟಿರುವ ವಾರ್ಡ್ ರಸ್ತೆಗಳಿಗೆ ಮಾತ್ರ. ಈ ಮೊತ್ತದಲ್ಲಿ ಹೊಸದಾಗಿ ರಸ್ತೆಯನ್ನು ನಿರ್ಮಿಸಿಲ್ಲ ಎಂಬುದು ಪ್ರಮುಖ.

ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

₹42 ಸಾವಿರ ಕೋಟಿ ವೆಚ್ಚ!

ಬಿಬಿಎಂಪಿ ವ್ಯಾಪ್ತಿಯಲ್ಲಿ 10 ವರ್ಷಗಳಲ್ಲಿ ವಿಧಾನಸಭೆ ಕ್ಷೇತ್ರಗಳಲ್ಲಿ ₹29 ಸಾವಿರ ಕೋಟಿ ಹಾಗೂ ಕೆಆರ್‌ಐಡಿಎಲ್‌ನಿಂದ ₹13 ಸಾವಿರ ಕೋಟಿ ಸೇರಿದಂತೆ ₹42 ಸಾವಿರ ಕೋಟಿ ವೆಚ್ಚವಾಗಿದ್ದರೂ, ನಗರದ ಅಭಿವೃದ್ಧಿ ಅನುದಾನದ ಕೊರತೆ ಇದೆ ಎಂಬುದು ಅಧಿಕಾರಿಗಳು ಹಾಗೂ ಶಾಸಕರ ಮಾತು.

ಬಿಬಿಎಂಪಿ ವತಿಯಿಂದ ರಸ್ತೆ, ಚರಂಡಿ, ಉದ್ಯಾನ, ಬೀದಿದೀಪ ಅಳವಡಿಸುವ ಕಾಮಗಾರಿಗಳೇ ಹೆಚ್ಚಾಗಿ ನಡೆದಿದೆ. ಇಷ್ಟು ಕಾಮಗಾರಿಗಳಿಗೆ ₹42 ಸಾವಿರ ಕೋಟಿ ವೆಚ್ಚವಾಗಿದ್ದರೂ ಮೂಲಸೌಕರ್ಯದ ಕೊರತೆ ಇನ್ನೂ ಸಮಾಧಾನಕರವಾಗುವಷ್ಟು ನೀಗಿಲ್ಲ ಎಂಬುದು ನಾಗರಿಕರ ಅಳಲು. ಬಿಬಿಎಂಪಿ ಮಾತ್ರವಲ್ಲದೆ, ವಿದ್ಯುತ್ ಸಂಪರ್ಕ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಬಡಾವಣೆಗಳ ನಿರ್ಮಾಣಕ್ಕೆ ಬೆಸ್ಕಾಂ, ಬಿಡಬ್ಲ್ಯುಎಸ್‌ಎಸ್‌ಬಿ, ಬಿಡಿಎ ನಗರದ ಮೂಲಸೌಕರ್ಯಕ್ಕೆ ಹಲವು ಸಾವಿರ ಕೋಟಿ ವೆಚ್ಚ ಮಾಡಿವೆ ಎಂಬುದೂ ಗಮನಾರ್ಹ.

ಕೆಆರ್‌ಐಡಿಎಲ್ ಅಕ್ರಮ...

ಮೇಯರ್ ಹಾಗೂ ಉಪ ಮೇಯರ್ ಅನುದಾನದಲ್ಲಿ ಅತಿ ತುರ್ತು ಕಾಮಗಾರಿಗಳನ್ನು ಮಾತ್ರ ನಿರ್ವಹಣೆ ಮಾಡಬೇಕಾದ ಕೆಆರ್‌ಐಡಿಎಲ್, 2015–16ರಿಂದ 2021–22ರವರೆಗೆ ₹12,943 ಕೋಟಿ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸಿದೆ.

'ಬಿಬಿಎಂಪಿ ವ್ಯಾಪ್ತಿಯಲ್ಲಿ ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್‌ಐಡಿಎಲ್) 2015–16ರಿಂದ 2021–22ರವರೆಗೆ ₹12,943 ಕೋಟಿ ಮೊತ್ತದ ಕಾಮಗಾರಿಗಳನ್ನು ನಿರ್ವಹಿಸಿದೆ. ಈ ಸಂಸ್ಥೆ ವತಿಯಿಂದ ಉಪ ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರೈಸಿದ್ದಾರೆ. 2015ರಿಂದ 2019ರ ನಾಲ್ಕು ವರ್ಷದ ಅವಧಿಯಲ್ಲೇ ₹11 ಸಾವಿರ ಕೋಟಿಯನ್ನು ಕೆಆರ್‌ಐಡಿಎಲ್‌ಗೆ ಬಿಬಿಎಂಪಿ ಬಿಡುಗಡೆ ಮಾಡಿದೆ.

'ತುರ್ತು ಕಾಮಗಾರಿಗಳನ್ನಷ್ಟೇ ನಿರ್ವಹಿಸಬೇಕಿರುವ ಕೆಆರ್‌ಐಡಿಎಲ್ ಅಧಿಕಾರಿಗಳು ರಸ್ತೆ ಅಭಿವೃದ್ಧಿ, ಮೇಲ್ಸೇತುವೆ, ಕೆಳಸೇತುವೆಗಳನ್ನೂ ನಿರ್ವಹಿಸಿದ್ದಾರೆ. ಇವರಲ್ಲಿ ಆ ನಿಪುಣತೆಯೇ ಇಲ್ಲ. ಎಲ್ಲ ರೀತಿಯ ನಿಯಮಗಳನ್ನು ಗಾಳಿಗೆ ತೂರಿ ನಗರ ಭಾಗದಲ್ಲಿ ಟೆಂಡರ್ ಇಲ್ಲದೆ ಸಂಸ್ಥೆ ಕಾಮಗಾರಿಗಳನ್ನು ಪಡೆದು, ಉಪ ಗುತ್ತಿಗೆಗೆ ನೀಡುತ್ತಿದೆ. ಇದರಿಂದ ಕಳಪೆ ಕಾಮಗಾರಿಗಳೇ ಹೆಚ್ಚಾಗುತ್ತಿವೆ. ಈ ಹಿಂದೆ ಕೆಆರ್‌ಐಡಿಎಲ್ ಕಾಮಗಾರಿಗಳನ್ನು ನಿರ್ವಹಣೆ ಮಾಡದೆ ಬಿಲ್ ಮಾಡಿಸಿಕೊಂಡಿರುವ ಪ್ರಕರಣಗಳಲ್ಲಿ ಎಫ್‌ಐಆರ್‌ಗಳೂ ದಾಖಲಾಗಿವೆ. ಹೀಗಾಗಿ ಕೆಆರ್‌ಐಡಿಎಲ್‌ಗೆ ಅಕ್ರಮವಾಗಿ ನೀಡಲಾಗಿರುವ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಬೇಕು' ಎಂದು ಬೆಂಗಳೂರು ದಕ್ಷಿಣ ಜಿಲ್ಲೆಯ ಬಿಜೆಪಿ ಅಧ್ಯಕ್ಷ ರಮೇಶ್ ಎನ್.ಆರ್ ಅವರು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹಾಗೂ ಎಸಿಬಿಗೂ ಪತ್ರ ಬರೆದಿದ್ದರು. ಆದರೆ, ಈವರೆಗೆ ರಸ್ತೆ ಕಾಮಗಾರಿಗಳ ಬಗ್ಗೆ ತನಿಖೆ ನಡೆದಿಲ್ಲ.

ಬೊಮ್ಮನಹಳ್ಳಿ: ನಿರುದ್ಯೋಗಿಗಳಿಗೆ ಕಾರು, ಆಟೊ ವಿತರಣೆ

ಬೊಮ್ಮನಹಳ್ಳಿ: ಬಿಬಿಎಂಪಿ ಕಲ್ಯಾಣ ಕಾರ್ಯಕ್ರಮದಡಿ ನಿರುದ್ಯೋಗಿ ಯುವಜನರಿಗೆ ಕಾರು, ಆಟೊ ಹಾಗೂ ಅಂಗವಿಕಲರಿಗೆ ವೀಲ್‌ಚೇರ್ ಸೇರಿ ವಿವಿಧ ಪರಿಕರ ವಿತರಿಸಲಾಯಿತು.

ಬಿಬಿಎಂಪಿ ಬೊಮ್ಮನಹಳ್ಳಿ ವಲಯದಿಂದ ಸೋಮವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಾಸಕ ಸತೀಶ್ ರೆಡ್ಡಿ ಫಲಾನುಭವಿಗಳಿಗೆ ವಿತರಣೆ ಮಾಡಿದರು.

ಬೀದಿಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ವಿತರಣೆ, ಒಂಟಿ ಮನೆ ಫಲಾನುಭವಿಗಳಿಗೆ ಅನುದಾನದ ಚೆಕ್ ವಿತರಣೆಯನ್ನೂ ಮಾಡಲಾಯಿತು.

ಆಂಜನೇಯ ಮೂರ್ತಿ ಪ್ರತಿಷ್ಠಾಪನೆ: ಹೊಂಗಸಂದ್ರದ ಆಂಜನೇಯಸ್ವಾಮಿ ದೇವಸ್ಥಾನದ ಹೆಬ್ಬಾಗಿಲಲ್ಲಿ 27 ಅಡಿ ಎತ್ತರದ ಆಂಜನೇಯಸ್ವಾಮಿ ಮೂರ್ತಿ ಪ್ರತಿಷ್ಠಾಪನೆ ಮಾಡಲಾಯಿತು.

ದರ್ಶನ್ ಮೆರವಣಿಗೆ: ಶಾಸಕ ಸತೀಶ್ ರೆಡ್ಡಿ ಅವರಿಗೆ ಶುಭಾಶಯ ಕೋರಲು ನಟ ದರ್ಶನ್ ಬಂದಿದ್ದರು.

ಆಂಜನೇಯಸ್ವಾಮಿ ಮೂರ್ತಿ ಪ್ರತಿಷ್ಠಾಪನೆಗೆ ಮುನ್ನ ತೀರ್ಥ ಕೊಡ ಹೊತ್ತು ಬರುತ್ತಿರುವ ಶಾಸಕ ಸತೀಶ್ ರೆಡ್ಡಿ. ಬಿಜೆಪಿ ಮುಖಂಡ ಶ್ರೀನಿವಾಸ ರೆಡ್ಡಿ ಇದ್ದಾರೆ.

ಶಾಸಕ ಸತೀಶ್ ರೆಡ್ಡಿ ಮಾತನಾಡಿ, 'ಮೂರು ಬಾರಿ ಶಾಸಕನಾಗಿ ಅತ್ಯಂತ ಹಿಂದುಳಿದಿದ್ದ ಬೊಮ್ಮನಹಳ್ಳಿ ಪ್ರದೇಶವನ್ನು ಅಭಿವೃದ್ಧಿಪಡಿಸಲು ಸಾಕಷ್ಟು ಶ್ರಮ ಹಾಕಿದ್ದೇನೆ' ಎಂದರು.

ಪಾಲಿಕೆಯ ಮಾಜಿ ಸದಸ್ಯರಾದ ಗುರುಮೂರ್ತಿ ರೆಡ್ಡಿ, ಭಾಗ್ಯಲಕ್ಷ್ಮಿ ಮುರಳಿ, ಶೋಭಾ ಮುನಿರಾಜು, ಭಾರತಿ ರಾಮಚಂದ್ರ, ಬಿಜೆಪಿ ಮುಖಂಡರಾದ ಶ್ರೀನಿವಾಸ ರೆಡ್ಡಿ, ಆನಂದ ರೆಡ್ಡಿ, ನರಸಿಂಹಮೂರ್ತಿ ಭಾಗವಹಿಸಿದ್ದರು.

ಮಧ್ಯಾಹ್ನ ಬಿಸಿಯೂಟ: ವೇಳಾಪಟ್ಟಿ ಮಾರ್ಪಾಡು

ಬೆಂಗಳೂರು: ಶಾಲೆಗಳಲ್ಲಿ ಏಕಕಾಲಕ್ಕೆ ಮಕ್ಕಳ ದಟ್ಟಣೆಯಾಗುವುದನ್ನು ತಡೆಯಲು ಮಧ್ಯಾಹ್ನದ ಬಿಸಿಯೂಟದ ವೇಳಾಪಟ್ಟಿಯಲ್ಲಿ ಮಾರ್ಪಾಡು ಮಾಡಲು ಸೂಚಿಸಲಾಗಿದೆ.

1ರಿಂದ 5ನೇ ತರಗತಿಯ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 1ರಿಂದ 1.45ರವರೆಗೆ, 6ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 2ರಿಂದ 2.40ರವರೆಗೆ ಪ್ರತ್ಯೇಕವಾದ ಸಮಯ ನಿಗದಿಪಡಿಸಿ ನೆಮ್ಮದಿಯಿಂದ ಬಿಸಿಯೂಟ ಸ್ವೀಕರಿಸುವಂತೆ ಕ್ರಮಕೈಗೊಳ್ಳಬೇಕು ಎಂದು ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರದ ಶಿಫಾರಸ್ಸಿನ ಅನ್ವಯ ಮಧ್ಯಾಹ್ನದ ಬಿಸಿಯೂಟ ಮತ್ತು ಕ್ಷೀರಭಾಗ್ಯದ ಯೋಜನೆಗಳ ಅನುಷ್ಠಾನದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಸೂಚನೆಗಳನ್ನು ನೀಡಲಾಗಿದೆ.

ಮಕ್ಕಳು ಆಹಾರ ಸೇವಿಸಲು ಸ್ಟೀಲ್ ತಟ್ಟೆಗಳನ್ನೇ ಉಪಯೋಗಿಸಬೇಕು. ಒಂದು ವೇಳೆ ಕೊರತೆಯಾಗಿದ್ದರೆ ದಾನಿಗಳಿಂದ ಪಡೆದುಕೊಳ್ಳಬೇಕು. ಆದರೆ, ಮನೆಯಿಂದ ತಟ್ಟೆ-ಲೋಟಗಳನ್ನು ತರಬೇಕು ಎಂದು ಶಾಲಾ ಆಡಳಿತ ಮಂಡಳಿ ಸೂಚಿಸಬಾರದು ಎಂದು ತಿಳಿಸಲಾಗಿದೆ.

ಆಹಾರದ ಶುಚಿ–ರುಚಿಯನ್ನು ಕಡ್ಡಾಯವಾಗಿ ಮಕ್ಕಳಿಗೆ ವಿತರಿಸುವ ಪೂರ್ವ ಪರಿಶೀಲಿಸಿ ಗುಣಮಟ್ಟದ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ತರಕಾರಿ, ಸೊಪ್ಪು, ಹಣ್ಣುಗಳನ್ನು ಶುದ್ಧ ನೀರಿನಲ್ಲಿ ತೊಳೆದು ಸ್ವಚ್ಛಗೊಳಿಸಿ ಬಳಸಬೇಕು. ಅಡುಗೆ ತಯಾರಿಸುವ ಸಮಯದಲ್ಲಿ ಸಿಬ್ಬಂದಿ ಕಡ್ಡಾಯವಾಗಿ ತಲೆಗವಸು, ಹತ್ತಿ ಬಟ್ಟೆಯಿಂದ ತಯಾರಿಸಿದ ಏಪ್ರಾನ್‌ಗಳನ್ನು ಧರಿಸಬೇಕು ಹಾಗೂ ವೈಯಕ್ತಿಕ ಸ್ವಚ್ಛತೆಯಿಂದ ಅಡುಗೆ ಕೆಲಸ ನಿರ್ವಹಿಸಬೇಕು ಎಂದು ಸೂಚಿಸಲಾಗಿದೆ.

ನೀರಿನ ಸಂಪು, ತೊಟ್ಟಿಗಳು ಸೇರಿದಂತೆ ನೀರು ಸಂಗ್ರಹಿಸುವ ಸ್ಥಳಗಳನ್ನು ವಾರಕ್ಕೊಮ್ಮೆ ಸ್ವಚ್ಛಗೊಳಿಸಬೇಕು. ಮಕ್ಕಳ ಸಹಾಯವಾಣಿ, ಅಕ್ಷರ ದಾಸೋಹ ಸಹಾಯವಾಣಿ ಸಂಖ್ಯೆಗಳ ಫಲಕಗಳನ್ನು ಪ್ರದರ್ಶಿಸಬೇಕು, ಪ್ರತಿದಿನ ಮಕ್ಕಳ ಹಾಜರಾತಿ ದಾಖಲಿಸಬೇಕು ಎಂದು ಸೂಚಿಸಲಾಗಿದೆ.

ಬಿಬಿಎಂಪಿ ವಿದ್ಯುತ್ ವಿಭಾಗಕ್ಕೆ ಸಿ.ಇ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ವಿದ್ಯುತ್ ವಿಭಾಗ ಜ.18ರಿಂದ ಆರಂಭವಾಗಿದ್ದು, ಈ ವಿಭಾಗಕ್ಕೆ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಸೃಷ್ಟಿಸಿ ಸರ್ಕಾರ ಆದೇಶ ಹೊರಡಿಸಿದೆ.

ಬಿಬಿಎಂಪಿಯ ವಿದ್ಯುತ್ ವಿಭಾಗಕ್ಕೆ 84 ಹುದ್ದೆಗಳನ್ನು ಮಂಜೂರು ಮಾಡಿ ಜ.18ರಂದು ಸರ್ಕಾರ ಅನುಮತಿ ನೀಡಿತ್ತು. ಇದರಲ್ಲಿ ಮೂರು ಅಧೀಕ್ಷಕ ಎಂಜಿನಿಯರ್ ಹುದ್ದೆಗಳಿದ್ದು, ಅದರಲ್ಲಿ ಒಂದು ಹುದ್ದೆಯನ್ನು ಮುಖ್ಯ ಎಂಜಿನಿಯರ್ ಹುದ್ದೆಗೆ ಉನ್ನತೀಕರಿಸಿ ನಗರಾಭಿವೃದ್ಧಿ ಇಲಾಖೆ ಡಿ.12ರಂದು ಆದೇಶಿಸಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ 4.75 ಲಕ್ಷ ಬೀದಿದೀಪಗಳ ಅಳವಡಿಕೆ, ನಿರ್ವಹಣೆ, 13 ವಿದ್ಯುತ್ ಚಿತಾಗಾರ, ಪಾಲಿಕೆ ಕಟ್ಟಡ, ಕಚೇರಿಗಳು, ಶಾಲೆಗಳು, ಸಮುದಾಯ ಭವನಗಳು ಹಾಗೂ ಆಸ್ಪತ್ರೆಗಳಲ್ಲಿ ವಿದ್ಯುತ್ ನಿರ್ವಹಣೆ, ಉದ್ಯಾನ, ಆಟದ ಮೈದಾನಗಳಲ್ಲಿ ವಿದ್ಯುತ್ ವ್ಯವಸ್ಥೆಯ ಸೌಲಭ್ಯಗಳನ್ನು ವಿದ್ಯುತ್ ವಿಭಾಗ ನಿರ್ವಹಿಸಲಿದೆ. ವಾರ್ಷಿಕವಾಗಿ ₹84.48 ಕೋಟಿ ವೆಚ್ಚ ಮಾಡಲಾಗುತ್ತದೆ.

ವಿದ್ಯುತ್ ವಿಭಾಗದಲ್ಲಿ ಮುಖ್ಯ ಎಂಜಿನಿಯರ್ ಇಲ್ಲದ್ದರಿಂದ ಎಲ್ಲ ಪ್ರಮುಖ ನಿರ್ಣಯಗಳನ್ನು ಸಿವಿಲ್ ವಿಭಾಗದ ಮುಖ್ಯ ಎಂಜಿನಿಯರ್ ಅವರಿಗೆ ಪ್ರಸ್ತಾವ ಸಲ್ಲಿಸಲಾಗುತ್ತಿದೆ. ಹೀಗಾಗಿ ವಿದ್ಯುತ್ ವಿಭಾಗದ ಕಾಮಗಾರಿಗಳ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲು ಕಷ್ಟವಾಗಿದೆ. ಆದ್ದರಿಂದ ಮುಖ್ಯ ಎಂಜಿನಿಯರ್ ಹುದ್ದೆಯ ಅಗತ್ಯವಿದೆ ಎಂದು ಮುಖ್ಯ ಆಯುಕ್ತರು ಮನವಿ ಮಾಡಿದ್ದರು. ಸರ್ಕಾರ ಅದಕ್ಕೆ ಮನ್ನಣೆ ನೀಡಿದೆ.

ವಿದ್ಯುತ್ ವಿಭಾಗದ 84 ಹುದ್ದೆಗಳಲ್ಲಿ ಒಬ್ಬರು ಮುಖ್ಯ ಎಂಜಿನಿಯರ್, ಇಬ್ಬರು ಅಧೀಕ್ಷಕ ಎಂಜಿನಿಯರ್, 10 ಕಾರ್ಯಪಾಲಕ ಎಂಜಿನಿಯರ್, 12 ಸಹಾಯಕ ಕಾರ್ಯಪಾಲಕ ಎಂಜಿನಿಯರ್, 20 ಸಹಾಯಕ ಎಂಜಿನಿಯರ್, 14 ಕಿರಿಯ ಎಂಜಿನಿಯರ್, 25 ಎಲೆಕ್ಟ್ರಿಷನ್ ಹುದ್ದೆಗಳಿವೆ.

ಯುಟಿಎಸ್ ಆ್ಯಪ್ ಬಳಕೆಗೆ ಜಾಗೃತಿ ಅಭಿಯಾನ

ಬೆಂಗಳೂರು: ಕಾಯ್ದಿರಿಸದ ಟಿಕೆಟ್ ಸೌಲಭ್ಯ ಒದಗಿಸುವ 'ಯುಟಿಎಸ್' ಮೊಬೈಲ್ ಆ್ಯಪ್‌ಗೆ ಉತ್ತಮ ಸ್ಪಂದನ ದೊರೆತ್ತಿದ್ದು, ಮತ್ತಷ್ಟು ಪರಿಣಾಮಕಾರಿ ಬಳಕೆಗೆ ಒಂದು ತಿಂಗಳ ಜಾಗೃತಿ ಅಭಿಯಾನವನ್ನು ನೈರುತ್ಯ ರೈಲ್ವೆ ಹಮ್ಮಿಕೊಂಡಿದೆ.

ರೈಲು ನಿಲ್ದಾಣ, ಇಲಾಖೆಯ ವೆಬ್‌ಸೈಟ್ ಸೇರಿ ಹಲವಡೆ ಜ. 11ರವರೆಗೆ ಅಭಿಯಾನ ನಡೆಯಲಿದೆ. ಈ ಅವಧಿಯಲ್ಲಿ ಯುಟಿಎಸ್ ಆ್ಯಪ್‌ನ ಮಹತ್ವ, ಸಮಯ ಉಳಿತಾಯ, ಸರದಿಯಲ್ಲಿ ನಿಲ್ಲುವುದಕ್ಕೆ ಮುಕ್ತಿ ಇತ್ಯಾದಿ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ' ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್‌ನಲ್ಲಿ ಆರು ಸಾವಿರ ಜನ ಈ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದರು. ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ನೋಂದಾಯಿಸಿಕೊಂಡಿದ್ದಾರೆ. ಡಿಜಿಟಲ್ ಟಿಕೆಟ್‌ನಲ್ಲೇ ನೇರವಾಗಿ ರೈಲು ನಿಲ್ದಾಣ ಪ್ರವೇಶಿಸಬಹುದಾಗಿದೆ. ಕ್ರಿಸ್‌ಮಸ್ ಮತ್ತು ವರ್ಷಾಂತ್ಯದಲ್ಲಿ ಇನ್ನಷ್ಟು ಜನರಿಗೆ ಅನುಕೂಲ ಆಗಲಿದೆ ಎಂದಿದ್ದಾರೆ.

ನಗರದಲ್ಲಿ ನಿರಂತರ ಮಳೆ: ಥಂಡಿ ವಾತಾವರಣದಿಂದ ಹೈರಾಣಾದ ಜನರು

ಕೊಳೆತ ತರಕಾರಿ: ವ್ಯಾಪಾರಿಗಳು ಕಂಗಾಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸೋಮವಾರ ಬೆಳಿಗ್ಗೆ ಬಿಡುವು ನೀಡಿದ್ದ ಮಳೆ ಮಧ್ಯಾಹ್ನದ ಬಳಿಕ ಅಲ್ಲಲ್ಲಿ ಜೋರಾಗಿ ಸುರಿಯಿತು. ಮಧ್ಯಾಹ್ನ 2.30ರಿಂದ ಸಂಜೆ 4ರ ತನಕ ಪೀಣ್ಯ, ಜಾಲಹಳ್ಳಿ, ಯಶವಂತಪುರ, ಗೊರಗುಂಟೆಪಾಳ್ಯ, ದಾಸರಹಳ್ಳಿ, ಹೆಬ್ಬಾಳ, ಕೆ.ಆರ್.ಪುರ, ವಿದ್ಯಾರಣ್ಯಪುರ, ಕಮ್ಮಗೊಂಡನಹಳ್ಳಿ, ಬಿಇಎಲ್ ಸುತ್ತಮುತ್ತ ಧಾರಾಕಾರ ಮಳೆಯಾಗಿದೆ. ಉಳಿದೆಡೆ ಸಾಧಾರಣ ಮಳೆಯಾಗಿದೆ.

ಸಂಜೆಯ ಬಳಿಕ ವಿಜಯನಗರ, ರಾಜಾಜಿನಗರ, ಕೆಂಗೇರಿ, ಬಸವನಗುಡಿ, ಕೆ.ಆರ್.ಮಾರುಕಟ್ಟೆ, ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಶಿವಾಜಿನಗರ, ಆರ್.ಟಿ.ನಗರ, ಮೇಖ್ರಿ ವೃತ್ತದ ಸುತ್ತಮುತ್ತ ಜೋರು ಮಳೆಯಾಯಿತು. ಇದರಿಂದ ಜನಜೀವನ ಅಸ್ತವ್ಯಸ್ತವಾಗಿದೆ.

ಸಂಜೆ ವೇಳೆಯಲ್ಲಿ ಜೋರು ಮಳೆಯಾಗುತ್ತಿದ್ದು, ಶಾಲಾ–ಕಾಲೇಜುಗಳಿಂದ ಮನೆಗೆ ತೆರಳಲು ವಿದ್ಯಾರ್ಥಿಗಳು ಪರದಾಡಿದರು. ಮಳೆಯಿಂದ ರಕ್ಷಣೆ ಪಡೆಯಲು ಬಸ್ ಶೆಲ್ಟರ್‌ಗಳಲ್ಲಿ ಜನರು ನಿಂತಿದ್ದರು.

ಮ್ಯಾಂಡಸ್ ಚಂಡಮಾರುತ ಪರಿಣಾಮ ನಗರದಲ್ಲಿ ನಿರಂತರ ಮಳೆಯಾಗಿದ್ದು, ವ್ಯಾಪಾರಸ್ಥರಿಗೆ ಭಾರಿ ನಷ್ಟವಾಗಿದೆ. ಚಿಕ್ಕಪೇಟೆ, ಕೆ.ಆರ್. ಮಾರುಕಟ್ಟೆಯಲ್ಲಿ ಸೊಪ್ಪು, ತರಕಾರಿ ಹಾಗೂ ಹಣ್ಣಿನ ವ್ಯಾಪಾರಿಗಳು ತೊಂದರೆಗೆ ಸಿಲುಕಿದ್ದಾರೆ. ಮಳೆಯಿಂದ ಗ್ರಾಹಕರ ಸಂಖ್ಯೆಯೂ ಕಡಿಮೆಯಿತ್ತು. ಮತ್ತೊಂದೆಡೆ ಹಣ್ಣು, ತರಕಾರಿ, ಕೊಳೆಯುತ್ತಿವೆ. ಕೊಳೆತ ಸೊಪ್ಪು ಹಾಗೂ ಟೊಮೆಟೊವನ್ನು ವ್ಯಾಪಾರಿಗಳು ರಸ್ತೆಯ ಬದಿಯಲ್ಲಿ ಎಸೆದು ಹೋಗಿದ್ದಾರೆ.

ಮಳೆ ಬದುಕಿಗೆ ಬರೆ ಹಾಕಿತು ಎಂದು ವ್ಯಾಪಾರಿಗಳು ಕಣ್ಣೀರು ಹಾಕಿದರು. ಮೆಜೆಸ್ಟಿಕ್, ಗಾಂಧಿ ನಗರ, ಚಿಕ್ಕಪೇಟೆಯ ಬೀದಿಬದಿಯ ವ್ಯಾಪಾರಿಗಳು ವ್ಯಾಪಾರವಿಲ್ಲದೆ ತೊಂದರೆಗೆ ಸಿಲುಕಿದ್ದಾರೆ.

ಎಂ.ಜಿ.ರಸ್ತೆ-ಕ್ವೀನ್ಸ್ ರಸ್ತೆಯ ಜಂಕ್ಷನ್‌ನಲ್ಲಿ ಮಳೆಯ ನೀರು ಸಂಗ್ರಹಗೊಂಡು ಸವಾರರು ಪರದಾಡಿದರು. ಬಿಬಿಎಂಪಿ ಸಿಬ್ಬಂದಿ ಮೋಟರ್ ಸಹಾಯದಿಂದ ಮಳೆಯ ನೀರು ಹೊರಹಾಕಿ, ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಮಳೆ ಹಾಗೂ ಚಳಿಯಿಂದ ವೈರಾಣು ಜ್ವರಕ್ಕೆ ಜನರು ತುತ್ತಾಗುತ್ತಿದ್ದಾರೆ. ನಗರದ ಕ್ಲಿನಿಕ್ ಹಾಗೂ ಸರ್ಕಾರಿ ಆಸ್ಪತ್ರೆಗಳಲ್ಲಿ ಸೋಮವಾರ ಹೆಚ್ಚಿನ ಸಂಖ್ಯೆಯ ರೋಗಿಗಳು ಕಂಡುಬಂದರು. ಪುಟ್ಟ ಮಕ್ಕಳು ಜ್ವರದಿಂದ ಬಳಲುತ್ತಿದ್ದಾರೆ.

ನಗರದ ಎಂ.ಜಿ. ರಸ್ತೆ–ಕ್ವೀನ್ಸ್ ರಸ್ತೆಯ ಜಂಕ್ಷನ್‌ನಲ್ಲಿ ಸಂಗ್ರಹವಾಗಿದ್ದ ಮಳೆಯ ನೀರನ್ನು ಬಿಬಿಎಂಪಿ ಸಿಬ್ಬಂದಿ ಮೋಟರ್ ಸಹಾಯದಿಂದ ಹೊರಹಾಕಲು ಪ್ರಯತ್ನಿಸಿದರು

ನಗರದ ಉಷ್ಣಾಂಶ
(ಡಿಗ್ರಿ ಸೆಲ್ಸಿಯಸ್‌ನಲ್ಲಿ–ಐಎಂಡಿ ಮಾಹಿತಿ)

ದಿನಾಂಕ	ಕನಿಷ್ಠ	ಗರಿಷ್ಠ
ಡಿ.12	18	24
ಡಿ.13	19	26
ಡಿ.14	18	27
ಡಿ.15	18	28
ಡಿ.16	17	28

ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಯುವಕ ಆತ್ಮಹತ್ಯೆ

ಕನಕಪುರ: ಇಲ್ಲಿನ ಬೆಂಗಳೂರು ರಸ್ತೆಯಲ್ಲಿರುವ ಆರ್ಟ್ ಆಫ್ ಲಿವಿಂಗ್ ಆಶ್ರಮದಲ್ಲಿ ಹರಿಯಾಣದ ಯುವಕನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಹರಿಯಾಣ ಮೂಲದ ಅಂಕುಲ್ ಶರ್ಮಾ (30) ಆತ್ಮಹತ್ಯೆಗೆ ಶರಣರಾದ ಯುವಕ. ಏಳು ವರ್ಷಗಳಿಂದ ಆಶ್ರಮದಲ್ಲಿ ಹೌಸ್ ಕೀಪಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ.

ಈ ನಡುವೆ ಒಂದು ವರ್ಷ ಊರಿಗೆ ಹೋಗಿ ಈಚೆಗೆ ಆಶ್ರಮಕ್ಕೆ ಮರಳಿದ್ದ. ಹೌಸ್ ಕೀಪಿಂಗ್ ಕೆಲಸಕ್ಕೆ ರಜೆ ಹಾಕಿ ಆಶ್ರಮದಲ್ಲಿ ನಡೆಸುವ ಬ್ರಿಡ್ಜ್ ಕೋರ್ಸ್ ತರಬೇತಿ ಪಡೆಯುತ್ತಿದ್ದ. ಡಿ.9 ರಂದು ಕೋರ್ಸ್‌ಗೆ ಹಾಜರಾಗಲಿಲ್ಲ, ವಿಚಾರಿಸಲು ಕರೆ ಮಾಡಿದಾಗ ಕರೆ ಸ್ವೀಕರಿಸಿರಲಿಲ್ಲ.

ಅನುಮಾನಗೊಂಡು ಹುಡುಕಾಟ ನಡೆಸಿದ ಆಶ್ರಮದ ಸಿಬ್ಬಂದಿಗೆ ಡಿ.10 ಯುವಕ ಉಳಿದುಕೊಂಡಿದ್ದ ಕೊಠಡಿ ಬಳಿಯ ಉಗ್ರಾಣದಲ್ಲಿದ್ದ ಫ್ಯಾನ್‌ಗೆ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಶವ ಪತ್ತೆಯಾಗಿದೆ.

ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಚಳಿ, ಶೀತಗಾಳಿ: ಮುನ್ನೆಚ್ಚರಿಕೆ ವಹಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾಂಡಸ್ ಚಂಡಮಾರುತದಿಂದಾಗಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆ, ಶೀತಗಾಳಿ ಹಾಗೂ ಅತಿ ಕಡಿಮೆ ತಾಪಮಾನ ವರದಿಯಾಗಿದೆ. ಈ ಪರಿಸ್ಥಿತಿ ಇನ್ನೂ ಹಲವು ದಿನಗಳ ಕಾಲ ಮುಂದುವರಿಯುವ ಸಾಧ್ಯತೆ ಇರುವುದರಿಂದ ಆರೋಗ್ಯ ಇಲಾಖೆ ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಸಲಹೆ ನೀಡಿದೆ.

ಮುಂದಿನ ವಾರದಲ್ಲಿ ಇನ್ನೊಂದು ಚಂಡಮಾರುತವು ಬಂಗಾಳ ಕೊಲ್ಲಿಗೆ ಅಪ್ಪಳಿಸುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ. ಹೀಗಾಗಿ, ಚಳಿಗಾಲದ ದಿನಗಳಲ್ಲಿ ನಾಗರಿಕರು, ಮಕ್ಕಳು, ಗರ್ಭಿಣಿಯರು, ವೃದ್ಧರು ಮತ್ತು ವಿವಿಧ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಆರೋಗ್ಯ ಕಾಪಾಡಿಕೊಳ್ಳಲು ಎಚ್ಚರವಹಿಸಬೇಕು ಎಂದು ಆಯುಕ್ತ ರಂದೀಪ್ ಡಿ. ಸಲಹೆ ನೀಡಿದ್ದಾರೆ.

ಮಾಡಬೇಕಾದ ಕಾರ್ಯಗಳು

- ಯಾವಾಗಲೂ ಬಿಸಿ ನೀರು ಅಥವಾ ಸೂಪ್‌ಗಳನ್ನು ಕುಡಿಯಬೇಕು.
- ಸುಲಭವಾಗಿ ಜೀರ್ಣವಾಗುವ ಹಾಗೂ ತಾಜಾ ಆಹಾರ ಪದಾರ್ಥಗಳನ್ನು ಸೇವಿಸುವುದು
- ಯಾವಾಗಲೂ ಸ್ವೆಟರ್, ಸಾಕ್ಸ್, ಕೈಗವಸುಗಳನ್ನು ಧರಿಸುವುದು
- ಅನಗತ್ಯವಾಗಿ ಹೊರ ಸಂಚಾರ ತಪ್ಪಿಸಬೇಕು
- ಕಿವಿಗಳನ್ನು ಹತ್ತಿಯಿಂದ ಮುಚ್ಚಿಕೊಳ್ಳಬೇಕು ಅಥವಾ ಸ್ಕಾರ್ಫ್ ಕಟ್ಟಿಕೊಳ್ಳಬೇಕು.
- ನೆಗಡಿ, ಕೆಮ್ಮು ಹಾಗೂ ಜ್ವರದ ಲಕ್ಷಣಗಳಿರುವವರಿಂದ ದೂರ ಇರಬೇಕು
- ಕೆಮ್ಮುವಾಗ ಮತ್ತು ಸೀನುವಾಗ ಕರವಸ್ತ್ರ ಅಥವಾ ಟಿಶ್ಯೂ ಪೇಪರ್ ಬಳಸಬೇಕು.
- ಜ್ವರ ಅಥವಾ ಫ್ಲೂ ಲಕ್ಷಣಗಳು ಅಥವಾ ಇತರ ಯಾವುದಾದರೂ ಕಾಯಿಲೆಯ ಲಕ್ಷಣಗಳಿದ್ದಲ್ಲಿ ತಕ್ಷಣವೇ ವೈದ್ಯರ ಸಲಹೆ ಪಡೆಯಬೇಕು.

ಇವುಗಳನ್ನು ಮಾಡಬಾರದು

- ತಣ್ಣನೆಯ ಪಾನೀಯಗಳು, ಐಸ್‌ಕ್ರೀಂ ಸೇವಿಸಬಾರದು
- ತಣ್ಣಗಿನ ನೀರು ಕುಡಿಯಬಾರದು
- ಮಳೆಯಲ್ಲಿ ನೆನೆಯುವುದನ್ನು ತಪ್ಪಿಸಬೇಕು
- ಹೊರಾಂಗಣ ಪ್ರವಾಸಗಳನ್ನು ಸಾಧ್ಯವಾದಷ್ಟು ತಪ್ಪಿಸಬೇಕು.
- ಮಸಾಲಯುಕ್ತ ಪದಾರ್ಥಗಳು ಅಥವಾ ಜಂಕ್ ಫುಡ್‌ಗಳನ್ನು ತ್ಯಜಿಸಬೇಕು.

ಫುಟ್‌ಪಾತ್ ಮೇಲೆ ನೀರು

ಬಸವನಗುಡಿ ಫುಟ್‌ಪಾತ್ ಮಳೆ ನೀರು ತುಂಬಿದ್ದು, ಕಾಲೇಜು ವಿದ್ಯಾರ್ಥಿಗಳು ತಮ್ಮ ಟ್ಯೂಷನ್ ಕ್ಲಾಸ್ ಮುಗಿಸಿ ಕಾಂಪೌಂಡ್ ಮೇಲಿಂದ ಸಾಗುತ್ತಿರುವುದು ಕಂಡುಬಂತು.

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಅಪಘಾತ: ನಕಲಿ ನೋಂದಣಿ ಸಂಖ್ಯೆ ನೀಡಿ ವಂಚನೆ

• ಎಚ್.ಎಂ. ಚೈತನ್ಯ ಸ್ವಾಮಿ

ಬೆಂಗಳೂರು: ಹಲಸೂರು ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಅಪಘಾತವನ್ನುಂಟು ಮಾಡಿ ನಕಲಿ ನೋಂದಣಿ ಸಂಖ್ಯೆ ನೀಡಿ ತಲೆಮರೆಸಿಕೊಂಡಿದ್ದ ಆರೋಪಿ ನಾಜಿಯಾ ಜಹಾನ್ (36) ಎಂಬುವವರನ್ನು ಪೊಲೀಸರು ಪತ್ತೆ ಮಾಡಿದ್ದು, ಸರ್ಕಾರಕ್ಕೆ ವಂಚಿಸಿದ್ದ ಆರೋಪದಡಿ ನಾಜಿಯಾ ವಿರುದ್ಧ ಹಲಸೂರು ಠಾಣೆಗಳಲ್ಲಿ ಎಫ್‌ಐಆರ್ ದಾಖಲಾಗಿದೆ.

'ಸಂಚಾರ ಠಾಣೆಯ ಎಎಸ್‌ಐ ಕೆ.ಎನ್. ರಾಜಗೋಪಾಲ್ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಮನೋವೈದ್ಯೆ ಎನ್ನಲಾದ ನಾಜಿಯಾ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಅಪಘಾತ ಸಂತ್ರಸ್ತೆ ಊರ್ಮಿಳಾ ಎಂಬುವವರು ನ. 21ರಂದು ಮಧ್ಯಾಹ್ನ ದ್ವಿಚಕ್ರ ವಾಹನದಲ್ಲಿ ಇಂಡಿಯಾ ಗ್ಯಾರೇಜ್ ಬಳಿಯ ರಸ್ತೆಯಲ್ಲಿ ಹೊರಟಿದ್ದರು. ಕೆಂಪು ಸಿಗ್ನಲ್ ಇದ್ದಿದ್ದರಿಂದ ವೃತ್ತದಲ್ಲೇ ದ್ವಿಚಕ್ರ ವಾಹನ ನಿಲ್ಲಿಸಿದ್ದರು. ಅದೇ ಮಾರ್ಗದಲ್ಲಿ ಹೊರಟಿದ್ದ ಆರೋಪಿ ನಾಜಿಯಾ, ತಮ್ಮ ಔಡಿ (ಕೆಎ 03 ಎಂಯು 6293) ಕಾರನ್ನು ಅತಿ ವೇಗವಾಗಿ, ನಿರ್ಲಕ್ಷ್ಯದಿಂದ ಚಲಾಯಿಸಿದ್ದರು. ಪರಿಣಾಮ, ದ್ವಿಚಕ್ರ ವಾಹನಕ್ಕೆ ಕಾರು ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಘಟನಾ ಸ್ಥಳದಲ್ಲಿ ತಪ್ಪು ಒಪ್ಪಿಕೊಂಡಿದ್ದ ನಾಜಿಯಾ, ದ್ವಿಚಕ್ರ ವಾಹನ ದುರಸ್ತಿ ವೆಚ್ಚ ಭರಿಸುವುದಾಗಿ ಹೇಳಿದ್ದರು. ಹೀಗಾಗಿ, ಅವರನ್ನು ಬಿಟ್ಟು ಕಳುಹಿಸಲಾಗಿತ್ತು. ಅಪಘಾತದಿಂದ ಗಾಯಗೊಂಡಿದ್ದ ಊರ್ಮಿಳಾ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬಂದು ಠಾಣೆಗೆ ದೂರು ನೀಡಿದ್ದರು. ಕೆಲ ದಿನ ಬಿಟ್ಟು ನಾಜಿಯಾ ಸಂಪರ್ಕಕ್ಕೆ ಸಿಗದೇ ತಲೆಮರೆಸಿಕೊಂಡಿದ್ದರು' ಎಂದು ಮೂಲಗಳು ಹೇಳಿವೆ.

'ನಾಜಿಯಾ ನೀಡಿದ್ದ ವಾಹನ ನೋಂದಣಿ ಸಂಖ್ಯೆ (ಕೆಎ 03 ಎಂಯು 6293) ಆಧರಿಸಿ ತನಿಖೆ ಮುಂದುವರಿಸಲಾಗಿತ್ತು. ಆರೋಪಿ ನಾಜಿಯಾ, ನಕಲಿ ನೋಂದಣಿ ಸಂಖ್ಯೆ ನೀಡಿದ್ದು ಗೊತ್ತಾಗಿತ್ತು. ಬಳಿಕವೇ, ಹೆಣ್ಣೂರು ನಿವಾಸಿ ನಾಜಿಯಾ ಅವರನ್ನು ಪೊಲೀಸರು ಪತ್ತೆಮಾಡಿದ್ದರು. ತಪ್ಪೊಪ್ಪಿಕೊಂಡಿದ್ದ ನಾಜಿಯಾ, 'ಎಚ್‌ಆರ್ 26 ಬಿವೈ 3802 ನೋಂದಣಿ ಸಂಖ್ಯೆಯ ಔಡಿ ಕಾರಿನಿಂದ ಅಪಘಾತವಾಗಿದೆ. ಪರಿಚಯಸ್ಥರೊಬ್ಬರಿಂದ ₹ 10 ಲಕ್ಷಕ್ಕೆ ಕಾರು ಖರೀದಿಸಿ, ಸರ್ಕಾರಕ್ಕೆ ತೆರಿಗೆ ಕಟ್ಟದೇ ಚಲಾಯಿಸುತ್ತಿದ್ದೆ' ಎಂಬುದಾಗಿ ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ತಹಶೀಲ್ದಾರ್‌ಗಳಿಗೆ ₹ 3 ಲಕ್ಷ ದಂಡ

ಬೆಂಗಳೂರು: ವೃದ್ಧೆಯೊಬ್ಬರ ಜಮೀನಿನ ಸರ್ವೆ ನಡೆಸಿ ಪೋಡಿ, ದುರಸ್ತಿ ಮಾಡುವಂತೆ ಎಂಟು ವರ್ಷಗಳ ಹಿಂದೆ ನೀಡಲಾಗಿದ್ದ ಹೈಕೋರ್ಟ್ ಆದೇಶವನ್ನು ಪಾಲಿಸುವಲ್ಲಿ ವಿಫಲರಾದ ಮಂಡ್ಯ ಜಿಲ್ಲೆ ಪಾಂಡವಪುರದ ಅಂದಿನ ತಹಶೀಲ್ದಾರ್‌ಗಳಿಗೆ ಹೈಕೋರ್ಟ್ ₹ 3 ಲಕ್ಷ ದಂಡ ವಿಧಿಸಿದೆ.

ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ, 'ದಂಡದ ಮೊತ್ತವನ್ನು ಅರ್ಜಿದಾರರಿಗೆ ಒಂದು ತಿಂಗಳಲ್ಲಿ ಪಾವತಿಸಬೇಕು' ಎಂದು ಆದೇಶಿಸಿದೆ.

'ದಂಡದ ಮೊತ್ತವನ್ನು 2014ರ ಜುಲೈ 24ರಿಂದ 2022ರ ಫೆಬ್ರುವರಿ 10ರವರೆಗೆ ಪಾಂಡವಪುರ ತಾಲ್ಲೂಕಿನಲ್ಲಿ ತಹಶೀಲ್ದಾರ್ ಆಗಿ ಸೇವೆ ಸಲ್ಲಿಸಿದ ಅಧಿಕಾರಿಗಳಿಂದಲೇ ವಸೂಲು ಮಾಡಬೇಕು. ಈ ವಿಚಾರವನ್ನು ಅವರ ಸೇವಾ ದಾಖಲೆಯಲ್ಲೂ ನಮೂದಿಸಬೇಕು. ಈ ಕುರಿತಂತೆ ನ್ಯಾಯಾಲಯಕ್ಕೆ ಅನುಪಾಲನಾ ವರದಿ ಸಲ್ಲಿಸಬೇಕು. ಇಲ್ಲವಾದರೆ ಜಿಲ್ಲಾಧಿಕಾರಿ ವಿರುದ್ಧ ಗಂಭೀರ ಕ್ರಮ ಜರುಗಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಎಚ್ಚರಿಸಿದೆ.

ಪ್ರಕರಣವೇನು?: ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಕುರಹಳ್ಳಿ ಗ್ರಾಮದ ಪಾರ್ವತಮ್ಮ ಎಂಬುವರು ತಮಗೆ ಸೇರಿದ ಜಮೀನಿನ ಸರ್ವೆ ಹಾಗೂ ಪೋಡಿ ಮಾಡಿಕೊಡಲು ನಿರ್ದೇಶಿಸಬೇಕು ಎಂದು ಕೋರಿ 2014ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ 2014ರ ಜುಲೈ 24ರಂದು, 'ಒಂಬತ್ತು ತಿಂಗಳಲ್ಲಿ ಅರ್ಜಿದಾರರಿಗೆ ಸೇರಿದ ಜಮೀನಿನ ಪೋಡಿ, ದುರಸ್ತಿ ಮಾಡಿಕೊಡಬೇಕು' ಎಂದು ಕಂದಾಯ ಅಧಿಕಾರಿಗಳಿಗೆ ಆದೇಶಿಸಿತ್ತು.

ದೂರು ನೀಡಲು ಅಲೆದಾಡಿದ ವೃದ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಂದೂಕು ಕಳ್ಳತನವಾಗಿದೆ. ಕಳ್ಳರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಿ' ಎಂಬುದಾಗಿ ದೂರು ನೀಡಲು ಹೋಗಿದ್ದ ವೃದ್ಧನನ್ನು ಹಲವು ಕಾರಣ ನೀಡಿ ಅಲೆದಾಡಿಸಿದ್ದ ಅಮೃತಹಳ್ಳಿ ಠಾಣೆ ಪೊಲೀಸರು, ಹಲವು ದಿನಗಳ ನಂತರ ಎಫ್‌ಐಆರ್ ದಾಖಲು ಮಾಡಿಕೊಂಡಿದ್ದಾರೆ.

ಬಿಇಎಲ್ ನಿವೃತ್ತ ಯೋಜನಾ ಅಧಿಕಾರಿ ಭೈರೇಗೌಡ (72) ಅವರು ಜಕ್ಕೂರಿನಲ್ಲಿ ನೆಲೆಸಿದ್ದಾರೆ. ಸಮೀಪದಲ್ಲೇ ಅವರ ತೋಟದ ಮನೆ ಇತ್ತು. 30 ವರ್ಷಗಳ ಹಿಂದೆ ಒಂಟಿ ಮನೆಯಲ್ಲಿದ್ದ ಭೈರೇಗೌಡ ಅವರು ಬಂದೂಕು ಖರೀದಿಸಿದ್ದರು. ಪೊಲೀಸರಿಂದಲೂ ಪರವಾನಗಿ ಪಡೆದಿದ್ದರು.

'ಡಿ. 7ರಂದು ಸಂಜೆ ಬಂದೂಕು ಸ್ವಚ್ಛಗೊಳಿಸಿ, ಒಣಗಲೆಂದು ಮನೆಯ ಮುಖ್ಯದ್ವಾರದ ಬಳಿ ಇಟ್ಟು ತೋಟದ ಮನೆಗೆ ಹೋಗಿದ್ದರು. ಸ್ವಲ್ಪ ಹೊತ್ತು ಬಿಟ್ಟು ಮನೆಗೆ ವಾಪಸು ಬಂದಾಗ ಬಂದೂಕು ಇರಲಿಲ್ಲ. ಮನೆ, ತೋಟದ ಮನೆ ಹಾಗೂ ಹಲವೆಡೆ ಹುಡುಕಾಡಿದರೂ ಸುಳಿವು ಸಿಕ್ಕಿರಲಿಲ್ಲ' ಎಂದು ಭೈರೇಗೌಡ ಹೇಳಿದ್ದಾರೆ.

'ಬಂದೂಕು ಕಳ್ಳತನ ಬಗ್ಗೆ ದೂರು ನೀಡಲು ಅಮೃತಹಳ್ಳಿ ಠಾಣೆಗೆ ಹೋಗಿದ್ದೆ. ಎಲ್ಲ ದಾಖಲೆ ಸಮೇತ ದೂರು ನೀಡಿದ್ದೆ. ವಿಚಾರಣೆ ನೆಪದಲ್ಲಿ ಬಂದೂಕು ಪರವಾನಗಿ ಬಗೆಗೆ ವಿನಾ ಕಾರಣ ಅನುಮಾನ ವ್ಯಕ್ತಪಡಿಸಿದ್ದೇ ಅಲ್ಲದೆ ಅಸಂಬದ್ಧ ಪ್ರಶ್ನೆಗಳನ್ನು ಕೇಳಿದ್ದ ಸಿಬ್ಬಂದಿ, ದೂರು ಸ್ವೀಕರಿಸಲು ಹಿಂದೇಟು ಹಾಕಿದರು. ಮರುದಿನ ಠಾಣೆಗೆ ಹೋದಾಗ, ವಿದ್ಯುತ್ ಇಲ್ಲವೆಂದು ಸುಖಾಸುಮ್ಮನೇ ಅಲೆದಾಡಿಸಿದರು. ವೃದ್ಧನಾದ ನನಗೆ ಪೊಲೀಸರ ವರ್ತನೆಯಿಂದ ತುಂಬಾ ನೋವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಆರೋಪಕ್ಕೆ ಪ್ರತಿಕ್ರಿಯಿಸಿದ ಅಮೃತಹಳ್ಳಿ ಪೊಲೀಸರು, 'ಡಿ. 9ರಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗಳನ್ನು ಪತ್ತೆ ಮಾಡಲಾಗುತ್ತಿದೆ' ಎಂದರು.

'ಸಾಯಿಸ್ತಾರೆ ನನ್ನ': ಪೊಲೀಸ್ ವಿರುದ್ಧ ಪೋಸ್ಟ್

ಬೆಂಗಳೂರು: 'ಸಾಯಿಸ್ತಾರೆ ನನ್ನ. ದಯವಿಟ್ಟು ನ್ಯಾಯ ಕೊಡ್ಸಿ' ಎಂದು ರಾಜರಾಜೇಶ್ವರಿನಗರ ಠಾಣೆ ಪೊಲೀಸರ ವಿರುದ್ಧ ನಂದೀಶ್ ಕೊಡಗು ಎಂಬುವವರು ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಪ್ರಕಟಿಸಿದ್ದಾರೆ.

ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ದಂಪತಿಯನ್ನು ಅಡ್ಡಗಟ್ಟಿದ್ದ ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ, ₹ 1 ಸಾವಿರ ಸುಲಿಗೆ ಮಾಡಿದ್ದ ಆರೋಪದ ಬೆನ್ನಲ್ಲೇ ಮತ್ತೊಂದು ಆರೋಪ ಕೇಳಿಬಂದಿದೆ.

ಆರೋಪ ಅಲ್ಲಗೆಳೆದಿರುವ ಪೊಲೀಸರು, 'ಕಾನೂನು ಪ್ರಕಾರ ಕ್ರಮ ಜರುಗಿಸಲಾಗಿದೆ. ನಂದೀಶ್‌ಗೆ ಕಿರುಕುಳ ನೀಡಿಲ್ಲ' ಎಂದಿದ್ದಾರೆ.

'ಯುವತಿ ವಿರುದ್ಧ ಅವಹೇಳನಕಾರಿ ಪೋಸ್ಟ್ ಪ್ರಕಟಿಸಿದ್ದ ಪ್ರಕರಣದಲ್ಲಿ ನಂದೀಶ್ ಬಂಧನವಾಗಿತ್ತು. ಕೆಲ ದಿನ ಜೈಲಿನಲ್ಲಿದ್ದ ಈತ, ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾನೆ. ಇದೀಗ ಆರೋಪ ಮಾಡುತ್ತಿದ್ದಾನೆ' ಎಂದೂ ಪೊಲೀಸರು ಹೇಳಿದ್ದಾರೆ.

ಪೋಸ್ಟ್‌ನಲ್ಲಿ ಏನಿದೆ: 'ನನ್ನ ಮೊಬೈಲ್ ಅಕ್ರಮವಾಗಿ ಇಟ್ಟುಕೊಂಡಿರುವ (ರಾಜರಾಜೇಶ್ವರಿನಗರದಲ್ಲಿ ಈ ಹಿಂದೆ ನನ್ನ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ದಂಡಿಸಿದ್ದ ಪೊಲೀಸ್) ನವೀನ್ ಹಾಗೂ ಯದುಕುಮಾರ್ ನನ್ನ ಸಾವಿಗೆ ಕಾರಣ' ಎಂದು ಪೋಸ್ಟ್‌ನಲ್ಲಿ ನಂದೀಶ್ ಬರೆದುಕೊಂಡಿದ್ದಾರೆ.

ಲಂಚ: 6 ಮಂದಿ ಅಮಾನತು

ಬೆಂಗಳೂರು: ನೌಕರರಿಗೆ ರಜೆ ಮಂಜೂರು ಸೇರಿ ವಿವಿಧ ಕೆಲಸಕ್ಕೆ ಗೂಗಲ್ ಪೇ, ಫೋನ್ ಪೇ ಮೂಲಕ ಲಂಚ ಪಡೆದಿದ್ದ ಆರೋಪದಲ್ಲಿ ಆರು ನೌಕರರನ್ನು ಬಿಎಂಟಿಸಿ ಅಮಾನತು ಮಾಡಿದೆ. ಪ್ರಥಮ ಮತ್ತು ದ್ವಿತೀಯ ದರ್ಜೆ ಸಹಾಯಕರ ಹಂತದ ನೌಕರರನ್ನು ಅಮಾನತು ಮಾಡಿದೆ.

ಉದ್ಯೋಗಿ ಹೆಸರಿನಲ್ಲಿ ₹ 50 ಸಾವಿರ ವಂಚನೆ

ಬೆಂಗಳೂರು: ಬ್ಯಾಂಕ್ ಉದ್ಯೋಗಿ ಸೋಗಿನಲ್ಲಿ ನೋಟು ಬದಲಾವಣೆ ಮಾಡಿಕೊಡುವುದಾಗಿ ಹೇಳಿ ₹ 50 ಸಾವಿರ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಲಿಂಗರಾಜಪುರ ನಿವಾಸಿ ಪ್ರೇಮ್ ಅನಂತ್ ಎಂಬುವವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲ ಗಳು ಹೇಳಿವೆ.

'ದೂರುದಾರ ಪ್ರೇಮ್ ಅನಂತ್, ತಮ್ಮ ಮಕ್ಕಳ ಶಾಲಾ ಶುಲ್ಕ ಪಾವತಿಗಾಗಿ ಹಣ ಡ್ರಾ ಮಾಡಿಕೊಳ್ಳಲು ರಿಚ್ಮಂಡ್ ರಸ್ತೆಯಲ್ಲಿರುವ ಎಚ್‌ಡಿಎಫ್‌ಸಿ ಬ್ಯಾಂಕ್ ಎಟಿಎಂ ಘಟಕಕ್ಕೆ ಡಿ. 9ರಂದು ಹೋಗಿದ್ದರು. ಎಟಿಎಂ ಘಟಕದ ಬಳಿ ದೂರುದಾರರನ್ನು ಮಾತನಾಡಿಸಿದ್ದ ಆರೋಪಿ, ಬ್ಯಾಂಕ್ ಉದ್ಯೋಗಿ ಎಂಬುದಾಗಿ ಹೇಳಿದ್ದ. ನಂತರ, ದೂರುದಾರ ಘಟಕದೊಳಗೆ ಹೋಗಿ ₹ 70 ಸಾವಿರ ಡ್ರಾ ಮಾಡಿಕೊಂಡಿದ್ದರು. ₹ 500 ಮುಖಬೆಲೆಯ ನೋಟುಗಳು ಮಾತ್ರ ಬಂದಿದ್ದವು.'

'ನೋಟು ಬದಲಾಯಿಸಿ ₹ 2,000 ಮುಖಬೆಲೆ ನೋಟು ಪಡೆಯಲು ದೂರುದಾರ ಯೋಚಿಸಿದ್ದರು. ತಾನೇ ನೋಟು ಬದಲಾವಣೆ ಮಾಡಿಕೊಡುವುದಾಗಿ ಆರೋಪಿ ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ₹20 ಸಾವಿರವನ್ನು ಜೇಬಿನಲ್ಲಿ ಇಟ್ಟುಕೊಂಡಿದ್ದರು. ಉಳಿದ ₹50 ಸಾವಿರವನ್ನು ಆರೋಪಿ ಕೈಗೆ ಕೊಟ್ಟಿದ್ದರು. ಬ್ಯಾಂಕ್‌ನೊಳಗೆ ಕರೆದೊಯ್ದಿದ್ದ ಆರೋಪಿ, ಚಲನ್ ತುಂಬಲು ಹೇಳಿ ಹಣದ ಸಮೇತ ಪರಾರಿಯಾಗಿದ್ದಾನೆ. ಬ್ಯಾಂಕ್ ಸಿಬ್ಬಂದಿಯನ್ನು ವಿಚಾರಿಸಿದಾಗ, ಆರೋಪಿ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರಲಿಲ್ಲ. ಬಳಿಕವೇ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಚಿತ್ರಾವಳಿ

ನಗರದಲ್ಲಿ ಸೋಮವಾರ ಜೆ.ಎಚ್. ಪಟೇಲ್ ಪ್ರತಿಷ್ಠಾನ ವತಿಯಿಂದ ನಡೆದ ಜೆ.ಎಚ್. ಪಟೇಲ್ ಅವರ 23ನೇ ಪುಣ್ಯ ಸ್ಮರಣೆ ಕಾರ್ಯಕ್ರಮದಲ್ಲಿ 'ಮೀಡಿಯಾ ಆ್ಯಂಡ್ ಜೆ.ಎಚ್. ಪಟೇಲ್' ಕೃತಿಯನ್ನು ಪತ್ರಕರ್ತ ಎಂ. ಸಿದ್ಧರಾಜು ಬಿಡುಗಡೆ ಮಾಡಿದರು. ಪಬ್ಲಿಕ್ ಟಿ.ವಿ. ಮುಖ್ಯಸ್ಥ ಎಚ್.ಆರ್. ರಂಗನಾಥ್, ಕರ್ನಾಟಕ ಚಿತ್ರಕಲಾ ಪರಿಷತ್ ಉಪಾಧ್ಯಕ್ಷ ಟಿ. ಪ್ರಭಾಕರ್, ಲೇಖಕಿ ಪ್ರೀತಿ ನಾಗರಾಜ್, ಮಹಿಮ ಜೆ.ಎಚ್. ಪಟೇಲ್, ಡಾ.ಎಂ.ಎಲ್. ಶಂಕರಲಿಂಗಪ್ಪ ಅವರೂ ಇದ್ದರು.

ನ್ಯಾಷನಲ್ ಸೆಂಟರ್ ಫಾರ್ ಪ್ರಮೋಷನ್ ಆಫ್ ಎಂಪ್ಲಾಯ್‌ಮೆಂಟ್ ಫಾರ್ ಡಿಸೇಬಲ್ಡ್ ಪೀಪಲ್ ನೀಡುವ 'ಮೈಂಡ್ ಟ್ರೀ ಹೆಲನ್ ಕೆಲರ್ ಅವಾರ್ಡ್' ಪ್ರಶಸ್ತಿಯನ್ನು ಸ್ನೇಹದೀಪ ಅಂಧ ಮತ್ತು ಅಂಗವಿಕಲ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಡಾ. ಪಾಲ್ ಮುದ್ದಾ ಅವರಿಗೆ ಇತ್ತೀಚೆಗೆ ನವದೆಹಲಿಯಲ್ಲಿ ಪ್ರದಾನ ಮಾಡಲಾಯಿತು.

ಡ್ರಗ್ಸ್: ಮೂವರ ಬಂಧನ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ವಿಶೇಷ ಕಾರ್ಯಾಚರಣೆ ನಡೆಸಿರುವ ಪೊಲೀಸರು, ನೈಜೀರಿಯಾದ ಮೂವರು ಪ್ರಜೆಗಳನ್ನು ಬಂಧಿಸಿದ್ದಾರೆ.

'ಬಾಣಸವಾಡಿ ಹಾಗೂ ಡಿ.ಜೆ.ಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಡ್ರಗ್ಸ್ ಮಾರುತ್ತಿದ್ದ ಬಗ್ಗೆ ಮಾಹಿತಿ ಲಭ್ಯವಾಗಿತ್ತು. ಎರಡೂ ಠಾಣೆಗಳ ಪೊಲೀಸರು ಪ್ರತ್ಯೇಕವಾಗಿ ಕಾರ್ಯಾಚರಣೆ ನಡೆಸಿದ್ದರು. ನೈಜೀರಿಯಾದ ಕ್ನೇಚುವಾ ಡೇನಿಲ್, ಜೆರ್ರಿ ಹಾಗೂ ಇವರ ಸಹಚರನೊಬ್ಬನನ್ನು ಬಂಧಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮೂವರು ಆರೋಪಿಗಳು ತಮ್ಮದೇ ದೇಶದ ಪೆಡ್ಲರ್ ಕಡೆಯಿಂದ ಡ್ರಗ್ಸ್ ಖರೀದಿಸಿ, ಪರಿಚಯಸ್ಥ ಗ್ರಾಹಕರಿಗೆ ಮಾರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು' ಎಂದು ತಿಳಿಸಿವೆ.

'ಆರೋಪಿಗಳಿಂದ ಲಕ್ಷಾಂತರ ರೂಪಾಯಿ ಮೌಲ್ಯದ ಎಂಡಿಎಂಎ ಹಾಗೂ ಎಕ್ಸ್‌ಟೆಸಿ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

'ಆರೋಪಿ ಕ್ನೇಚುವಾ ಬಾಣಸವಾಡಿ ಬಳಿಯ ಅಗ್ನಿಶಾಮಕ ದಳದ ಠಾಣೆ ಸಮೀಪದಲ್ಲೇ ಡ್ರಗ್ಸ್ ಮಾರುತ್ತಿದ್ದಾಗ ಬಂಧಿಸಲಾಯಿತು. ಹುಣಸಮಾರನಹಳ್ಳಿಯಲ್ಲಿ ನೆಲೆಸಿದ್ದ ಕ್ನೇಚುವಾ, ರಾಜಗೋಪಾಲನಗರ ಹಾಗೂ ಯಲಹಂಕ ಠಾಣೆ ವ್ಯಾಪ್ತಿಯಲ್ಲೂ ಡ್ರಗ್ಸ್ ಮಾರಿ ಸಿಕ್ಕಿಬಿದ್ದು ಜೈಲು ಸೇರಿದ್ದ. ಜಾಮೀನು ಮೇಲೆ ಹೊರಬಂದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರಾಮನ ಜತೆಗೆ 'ರೊಟ್ಟಿ'ಯೂ ಬೇಕು'

ಭೋಪಾಲ್: ಭಗವಾನ್ ರಾಮನ ಜತೆಗೆ 'ರೊಟ್ಟಿ' ಅಂದರೆ ಕೈಗಾರಿಕೆಗಳು, ಸಂಪತ್ತು ಮತ್ತು ಉದ್ಯೋಗಗಳೂ ದೇಶಕ್ಕೆ ಬೇಕಾಗಿದ್ದು ಎರಡೂ ದೇಶದ ಸಂಸ್ಕೃತಿಯನ್ನು ಪ್ರತಿನಿಧಿಸುವಂಥವು ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಸೋಮವಾರ ಹೇಳಿದ್ದಾರೆ.

ಆರ್‌ಎಸ್‌ಎಸ್‌ನ ಮಧ್ಯಭಾರತ ಪ್ರಾಂತದಲ್ಲಿ (ಕೇಂದ್ರ ಭಾರತ) ಸ್ಥಾಪಿಸಲಾದ 16 ಉದ್ಯೋಗ ಸೃಷ್ಟಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, 'ದೇಶದ ಸಂಸ್ಕೃತಿಗಾಗಿ, ಅಯೋಧ್ಯೆಯಲ್ಲಿ ರಾಮನಿಗೆ ಮಂದಿರ ನಿರ್ಮಿಸಬೇಕು ಎಂಬುದು ಜನರ ಆಶಯವಾಗಿತ್ತು. ಪ್ರತಿ ಪಥದಲ್ಲೂ ದೇವಾಲಯಗಳಿವೆ. ಆದರೆ, ಅಯೋಧ್ಯೆಯಲ್ಲೇ ಮಂದಿರ ಕಟ್ಟಬೇಕೆಂಬ ಆಕಾಂಕ್ಷೆ ಜನರು ಹೊಂದಿದ್ದರು. ಏಕೆಂದರೆ ಅದು ದೇಶ ಸಂಸ್ಕೃತಿಗೆ ಸಂಬಂಧಿಸಿದ ಭಾವನೆಯಾಗಿತ್ತು' ಎಂದು ಹೇಳಿದರು.

ಕೊನೆ ಕ್ಷಣದಲ್ಲಿಯೂ ತಯಾರಿ: ಸ್ವಚ್ಛತೆಗೆ ಹೆಚ್ಚಿನ ಆದ್ಯತೆ, ಸ್ಥಳದಲ್ಲಿ ಪೊಲೀಸ್ ಭದ್ರತೆ

ಜಿ20 ಶೃಂಗ ಸಭೆಗೆ ರಂಗೇರಿದ ದೇವನಹಳ್ಳಿ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: 'ಇಲ್ಲಿನ ನಂದಿ ಬೆಟ್ಟದ ರಸ್ತೆಯಲ್ಲಿರುವ ಜೆ ಡಬ್ಲ್ಯು ಮ್ಯಾರಿಯಟ್ ಹೋಟೆಲ್‌ನಲ್ಲಿ ಇಂದಿನಿಂದ ನಡೆಯಲಿರುವ ಜಿ 20 ಶೃಂಗಸಭೆಗೆ ಕಳೆದೊಂದು ತಿಂಗಳಿಂದ ಭರ್ಜರಿ ತಯಾರಿ ನಡೆಯುತ್ತಿದ್ದು, ಈಗಾಗಲೇ ಸಾಕಷ್ಟು ವಿದೇಶಿ ಗಣ್ಯರು ಆಗಮಿಸಿದ್ದಾರೆ. ಸ್ಥಳೀಯ ಸಂಸ್ಕೃತಿ ವೈಭವದ ಆತಿಥ್ಯ ಪಡೆಯುತ್ತಿದ್ದಾರೆ.

ನಂದಿ ಉಪಚಾರ್ ವೃತ್ತದಿಂದ ಹೋಟೆಲ್‌ನ ಮಾರ್ಗವಾಗಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಾಟು ಮಾಡಲಾಗಿದ್ದು, ಭದ್ರತೆ ದೃಷ್ಟಿಯಿಂದ 700ಕ್ಕೂ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ. ಒಟ್ಟು 6 ಕಡೆಯಲ್ಲಿ ಪೊಲೀಸ್ ಚೆಕ್ ಪೋಸ್ಟ್ ಅನ್ನು ತಾತ್ಕಾಲಿಕವಾಗಿ ನಿರ್ಮಿಸಿದ್ದು, ಪ್ರತಿಯೊಂದು ವಾಹನಗಳ ತಪಾಸಣೆ ಮಾಡಲಾಗುತ್ತಿದೆ.

ಅತಿಥಿಗಳನ್ನು ಸ್ವಾಗತಿಸಲು ಬೇಲೂರು ಹಳೇಬೀಡಿನ ಶಿಲ್ಪ ಸೌಂದರ್ಯ ಹೋಲುವ, ಹೊಯ್ಸಳ ಕಲಾಕೃತಿ ಒಳಗೊಂಡಿರುವ 3 ಮಹಾದ್ವಾರ ನಿರ್ಮಿಸಲಾಗಿದ್ದು ರಾಯಭಾರಿಗಳಿಗೆ ಸ್ವಾಗತ ಕೋರಲಾಗುತ್ತಿದೆ.

ಪ್ರವಾಸೋದ್ಯಮಕ್ಕೆ ಹೆಚ್ಚಿನ ಉತ್ತೇಜನ ನೀಡುವ ನಿಟ್ಟಿನಲ್ಲಿ 'ಒಂದು ರಾಜ್ಯ ಹಲವು ಜಗತ್ತು' ಎಂಬ ಧ್ಯೇಯದೊಂದಿಗೆ ಪ್ರಸಿದ್ಧ ಐತಿಹಾಸಿಕ ರಮಣೀಯ ತಾಣಗಳ ಕುರಿತು, ಇಲ್ಲಿನ ಕಲೆ, ನೃತ್ಯದ ಪರಿಚಯ ಮಾಡಿಕೊಡಲು ಸಾಕಷ್ಟು ಪ್ರಚಾರದ ಕೆಲಸವೂ ಆಗುತ್ತಿದೆ. ಇನ್ನೊಂದೆಡೆ ಕೊನೆ ಕ್ಷಣದ ವರೆಗೂ ರಸ್ತೆಯ ಇಕ್ಕೆಲಗಳಲ್ಲಿ ಇರುವ ಮರಗಳಿಗೆ ಕೆಂಪು, ಬಿಳಿ ಬಣ್ಣವನ್ನು ಬಳಿದು ಶೃಂಗಾರ ಮಾಡಲಾಗುತ್ತಿದೆ.

ವಿದೇಶಿ ರಾಯಭಾರಿಗಳ ಓಡಾಟಕ್ಕೆ ತೊಂದರೆಯಾಗಬಾರದು ಎಂದು ತಾತ್ಕಾಲಿಕವಾಗಿ ಹಾಳಾದ ರಸ್ತೆ ಡಾಂಬರು ಮಳೆಯಿಂದಾಗಿ ಕಿತ್ತು ಕೆಲವೆಡೆ ಗುಂಡಿಗಳು ಬಿದ್ದಿವೆ. ಇನ್ನು ಸ್ವಚ್ಛತಾ ಕಾರ್ಯವನ್ನು ಎಡೆಬಿಡದೆ ಮಾಡುತ್ತಿರುವ ಪೌರಕಾರ್ಮಿಕರು ರಸ್ತೆ ಬದಿಯಲ್ಲಿನ ಕಸವನ್ನು ಸಾಗಿಸಲು ನಿರಂತರವಾಗಿ ಶ್ರಮಿಸುತ್ತಿದ್ದಾರೆ.

ರಾಷ್ಟ್ರೀಯ ಹೆದ್ದಾರಿಯಲ್ಲಿ ಸಣ್ಣದೊಂದು ಪ್ಲಾಸ್ಟಿಕ್ ದೊರೆತರೂ ಅದನ್ನು ತೆಗೆಯಲು ಹೆಚ್ಚುವರಿ ಸಿಬ್ಬಂದಿಯನ್ನು ಇತರೆ ಪಂಚಾಯಿತಿ, ಪುರಸಭೆಗಳಿಂದ ನಿಯೋಜನೆ ಮಾಡಲಾಗಿದೆ. ವಿಮಾನ ನಿಲ್ದಾಣದಿಂದ ದೇವನಹಳ್ಳಿಯನ್ನು ಒಪ್ಪ ಮಾಡುವ ಕೆಲಸವಂತೂ ಹಗಲು ರಾತ್ರಿ ನಡೆಯುತ್ತಿದೆ. ಯುರೋಪಿಯನ್ ಒಕ್ಕೂಟದ 40 ದೇಶಗಳಿಂದ ಗಣ್ಯರು ಆಗಮಿಸಲಿದ್ದಾರೆ.

ದೇವನಹಳ್ಳಿಯ ಕಾರಹಳ್ಳಿ ರಸ್ತೆಯಲ್ಲಿ ಜಿ20 ಶೃಂಗ ಸಭೆ ನಡೆಯುವ ಹೋಟೆಲ್ ಮುಂಭಾಗ ನಿರ್ಮಾಣ ಮಾಡಿರುವ ಶಿಲ್ಪಕಲೆ ನೆನಪಿಸುವ ಕಮಾನು

ಮರಕ್ಕೆ ವಿದ್ಯುತ್ ದೀಪಾಲಂಕಾರ

ಕಾರಹಳ್ಳಿ ಮಾರ್ಗವಾಗಿ ಇರುವ ವಿದ್ಯುತ್ ಕಂಬಗಳಿಗೆ ವಿದೇಶಿ ಗಣ್ಯರು ಆಗಮನದ ಹಿನ್ನೆಲೆಯಲ್ಲಿ ವಿಶೇಷವಾಗಿ ಬೀದಿ ದೀಪಗಳನ್ನು ರಾತ್ರೋ ರಾತ್ರಿ ಅಳವಡಿಸಿದ್ದು, ವಿದ್ಯುತ್ ವ್ಯತ್ಯಯವಾಗದಂತೆ ಹೊಸ ತಂತಿಯನ್ನು ಹಾಕಲಾಗಿದೆ. ಕಂಬಗಳು ಇಲ್ಲದ ಕಡೆಯಲ್ಲಿ ನೀಲಗಿರಿ ಮರಗಳಿಗೆ ವಿದ್ಯುತ್ ದೀಪ ಹಾಕಿರುವ ದೃಶ್ಯಗಳು ಕಂಡು ಬಂದಿವೆ. ನಿರಂತರವಾಗಿ ಭದ್ರತೆ ನೀಡಲು ಹೋಟೆಲ್ ಹತ್ತಿರದ ಯಂಬರಹಳ್ಳಿ ಹತ್ತಿರ ಪೊಲೀಸರಿಗಾಗಿ ವಿಶೇಷ ಶೆಡ್ ನಿರ್ಮಿಸಲಾಗಿದೆ.

ವಿದೇಶಿ ಗಣ್ಯರ ಸ್ವಾಗತಕ್ಕೆ ಬಂದ ಆನೆಗಳು

ಸಕ್ರೆಬೈಲು ಆನೆ ಬಿಡಾರದಿಂದ ನಾಲ್ಕು ಮಾವುತರೊಂದಿಗೆ ಭಾನುಮತಿ ಮತ್ತು ಸಾಗರ್ ಎಂಬ 35 ವರ್ಷದ ಆನೆಗಳು ಸಾವಕನಹಳ್ಳಿಯ ಅರಣ್ಯ ಪ್ರದೇಶಕ್ಕೆ ಬಂದಿದ್ದು, ಸೋಮವಾರ ಸಂಜೆ ಶೃಂಗಾರಗೊಳ್ಳುತ್ತಿದ್ದವು. ವಿಶೇಷ ಪೂಜೆಯೊಂದಿಗೆ ಆನೆಗಳನ್ನು ಸಿಂಗಾರಗೊಳಿಸುವುದರಲ್ಲಿ ನಿರತರಾಗಿದ್ದ ಅರಣ್ಯ ಇಲಾಖೆ ಸಿಬ್ಬಂದಿಯೂ ಜಿ 20 ಶೃಂಗಸಭೆಯಲ್ಲಿ ಗಣ್ಯಾತಿಗಣ್ಯರನ್ನು ಸ್ವಾಗತ ಮಾಡುವುದಕ್ಕೆ ಸಿದ್ಧತೆಯಲ್ಲಿದ್ದಾರೆ.

ನಾಡಿನ ಸಾಂಸ್ಕೃತಿಕ ರಸದೌತಣವನ್ನು ಉಣಬಡಿಸಲು ಸರ್ಕಾರ ಮಟ್ಟದಲ್ಲಿ ದೊಡ್ಡ ಮಟ್ಟದ ತಯಾರಿ ನಡೆದಿದ್ದು, ಗಜ ಪಡೆಯ ಮೂಲಕ ಗೌರವ ಅರ್ಪಿಸಲು ಯೋಜಿಸಲಾಗಿದೆ. ಪ್ರತಿಯೊಂದು ರಾಯಭಾರಿ ವಾಹನಗಳಿಗೂ ಪೊಲೀಸ್ ವಾಹನಗಳು ಎಸ್ಕಾರ್ಟ್ ನೀಡಲಿದ್ದು ನಂದಿ ಬೆಟ್ಟಕ್ಕೆ ತೆರಳುವವರಿಗೆ ಪಥ ಬದಲಾವಣೆ ಮಾಡಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.



ಜಿ20 ಶೃಂಗ ಸಭೆಗೆ ಆಗಮಿಸುವ ಗಣ್ಯರನ್ನು ಸ್ವಾಗತಿಸಲು ಸಿದ್ಧಗೊಳ್ಳುತ್ತಿರುವ ಗಜ ಪಡೆ

ಸುದ್ದಿ 2 ನಿಮಿಷ

ಅನಿಲ್ ದೇಶ್‌ಮುಖ್‌ಗೆ ಜಾಮೀನು

ಮುಂಬೈ (ಪಿಟಿಐ): ಭ್ರಷ್ಟಾಚಾರ ಪ್ರಕರಣದಲ್ಲಿ ಮಹಾರಾಷ್ಟ್ರದ ಮಾಜಿ ಗೃಹಸಚಿವ ಅನಿಲ್ ದೇಶ್‌ಮುಖ್ ಅವರಿಗೆ ಬಾಂಬೆ ಹೈಕೋರ್ಟ್ ಸೋಮವಾರ ಜಾಮೀನು ನೀಡಿದೆ.

ಆದರೆ, ಜಾಮೀನು ಸಂಬಂಧ ಸಿಬಿಐ, ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಬೇಕಾಗಿದ್ದು, ಇದಕ್ಕೆ ಕಾಲಾವಕಾಶ ನೀಡುವ ಸಲುವಾಗಿ ಅನಿಲ್ ದೇಶ್‌ಮುಖ್ ಇನ್ನೂ ಹತ್ತು ದಿನಗಳ ಕಾಲ ಬಿಡುಗಡೆಯಾಗುವಂತಿಲ್ಲ.

'ಅನಿಲ್ ಅವರ ಒತ್ತಾಯದ ಮೇರೆಗೆ ಮುಂಬೈನ ಬಾರ್ ಮಾಲೀಕರಿಂದ ಪೊಲೀಸ್ ಅಧಿಕಾರಿ ಸಚಿನ್ ವಾಜೆ ಅವರು ಹಣ ಸಂಗ್ರಹಿಸುತ್ತಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಅಮಾನತುಗೊಂಡಿದ್ದ ಸಚಿನ್ ವಾಜೆ ಅವರನ್ನು ಹೊರತುಪಡಿಸಿ ಸಿಬಿಐ ಇತರರ ಹೇಳಿಕೆಗಳನ್ನು ದಾಖಲಿಸಿಕೊಂಡಿಲ್ಲ' ಎಂದು ನ್ಯಾಯಮೂರ್ತಿ ಎಂ.ಎಸ್. ಕಾರ್ಣಿಕ್ ಅವರ ಏಕಸದಸ್ಯ ನ್ಯಾಯಪೀಠವು ಹೇಳಿದೆ.

ದೇಶ್‌ಮುಖ್ ಅವರು ರೆಸ್ಟೋರೆಂಟ್ ಮತ್ತು ಬಾರ್‌ಗಳಿಂದ ತಿಂಗಳಿಗೆ ₹100 ಕೋಟಿ ಸಂಗ್ರಹಿಸುವಂತೆ ಗುರಿ ನಿಗದಿಪಡಿಸಿದ್ದರು ಎಂಬ ಆರೋಪ ಇತ್ತು.

ಈಗ ಅವರು ನ್ಯಾಯಾಂಗ ಬಂಧನದಲ್ಲಿದ್ದು ಅವರು ಮುಂಬೈನ ಆರ್ಥರ್ ರೋಡ್‌ನ ಜೈಲಿನಲ್ಲಿದ್ದಾರೆ.ಕಳೆದ ತಿಂಗಳು ಸಿಬಿಐ ವಿಶೇಷ ನ್ಯಾಯಾಲಯ ಜಾಮೀನು ಅರ್ಜಿಯನ್ನು ತಿರಸ್ಕರಿಸಿದ್ದರಿಂದ ಹೈಕೋರ್ಟ್ ಮೊರೆ ಹೋಗಿದ್ದರು.

ವಿದ್ಯುತ್ ವ್ಯತ್ಯಯ ಇಂದು, ನಾಳೆ

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಡಿ. 13 ಮತ್ತು 14ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ನಗರದ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಡಿ.13ರಂದು ವ್ಯತ್ಯಯವಾಗುವ ಸ್ಥಳಗಳು: ಹೊರಮಾವು ಪಿ ಆ್ಯಂಡ್ ಟಿ ಬಡಾವಣೆ, ನಿಸರ್ಗ ಕಾಲೊನಿ, ಜ್ಯೋತಿ ನಗರ, ಆಗರ, ದೇವಮತ ಶಾಲೆ, ಎಚ್‌ಆರ್‌ಬಿಆರ್ ಬಡಾವಣೆ, ಕಮ್ಮನಹಳ್ಳಿ ಮುಖ್ಯರಸ್ತೆ, ಕಲ್ಯಾಣ ನಗರ, ಹೆಣ್ಣೂರು, ಮೇಘನ ಪಾಳ್ಯ, ಗೆದ್ದಲಹಳ್ಳಿ, ಕೊತನೂರು, ರಾಜಕುಮಾರ್ ಪಾರ್ಕ್, ಕಮ್ಮನಹಳ್ಳಿ ಮುಖ್ಯ ರಸ್ತೆ, ರಾಮಮೂರ್ತಿ ನಗರ, ಚಿಕ್ಕ ಬಾಣಸವಾಡಿ, ವಿಜಯ ಬ್ಯಾಂಕ್ ಕಾಲೊನಿ, ಎಂ.ಎಂ. ಗಾರ್ಡನ್, ಬೈರತಿ ಸುತ್ತಮುತ್ತ ಪ್ರದೇಶಗಳು.

ಡಿ.14ರಂದು ವ್ಯತ್ಯಯವಾಗುವ ಸ್ಥಳಗಳು: ಎಪಿಎಂಸಿ ಯಾರ್ಡ್, ಶಂಕರನಗರ, ಮಹಾಲಕ್ಷ್ಮಿ ಬಡಾವಣೆ, ಸರಸ್ವತಿ ಪುರಂ, ಗಣೇಶ್ ಬ್ಲಾಕ್, ಭೋವಿ ಪಾಳ್ಯ, ಕಂಠೀರವ ನಗರ, ಪರಿಮಳ ನಗರ, ರವಿ ಬಡಾವಣೆ, ಜೈ ಮಾರುತಿ ನಗರ, ಶ್ರೀನಿವಾಸ ನಗರ, ನಂದಿನಿ ಬಡಾವಣೆ, ಜೆ.ಸಿ. ನಗರ, ಕುರುಬರಹಳ್ಳಿ, ಸಿಂಡಿಕೇಟ್ ಬ್ಯಾಂಕ್ ಕ್ವಾರ್ಟರ್ಸ್ ಸುತ್ತಮುತ್ತ ಪ್ರದೇಶಗಳು.

ನಿಧನ ವಾರ್ತೆ

ಮಾಜಿ ವಿಕಾರ್ ಜನರಲ್ ಐ.ಚಿನ್ನಪ್ಪ

ಬೆಂಗಳೂರು: ಮಾಜಿ ವಿಕಾರ್ ಜನರಲ್ ಫಾದರ್ ಐ.ಚಿನ್ನಪ್ಪ (92) ಅವರು ಭಾನುವಾರ ನಿಧನರಾದರು.

ಐ.ಚಿನ್ನಪ್ಪ

ಅನಾರೋಗ್ಯದಿಂದ ಬಳಲುತ್ತಿದ್ದ ಅವರನ್ನು ಚಿಕಿತ್ಸೆಗಾಗಿ ಸಂತ ಫಿಲೋಮಿನಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಅವರು ನಿಧನರಾದರು ಎಂದು ಮೂಲಗಳು ತಿಳಿಸಿವೆ.

ಫಾದರ್ ಐ. ಚಿನ್ನಪ್ಪ ಅವರು ಕೆಜಿಎಫ್‌ನ ಜಯಮಾತೆ ದೇವಾಲಯ, ಚಿಕ್ಕಬಳ್ಳಾಪುರದ ಗೋಕುಂಟೆ ಸಂತ ಫ್ರಾನ್ಸಿಸ್ ಕ್ಸೇವಿಯರ್ ಧರ್ಮಕೇಂದ್ರ, ಜೆ.ಸಿ. ರಸ್ತೆಯ ಸಂತ ತೆರೇಸಮ್ಮ ದೇವಾಲಯ, ರಾಜಾಜಿನಗರದ ಸ್ವರ್ಗ ಸ್ವೀಕೃತ ಮಾತೆ ದೇವಾಲಯ ಸೇರಿ 12 ಧಾರ್ಮಿಕ ಕೇಂದ್ರಗಳಲ್ಲಿ ಸೇವೆ ಸಲ್ಲಿಸಿದ್ದರು.

ಧರ್ಮಕ್ಷೇತ್ರದ ಕೋಶಾಧಿಕಾರಿಯಾಗಿ ಸೇವೆ ಸಲ್ಲಿಸಿದ್ದರು.

ಅಖಿಲ ಕರ್ನಾಟಕ ಕಥೋಲಿಕ ಕ್ರೈಸ್ತರ ಕನ್ನಡ ಸಂಘದ ಎಲ್ಲ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಚರ್ಚ್‌ಗಳಲ್ಲಿ ಕನ್ನಡ ಅನುಷ್ಠಾನಕ್ಕೆ ಶ್ರಮಿಸಿದ್ದರು ಎಂದು ಮೂಲಗಳು ತಿಳಿಸಿವೆ.

ನಗರದ ರಿಚ್‌ಮಂಡ್ ರಸ್ತೆಯ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಮಂಗಳವಾರ ಬೆಳಿಗ್ಗೆ 8ರಿಂದ 10.30ರ ತನಕ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಬಳಿಕ, ಬೆಂಗಳೂರು ಮಹಾಧರ್ಮಕ್ಷೇತ್ರದ ಧರ್ಮಾಧ್ಯಕ್ಷ ಡಾ.ಪೀಟರ್ ಮಚಾಡೊ ಅವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಕಾರ್ಯಗಳು ನಡೆಯಲಿವೆ. ಬುಧವಾರ ಬೆಳಿಗ್ಗೆ ಕನಕಪುರದ ಹಾರೋಬೆಲೆಯಲ್ಲಿ ಅಂತ್ಯಸಂಸ್ಕಾರ ನೆರವೇರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಕಬಿನಿ ನಿರಾಶ್ರಿತರ ಜಮೀನು ಪೋಡಿ ಕೇಂದ್ರ ಸರ್ಕಾರಕ್ಕೆ ಪತ್ರ: ಸಚಿವ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಿರಾಶ್ರಿತರಾದ 211 ಜೇನು ಕುರುಬ ಕುಟುಂಬಗಳಿಗೆ ಜಮೀನು ಹಂಚಿಕೆ
- ಪೋಡಿ ಮಾಡಿಕೊಡಲು ಅರಣ್ಯ ಇಲಾಖೆಯಿಂದ ತಕರಾರು: ಅಶೋಕ

ಬೆಂಗಳೂರು: ಕಬಿನಿ ಜಲಾಶಯ ನಿರ್ಮಾಣದ ಸಂದರ್ಭದಲ್ಲಿ ಮುಳುಗಡೆಯಾದ ಅರಣ್ಯಗಳಲ್ಲಿ ವಾಸವಿದ್ದು, ನಿರಾಶ್ರಿತರಾದ 211 ಜೇನು ಕುರುಬ ಕುಟುಂಬಗಳಿಗೆ ಜಮೀನು ಹಂಚಿಕೆ ಮಾಡಿ, ಅವರಿಗೆ ಹಕ್ಕುಪತ್ರಗಳನ್ನು ನೀಡಲಾಗಿತ್ತು. ಆದರೆ ಅವರಿಗೆ ಜಮೀನಿನ ಪೋಡಿ ಮಾಡಿರಲಿಲ್ಲ. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಪತ್ರ ಬರೆಯುವುದಾಗಿ ಕಂದಾಯ ಸಚಿವ ಆರ್.ಅಶೋಕ ಹೇಳಿದ್ದಾರೆ.

ಸುಮಾರು 700 ಎಕರೆ ಪ್ರದೇಶದಲ್ಲಿ 56 ವರ್ಷಗಳಿಂದಲೂ ಉಳುಮೆ ಮಾಡುತ್ತಾ ಬಂದಿರುವ ನಿರಾಶ್ರಿತರಿಗೆ ಭೂಮಿಯ ಹಕ್ಕು ನೀಡಲು, ಪೋಡಿ ಮಾಡಿಕೊಡಲು ಅರಣ್ಯ ಇಲಾಖೆಯ ತಕರಾರಿನಿಂದ ಸಾಧ್ಯವಾಗಿಲ್ಲ ಎಂದು ಅವರು ಸುದ್ದಿಗಾರರಿಗೆ ಸೋಮವಾರ ತಿಳಿಸಿದರು.

1969 ರಲ್ಲಿ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವ ಉದ್ದೇಶಕ್ಕಾಗಿ 1,070 ಎಕರೆ ಜಮೀನು ನೀಡಲು ಅರಣ್ಯ ಇಲಾಖೆ ಒಪ್ಪಿಕೊಂಡಿತ್ತು. ಈ ಸಂಬಂಧ ಸರ್ಕಾರ ಆದೇಶವನ್ನೂ ಹೊರಡಿಸಿತ್ತು. 1970 ರಲ್ಲಿ ಚಾಮರಾಜನಗರ ವಿಭಾಗೀಯ ಅರಣ್ಯಾಧಿಕಾರಿ ಜಮೀನನ್ನು ಕಂದಾಯ ಇಲಾಖೆ ಹಸ್ತಾಂತರಿಸಿದ್ದರು. ಅರಣ್ಯದ ಮೀಸಲು ಸ್ಥಾನಮಾನವನ್ನು ಹಿಂದಕ್ಕೆ ಪಡೆಯದ ಕಾರಣವನ್ನು (ಡಿರಿಸರ್ವ್) ನೀಡಿ, ಫಲಾನುಭವಿಗಳ ಹೆಸರಿಗೆ ಜಮೀನು ನೀಡುವ ಪ್ರಸ್ತಾವಕ್ಕೆ ಅರಣ್ಯ ಇಲಾಖೆಯು ಅಡ್ಡಿ ಮಾಡುತ್ತಲೇ ಬಂದಿದೆ ಎಂದು ಹೇಳಿದರು.

ಭೂಮಿಯ ಹಕ್ಕು ಪಡೆಯಲು ಅಲ್ಲಿನ ಜನರು 1980 ರಷ್ಟು ಹಿಂದಿನಿಂದಲೇ ಹೋರಾಟ ನಡೆಸಿಕೊಂಡು ಬಂದಿದ್ದಾರೆ. ಈಗ ಮೀಸಲು ಅರಣ್ಯದ ಸ್ಥಾನಮಾನವನ್ನು ರದ್ದು ಪಡಿಸಲು ಮತ್ತು ನಿರಾಶ್ರಿತರಿಗೆ ಪೋಡಿ ಮಾಡಿಕೊಡಲು ಕೇಂದ್ರ ಸರ್ಕಾರದ ಅನುಮತಿಯ ಅಗತ್ಯವಿದೆ ಎಂದು ಅಶೋಕ ತಿಳಿಸಿದರು.

ಇತ್ತೀಚೆಗೆ ಆ ಪ್ರದೇಶದಲ್ಲಿ ಗ್ರಾಮ ವಾಸ್ತವ್ಯ ಮಾಡಿದಾಗ ಅಲ್ಲಿನ ಜನರ ಸಮಸ್ಯೆಯ ಗಂಭೀರತೆ ಗೊತ್ತಾಯಿತು. ಈ ಸಮಸ್ಯೆ ಬಗೆಹರಿಸುವ ಸಲುವಾಗಿ ಇತ್ತೀಚೆಗೆ ಕಂದಾಯ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ಸಭೆಯನ್ನೂ ನಡೆಸಲಾಯಿತು. ಕೇಂದ್ರದಿಂದ ಅನುಮತಿ ಪಡೆದು 211 ಕುಟುಂಬಗಳಿಗೆ ಜಮೀನು ಪೋಡಿ ಮಾಡಿಕೊಡಲು ತೀರ್ಮಾನಿಸಲಾಯಿತು ಎಂದರು.

ಅರಣ್ಯ ಇಲಾಖೆ 1969 ರಲ್ಲಿ ಒಪ್ಪಿಕೊಂಡಂತೆ ಇನ್ನೂ 378 ಎಕರೆ ಭೂಮಿಯನ್ನು ಕಂದಾಯ ಇಲಾಖೆಗೆ ಬಿಟ್ಟುಕೊಟ್ಟಿಲ್ಲ. ಕಂದಾಯ ಇಲಾಖೆಗೆ ಬರಬೇಕಾದ ಜಮೀನನ್ನು ಪಡೆಯಲು ಒಂದು ತಿಂಗಳೊಳಗೆ ಸರ್ವೇ ಕಾರ್ಯ ಮಾಡಿಸಲು ಸಭೆಯಲ್ಲಿ ಸೂಚನೆ ನೀಡಿದ್ದು, ಇನ್ನು ಒಂದು ತಿಂಗಳಲ್ಲಿ ಡಿಎಫ್‌ಒ ಮತ್ತು ಕಂದಾಯ ಇಲಾಖೆ ಉಪವಿಭಾಗಾಧಿಕಾರಿ ಸಮ್ಮುಖದಲ್ಲಿ ಸರ್ವೇ ಕಾರ್ಯ ನಡೆಯಲಿದೆ ಎಂದು ಅಶೋಕ ತಿಳಿಸಿದರು.

ಪ್ರಜಾವಾಣಿ @75 ಭೂಮಿಕಾ ಕ್ಲಬ್

ಶೀತಕಾಲದ ಉತ್ಸಾಹಕಾರಿ ಪ್ರವಾಸೋಪಾಯಗಳು

17 ಡಿಸೆಂಬರ್ 2022, ಮಧ್ಯಾಹ್ನ 2.30 ಗಂಟೆ
ಇಂದಿರಾನಗರ ಕ್ಲಬ್, 100 ಅಡಿ ರಸ್ತೆ, 8ನೇ ಅಡ್ಡರಸ್ತೆ, ಇಂದಿರಾನಗರ, ಬೆಂಗಳೂರು

- ವಾಸು ದೀಕ್ಷಿತ್ ಅವರಿಂದ ಸಂಗೀತ ಕಾರ್ಯಕ್ರಮ

ಪ್ರವಾಸದ ಪ್ಲಾನ್‌ಗೆ ಸಲಹೆಗಳು:
- ವಸುಮತಿ, ಪರ್ವತಾರೋಹಿ
- ರಾಜಲಕ್ಷ್ಮೀ, ಬೈಕರ್
- ಗ್ಲೋರಿಯಾ ಖಮ್ರುಯಿ, ಟ್ರಾವೆಲ್ ವ್ಲಾಗರ್

ಈ ಚಳಿಗಾಲದಲ್ಲಿ ಫಿಟ್ & ಸ್ಟೈಲಿಶ್ ಆಗಿರಲು ಟಿಪ್ಸ್
- ಖುಷ್ಬೂ ಶೆಟ್ಟಿ, ಸ್ಟೈಲಿಸ್ಟ್
- ರುಚಿಕಾ ಚೌಧರಿ - ನ್ಯೂಟ್ರಿಷನಿಸ್ಟ್ ಮತ್ತು ಫಿಟ್ನೆಸ್ ಪರಿಣಿತೆ

ನೋಂದಣಿಗಾಗಿ bit.ly/pvbhumikaclub ge ಲಾಗಾನ್ ಮಾಡಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿ

ನೋಂದಾಯಿತರಿಗೆ ಮಾತ್ರ ಪ್ರವೇಶ

ಹೈದರಾಬಾದ್ ರೇಸ್

ಬೆಡ್‌ಫೋರ್ಡ್ ಗೆಲ್ಲುವ ನಿರೀಕ್ಷೆ

ಬಸಾಲತ್ ಜಾ ಮೆಮೋರಿಯಲ್ ಕಪ್ ಮಂಗಳವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಬೆಡ್‌ಫೋರ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.35ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ.

1ನೇ ರೇಸ್: ಬಾಯ್ಸಾ 1, ಹಗ್ ಕ್ಯಾಪೆಟ್ 2, ಪ್ರೀಸಿಯಸ್ ಗಿಫ್ಟ್ 6
2ನೇ ರೇಸ್: ಕ್ವೀನ್ ಎಂಪ್ರೆಸ್ 10, ಹಂಟಿಂಗ್‌ಡಾನ್ 3, ಅಶ್ಯೂರ್ಡ್ ಸಕ್ಸಸ್ 1
3ನೇ ರೇಸ್: ಸ್ವೀಟ್ ಡ್ಯಾನ್ಸರ್ 3, ಮಿಸ್ ಮಾರ್ವೆಲಸ್ 1, ಡೆಕ್ಕನ್ ರೇಂಜರ್ 5
4ನೇ ರೇಸ್: ಬ್ರಿಯರ್ ರಿಡ್ಜ್ 1, ಕಾರ್ಲಿಸ್ಲ್ 4, ಹ್ಯಾಶ್‌ಟ್ಯಾಗ್ 7
5ನೇ ರೇಸ್: ಲಾರಸ್ 5, ಅಬೌವ್ ದಿ ಲಾ 1, ಮಿಸ್ಟರ್ ಪರ್ಫೆಕ್ಟ್ 3
6ನೇ ರೇಸ್: ಬೆಡ್‌ಫೋರ್ಡ್ 9, ಸೋಲೊಯಿಸ್ಟ್ 3, ಎಬಲ್ ಲವ್ 10
7ನೇ ರೇಸ್: ಟಾಪ್ ಇನ್ ಕ್ಲಾಸ್ 12, ಶಜಾಮ್ 6, ರಾಯಲ್ ಗ್ರೇಸ್ 4

ಉತ್ತಮ ಬೆಟ್: ಕ್ವೀನ್ ಎಂಪ್ರೆಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಅಧಿವೇಶನ ವೇಳೆಯೇ ಮುತ್ತಿಗೆ: ಯತ್ನಾಳ ಎಚ್ಚರಿಕೆ

ಬೆಳಗಾವಿ: 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಘೋಷಿಸಲು ಸರ್ಕಾರಕ್ಕೆ ಡಿ.19ರವರೆಗೆ ಮಾತ್ರ ಗಡುವು. ಇದು ಆಗದಿದ್ದರೆ ಡಿ.22ರಂದು ಸುವರ್ಣ ವಿಧಾನಸೌಧಕ್ಕೆ ಅಧಿವೇಶನ ವೇಳೆಯೇ ಮುತ್ತಿಗೆ ಹಾಕಲಾಗುವುದು' ಎಂದು ಹೋರಾಟ ಸಮಿತಿ ಮುಖಂಡ, ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಎಚ್ಚರಿಸಿದರು.

> ಪಕ್ಷದಿಂದ ನನ್ನನ್ನು ಹೊರ ಹಾಕಲು ಸಾಧ್ಯವಿಲ್ಲ. ಪಕ್ಷದ ವಿರುದ್ಧ ಮಾತನಾಡಿದರೂ ನನ್ನ ಮೇಲೆ ಕ್ರಮ ಆಗದಿರುವುದಕ್ಕೆ ಸಮಾಜದ ಶಕ್ತಿಯೇ ಕಾರಣ
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ

ನಗರದಲ್ಲಿ ಸೋಮವಾರ ನಡೆದ ಪಂಚಮಸಾಲಿ ಸಮಾಜಕ್ಕೆ ಸೇರಿದ ಜನಪ್ರತಿನಿಧಿಗಳು ಹಾಗೂ ಹೋರಾಟ ಸಮಿತಿ ಪದಾಧಿಕಾರಿಗಳ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಅವರು ಮಾತನಾಡಿದರು.

'ಮೀಸಲಾತಿ ಪ್ರಕಟಿಸದೇ ಇದ್ದರೆ 25 ಲಕ್ಷಕ್ಕೂ ಹೆಚ್ಚು ಜನ ಸುವರ್ಣ ಸೌಧಕ್ಕೆ ಮುತ್ತಿಗೆ ಹಾಕುತ್ತೇವೆ. ಪಂಚಮಸಾಲಿಗರ ವಿರಾಟ್ ಸ್ವರೂಪ ಹೇಗಿರುತ್ತದೆ ಎಂದು ಸರ್ಕಾರಕ್ಕೆ ತೋರಿಸುತ್ತೇವೆ' ಎಂದರು.

'ಅಧಿವೇಶನ ಮುಗಿದ ಬಳಿಕ ನಾವು ಮೀಸಲಾತಿ ಪಡೆದೇ ಮರಳುತ್ತೇವೆ. ನಂತರ ಕೂಡಲ ಸಂಗಮದಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಿಗಾಗಿ ಬೃಹತ್ ಪಂಚಮಸಾಲಿ ಪೀಠ ಕಟ್ಟಲಾಗುವುದು. ಇದಕ್ಕೆ ನಾನೇ ₹ 1 ಕೋಟಿ ನೆರವು ನೀಡುತ್ತೇನೆ. ಸಿ.ಸಿ. ಪಾಟೀಲ ಅವರೂ ನೀಡಲಿದ್ದಾರೆ. ತುಮಕೂರು ಸಿದ್ಧಗಂಗಾ ಮಠದ ಮಾದರಿಯಲ್ಲೇ ನಿರ್ಮಿಸಲಾಗುವುದು' ಎಂದರು.

ಸಾನ್ನಿಧ್ಯ ವಹಿಸಿದ್ದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, 'ಡಿ.19 ನಾವು ನೀಡಿದ ಗಡುವು ಅಲ್ಲ. ಮುಖ್ಯಮಂತ್ರಿ ಅವರೇ ಹೇಳಿದ್ದಾರೆ. ಕೊಟ್ಟ ಮಾತು ಉಳಿಸಿಕೊಂಡರೆ ಸನ್ಮಾನ, ಇಲ್ಲದಿದ್ದರೆ ಪ್ರತಿಭಟನೆ' ಎಂದರು.

ಕೆಆರ್‌ಐಡಿಎಲ್ ಎಂಜಿನಿಯರ್ ಅಮಾನತು

ಪ್ರಜಾವಾಣಿ ವಾರ್ತೆ

ರಾಮನಗರ: ಶಿಷ್ಟಾಚಾರ ಉಲ್ಲಂಘನೆ ಆರೋಪದ ಮೇಲೆ ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ರಾಮನಗರ ವಿಭಾಗದ ಪ್ರಭಾರಿ ಕಾರ್ಯಪಾಲಕ ಎಂಜಿನಿಯರ್ ವಿ.ಶ್ರೀಧರ್ ಅವರನ್ನು ಅಮಾನತು ಮಾಡಲಾಗಿದೆ.

ಕೆಆರ್‌ಐಡಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ.ಜೆ.ಹಿರೇಮಠ ಅವರು ತಕ್ಷಣದಿಂದಲೇ ಜಾರಿಗೆ ಬರುವಂತೆ ಸೋಮವಾರ ಅಮಾನತು ಆದೇಶ ಹೊರಡಿಸಿದ್ದು, ಇಲಾಖೆ ವಿಚಾರಣೆಯನ್ನು ಕಾಯ್ದಿರಿಸಿದ್ದಾರೆ.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಇದೇ ಅಕ್ಟೋಬರ್ 1ರಂದು ಕೆಆರ್‌ಡಿಎಲ್ ಹಮ್ಮಿಕೊಂಡಿದ್ದ ವಿವಿಧ ಕಾಮಗಾರಿಗಳ ಚಾಲನೆ ಕಾರ್ಯಕ್ರಮಕ್ಕೆ ಕ್ಷೇತ್ರದ ಶಾಸಕ, ಮಾಜಿ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಅವರನ್ನು ಸರಿಯಾಗಿ ಆಹ್ವಾನಿಸದೇ ಶಿಷ್ಟಾಚಾರ ಉಲ್ಲಂಘಿಸಿದ ಆರೋಪ ಈ ಅಧಿಕಾರಿ ಮೇಲಿದೆ.

ಹಿನ್ನೆಲೆ ಏನು?: ಚನ್ನಪಟ್ಟಣ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗೆ ರಾಜ್ಯ ಸರ್ಕಾರ ₹50 ಕೋಟಿ ವಿಶೇಷ ಅನುದಾನ ಬಿಡುಗಡೆ ಮಾಡಿತ್ತು. ಇದು ತಮ್ಮ ಮನವಿಯಿಂದಲೇ ಬಂದ ಅನುದಾನ ಎಂದು ಹೇಳಿಕೊಂಡು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಅಕ್ಟೋಬರ್ 1ರಂದು ವಿವಿಧ ಕಾಮಗಾರಿಗಳಿಗೆ ಚಾಲನೆ ಕಾರ್ಯಕ್ರಮ ಹಮ್ಮಿಕೊಂಡಿದ್ದರು.

ಇದಕ್ಕೆ ಎಚ್‌.ಡಿ. ಕುಮಾರಸ್ವಾಮಿ ಹಾಗೂ ಸ್ಥಳೀಯ ಜೆಡಿಎಸ್ ಕಾರ್ಯಕರ್ತರು ವಿರೋಧ ವ್ಯಕ್ತಪಡಿಸಿದ್ದರು. ಯೋಗೇಶ್ವರ್ ಕಾಮಗಾರಿಗಳಿಗೆ ಚಾಲನೆ ನೀಡಲು ಬಂದಾಗ ಅವರ ಕಾರಿಗೆ ಜೆಡಿಎಸ್ ಕಾರ್ಯಕರ್ತರು ಕಲ್ಲು, ಮೊಟ್ಟೆ ಎಸೆದು ಆಕ್ರೋಶ ವ್ಯಕ್ತಪಡಿಸಿದ್ದರು. ಕಡೆಗೆ ಯೋಗೇಶ್ವರ್ ಪೊಲೀಸ್ ಭದ್ರತೆಯಲ್ಲಿ ಕಾಮಗಾರಿಗಳಿಗೆ ಚಾಲನೆ ನೀಡಿದ್ದರು. ಈ ಬಗ್ಗೆ ಕುಮಾರಸ್ವಾಮಿ ಅವರು ತಮ್ಮ ಹಕ್ಕು ಚ್ಯುತಿ ಆಗಿದೆ ಎಂದು ವಿಧಾನಸಭೆ ಸ್ಪೀಕರ್‌ಗೆ ದೂರು ನೀಡಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Graphic Designers

WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Multiple Vacancy

REQUIRED TEAMLEADER, Telecaller, Field Executive For Bank Loan collection. Direct recruitment to company. 9620206756, 9620200756.

PUBLIC NOTICE

IN THE COURT OF THE SENIOR CIVIL JUDGE AT SIRUGUPPA
MAT No.9/2022
Between: Rajini. G ...Petitioner
-V/s-
Rakesh Naidu @ YB.Naidu ...Respondent
NOTICE
(Under Oder-5, Rule 20(1) (a) of CPC)
To, Respondent: Rakesh Naidu @ Y B Naidu S/o Uppaluri Sathyanarayana Aged above 38years, Software Engineer H.No. 184/1-D, Alex Indira Nilayam, 9th Cross Vignan Nagara, Kaggadasapura Main Road, Bengaluru.
Whereas, the petitioner filed the above case against the respondent before Hobn'ble Senior Civil Judge, Siruguppa.
Whereas, the respondent is not appeared before The Hon'ble Senior Civil Judge, Siruguppain spite of steps taken by the petitioner.
Whereas, the above petitioner taken steps against the respondent for paper publication.
The respondent shall take notice and appear before the Hon'ble Senior Civil Judge, Siruguppa, Ballari District, Karnataka on 13-01-2023. At 11-00 A.M to answer the same. If respondent not appeared on before the Hon'ble Court, above case will be heard exparte.
Advocate for Petitioner
(H.K.Mallikarjunaiah)
By Order of the Court
Senior Civil Judge Court Siruguppa
Place: Siruguppa
Date: 19-11-2022

BUSINESS

Business to Business

Business

NRI INVESTMENT and Finance Introducing new purchase finance for Buying Houses, Flats, Plots upto 100% Loan Available on Low Interest for Low & Middle Income Group Contact- 7411265189

CERTIFICATE OF Origin For Exporters/ CHA's C&F's- Call 8089696173/ 8089696172 The South Indian Chamber of Commerce and Industry™ (SICCI™), ICD Whitefield, Bangalore

Business Offers

Finance

GREEN HERBAL 2 Lakh Investment Required Daily Collection Contact:- 8892501007/ 9606701007

PERSONAL

Change of Name

14829107P, SEP Sujit Dutta 2ATC my father's name record's NAND LAL DUTTA instead of NANDALAL DUTTA notary B.M. Chandrashekar.

CHANGE OF NAME

I, ZUBEER AHMED S/o. Nazeer Ahmed R/a #2270, 2nd Cross, Near Darga, Poolsha Mohalla, Kolar. Declare That My Correct Name is ZUBEER AHMED But in My SSLC Marks Card Wrongly Recorded as ZUBEER AHMED S Instead of ZUBEER AHMED Henceforth, I Known as ZUBEER AHMED only, vide Affidavit Dated 18-10-2022 before Notary Bisappa Gowda, Kolar.

WE, SRI. Vijith Kumar V S/o K.P Vishwa Chandran aged about 40 Years and Smt. Seena G Pillai W/o Vijith Kumar V aged about 38 years, both are residing at No. 110/60 Sreevilas Nethravathy 2nd Cross Near Vinayaka Temple Udayanagar, Bangalore North Dooravaninagar Bangalore-560016, have changed our daughter's name from Saanvi Pillai to Saanvika Nair vide affidavit dated 09.12.2022 sworn before notary R.S Vijay, Bangalore.

I, SHOBITHA VISHNU D/o. Gopal Vishnu Mohan residing at #C608, M.B.R Shangrila, Harsha Layout, Mysore Road, Kengeri Satellite Town, Bengaluru- 560060, wrongly mentioned my name as SHOBITHA VISHNU MOHAN in some documents, Hereby declaring that my correct name is SHOBITHA VISHNU, only vide affidavit dated 09/12/2022 before notary M.K. Devaki Bangalore.

6496543A, HAV/ASH, NEERAJ KUMAR, Vill - Khopaty, Balam, Madhepura, Bihar changed daughter's name SHUBHAM SHRI to SHUBHAM SHREE, 12/12/2022, Notary K.V. Mani, Bangalore

ANITA BAI W/o. 14852369X, HAV, Jairam Singh Shekhawat R/a. Badholi Duhar Choughan Alwar Rajasthan, my name ANITA BAI to ANITA notary B.M. Chandrashekar.

I, VIKHYATHANADA Swamy S/o Gopala, N aged about 55 years now residing at peetadhipathi, Arya Ediga maha sansthana soluru, Ramnagar district 562127, karnataka state, and former resident of gurukripa, sevashrama ballyottu, edu, hosamaru, karkala udupi district. have changed my name to Swamy Vikhyathananda, vide affidavit dated 08.12.2022, before notary B. A. Mohammad Hanif, Mangaluru district, D. K (karnataka), India



Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಎಕ್ಸಿಸ್ ಬ್ಯಾಂಕ್
ಸಾರ್ವಜನಿಕ ಸೂಚನೆ
ಅಡಮಾನ ಚಿನ್ನಾಭರಣಗಳ ಇ-ಹರಾಜು ನೋಟೀಸ್

ಸಾಲಗಾರರು ಹಾಗೂ ಸಾರ್ವಜನಿಕರಿಗೆ ನಿರ್ದಿಷ್ಟವಾಗಿ ಈ ಮೂಲಕ ತಿಳಿಸುವುದೇನೆಂದರೇ ಕೆಳಗಿನ ಖಾತೆಗಳಲ್ಲಿನ ಚಿನ್ನಾಭರಣಗಳ ಒತ್ತೆಯ ಸಾರ್ವಜನಿಕ ಹರಾಜನ್ನು ಆಕ್ಸಿಸ್ ಬ್ಯಾಂಕ್ ಕೆಳಗೆ ಸೂಚಿಸಿದ ಶಾಖೆಯಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ.

ಈ ಕೆಳಗೆ ತಿಳಿಸಲಾದ ಸಾಲಗಾರರು ಭದ್ರತೆಗಾಗಿ ಬ್ಯಾಂಕ್ ಪರವಾಗಿ ಚಿನ್ನದ ಆಭರಣಗಳ ("ಚಿನ್ನದ ಸಾಲ ಸೌಲಭ್ಯ") ಭರವಸೆಯ ವಿರುದ್ಧ **ಎಕ್ಸಿಸ್ ಬ್ಯಾಂಕ್ ಲಿಮಿಟೆಡ್**‌ನಿಂದ ಕ್ರೆಡಿಟ್ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಸಾಲಗಾರರು/ಜಾಮೀನುದಾರರಿಗೆ ಡಿಮ್ಯಾಂಡ್ ನೋಟಿಸ್‌ಗಳನ್ನು ನೀಡಲಾಗಿದ್ದು, ಪಡೆದ ಚಿನ್ನದ ಸಾಲ ಸೌಲಭ್ಯಕ್ಕೆ ತಮ್ಮ ಬಾಕಿ ಮೊತ್ತವನ್ನು ಪಾವತಿಸಲು ಸಾಲಗಾರರು/ಜಾಮೀನುದಾರರನ್ನು ಈ ಮೂಲಕ ತಿಳಿಸಲಾಗಿದೆ. ಸಾಲಗಾರರು/ಜಾಮೀನುದಾರರು ಬಾಕಿ ಇರುವ ಸಾಲದ ಮೊತ್ತವನ್ನು ಮರುಪಾವತಿಸಲು ವಿಫಲವಾಗಿರುವುದರಿಂದ, ಬ್ಯಾಂಕ್ ಈ ಮೂಲಕ ನಿರ್ಬಂಧಿಸಲಾದ ಆಸ್ತಿಯ ವೇಳಾಪಟ್ಟಿಯಲ್ಲಿ ಹೆಚ್ಚು ನಿರ್ದಿಷ್ಟವಾಗಿ ವಿವರಿಸಲಾದ ಗಿರವಿ ಇಟ್ಟಿರುವ ಚಿನ್ನದ ಆಭರಣಗಳ ಇ-ಹರಾಜು ಮಾರಾಟವನ್ನು **"ಎಲ್ಲಿ ಹೇಗಿದೆಯೋ ಹಾಗೇ" ಎಲ್ಲಿ ಏನಿದೆಯೋ ಹಾಗೇ" "ಯಾವುದೇ ಆಧಾರ ಇಲ್ಲದೆ" ದಿನಾಂಕ : 23.12.2022** ರಂದು **ಮಧ್ಯಾಹ್ನ 12:30 ಗಂಟೆಯಿಂದ ನಿಂದ 3:30** ವರೆಗೆ ಹರಾಜು ನಡೆಸಲು ಪ್ರಸ್ತಾಪಿಸಲಾಗಿದೆ.

ಸಾಲಗಾರರು ಮತ್ತು ಬಾಕಿ ಮೊತ್ತಗಳ ವಿವರಗಳು

ಶಾಖೆಯ ಹೆಸರು	ಖಾತೆ ಸಂಖ್ಯೆ	ಗ್ರಾಹಕರ ಹೆಸರು	ಬರಬೇಕಾದ ಬಾಕಿ ಮೊತ್ತ	ಡಿಮ್ಯಾಂಡ್ ನೋಟೀಸ್ ದಿನಾಂಕ	ಒಟ್ಟು ತೂಕ	ನಿವ್ವಳ ತೂಕ
ಬನಶಂಕರಿ, ಬೆಂಗಳೂರು [ಕ]	XXXXXXXXXXX5430	ಸಂಜೀವ್ ನಂದಕುಮಾರ್	98832	18-Jul-22	31.3	31
ಬಸವೇಶ್ವರನಗರ, ಬೆಂಗಳೂರು	XXXXXXXXXXX9581	ರಮ್ಯ. ಆರ್.	104552	28-Jul-22	33.27	31.81
ಭಟ್ಟರಹಳ್ಳಿ, ಬೆಂಗಳೂರು [ಕ]	XXXXXXXXXXX0249	ನಿತಿನ್ ಚಂದ್ರನ್	66785	3-Sep-22	25.2	25
ಬಿಡದಿ, ಬೆಂಗಳೂರು [ಕ]	XXXXXXXXXXX6443	ಹೇಮಂತ್‌ಕುಮಾರ್.ಬಿ.	217058	29-Jul-22	57.1	55
ಬಿಟಿಎಂ ಲೇಔಟ್, ಬೆಂಗಳೂರು [ಕ]	XXXXXXXXXXX7580	ಸಿಜು ಜೋಸೆಫ್.	63641.00	28-Jul-22	20.1	19.3
ಚನ್ನಪಟ್ಟಣ [ಕ]	XXXXXXXXXXX2754	ಸೈಯದ್ ವಾಜಿದ್ ಮೆಹ್ದಿ	99030	25-Aug-22	49.5	47.5
ಚನ್ನಪಟ್ಟಣ [ಕ]	XXXXXXXXXXX4118	ಸೈಯದ್ ಆರಿಫ್ ಆಶರ್ಫಿ	79543	25-Aug-22	26.5	25
ಚನ್ನಪಟ್ಟಣ [ಕ]	XXXXXXXXXXX9778	ಅಶ್ಫಾಕ್ ಮೆಹ್ದಿ	78085	25-Aug-22	22.3	21.6
ಚನ್ನಪಟ್ಟಣ [ಕ]	XXXXXXXXXXX1023	ಮೊಹಮ್ಮದ್ ಬಖಾರ್	68952	6-Aug-22	22.2	19
ಹೆಗ್ಡೆನಗರ, ಬೆಂಗಳೂರು [ಕ]	XXXXXXXXXXX3694	ಅನೂಷ. ಎ.ವಿ.	359184.00	24-Mar-22	117.97	109.97
ಹೊಸಕೋಟೆ, ಬೆಂಗಳೂರು [ಕ]	XXXXXXXXXXX2885	ಸೆಲ್ವ ಕುಮಾರ್	80891	18-Jul-22	24.1	24
ಹೊಸಕೋಟೆ, ಬೆಂಗಳೂರು [ಕ]	XXXXXXXXXXX8422	ವಿ.ಬಿ. ನರೇಂದ್ರ	58848	21-Apr-22	24.4	22
ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು	XXXXXXXXXXX9444	ರೂಪಶ್ರೀ. ಡಿ.	646927.00	22-Jul-22	213.4	193.5
ಜೆ.ಸಿ. ರಸ್ತೆ, ಬೆಂಗಳೂರು [ಕ]	XXXXXXXXXXX1540	ವಿ. ರವಿ	177704	3-Sep-22	59.6	56
ಜೆ.ಸಿ. ರಸ್ತೆ, ಬೆಂಗಳೂರು [ಕ]	XXXXXXXXXXX3499	ಪ್ರವೀಣ್ ಕುಮಾರ್	65518.7	26-Jul-22	27.09	24.99
ಮಾರತ್ತಹಳ್ಳಿ, ಬೆಂಗಳೂರು [ಕ]	XXXXXXXXXXX0843	ಮಲ್ಲಣ್ಣ	158840	3-Sep-22	54.2	53
ಪೀಣ್ಯ, ಬೆಂಗಳೂರು	XXXXXXXXXXX0295	ರಾಕೇಶ್.ಸಿ.ಎನ್.	235308	3-Sep-22	73.5	67.8
ಪೀಣ್ಯ, ಬೆಂಗಳೂರು	XXXXXXXXXXX6591	ಸಾಧನಾ. ಯು.	70490.29	18-Jul-22	21.6	21
ಆರ್‌ಬಿಐ ಲೇಔಟ್, ಬೆಂಗಳೂರು	XXXXXXXXXXX9595	ಕೆ. ಲೋಕೇಶ್	82074.00	14-Jul-22	26.1	25.1
ಆರ್‌ಬಿಐ ಲೇಔಟ್, ಬೆಂಗಳೂರು	XXXXXXXXXXX0260	ಪವನ ಶೆಟ್ಟಿ	50869.62	3-Sep-22	15.5	15.1
ವಿಜಯನಗರ, ಬೆಂಗಳೂರು	XXXXXXXXXXX8505	ಮೊಹಮ್ಮದ್ ಯಾಸೀನ್	351768.00	11-Jul-22	114.2	108.2
ವಿಜಯನಗರ, ಬೆಂಗಳೂರು	XXXXXXXXXXX4724	ಜೈವಂತ್ ಸೈರೋಬ ನಾಯ್ಕ್	36544.00	20-Jun-22	13.9	13.5

ಎಕ್ಸಿಸ್ ಬ್ಯಾಂಕ್. ಯಾವುದೇ ಪೂರ್ವ ಸೂಚನೆ ಇಲ್ಲದೆ ಖಾತೆಯನ್ನು ತೆಗೆದುಹಾಕುವ/ಹರಾಜು ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಹೊಂದಿದೆ. ಹರಾಜು ಆನ್‌ಲೈನ್ **https://gold.samil.in** ನಲ್ಲಿ ದಿನಾಂಕ : 23.12.2022 ರಂದು ಮಧ್ಯಾಹ್ನ 12:30 ರಿಂದ 3:30ಕ್ಕೆ ನಡುವೆ ನಡೆಯಲಿದೆ.

ಹೆಚ್ಚಿನ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ವೆಬ್‌ಸೈಟ್ **https://gold.samil.in** ಗೆ ಲಾಗ್ ಇನ್ ಮಾಡಿ (ಆನ್‌ಲೈನ್ ಮಾರಾಟಗಾರರ ವೆಬ್‌ಸೈಟ್)

ಸ್ಥಳ: ಬೆಂಗಳೂರು
ಸಹಿ/- ಅಧಿಕೃತ ಅಧಿಕಾರಿ, ಎಕ್ಸಿಸ್ ಬ್ಯಾಂಕ್ ಲಿಮಿಟೆಡ್.,

ಸಂಕ್ಷಿಪ್ತ ಸುದ್ದಿ

ಸಾಹಿತಿ ಕೆ.ಎಸ್. ಭಗವಾನ್‌ಗೆ ನಿರೀಕ್ಷಣಾ ಜಾಮೀನು

ಸಾಗರ: ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಬರಹ ಪ್ರಕಟಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಸಾಹಿತಿ ಕೆ.ಎಸ್. ಭಗವಾನ್ ಅವರಿಗೆ ಸೋಮವಾರ ನಿರೀಕ್ಷಣಾ ಜಾಮೀನು ನೀಡಿದೆ.

ಭಗವಾನ್ ಅವರು ತಮ್ಮ 'ರಾಮ ಮಂದಿರ ಏಕೆ ಬೇಡ' ಕೃತಿಯಲ್ಲಿ ಹಿಂದೂ ಧರ್ಮಿಯರ ಭಾವನೆಗಳಿಗೆ ಧಕ್ಕೆ ತರುವ ರೀತಿಯಲ್ಲಿ ಬರಹ ಪ್ರಕಟಿಸಿದ್ದಾರೆ ಎಂದು ಇಕ್ಕೇರಿಯ ಮಹಾಬಲೇಶ್ವರ್ ಅವರು ಇಲ್ಲಿನ ಜೆಎಂಎಫ್‌ಸಿ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಲಯ ಭಗವಾನ್ ವಿರುದ್ಧ ಪ್ರಕರಣ ದಾಖಲಿಸಿ ಸಮನ್ಸ್ ಹೊರಡಿಸುವಂತೆ ಆದೇಶಿಸಿತ್ತು. ಸಮನ್ಸ್ ಜಾರಿಯಾದರೂ ಭಗವಾನ್ ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಲಾಗಿತ್ತು.

2024ರ ಜನವರಿ ವೇಳೆಗೆ ಅಯೋಧ್ಯೆಯಲ್ಲಿ ಪ್ರಾಣ ಪ್ರತಿಷ್ಠಾಪನೆ

ದಾವಣಗೆರೆ: 'ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದು, 2024ರ ಜನವರಿಯಲ್ಲಿ ಮಕರ ಸಂಕ್ರಾಂತಿ ನಂತರ ಪ್ರಾಣ ಪ್ರತಿಷ್ಠಾಪನೆ ಕಾರ್ಯ ನೇವೇರಲಿದೆ' ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಮಮಂದಿರ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಕಂಬಗಳ ಅಳವಡಿಕೆ ಹಾಗೂ ಗೋಡೆ ಕಟ್ಟುವ ಕಾಮಗಾರಿ ಪ್ರಗತಿಯಲ್ಲಿದೆ. 2023ರ ಅಂತ್ಯಕ್ಕೆ ಎಲ್ಲ ಕಾಮಗಾರಿಗಳು ಮುಕ್ತಾಯವಾಗಲಿವೆ' ಎಂದರು.

'ಚುನಾವಣೆ ಸಂದರ್ಭದಲ್ಲಿ ಪ್ರತಿಯೊಬ್ಬರೂ ತಮ್ಮ ಸ್ವಂತ ಲಾಭ ನೋಡುತ್ತಾರೆ. ಇದಕ್ಕೆ ರಾಜಕಾರಣಿಗಳು, ಮಠಾಧೀಶರು, ಪತ್ರಕರ್ತರೂ ಹೊರತಲ್ಲ. ಅಪರಾಧದ ಹಿನ್ನೆಲೆಯುಳ್ಳವರನ್ನು ಆಯ್ಕೆ ಮಾಡುವುದು ಜನರ ದೌರ್ಬಲ್ಯ. ಇದಕ್ಕಾಗಿ ಅನ್ಯರನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಸಮಾಜ ಜಾಗೃತವಾಗುವುದೇ ಎಲ್ಲ ಸಮಸ್ಯೆಗಳಿಗೆ ಪರಿಹಾರ' ಎಂದು ಅವರು ಅಭಿಪ್ರಾಯಪಟ್ಟರು.

ದನಗಾಹಿ ಮೇಲೆ ಹುಲಿ ದಾಳಿ: ಗಂಭೀರ ಗಾಯ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ಬಳ್ಳೂರುಹುಂಡಿ ಗ್ರಾಮದ ಸ್ವಾಮಿ(54) ಎಂಬುವವರ ಮೇಲೆ ಸೋಮವಾರ ಹುಲಿ ದಾಳಿ ನಡೆಸಿದ್ದು, ತಲೆ ಹಾಗೂ ಕೆನ್ನೆಯ ಭಾಗವನ್ನು ಸೀಳಿದೆ. ಗಂಭೀರವಾಗಿ ಗಾಯಗೊಂಡ ಅವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗ್ರಾಮದ ಕಾಡಂಚಿನಲ್ಲಿ ದನ ಮೇಯಿಸುತ್ತಿದ್ದ ಸ್ವಾಮಿ, ಜಾನುವಾರಿಗೆ ನೀರು ಕುಡಿಸಲು ಕೆರೆಗೆ ತೆರಳಿದ್ದಾಗ ಪೊದೆಯಲ್ಲಿದ್ದ ಹುಲಿ ಏಕಾಏಕಿ ಸ್ವಾಮಿ ಅವರ ಮೇಲೆ ಎರಗಿತ್ತು ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ಸ್ಥಳಕ್ಕೆ ಹೆಡಿಯಾಲ ವಲಯ ಅರಣ್ಯ ಸಂರಕ್ಷಣಾಧಿಕಾರಿ ನಾರಾಯಣ ಭೇಟಿ ನೀಡಿ, 'ಹುಲಿ ಸೆರೆಗೆ ಕ್ರಮ ವಹಿಸಲಾಗುವುದು' ಎಂದು ಪ್ರತಿಕ್ರಿಯಿಸಿದರು.

ಬೀದರ್‌ನಲ್ಲಿ ಸೇನಾ ನೇಮಕಾತಿ ರ್‍ಯಾಲಿ: ಅವ್ಯವಸ್ಥೆ ವಿರುದ್ಧ ಜಿಲ್ಲಾಡಳಿತಕ್ಕೆ ಭಾವಿ ಸೈನಿಕರ ಶಾಪ

ಊಟ, ಶೌಚಕ್ಕೆ ಯುವಕರ ಪರದಾಟ

ಪ್ರಜಾವಾಣಿ ವಾರ್ತೆ

ಬೀದರ್: ಜಿಲ್ಲಾಡಳಿತದ ಸಹಕಾರದೊಂದಿಗೆ ಸೇನಾ ನೇಮಕಾತಿ ವಿಭಾಗದವರು ಇಲ್ಲಿಯ ನೆಹರೂ ಕ್ರೀಡಾಂಗಣದಲ್ಲಿ ಅಗ್ನಿಪಥ ಯೋಜನೆಯ ಅಗ್ನಿವೀರರನ್ನು ನಡೆಸುತ್ತಿರುವ ಸೇನಾ ನೇಮಕಾತಿ ರ್‍ಯಾಲಿಗೆ ಬಂದ ಉತ್ತರ ಕರ್ನಾಟಕದ ಜಿಲ್ಲೆಗಳ ಯುವಕರು ಸೌಲಭ್ಯಗಳಿಲ್ಲದೆ ಪರದಾಡಿದರು.

ಬೆಳಗಾವಿ ಜಿಲ್ಲೆಯೊಂದರಿಂದಲೇ 50,646 ಸಾವಿರ ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿರುವುದು ತಿಳಿದಿದ್ದರೂ, ಕೇವಲ 2,772 ಜನರು ನೋಂದಣಿ ಮಾಡಿಕೊಂಡಿರುವ ಬೀದರ್ ಜಿಲ್ಲೆಯಲ್ಲಿ ರ್‍ಯಾಲಿ ನಡೆಸುವ ಅಗತ್ಯವೇ ಇರಲಿಲ್ಲ ಎಂದು ಅಭ್ಯರ್ಥಿಗಳು ಆಕ್ರೋಶ ಹೊರ ಹಾಕಿದರು.



ಕಸದ ರಾಶಿ, ಸೊಳ್ಳೆಗಳ ಕಾಟದ ಮಧ್ಯೆಯೇ ಬೀದರ್‌ನ ಸಾಯಿ ಆದರ್ಶ ಶಾಲೆ ಆವರಣದಲ್ಲಿ ಮಲಗಿರುವ ಯುವಕರು

'ಸೇನಾ ಭರ್ತಿ ರ್‍ಯಾಲಿಗೆ ಬಂದ ಯುವಕರಿಗೆ ಜಿಲ್ಲಾಡಳಿತ ಸರಿಯಾದ ವ್ಯವಸ್ಥೆ ಮಾಡಿಲ್ಲ. ಯುವಕರು ಊಟ, ಉಪಾಹಾರಕ್ಕೆ ಪರದಾಡುತ್ತಿದ್ದಾರೆ. ಎರಡು ಸಾವಿರಕ್ಕೂ ಅಧಿಕ ಜನ ಸೇರಿರುವ ಸ್ಥಳದಲ್ಲಿ ಸಾಯಿ ಆದರ್ಶ ಶಾಲೆಯ ಆವರಣದಲ್ಲಿ ಐದು ಬಾತ್‌ಗಳ ಒಂದೇ ಸಂಚಾರಿ ಶೌಚಾಲಯ ಇಟ್ಟಿದ್ದಾರೆ. ಇಲ್ಲಿನ ಅವ್ಯವಸ್ಥೆಗೆ ಜಿಲ್ಲಾಡಳಿತವೇ ಹೊಣೆ'

> ಸಂಚಾರಿ ಶೌಚಾಲಯಗಳ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿದೆ. ಇನ್ನುಳಿದ ಸಮಸ್ಯೆ ಪರಿಹರಿಸಲು ಜಿಲ್ಲಾಡಳಿತದಿಂದ ನೋಡಲ್ ಅಧಿಕಾರಿಯನ್ನು ನಿಯೋಜಿಸಲಾಗಿದೆ
> **ಗೋವಿಂದರೆಡ್ಡಿ**, ಜಿಲ್ಲಾಧಿಕಾರಿ, ಬೀದರ್

ಎಂದು ಬಿಜೆಪಿ ಕಲಬುರಗಿ ವಿಭಾಗದ ಸಹ ಪ್ರಭಾರಿ ಈಶ್ವರಸಿಂಗ್ ಠಾಕೂರ್ ಆಕ್ರೋಶ ವ್ಯಕ್ತಪಡಿಸಿದರು.

ಬೀದರ್ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೇನಾ ಅಧಿಕಾರಿಗಳ ಸಭೆ ನಡೆಸಿದ ವೇಳೆ ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ, 'ಗುರುದ್ವಾರದಲ್ಲಿ ಯುವಕರಿಗೆ ಊಟ ಹಾಗೂ ವಾಸ್ತವ್ಯದ ವ್ಯವಸ್ಥೆ ಮಾಡಲಾಗುವುದು' ಎಂದು ತಿಳಿಸಿದ್ದರು. ನಿರೀಕ್ಷೆಗೂ ಮೀರಿ ಯುವಕರು ಬರುತ್ತಿರುವುದರಿಂದ ಅಲ್ಲಿಯೂ ನಿರ್ವಹಣೆ ಸಮಸ್ಯೆಯಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಒಮ್ಮೆಲೇ ಬರುತ್ತಿರುವ ಕಾರಣ ಎಲ್ಲರಿಗೂ ಊಟ ವಿತರಿಸಲು ಗುರುದ್ವಾರದ ಸಿಬ್ಬಂದಿ ಪ್ರಯಾಸ ಪಡುತ್ತಿದ್ದಾರೆ.

ಕೇಂದ್ರ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾ ಶನಿವಾರ ನೆಹರೂ ಕ್ರೀಡಾಂಗಣಕ್ಕೆ ಭೇಟಿ ನೀಡಿ ಒಳಗಡೆ ಸೇನಾ ನೇಮಕಾತಿ ಪ್ರಕ್ರಿಯೆಯನ್ನು ವೀಕ್ಷಿಸಿ ಬಂದಿದ್ದಾರೆ. ರ್‍ಯಾಲಿಗೆ ಬರುತ್ತಿರುವ ಅಭ್ಯರ್ಥಿಗಳು ಹೊರಗಡೆ ಎದುರಿಸುತ್ತಿರುವ ಸಮಸ್ಯೆಗಳನ್ನು ಆಲಿಸಿಲ್ಲ. ಜಿಲ್ಲಾ ಉಸ್ತುವಾರಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹಾಗೂ ಶಾಸಕ ರಹೀಂ ಖಾನ್ ಸಹ ಸ್ಥಳಕ್ಕೆ ಭೇಟಿ ನೀಡಿಲ್ಲ. ಹಿರಿಯ ಅಧಿಕಾರಿಗಳು ಕಚೇರಿ ಬಿಟ್ಟು ಹೊರಗೆ ಬಂದಿಲ್ಲ ಎಂದು ಅಭ್ಯರ್ಥಿಗಳು ಅಸಮಾಧಾನ ಹೊರ ಹಾಕಿದ್ದಾರೆ.

ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರವೂ ಪ್ರತಿಭಟನೆ ನಡೆಯಿತು —ಪ್ರಜಾವಾಣಿ ಚಿತ್ರ

ಒಳಮೀಸಲಾತಿ: ಅಹೋರಾತ್ರಿ ಹೋರಾಟಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎ.ಜೆ.ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹಿಸಿ 'ಪರಿಶಿಷ್ಟ ಜಾತಿಯ ಒಳಮೀಸಲಾತಿ ಹೋರಾಟ ಜಾರಿ ಹೋರಾಟ ಸಮಿತಿ' ನಡೆಸುತ್ತಿರುವ ಹೋರಾಟ ಎರಡನೇ ದಿನವೂ ಮುಂದುವರಿದಿದೆ. ಮಂಗಳವಾರದಿಂದ ಅಹೋರಾತ್ರಿ ಹೋರಾಟಕ್ಕೆ ಪ್ರತಿಭಟನಕಾರರು ನಿರ್ಧರಿಸಿದ್ದಾರೆ.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಳೆಯ ನಡುವೆ ಧರಣಿ ಮುಂದುವರಿದ್ದು, 'ಒಳ ಮೀಸಲಾತಿ ಜಾರಿ ಆಗುವ ತನಕ ಹೋರಾಟ ನಿಲ್ಲಿಸುವುದಿಲ್ಲ' ಎಂದು ಪಟ್ಟುಹಿಡಿದಿದ್ದಾರೆ. 'ಸದಾಶಿವ ಆಯೋಗದ ವರದಿಯ ಗಂಟನ್ನು ಬಿಚ್ಚಿ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲೇಬೇಕು. ಇಲ್ಲದಿದ್ದರೆ 2018ರಲ್ಲಿ ಕಾಂಗ್ರೆಸ್‌ಗೆ ಆದ ಗತಿಯೇ 2023ರಲ್ಲಿ ಬಿಜೆಪಿಗೂ ಆಗಲಿದೆ' ಎಂದು ಹೋರಾಟಗಾರರು ಎಚ್ಚರಿಸಿದರು.

'ಮಳೆ ಬಿಟ್ಟೂ ಬಿಡದೆ ಸುರಿಯುತ್ತಿರುವುದರಿಂದ ಎರಡನೇ ದಿನ ಜನ ಕಡಿಮೆಯಾಗಿದ್ದಾರೆ. ಮಳೆಯಿಂದ ತೊಂದರೆ ಆಗದಂತೆ ಟೆಂಟ್ ನಿರ್ಮಿಸಲಾಗುತ್ತಿದ್ದು, ಮಂಗಳವಾರದಿಂದ ಅಹೋರಾತ್ರಿ ಧರಣಿ ಆರಂಭಿಸಲಾಗುವುದು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಕೃಷ್ಣಪ್ಪ ಸ್ಥಾಪಿತ) ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಭೂಪರಭಾರೆ ನಿಷೇಧ(ಪಿಟಿಸಿಎಲ್) ಕಾಯ್ದೆಗೆ ತಿದ್ದುಪಡಿ ತಂದು ದಲಿತರ ಭೂಮಿ ರಕ್ಷಣೆ ಮಾಡಬೇಕು. ಸಫಾಯಿ ಕರ್ಮಚಾರಿಗಳನ್ನು ಮುಖ್ಯವಾಹಿನಿಗೆ ತರಲು ಐಪಿಡಿ ಸಾಲಪ್ಪ ವರದಿಯನ್ನು ಅನುಷ್ಠಾನಗೊಳಿಸಬೇಕು ಎಂದೂ ಒತ್ತಾಯಿಸಿದರು. ಹೋರಾಟಗಾರರಾದ ಬಸವರಾಜ ಕೌತಾಳ್, ಭಾಸ್ಕರ ಪ್ರಸಾದ್, ಹರಿರಾಮ್, ಅಂಬಣ್ಣ ಅರೋಲಿಕರ್ ಭಾಗವಹಿಸಿದ್ದರು. ಈ ಹೋರಾಟಕ್ಕೆ ಬೆಂಬಲ ಸೂಚಿಸಿರುವ ಬಹುಜನ ಸಮಾಜ ಪಕ್ಷ (ಬಿಎಸ್‌ಪಿ), ಹೋರಾಟಗಾರರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ರದ್ದುಪಡಿಸಬೇಕು ಎಂದು ಒತ್ತಾಯಿಸಿ ಪತ್ರಿಕಾ ಹೇಳಿಕೆ ನೀಡಿದೆ.

114 'ನಮ್ಮ ಕ್ಲಿನಿಕ್'ಗೆ ನಾಳೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡ ಜನರಿಗೆ ಸುಲಭವಾಗಿ ಆರೋಗ್ಯ ಸೇವೆ ಒದಗಿಸಲು ರೂಪಿಸಿರುವ 438 'ನಮ್ಮ ಕ್ಲಿನಿಕ್'ಗಳನ್ನು ಜನವರಿ ಅಂತ್ಯದ ಒಳಗೆ ರಾಜ್ಯದಾದ್ಯಂತ ಆರಂಭವಾಗಲಿವೆ' ಎಂದು ಆರೋಗ್ಯ ಸಚಿವ ಕೆ. ಸುಧಾಕರ್ ತಿಳಿಸಿದರು.

'ಒಟ್ಟು ₹150 ಕೋಟಿ ಮೊತ್ತದ ಯೋಜನೆ ಇದಾಗಿದೆ. ಮೊದಲ ಹಂತವಾಗಿ ಡಿ.14ರಂದು 114 ಕ್ಲಿನಿಕ್‌ಗಳು ಏಕಕಾಲದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಉದ್ಘಾಟನೆಗೊಳ್ಳಲಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ' ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಮೊದಲಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಕ್ಲಿನಿಕ್‌ಗಳು ಆರಂಭವಾಗಲಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಜನವರಿ ಮೊದಲ ವಾರದಲ್ಲಿ ಏಕಕಾಲಕ್ಕೆ 150 ಹಾಗೂ ತಿಂಗಳಾಂತ್ಯದ ವೇಳೆಗೆ ಎಲ್ಲ 243 ಕ್ಲಿನಿಕ್‌ಗಳು ಕಾರ್ಯಾರಂಭ ಮಾಡಲಿವೆ' ಎಂದು ವಿವರಿಸಿದರು.

'ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಆರಂಭವಾಗಲಿರುವ ನಮ್ಮ ಕ್ಲಿನಿಕ್‌ಗಳು ಬಡ ಜನರ ಆರೋಗ್ಯ ಸಂಜೀವಿನಿಯಾಗಿ ಕಾರ್ಯನಿರ್ವಹಿಸಲಿವೆ. 10 ರಿಂದ 20 ಸಾವಿರ ಜನಸಂಖ್ಯೆಗೆ ಒಂದರಂತೆ ನಮ್ಮ ಕ್ಲಿನಿಕ್‌ಗಳು ಆರಂಭವಾಗಲಿದೆ. ಪ್ರತಿ ಕ್ಲಿನಿಕ್‌ನಲ್ಲಿ ಒಬ್ಬ ವೈದ್ಯಾಧಿಕಾರಿ, ಒಬ್ಬರು ಶುಶ್ರೂಷಕರು, ಒಬ್ಬರು ಲ್ಯಾಬ್ ಟೆಕ್ನಿಷಿಯನ್, ಒಬ್ಬರು ಡಿ ಗ್ರೂಪ್ ನೌಕರ ಸೇವೆ ನೀಡಲಿದ್ದಾರೆ' ಎಂದರು.

ಎಲ್ಲಿ, ಎಷ್ಟು ಕ್ಲಿನಿಕ್‌ಗಳು?

ಬಿಬಿಎಂಪಿ ವ್ಯಾಪ್ತಿಯಲ್ಲಿ 243, ಬಾಗಲಕೋಟೆಯಲ್ಲಿ 18, ಬೆಳಗಾವಿಯಲ್ಲಿ 21, ದಕ್ಷಿಣ ಕನ್ನಡ 12, ಬಳ್ಳಾರಿ, ಗದಗ ಮತ್ತು ಕಲಬುರಗಿಯಲ್ಲಿ ತಲಾ 11, ತುಮಕೂರು, ಉಡುಪಿ,ಉತ್ತರ ಕನ್ನಡ ಮತ್ತು ವಿಜಯಪುರದಲ್ಲಿ ತಲಾ 10, ಬೆಂಗಳೂರು ಗ್ರಾಮಾಂತರದಲ್ಲಿ 9, ರಾಯಚೂರಿನಲ್ಲಿ 8, ವಿಜಯನಗರ, ಬೀದರ್, ಧಾರವಾಡ ಮತ್ತು ಮೈಸೂರಿನಲ್ಲಿ ತಲಾ 6, ಹಾಸನ, ಹಾವೇರಿಯಲ್ಲಿ ತಲಾ 5, ಚಿಕ್ಕಮಗಳೂರು, ಮಂಡ್ಯದಲ್ಲಿ ತಲಾ 4, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ಕೊಪ್ಪಳ, ರಾಮನಗರ ಮತ್ತು ಯಾದಗಿರಿಯಲ್ಲಿ ತಲಾ 3 ಹಾಗೂ ಚಿತ್ರದುರ್ಗ, ದಾವಣಗೆರೆ ಮತ್ತು ಕೊಡುಗು ಜಿಲ್ಲೆಯಲ್ಲಿ ತಲಾ ಒಂದು.

12 ಸೇವೆಗಳು ಲಭ್ಯ

'ನಮ್ಮ ಕ್ಲಿನಿಕ್'ಗಳಲ್ಲಿ 12 ರೀತಿಯ ಆರೋಗ್ಯ ಸೇವೆಗಳು ಲಭ್ಯ. ಗರ್ಭಿಣಿ ಮತ್ತು ಜನನ ಸಮಯದ ಆರೈಕೆ, ನವಜಾತ ಶಿಶುವಿನ ಸಮಗ್ರ ಆರೈಕೆ, ಬಾಲ್ಯ ಮತ್ತು ಹದಿಹರೆಯದವರಿಗೆ ಸೇವೆಗಳು, ಸಾರ್ವತ್ರಿಕ ಲಸಿಕಾಕರಣದ ಸೇವೆಗಳು, ಕುಟುಂಬ ಕಲ್ಯಾಣ ಗರ್ಭ ನಿರೋಧಕ ಸೇವೆಗಳು, ಸಾಂಕ್ರಾಮಿಕ ರೋಗಗಳ ನಿರ್ವಹಣೆ, ಸಾಮಾನ್ಯ ಮತ್ತು ಸಣ್ಣ ಪ್ರಮಾಣದ ಕಾಯಿಲೆಗಳಿಗೆ ಸೇವೆ, ಮಧುಮೇಹ, ರಕ್ತದೊತ್ತಡಕ್ಕೆ ಚಿಕಿತ್ಸೆ, ಸಕ್ಕರೆ ಕಾಯಿಲೆ, ದೀರ್ಘಾವಧಿ ಕಾಯಿಲೆಗಳು, ಬಾಯಿ, ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್, ಬಾಯಿಯ ಆರೋಗ್ಯ ಸಮಸ್ಯೆಗಳು, ಕಣ್ಣಿನ ತಪಾಸಣೆ, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಸೇವೆಗಳು ಲಭ್ಯ ಎಂದು ಆರೋಗ್ಯ ಸಚಿವ ಕೆ. ಸುಧಾಕರ್ ತಿಳಿಸಿದರು.

ಜತೆಗೆ ವೃದ್ಧಾಪ್ಯ ಆರೈಕೆ, ತುರ್ತು ವೈದ್ಯಕೀಯ ಸೇವೆಗಳು, ಉಚಿತ ಆರೋಗ್ಯ ತಪಾಸಣೆ ಸೇರಿದಂತೆ ಔಷಧಗಳು ಸಂಪೂರ್ಣ ಉಚಿತವಾಗಿ ದೊರೆಯಲಿವೆ. 14 ಪ್ರಯೋಗ ಶಾಲಾ ಪರೀಕ್ಷೆಗಳು ಇಲ್ಲಿ ಲಭ್ಯವಿದ್ದು, ಟೆಲಿ ಕನ್ಸಲ್ಟೇಷನ್ ಸರ್ವೀಸಸ್, ಕ್ಷೇಮ ಚಟುವಟಿಕೆಗಳು ಕೂಡ ಉಚಿತವಾಗಿವೆ ಎಂದು ವಿವರಿಸಿದರು.

'ಬಹುತೇಕ ಕ್ಲಿನಿಕ್‌ಗಳು ಸರ್ಕಾರಿ ಕಟ್ಟಡಗಳಲ್ಲೇ ಕಾರ್ಯನಿರ್ವಹಿಸಲಿವೆ. ಈಗಾಗಲೇ 300 ವೈದ್ಯರ ನೇಮಕವಾಗಿದ್ದು, ಕೆಲವೆಡೆ ವೈದ್ಯರ ಕೊರತೆ ಇದೆ. ಅಂತಹ ಸ್ಥಳಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡಲಾಗಿದ್ದು, ಕಡ್ಡಾಯ ಗ್ರಾಮೀಣ ಸೇವೆಯಲ್ಲಿರುವ 80ರಿಂದ 100 ವೈದ್ಯರನ್ನು ಅಲ್ಲಿಗೆ ನೇಮಿಸಲಾಗಿದೆ' ಎಂದು ತಿಳಿಸಿದರು.

'ನಮ್ಮ ಕ್ಲಿನಿಕ್‌ಗಳು ಸೋಮವಾರದಿಂದ ಶನಿವಾರದವರೆಗೆ ಬೆಳಿಗ್ಗೆ 9.30ರಿಂದ 4.30ರವರೆಗೆ ಕಾರ್ಯನಿರ್ವಹಿಸಲಿವೆ. ಭಾನುವಾರ ರಜಾ ದಿನವಾಗಿದೆ' ಎಂದು ತಿಳಿಸಿದರು.

ನವದೆಹಲಿಯಲ್ಲಿ ಸೋಮವಾರ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪಕ್ಷದ ನಾಯಕರಾದ ಸಿದ್ದರಾಮಯ್ಯ, ಕೆ.ಸಿ ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ, ಡಿ.ಕೆ.ಶಿವಕುಮಾರ್ ಅವರೊಂದಿಗೆ ಸಭೆ ನಡೆಸಿದರು. —ಪಿಟಿಐ ಚಿತ್ರ

ಮೈ ಚಳಿ ಬಿಡಿ, ಒಗ್ಗಟ್ಟು ತೋರಿ: ಖರ್ಗೆ

ಒಂದನೇ ಪುಟದಿಂದ

'ಅಧಿಕಾರಕ್ಕಾಗಿ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬಣಗಳ ನಡುವೆ ಈಗಲೇ ಕಿತ್ತಾಟ ಆರಂಭವಾಗಿದೆಎಂಬುದನ್ನು ಬಿಜೆಪಿಯು ಜನರ ಮನದಲ್ಲಿ ತುಂಬುತ್ತಿದೆ. ಈ ಗೊಂದಲವನ್ನು ಮೊದಲು ಪರಿಹರಿಸಬೇಕು. ಈ ವಿಷಯ ಪ್ರಸ್ತಾಪವಾದ ವೇಳೆ ಇಬ್ಬರು ನಾಯಕರು ಒಟ್ಟಾಗಿ ತಿರುಗೇಟು ನೀಡಬೇಕು. ಇಲ್ಲದಿದ್ದರೆ, ಬಿಜೆಪಿಯವರು ಇದನ್ನೇ ಚುನಾವಣಾ ಅಸ್ತ್ರವನ್ನಾಗಿ ಬಳಸಿಕೊಳ್ಳಲಿದ್ದಾರೆ' ಎಂದೂ ಚರ್ಚೆಯಾಯಿತು.

ಬಸ್ ಯಾತ್ರೆಗೆ ಮೊದಲು ಕನಿಷ್ಠ 150 ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಿಸಬೇಕು ಎಂದು ಹಲವು ಮುಖಂಡರು ಸಭೆಯಲ್ಲಿ ಸಲಹೆ ನೀಡಿದರು. ಪಕ್ಷದ ಚುನಾವಣಾ ಸಮಿತಿಯನ್ನು ಮಂಗಳವಾರ ಸಂಜೆಯೊಳಗೆ ಘೋಷಣೆ ಮಾಡಲಾಗುತ್ತದೆ. ಈ ಸಮಿತಿಯು ಅಭ್ಯರ್ಥಿಗಳ ಅರ್ಜಿಗಳನ್ನು ಪರಿಶೀಲನೆ ನಡೆಸಲಿದೆ. ಗೊಂದಲ ಇಲ್ಲದ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರನ್ನು ಶೀಘ್ರ ಪ್ರಕಟಿಸುವ ಕುರಿತು ಒಮ್ಮತಕ್ಕೆ ಬರಲಾಯಿತು ಎಂದು ಮೂಲಗಳು ಹೇಳಿವೆ.

75 ದಿನಗಳ ಕಾರ್ಯಸೂಚಿ: ವಿಧಾನಸಭಾ ಚುನಾವಣೆಗೆ ಪಕ್ಷವನ್ನು ಇನ್ನಷ್ಟು ಸಜ್ಜುಗೊಳಿಸಲು ಪಕ್ಷವು '75 ದಿನಗಳ ಕಾರ್ಯಸೂಚಿ' ಸಿದ್ಧಪಡಿಸಿದ್ದು, ಈ ಅವಧಿಯಲ್ಲಿ ಬಸ್ ಯಾತ್ರೆ, ಸರಣಿ ಸಮಾವೇಶ ನಡೆಸಲು ತೀರ್ಮಾನಿಸಿದೆ.

> ಕರ್ನಾಟಕ ಕಾಂಗ್ರೆಸ್‌ನಲ್ಲಿ ಯಾವುದೇ ಬಣ ಇಲ್ಲ. ಎಲ್ಲ ನಾಯಕರು ಒಗ್ಗಟ್ಟಿನಿಂದ ಇದ್ದಾರೆ.
> **ರಣದೀಪ್ ಸಿಂಗ್ ಸುರ್ಜೇವಾಲಾ**, ರಾಜ್ಯ ಕಾಂಗ್ರೆಸ್ ಉಸ್ತುವಾರಿ

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, 'ಕರ್ನಾಟಕದ ಬಿಜೆಪಿ ಸರ್ಕಾರ ಅತ್ಯಂತ ಭ್ರಷ್ಟ ಸರ್ಕಾರ. ಸರ್ಕಾರದ ಶೇ 40ರಷ್ಟು ಭ್ರಷ್ಟಾಚಾರವನ್ನು ಮನೆ ಮನೆಗಳಿಗೆ ಮುಟ್ಟಿಸಲು ಪಕ್ಷ ಕಾರ್ಯತಂತ್ರ ರೂಪಿಸಿದೆ' ಎಂದರು.

ಡಿ.30ರಂದು ವಿಜಯಪುರದಲ್ಲಿ ಭಾರಿ ಸಮಾವೇಶ ನಡೆಸಲಾಗುತ್ತದೆ. ಕೃಷ್ಣಾ ನದಿ ನೀರು ಹಂಚಿಕೆಯ ವಿಳಂಬದಿಂದ ವಿಜಯಪುರ, ಸುತ್ತ-ಮುತ್ತಲಿನ ಜಿಲ್ಲೆಗಳಿಗೆ ಆಗಿರುವ ತೊಂದರೆಗಳ ಬಗ್ಗೆ ಬೆಳಕು ಚೆಲ್ಲಲಾಗುತ್ತದೆ. ಜ. 2ರಂದು ಹುಬ್ಬಳ್ಳಿಯಲ್ಲಿ 'ಮಹದಾಯಿ' ಸಮಾವೇಶ, ಜ. 8ರಂದು ಚಿತ್ರದುರ್ಗದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಮಾವೇಶ ನಡೆಸಲಾಗುತ್ತದೆ. ಆ ಬಳಿಕ ಹಿಂದುಳಿದ ವರ್ಗಗಳ, ಮಹಿಳೆಯರ ಸಮಾವೇಶ ಏರ್ಪಡಿಸಲಾಗುತ್ತದೆ ಎಂದರು.

ಗೆಲುವಿಗೆ ಬಿಜೆಪಿ ಕಾರ್ಯತಂತ್ರ

ಒಂದನೇ ಪುಟದಿಂದ

'ಪಕ್ಷದಲ್ಲಿ ಸಂಘಟನಾತ್ಮಕವಾಗಿಯೂ ಕೆಲವು ಬದಲಾವಣೆ ಆಗುವ ಸಾಧ್ಯತೆ ಇದೆ. ಅದು ಯಾವ ಸ್ವರೂಪದ್ದು ಎಂಬುದನ್ನು ವರಿಷ್ಠರು ತೀರ್ಮಾನಿಸಲಿದ್ದಾರೆ' ಎಂದರು.

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಇದೇ 15 ರಂದು ಕೊಪ್ಪಳಕ್ಕೆ ಭೇಟಿ ನೀಡಲಿದ್ದು, ಈ ವೇಳೆ ಅವರು ವರ್ಚುವಲ್ ಆಗಿ ಕೊಪ್ಪಳ, ವಿಜಯಪುರ, ರಾಯಚೂರು, ಬಳ್ಳಾರಿ, ಬೀದರ್, ಬಾಗಲಕೋಟೆ, ಚಾಮರಾಜನಗರ, ಕೋಲಾರ, ಹಾವೇರಿ ಮತ್ತು ಗದಗಗಳಲ್ಲಿ ನಿರ್ಮಾಣ ಮಾಡಿರುವ ಪಕ್ಷದ ನೂತನ ಕಚೇರಿ ಕಟ್ಟಡಗಳನ್ನು ಉದ್ಘಾಟಿಸಲಿದ್ದಾರೆ.

ನಿಧಿ ದುರ್ಬಳಕೆಯಾದರೆ ಎಫ್‌ಐಆರ್

ಒಂದನೇ ಪುಟದಿಂದ

ಅಧಿಕಾರಿಗಳ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸರಿಯೆಂದು ಕಂಡುಬಂದರೆ, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರ ಅನುಮೋದನೆ ಪಡೆದು, ದೂರಿನ ಬಗ್ಗೆ ವಿಚಾರಣೆ ನಡೆಸುವಂತೆ ಕೋಶದ ನಿರ್ದೇಶಕರು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಅಥವಾ ಜಂಟಿ/ ಉಪ ನಿರ್ದೇಶಕರ ಶ್ರೇಣಿಯ ಅಧಿಕಾರಿಗಳಿಗೆ ವಿಚಾರಣೆ ನಡೆಸಲು ಸೂಚಿಸಲಿದ್ದಾರೆ. 90 ದಿನಗಳ ಒಳಗೆ ವಿಚಾರಣಾ ವರದಿ ಸಲ್ಲಿಸಬೇಕಿದ್ದು, ಆ ಬಳಿಕ ಸಂಬಂಧಿಸಿದ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಲಾಗುವುದು.

ನೋಟಿಸ್ ಸಿಕ್ಕಿದ 20 ದಿನಗಳ ಒಳಗೆ ಉತ್ತರ ನೀಡಬೇಕು. ಉತ್ತರಿಸದೇ ಇದ್ದರೆ ಅಥವಾ ಸಮರ್ಥನೀಯವಾದ ಕಾರಣ ಇಲ್ಲದೇ ಇದ್ದರೆ ಅಂಥ ಅಧಿಕಾರಿಗಳ ಬಗ್ಗೆ ನೋಡಲ್ ಏಜೆನ್ಸಿ ಸಭೆಗೆ ವಿಷಯ ಮಂಡಿಸಲಾಗುತ್ತಿದೆ. ಆ ಸಭೆಯಲ್ಲಿ ಶಿಸ್ತು ಕ್ರಮಕ್ಕೆ ಶಿಫಾರಸು ಮಾಡಿದರೆ ಸಂಬಂಧಿಸಿದ ಇಲಾಖೆಯ ಶಿಸ್ತು ಪ್ರಾಧಿಕಾರ ಮೂರು ತಿಂಗಳ ಒಳಗೆ ಕ್ರಮ ತೆಗೆದುಕೊಳ್ಳಬೇಕು. ದೊಡ್ಡಮಟ್ಟದಲ್ಲಿ ಕರ್ತವ್ಯಲೋಪ ಎಸಗಿದ್ದರೆ ಎಫ್‌ಐಆರ್ ದಾಖಲಿಸಲಾಗುವುದು.

ನೇರವಾಗಿ ಸಲ್ಲಿಕೆಯಾದ ದೂರುಗಳನ್ನು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ ಅಥವಾ ಜಿಲ್ಲಾಧಿಕಾರಿಗಳು ವಿಚಾರಣೆ ನಡೆಸಿ, ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗೆ ನೇರವಾಗಿ ಸಲ್ಲಿಸಬೇಕು. ಬಳಿಕ ಕಾರ್ಯದರ್ಶಿಯ ನಿರ್ದೇಶನದಂತೆ ಕಾರಣ ಕೇಳಿ ನೋಟಿಸ್ ಅಥವಾ ಶಿಸ್ತು ಕ್ರಮದ ಬಗ್ಗೆ ಕ್ರಮವಹಿಸಲಾಗುವುದು ಎಂದು ಸಮಾಜ ಕಲ್ಯಾಣ ಇಲಾಖೆ ಸುತ್ತೋಲೆ ಹೊರಡಿಸಿದೆ.

ಕರ್ನಾಟಕ ಸರ್ಕಾರ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಬೈಲಹೊಂಗಲ
ದೂರವಾಣಿ ಸಂಖ್ಯೆ:08288–236119 E-mail:cdpoblh2022@gmail.com
ಕ್ರಸಂ:ಶಿಅಯೋಬೈ:ಮಮಅಇ::ಐಸಿಡಿಎಸ್:ಮೊಟ್ಟೆ ಟೆಂಡರ:22–23 ದಿನಾಂಕ:07–12–2022

ಅಂಗನವಾಡಿ ಕೇಂದ್ರಗಳಿಗೆ ಕೋಳಿ ಮೊಟ್ಟೆ ಸರಬರಾಜು ಮರು ಇ–ಟೆಂಡರ ಪ್ರಕಟಣೆ

2022–23 ನೇ ಸಾಲಿನ ಬೈಲಹೊಂಗಲ ತಾಲೂಕಿನ ಶಿಶು ಅಬಿವೃದ್ಧಿ ಯೋಜನಾ ವ್ಯಾಪ್ತಿಯ 435 ಅಂಗನವಾಡಿ ಕೇಂದ್ರಗಳ ಫಲಾನುಭವಿಗಳ ಉಪಯೋಗಕ್ಕಾಗಿ ಕೋಳಿ ಮೊಟ್ಟೆ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಸಂಖ್ಯೆ:DWCD/2022–23/IND1835/CALL–2 ದಿನಾಂಕ : 07–12–2022 ರಂತೆ ಕೆ.ಟಿ.ಟಿ.ಪಿ. ಕಾಯ್ದೆಯನ್ವಯ ಇ–ಟೆಂಡರ ಮುಖಾಂತರ ವಿಳಾಸ:WWW.eproc.karnataka.gov.in ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ: 06–01–2023 ರ ಸಂಜೆ : 05–30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಬಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಬೈಲಹೊಂಗಲ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ದೂರವಾಣಿ ಸಂಖ್ಯೆ: 08288–236119

ಸಹಿ/–ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
DIPR/BGM/RO-NO-1362/MCA/2022-23 ಬೈಲಹೊಂಗಲ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಅಂತಿಮ ಮರುಕರೆ ಸೂಚನೆ

ಶ್ರೀ ಬಿ.ಪಿ. ನಿರಂಜನ್, ಆದ ನೀವು ಕೋರಮಂಗಲ ವಿಭಾಗ ಕಚೇರಿ, ಬೆವಿಕಂ., ಬೆಂಗಳೂರು ಇಲ್ಲಿ ಕಿರಿಯ ಸಹಾಯಕ, ಆಗಿ ಕಾರ್ಯನಿರ್ವಹಿಸುತ್ತಿರುತ್ತೀರಿ. ಹಲವು ಬಾರಿ ನೀವು ಕಾರ್ಯನಿರ್ವಹಿಸುತ್ತಿರುವ ಕೋರಮಂಗಲ ವಿಭಾಗ ಕಚೇರಿಯ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೇ ಕಚೇರಿಯ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತೀರಿ. ಈ ಸಂಬಂಧ, ನಿಮಗೆ ಕೋರಮಂಗಲ ವಿಭಾಗ ಕಚೇರಿಯಿಂದ ಎರಡು ಕಾರಣ ಕೇಳಿ ನೋಟಿಸುಗಳನ್ನು ಜಾರಿಗೊಳಿಸಲಾಗಿರುತ್ತವೆ. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೋರಮಂಗಲ ವಿಭಾಗ ರವರ ನೋಂದಣಿ ಅಂಚೆ ಪತ್ರ ಸಂಖ್ಯೆ: ಕಾನಿಇಂ(ವಿ)/ಕೋವಿ/ಲೆ/ಸಲೆ/ಸಿಸ1/3826–27 ದಿನಾಂಕ: 10.11.2021 ಈ ಪತ್ರವು **ಶ್ರೀ ಬಿ.ಪಿ ನಿರಂಜನ್,** ನಂ. 20/102, ಶ್ರೀವಾರಿ ಕಂಫರ್ಟ್ಸ್, ವಲ್ಲಭನಗರ, ದೊಡ್ಡಕಲ್ಲಸಂದ್ರ, ಬೆಂಗಳೂರು–62 ಎಂಬ ವಿಳಾಸಕ್ಕೆ ರವಾನೆಯಾಗಿರುತ್ತದೆ (ಸದರಿ ವಿಳಾಸವನ್ನು ನೀವು ಈ ಹಿಂದೆ ರಜೆ ಅರ್ಜಿಯಲ್ಲಿ ನಮೂದಿಸಿರುತ್ತೀರಿ). ಇದೇ ರೀತಿ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೋರಮಂಗಲ ವಿಭಾಗ ರವರ ನೋಂದಣಿ ಅಂಚೆ ಪತ್ರ ಸಂಖ್ಯೆ: ಕಾನಿಇಂ(ವಿ)/ಕೋವಿ/ಲೆ/ಸಲೆ/ಸಿಸ1/3824–25 ದಿನಾಂಕ: 10.11.2021 ಈ ಪತ್ರವು ಸಹಾ **ಶ್ರೀ ಬಿ.ಪಿ ನಿರಂಜನ್,** ನಂ. 3078, 8ನೇ 'ಬಿ' ಅಡ್ಡ ರಸ್ತೆ, 14ನೇ ಮುಖ್ಯ ರಸ್ತೆ, ಆರ್.ಪಿ.ಸಿ. ಲೇಔಟ್, ವಿಜಯನಗರ 2ನೇ ಹಂತ, ಬೆಂಗಳೂರು ಎಂಬ ವಿಳಾಸಕ್ಕೆ ರವಾನೆಯಾಗಿರುತ್ತದೆ (ಸದರಿ ವಿಳಾಸವನ್ನು ನಿಮ್ಮ ಸೇವಾಪುಸ್ತಕದಿಂದ ಪಡೆಯಲಾಗಿರುತ್ತದೆ). ಆದರೆ, ಎರಡೂ ಪತ್ರಗಳು ನೀವು ಸದರಿ ವಿಳಾಸದಲ್ಲಿಲ್ಲ ಎಂಬ ಷರಾದೊಂದಿಗೆ ಅಂಚೆ ಇಲಾಖೆಯಿಂದ ಹಿಂದಿರುಗಿಸಲ್ಪಟ್ಟಿರುತ್ತದೆ. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೋರಮಂಗಲ ವಿಭಾಗ ರವರ ಪತ್ರ ಸಂಖ್ಯೆ: ಕಾನಿಇಂ(ವಿ)/ಕೋವಿ/ಲೆ/ಸಲೆ/ಸಿಸ1/4930 ದಿನಾಂಕ: 30.12.2021 ರಲ್ಲಿ ನೀವು ದಿನಾಂಕ: 17.09.2021 ರಿಂದ ಅನಧಿಕೃತ ಗೈರು ಹಾಜರಾಗಿದ್ದರಿಂದ, ಜಾರಿಗೊಳಿಸಿದ ಕಾರಣ ಕೇಳಿ ನೋಟಿಸಿಗೆ ನೀಡಿದ ಸಮಜಾಯಿಷಿಗೆ ಪೂರಕವಾಗಿ ಕೆಲವು ದಾಖಲೆಗಳನ್ನು ಸಲ್ಲಿಸಲು ಸೂಚಿಸಿದ್ದ ಪತ್ರವೂ ಸಹ ಅಂಚೆ ಇಲಾಖೆಯಿಂದ ಹಿಂದಿರುಗಿಸಲ್ಪಟ್ಟಿರುತ್ತದೆ ಹಾಗೂ ಮತ್ತೆ ನೀವು ದಿನಾಂಕ: 03.08.2022 ರಿಂದ ಈವರೆಗೆ ಅನಧಿಕೃತವಾಗಿ ಗೈರು ಹಾಜರಾಗಿರುತ್ತೀರಿ.

ನೀವು ಕೋರಮಂಗಲ ವಿಭಾಗ ಕಚೇರಿಯಲ್ಲಿ ಕಿರಿಯ ಸಹಾಯಕ ಆಗಿ ಕಾರ್ಯನಿರ್ವಹಿಸುತ್ತಿದ್ದು, ನಿಮ್ಮ ಗೈರು ಹಾಜರಾತಿಯಿಂದ ಕಚೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ತೀವ್ರ ಅಡಚಣೆಯುಂಟಾಗಿರುತ್ತದೆ. ಆದ್ದರಿಂದ, ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕೋರಮಂಗಲ ವಿಭಾಗ ರವರು ಪತ್ರ ಸಂಖ್ಯೆ: ಕಾನಿಇಂ(ವಿ)/ಕೋವಿ/ಲೆ/ಸಲೆ/ಸಿಸ1/5263 ದಿನಾಂಕ: 12.01.2022 ಮತ್ತು ಪತ್ರ ಸಂಖ್ಯೆ: 1077 ದಿನಾಂಕ: 03.06.2022 ರಲ್ಲಿ ವರದಿ ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕೋರಿರುತ್ತಾರೆ.

ಆದುದರಿಂದ, ನೀವು ತಕ್ಕ ಸಮಜಾಯಿಷಿಯೊಡನೆ ಖುದ್ದಾಗಿ ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಮುಂದೆ ಮೌಖಿಕ ವಿಚಾರಣೆಗೆ ಈ ಜಾಹಿರಾತು ಪ್ರಕಟಣೆಗೊಂಡ ದಿನಾಂಕದಿಂದ 10 ದಿನಗಳ ಒಳಗಾಗಿ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮಿಂದ ಮೇಲ್ಕಾಣಿಸಿದ ಆಪಾದನೆಗಳ ಬಗ್ಗೆ ಯಾವುದೇ ತಕರಾರು ಇರುವುದಿಲ್ಲವೆಂದು ಭಾವಿಸಿ ಕವಿಪ್ರನಿನಿ ಸಿ.ಡಿ.ಸಿ ಮತ್ತು ಎ 1987 ರ ನಿಯಮಾವಳಿಗಳ ಪ್ರಕಾರ ಗಂಭೀರ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಈ ಮೂಲಕ ಸ್ಪಷ್ಟವಾಗಿ ತಿಳಿಸಲಾಗಿದೆ.

(ಎಸ್.ಟಿ. ಶಾಂತಮಲ್ಲಪ್ಪ)
ಅಧೀಕ್ಷಕ ಇಂಜಿನಿಯರ್(ವಿ) (ವಾ.ಕಾ ಮತ್ತು ಪಾ),
ಬೆ.ವಿ.ಕಂ, ಬೆಂಗಳೂರು ದಕ್ಷಿಣ ವೃತ್ತ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ
ಕಾರ್ಯ ನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ನಂ.2ನೇ ವಿಭಾಗ
ಜಾವಾ ಫ್ಯಾಕ್ಟರಿ ರಸ್ತೆ, ಹೈವೇ ಸರ್ಕಲ್ ಹತ್ತಿರ, ಮೈಸೂರು–570001
ದೂರವಾಣಿ: 0821–2410999, ಇ–ಮೇಲ್: ksdb_mys2@yahoo.com
ವೆಬ್‌ಸೈಟ್: https://ksdb.karnataka.gov.in
ಸಂಖ್ಯೆ: ಕಕೊಅಮ/ಕಾನಿ.ಇಂ/ಮೈ–ವಿ–2/ಪ.ಜಾ./2022–23/551 ದಿನಾಂಕ: 08–12–2022

ಟೆಂಡರ್ ಆಹ್ವಾನ (ಐಎಫ್‌ಟಿ) – ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕಾರ್ಯನಿರ್ವಾಹಕ ಇಂಜಿನಿಯರ್ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ನಂ.2ನೇ ವಿಭಾಗ, ಮೈಸೂರು ಇವರು ಮಂಡಳಿಯ ಆಯುಕ್ತರು, ಕಕೊಅಮ, ಬೆಂಗಳೂರು ರವರ ಪರವಾಗಿ **ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ಕೊಳಗೇರಿ ಪ್ರದೇಶಗಳಲ್ಲಿ 03 ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ** ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ **ರೂ. 42,36,211/– ಮತ್ತು** ಕನಿಷ್ಠ ಅಂದಾಜು ಮೊತ್ತ **ರೂ. 33,88,024/– ಗರಿಷ್ಠ** ಇ.ಎಂ.ಡಿ **ರೂ. 85,000/–** ಮತ್ತು **ಕನಿಷ್ಠ** ಇ.ಎಂ.ಡಿ. **ರೂ 68,000/–**. ಟೆಂಡರ್ ಪ್ರಕಟಣೆ, ವೇಳಾಪಟ್ಟಿ ಹಾಗೂ ಇತರೆ ವಿವರಗಳು ವೆಬ್‌ಸೈಟ್: **https://www.eproc.karnataka.gov.in** ನಲ್ಲಿ ಲಭ್ಯವಿರುತ್ತದೆ.

1	ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ ಮತ್ತು ಸಮಯ	15–12–2022ರ ಸಂಜೆ 4.00 ಗಂಟೆಯವರೆಗೆ.
2	ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	17–12–2022ರ ಸಂಜೆ 4.00 ಗಂಟೆಯವರೆಗೆ.
3	ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	19–12–2022ರ ಬೆಳಿಗ್ಗೆ 11.00 ಗಂಟೆಗೆ.
4	ಟೆಂಡರ್‌ಗಳನ್ನು ತೆರೆಯುವ ಹಾಗೂ ಪ್ರಿ–ಬಿಡ್ ಕಾನ್ಫರೆನ್ಸ್ ನಡೆಯುವ ಸ್ಥಳದ ವಿಳಾಸ	ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಚೇರಿ, ಕಕೊಅಮ, 2ನೇ ವಿಭಾಗ , ಹೈವೇ ಸರ್ಕಲ್ ಹತ್ತಿರ, ಜಾವಾ ಫ್ಯಾಕ್ಟರಿ ರಸ್ತೆ , ಮೈಸೂರು–570001

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಕಕೊಅಮ
DIPR/CP/3493/Yakshi/2022-23 ನಂ. 2ನೇ ವಿಭಾಗ, ಮೈಸೂರು.

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–2/ಟೆಂಡರ/2022–23/5627 ದಿನಾಂಕ:09/12/2022

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2022–23 ನೇ ಸಾಲಿಗೆ ಲೆಕ್ಕ ಶೀರ್ಷಿಕೆ 8443–ಠೇವಣಿ ವಂತಿಕೆ (ವಿವೇಕ ಯೋಜನೆ) ಅಡಿ 11 ಕಾಮಗಾರಿಗಳು ಇದ್ದು, ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 38.17 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 80.13 ಲಕ್ಷ ಇರುವ ಕಾಮಗಾರಿಗಳಿಗೆ ಗುತ್ತಿಗೆ ಆಹ್ವಾನಿಸಲಾಗಿದೆ.

ಕಾಮಗಾರಿಗಳಿಗೆ ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಆಕ್ಷೇಪಣೆ –ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:21–12–2022 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:23–12–2022 (ಸಾಯಂಕಾಲ 5.00 ಗಂಟೆಯವರೆಗೆ), 3)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Single Cover System): 26–12–2022 (ಸಾಯಂಕಾಲ 4.30 ಗಂಟೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 26–12–2022 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ"

ಕಾಮಗಾರಿಯ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜನೀಯರರು,
DIPR/BGM/RO-NO-1365/MCA/2022-23 ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.
ಪ್ರಕಟಣೆ ಸಂ: ಐಎಫ್‌ಟಿ–37/ಎಇ–2/2022–23/ ದಿನಾಂಕ:– 09.12.2022

ಇ– ಪ್ರೊಕೂರ್‌ಮೆಂಟ್ ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ ಐ.ಎಫ್.ಟಿ–37/ 2022–23 ದಿನಾಂಕ: 01.12.2022.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ಹರಿಹರ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ–2000ರನ್ವಯ ಮತ್ತು ಸ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆಡಬ್ಲೂ– 4 ರಂತೆ ಕರ್ನಾಟಕ ಸರ್ಕಾರದಇ–ಪ್ರಕ್ಯೂರ್ ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ಹರಿಹರ ತಾಲ್ಲೂಕು ಮಲೇಬೆನ್ನೂರು–ವೈಎನ್ ರಸ್ತೆಯ ಕಿ.ಮೀ. 3.00 ರಿಂದ 4.00 ಮತ್ತು 6.00 ರಿಂದ 8.30ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. (160603) ರೂ. 396.00 ಲಕ್ಷ 2) ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕು ಕಕ್ಕರಗೊಳ್ಳ–ಚಿಕ್ಕಬಿದರೆ ರಸ್ತೆ ಕಿ.ಮೀ. 11.50 ರಿಂದ 16.00ರವರೆಗೆ ಅಭಿವೃದ್ಧಿಪಡಿಸುವುದು(ಆಯ್ದ ಭಾಗಗಳಲ್ಲಿ) (160645) ರೂ. 500.00 ಲಕ್ಷ 3) ದಾವಣಗೆರೆ ಜಿಲ್ಲೆ , ಹರಿಹರ ತಾಲ್ಲೂಕು ರಾಜ್ಯ ಹೆದ್ದಾರಿ ಮಲೆಬೆನ್ನೂರುನಿಂದ ಗೋವಿನಹಾಳ್ ರಸ್ತೆ (ಹಿಂಡಸಘಟ್ಟೆ ಮೂಲಕ) ಕಿ.ಮೀ. 0.00 ರಿಂದ 8.00ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. (160467), ರೂ. 400.00 ಲಕ್ಷ, 4) ಹರಿಹರ ತಾಲ್ಲೂಕು ಭಾನುವಳ್ಳಿ –ಮುಕ್ತೇನಹಳ್ಳ (ಸಂಕ್ಲೀಪುರ ಗ್ರಾಮದ ಹತ್ತಿರ) ಕಿ.ಮೀ.17.40 ಮತ್ತು 18.00 ರಲ್ಲಿ ಸೇತುವೆ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ. (160011) ರೂ. 700.00 ಲಕ್ಷ, ಕ್ರ.ಸಂ. 1 ರಿಂದ 3ರವರೆಗಿನ ಕಾಮಗಾರಿಗಳಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 19.12.2022 ಸಂಜೆ 4.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ 20.12.2022 ಸಂಜೆ 4.30 ಗಂಟೆಯವರೆಗೆ ಕ್ರ.ಸಂ.4ರ ಕಾಮಗಾರಿಗೆ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ 27.12.2022 ಸಂಜೆ 4.00 ಗಂಟೆಯವರೆಗೆ, ಟೆಂಡರ್ ತೆರೆಯುವ ದಿನಾಂಕ 28.12.2022 ಸಂಜೆ 4.30 ಗಂಟೆಯವರೆಗೆ. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ http://eproc.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/672/ ಎಂಸಿಎ/2022–23
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ದಾವಣಗೆರೆ.

ನಗರಸಭಾ ಕಾರ್ಯಾಲಯ, ಬಿ.ಎಂ.ರಸ್ತೆ, ಹಾಸನ
ದೂ.ಸಂ: 08172–268276, 233702 Email: commn_hassan@yahoo.com
ಸಂ.ಪೌಆ/ಹಾನಸ/ಇಂ.ವಿ/ಎ.ಇ/2022–23 ದಿನಾಂಕ:12.12.2022

: ಟೆಂಡರ್ ಪ್ರಕಟಣೆ : ಇ ಪ್ರೊಕ್ಯೂರ್‌ಮೆಂಟ್ ಮೂಲಕ :

ಹಾಸನ ನಗರಸಭಾ ವ್ಯಾಪ್ತಿಯಲ್ಲಿ 2022–23 ನೇ ಸಾಲಿನ ನಗರಸಭಾ ಅನುದಾನದಡಿಯಲ್ಲಿ ವಿವಿಧ ಕಾಮಗಾಲ/ಕೆಲಸಗಳ ಅನುಷ್ಠಾನಕ್ಕಾಗಿ ಅರ್ಹ ಗುತ್ತಿಗೆದಾರರುಗಳಿಂದ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವ ಐಟಂವಾರು ದರಗಳ ಟೆಂಡರ್‌ನ್ನು ಇ– ಪ್ರಕ್ಯೂರ್‌ಮೆಂಟ್ ಮೂಲಕ ಕರೆಯಲಾಗಿದ್ದು ಗುತ್ತಿಗೆದಾರರು ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: 27/12/2022 ರ ಸಂಜೆ 5.30 ಗಂಟೆಯೊಳಗೆ ಕೆಲಸಗಳಿಗೆ ಅನ್ವಯಿಸುವ ಟೆಂಡರ್ ದಸ್ತಾವೇಜಿನ ನಿಯಮಾವಳಿಗಳಿಗೆ ಒಳಪಟ್ಟಿರುತ್ತದೆ. ಹೆಚ್ಚಿನ ವಿವರಕ್ಕಾಗಿ ನಗರಸಭೆ ಟೆಂಡರ್ ಶಾಖೆ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ನಗರಸಭೆ ಹಾಸನ ಇವರಿಂದ ಕಛೇರಿಯ ವೇಳೆಯಲ್ಲಿ ಪಡೆಯಬಹುದು ದೂರವಾಣಿ:08172–268276, ಕಾಮಗಾರಿ ವಿವರ ಕೆಳಕಂಡಂತಿದೆ. ಕ್ರ.ಸಂ.1)ಕಾಮಗಾರಿಯ ಹೆಸರು: ಹಾಸನ ನಗರಸಭಾ ವ್ಯಾಪ್ತಿಯ ವಾರ್ಡ್ ಸಂ:2,5,6,7,10 ಮತ್ತು 16 ರಲ್ಲಿ 375 ಎಂ.ಎಂ ಮತ್ತು 500 ಎಂ.ಎಂ ವ್ಯಾಸದ ಪಿ.ಎಸ್.ಸಿ ಪೈಪ್ ಲೈನ್ ಏರು ಕೊಳವೆಯ ಲೀಕೇಜ್ ದುರಸ್ತಿ ಕಾಮಗಾರಿ. (Indent No: (DMA/2022-23/OW/WORK_INDENT141345) ಅಂದಾಜು ಮೊತ್ತ (ರೂಗಳಲ್ಲಿ): 42.00 ಇ.ಎಂ.ಡಿ (ರೂಗಳಲ್ಲಿ): 84,000.00 ಕಾಲಾವಧಿ: 2 ತಿಂಗಳು (ಮಳೆಗಾಲ ಹೊರತು ಪಡಿಸಿ) ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಡಬ್ಲ್ಯೂ–2 2)ಹಾಸನ ನಗರಸಭಾ ವ್ಯಾಪ್ತಿಯ ವಾರ್ಡ್ ನಂ:34 ರಲ್ಲಿ ಚನ್ನಪಟ್ಟಣ ಹೌಸಿಂಗ್ ಬೋರ್ಡ್ ಹತ್ತಿರ ಸ್ವಚ್ಛ ಗೃಹ ಕಲಿಕಾ ಕೇಂದ್ರ ನಿರ್ಮಾಣ ಕಾಮಗಾರಿ, (DMA/2022-23/BD/WORK_INDENT142290) ಅಂದಾಜು ಮೊತ್ತ (ರೂಗಳಲ್ಲಿ): 30.00 ಇ.ಎಂ.ಡಿ (ರೂಗಳಲ್ಲಿ): 60,000.00 ಕಾಲಾವಧಿ: 6 ತಿಂಗಳು (ಮಳೆಗಾಲ ಹೊರತು ಪಡಿಸಿ) ಅನ್ವಯಿಸುವ ಟೆಂಡರ್ ದಾಸ್ತಾವೇಜು: ಕೆ.ಡಬ್ಲ್ಯೂ–2 ಸೂಚನೆ:– ಮೇಲ್ಕಾಣಿಸಿದ ದಿನಾಂಕಗಳಲ್ಲಿ ಸಾರ್ವತ್ರಿಕ ರಜೆ ಎಂದು ಘೋಷಣೆ ಮಾಡಿದ್ದಲ್ಲಿ ರಜಾ ದಿನದ ಮುಂದಿನ ಏನಾಂಕವನ್ನು ಪರಿಗಣಿಸತಕ್ಕದ್ದು.

ಸಹಿ/– ಅಧ್ಯಕ್ಷರು, ನಗರಸಭೆ, ಹಾಸನ. ಸಹಿ/– ಪೌರಾಯುಕ್ತರು, ನಗರಸಭೆ, ಹಾಸನ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/820/2022–23

ಪ್ರಧಾನ ಇಂಜನಿಯರ್ ರವರ ಕಛೇರಿ
ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ (PRAMC)
4ನೇ ಮಹಡಿ, ಪಿ.ಡಬ್ಲ್ಯೂ.ಡಿ ಅನೆಕ್ಸ್ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು–560001
ಸಂ.: ಲೋಇ/40/PRAMC/2022–23/939 ದಿನಾಂಕ: 12/12/2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ದಾವಣಗೆರೆ ಜಿಲ್ಲೆಯ 01 ಮತ್ತು ಕಲ್ಬುರ್ಗಿ ಜಿಲ್ಲೆಯ 01 ರಸ್ತೆ ಸುರಕ್ಷತಾ ಕಾಮಗಾರಿಗಳಿಗೆ ಕಾರ್ಯಪಾಲಕ ಇಂಜಿನಿಯರ್, ಪಿ.ಆರ್.ಎ.ಎಂ.ಸಿ. ರವರು ರಾಜ್ಯಪಾಲರ ಪರವಾಗಿ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಿರುತ್ತಾರೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಇ–ಪ್ರೊಕ್ ನಿಂದ (www.eproc.karnataka.gov.in) ದಿನಾಂಕ: 13/12/2022 ಅಪರಾಹ್ನ 04:30 ರಿಂದ ಪಡೆಯಬಹುದಾಗಿರುತ್ತದೆ.

ವಾ.ಸಾ.ಸಂ.ಇ/ವಾಪ್ರ/3490/ಆಕಾರ್/22–23
ಸಹಿ/– ಕಾರ್ಯಪಾಲಕ ಇಂಜಿನಿಯರ್
ಯೋ.ರ.ಆ.ನಿ.ಕೇಂದ್ರ, ಲೋಇ, ಬೆಂಗಳೂರು

ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಹಾವೇರಿ

ಇ–ಟೆಂಡರ್ ಪ್ರಕಟಣೆ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/5054/2022–23/6725/ದಿನಾಂಕ 12–12–2022

ದಿನಾಂಕ: **12–12–2022** ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 162304 ರ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕಃ **19–12–2022 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ)** ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.eproc.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕೆ.ರಮೇಶ
ಕಾರ್ಯನಿರ್ವಾಹಕ ಇಂಜನೀಯರರು,
ವಾ.ಸಾ.ಇ/ಹಾವೇರಿ/430/2022–23/ದೇಶಪಾಂಡೆಪಬ್ಲಿಸಿಟಿ ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜನೀಯರವರ ಕಛೇರಿ,
ಕನೀನಿನಿ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ–1, ಮುಂಡರಗಿ, ಗದಗ ಜಿಲ್ಲೆ. Ph No: 08371 – 262174
Ref No. KNNL/EE/SLIS/MDG/2022-23/1226 Date: 28.11.2022

SHORT TERM TENDER NOTIFICATION (ONLY THROUGH "*e-Procurement*" SYSTEM)

ಸಿಂಗಟಾಲೂರು ಏತ ನೀರಾವರಿ ಯೋಜನೆ ವಿಭಾಗದಡಿ ಬರುವ ಸಿಂಗಟಾಲೂರು ಏತ ನೀರಾವರಿ ಯೋಜನೆ ಉಪ–ವಿಭಾಗ ನಂ,1 ಸಿಂಗಟಾಲೂರು ಕಛೇರಿಯ ವ್ಯಾಪ್ತಿಗೆ ಬರುವ ಶಿರಹಟ್ಟಿ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳಿಗೆ ಉಲ್ಲೇಖ (1) ರನ್ವಯ ಕಾಮಗಾರಿ **Indent No- 34673** ಟೆಂಡರ್‌ನ್ನು ಆಹ್ವಾನಿಸಲಾಗಿದ್ದು, ಟೆಂಡರ್‌ಗಳನ್ನು "e-Procurement" Portal ಮುಖಾಂತರ ಸಲ್ಲಿಸಬಹುದಾಗಿರುತ್ತದೆ. ಮುಂದುವರೆದು ಸದರಿ ಕಾಮಗಾರಿಗಳ ಹೆಸರು, ಟೆಂಡರ್‌ಗಿಟ್ಟ ಮೊತ್ತ, ಇ.ಎಂ.ಡಿ ಹಾಗೂ ಇನ್ನಿತರೆ ಷರತ್ತುಗಳ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಪಡೆಯಬಹುದಾಗಿರುತ್ತದೆ ಹಾಗೂ ದಿನಾಂಕ: **05.12.2022**ರ ನಂತರ "eproc.karnataka.gov.in", ಈ ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಳಿಗೆ ಬಿಡ್ಡನ್ನು ಸಲ್ಲಿಸಲು ಕೊನೆಯ ದಿನಾಂಕ: **17.12.2022** ಇನ್ನಿತರೆ ಹೆಚ್ಚಿನ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಕ.ನೀ.ನಿ.ನಿ., ಸಿಂ.ಏ.ನೀ.ಯೋ., ವಿಭಾಗ–01, ಮುಂಡರಗಿ
ವಾಸಾಸಂಇ/ಗದಗ/ಎಂ.ಸಿ.ಎ/495/2022–23

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ
ಉಗ್ರಾಣ ಮತ್ತು ಖರೀದಿ ಇಲಾಖೆ, ಶಾಂತಿನಗರ, ಬೆಂಗಳೂರು–560027
ಸಂ.: KST/CO/S&P/SSD/1656/2022-23 ದಿನಾಂಕ: 10.12.2022

"ಇ–ಹರಾಜು ಪ್ರಕಟಣೆ"

ಕ.ರಾ.ರ.ಸಾ. ನಿಗಮದ ನಿರುಪಯುಕ್ತ ವಾಹನಗಳು ಮತ್ತು ವಸ್ತುಗಳನ್ನು **ಮೆ॥ ಎಂ.ಎಸ್.ಟಿ.ಸಿ. (ಭಾರತ ಸರ್ಕಾರದ ಅಧೀನ ಸಂಸ್ಥೆ)** ಇವರು ನಡೆಸುವ ಇ–ಹರಾಜು ಮೂಲಕ ಮಾರಾಟ ಮಾಡಲಾಗುವುದು.

ನಿರುಪಯುಕ್ತ ವಾಹನಗಳು ಇ–ಹರಾಜು ಪ್ರಾರಂಭ ದಿನಾಂಕ : 21.12.2022
ನಿರುಪಯುಕ್ತ ವಸ್ತುಗಳು ಇ–ಹರಾಜು ಪ್ರಾರಂಭ ದಿನಾಂಕ : 22.12.2022

ಆಸಕ್ತಿಯುಳ್ಳ ಬಿಡ್ಡುದಾರರು ವೆಬ್‌ಸೈಟ್: **www.mstcecommerce.com** ಗೆ ಲಾಗ್‌ಆನ್ ಆಗಬಹುದು ಮತ್ತು ಹೆಚ್ಚಿನ ವಿವರಗಳನ್ನು ಈ ಕೆಳಕಂಡ ವಿಳಾಸದಿಂದ ಪಡೆಯಬಹುದು.

ಕಛೇರಿ ವಿಳಾಸ:

ಮೆ॥ ಎಂ.ಎಸ್.ಟಿ.ಸಿ. ಲಿಮಿಟೆಡ್, ನಂ. 19/5, 19/6, ಮೂರನೇ ಮಹಡಿ, ಕರೀಮ್ ಟವರ್, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು–560052. ದೂರವಾಣಿ ಸಂ.: **080–22260054, 22266417, 22287356,** ಫ್ಯಾಕ್ಸ್ **080–22256365.**

ಕೆ.ಎಸ್.ಆರ್.ಟಿ.ಸಿ. ರವರನ್ನು ಸಂಪರ್ಕಿಸುವ ದೂರವಾಣಿ ಸಂಖ್ಯೆ: **+91 7760990221/224** ಅಥವಾ **080–22221321 ವಿಸ್ತರಣೆ 298.**

ಸಹಿ/–,
ವಾಸಾಸಂಇ/ವಾಪ್ರ/ಎಲ್‌ಸಿ/3487/2022–23 ಉಗ್ರಾಣ ಮತ್ತು ಖರೀದಿ ನಿಯಂತ್ರಣಾಧಿಕಾರಿ

ಕ್ಷೇಮ ಕುಶಲ

ಪ್ರಕೃತಿಯಲ್ಲಿದೆ ಆರೋಗ್ಯ

ಎಲ್ಲರಿಗೂ ಒಳ್ಳೆಯ ಆರೋಗ್ಯ ದಕ್ಕಬೇಕು ಎಂಬ ಆಶಯದೊಂದಿಗೆ ಪ್ರತಿ ವರ್ಷವೂ ಡಿಸೆಂಬರ್ 12ರಂದು 'ಇಂಟರ್‌ನ್ಯಾಷನಲ್ ಯೂನಿವರ್ಸಲ್ ಹೆಲ್ತ್ ಕವರೇಜ್ ಡೇ' ಆಚರಿಸುತ್ತಿದ್ದೇವೆ. ಪ್ರಕೃತಿಯೊಂದಿಗೆ ಸಹಜೀವನದಲ್ಲಿ ನಮ್ಮ ಆರೋಗ್ಯದ ಗುಟ್ಟು ಅಡಗಿದೆ ಅಲ್ಲವೆ?

ಕೃಷ್ಣಿ ಶಿರೂರ

ಆರೋಗ್ಯವೇ ಭಾಗ್ಯ. ಇಂಥ ಅಮೂಲ್ಯ ಮಾತಿನ ಮೌಲ್ಯ ನಮ್ಮರಿವಿಗೆ ಬರುವುದು ಆರೋಗ್ಯ ಕೈಕೊಟ್ಟಾಗ ಮಾತ್ರ. ಇಂದಿನ ಒತ್ತಡ ಭರಿತ ಬದುಕು, ಕಲುಷಿತ ಆಹಾರ, ಜೀವನಕ್ರಮ - ಇವೆಲ್ಲ ನಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಎಲ್ಲೆಡೆ ಎದ್ದು ಕಾಣುತ್ತಿದೆ. ಆರೋಗ್ಯ ಹದಗೆಟ್ಟಾಗ ಜೀವಾವಧಿ ಔಷಧ, ಗುಳಿಗೆಗಳ ಮೊರೆ ಹೋಗುತ್ತಿದ್ದೇವೆ. ಆಹಾರವೇ ಔಷಧವಾಗಬೇಕು ಎಂಬ ಮಾತನ್ನು ಮೀರಿ ಔಷಧವೇ ಆಹಾರವಾಗುತ್ತಿರುವುದು ಇಂದಿನ ವಿಪರ್ಯಾಸ. ತಿನ್ನುವ ಗುಳಿಗೆಗಳು ಸಮಸ್ಯೆಗೆ ಪರಿಹಾರ ನೀಡಿದರೂ ಅವು ಇನ್ನೊಂದು ಸಮಸ್ಯೆಗೂ ದಾರಿ ಮಾಡಿಕೊಡುವುದನ್ನು ನೋಡುತ್ತಿದ್ದೇವೆ. ಹಾಗಾದರೆ ಆರೋಗ್ಯವನ್ನು ದುಷ್ಪರಿಣಾಮವಿಲ್ಲದೆ ಕಾಪಾಡಿಕೊಳ್ಳುವ ಬಗೆ ಇಲ್ಲವೆ ಎಂಬ ಪ್ರಶ್ನೆಗೆ ಉತ್ತರ ಇರುವುದು ನಮ್ಮ ಪ್ರಕೃತಿಯಲ್ಲಿಯೇ. ಅಂಥ ಸಮೃದ್ಧ ಆರೋಗ್ಯಕ್ಕಾಗಿ ನಾವು ಪ್ರಕೃತಿಯ ಮೊರೆ ಹೋಗಬೇಕಷ್ಟೆ. ಅಂದರೆ ಮರಳಿ ಪ್ರಕೃತಿಗೆ....

ಪ್ರಕೃತಿ ಎಂದರೆ ಭೂಮಿ, ಸೂರ್ಯ, ಗಾಳಿ, ನೀರು, ಮಣ್ಣು ಎಂಬುದು ಎಲ್ಲರಿಗೂ ತಿಳಿದೇ ಇದೆ. ಪ್ರಕೃತಿ ಜೊತೆ ಸಖ್ಯ ಬೆಳೆಸಿದರೆ ನಮ್ಮ ಆರೋಗ್ಯ ಕಾಯ್ದುಕೊಳ್ಳುವಲ್ಲಿ ಸಂದೇಹವೇ ಇರದು. ಯಾವ್ಯಾವುದೋ ಆರೋಗ್ಯ ಸಮಸ್ಯೆಗಳಿಗಾಗಿ ನಾವು ಗುಳಿಗೆಗಳ ರೂಪದಲ್ಲಿ ಔಷಧಗಳನ್ನು ಸೇವಿಸುತ್ತೇವೆ. ಹೀಗೆ ಸೇವಿಸುವ ಔಷಧಗಳಿಗೆ ಪರ್ಯಾಯ ಔಷಧಗಳು ನಮಗೆ ಪ್ರಕೃತಿಯಲ್ಲೇ ಸಿಗಲಿದೆ. ಅದನ್ನು ಪಡೆಯಲು ನಾವು ಪ್ರಕೃತಿಯೊಂದಿಗೆ ಬೆರೆಯಬೇಕಷ್ಟೆ. ಪ್ರಕೃತಿ ಔಷಧಗಳನ್ನು ನೀಡಲು ಹಣವನ್ನು ಕೇಳಲ್ಲ. ಬದಲಿಗೆ ನಿಮ್ಮ ಮನದಲ್ಲಿ ಒಂದಷ್ಟು ಜಾಗ, ಒಂದಷ್ಟು ಸಮಯ. ನಮ್ಮ ಆರೋಗ್ಯ ಹದಗೆಡದಂತೆ ಸದೃಢವಾಗಿಟ್ಟುಕೊಳ್ಳಲು ಒಂದಷ್ಟು ಸಮಯ ಕೊಟ್ಟರೆ ಆರೋಗ್ಯವನ್ನು ಕಾಪಿಡಬಹುದು; ದೀರ್ಘಾಯುಗಳಾಗಿರಬಹುದು.

ಹಾಗಾದರೆ ಪ್ರಕೃತಿಯೊಂದಿಗೆ ನಮ್ಮ ಒಪ್ಪಂದ ಹೇಗಿರಬೇಕು? ಬೆಳಿಗ್ಗೆ ಎದ್ದು ಶೌಚ ಮುಗಿಸಿ ಒಂದು ಲೀಟರ್ ನೀರನ್ನು ಕುಡಿಯುವ ಅಭ್ಯಾಸ ಮಾಡಿಕೊಳ್ಳಿ. ಉಗುರು ಬೆಚ್ಚಗಿನ ನೀರಾದರೆ ಇನ್ನೂ ಉತ್ತಮ. ಹೀಗೆ ಜಲಸೇವನೆ ನಮ್ಮ ಜೀರ್ಣಾಂಗ ವ್ಯವಸ್ಥೆಯನ್ನು ಸರಿಯಾಗಿಡಲಿದೆ. ನಂತರ ನೇಸರನ ಎಳೆ ಕಿರಣಗಳ ಜೊತೆಗೆ ಒಡನಾಡಿ. ಅಂದರೆ ಬೆಳಿಗ್ಗೆ 8 ಗಂಟೆಯೊಳಗಿನ ಬಿಸಿಲಲ್ಲಿ ಓಡಾಡುವುದು ವಿಟಮಿನ್ ಡಿ ಸುಲಭವಾಗಿ ಸಿಗಲಿದೆ. ನಮ್ಮ ಎಲುಬಿಗೆ ವಿಟಮಿನ್ ಡಿ ಅತಿ ಅಗತ್ಯ. ಹೀಗೆ ಸೂರ್ಯನ ಜೊತೆ ಒಡಾಡುವ ಸಮಯದಲ್ಲಿ ವ್ಯಾಯಾಮಕ್ಕೆ ಅವಕಾಶವಿದ್ದಲ್ಲಿ ಹಗುರ ವ್ಯಾಯಾಮ ಮಾಡಿಕೊಳ್ಳಿ. ಅನುಲೋಮ-ವಿಲೋಮ, ಕಪಾಲಬಾತಿ, ಭ್ರಾಮರಿ ಪ್ರಾಣಾಯಾಮಗಳನ್ನು ಮಾಡಿ. ಸೂರ್ಯನಮಸ್ಕಾರ ಸಮೇತ ಒಂದಷ್ಟು ಯೋಗಾಸನಗಳನ್ನು ಮಾಡಿ.

ಬೆಳಗಿನ ನಡಿಗೆಯಿಂದ ಮನಸ್ಸು ಉಲ್ಲಸಿತವಾಗಲಿದೆ. ಪ್ರಾಣಾಯಾಮಗಳು ದೇಹಕ್ಕೆ ಅಗತ್ಯ ಆಮ್ಲಜನಕವನ್ನು ಪೂರೈಸಲಿದೆ. ಧ್ಯಾನ ಮನಸ್ಸನ್ನು ಪ್ರಶಾಂತಗೊಳಿಸಲಿದೆ. ಭ್ರಾಮರಿ ಪ್ರಾಣಾಯಾಮ ಮನಸ್ಸಿನ ಒತ್ತಡವನ್ನು ನಿಯಂತ್ರಿಸಿ ಮನಸ್ಸನ್ನು ಹಗುರಗೊಳಿಸಲಿದೆ. ಮನಸ್ಸು ದೇಹ ಒಂದು ನಾಣ್ಯದ ಎರಡು ಮುಖಗಳು. ಮನಸ್ಸು ಸದಾ ಹಗುರವಾಗಿದ್ದಲ್ಲಿ ಮಾನಸಿಕ ಸ್ವಾಸ್ಥ್ಯ ವೃದ್ಧಿಸಲಿದೆ. ಮನಸ್ಸು ಸ್ವಸ್ಥವಾಗಿದ್ದಲ್ಲಿ ದೈಹಿಕವಾಗಿ ಆರೋಗ್ಯವಾಗಿರಬಹುದು. ಯೋಗಾಸನಗಳು ದೇಹವನ್ನು ಸದೃಢವಾಗಿಡಲಿವೆ. ನಿತ್ಯ ರಾತ್ರಿ ಊಟ ಹಾಗೂ ಬೆಳಗಿನ ಉಪಾಹಾರ ನಡುವೆ ಕನಿಷ್ಠ 12ಗಂಟೆಗಳ ಅಂತರವಿಡಿ. ಹೀಗೆ 12 ತಾಸು ಹೊಟ್ಟೆ ಉಪವಾಸದಲ್ಲಿದ್ದರೆ ದೇಹದಲ್ಲಿ ಕೆಟ್ಟ ಕೋಶಗಳ ಉತ್ಪತ್ತಿಗೆ ಅವಕಾಶವಿರದು. ವಾರಕ್ಕೊಮ್ಮೆ ಇಲ್ಲವೆ ತಿಂಗಳಿಗೊಮ್ಮೆ ದಿನಪೂರ್ತಿ ಉಪವಾಸ ಮಾಡುವುದರಿಂದಲೂ ಅದು ಆರೋಗ್ಯವೃದ್ಧಿಯ ಭಾಗವಾಗಲಿದೆ. ಆಗಾಗ ಚಾರಣ ನಡೆಸಿ. ಕಾಡು-ಮೇಡು ನದಿಯಲ್ಲಿ ಓಡಾಟ ನಮ್ಮನ್ನು ಮಾನಸಿಕವಾಗಿ ದೈಹಿಕವಾಗಿ ಪ್ರಫುಲ್ಲಗೊಳಿಸಲಿದೆ. ಆಯಾಸದ ಬದಲು ಮೈಮನಗಳನ್ನು ಚೇತೋಹಾರಿಗೊಳಿಸಲಿದೆ. ಜೊತೆಗೆ ನಮ್ಮ ಕುಟುಂಬ, ಇಲ್ಲವೆ ಉತ್ತಮ ಸ್ನೇಹಿತರ ಬಳಗವಿದ್ದರೆ ಇನ್ನೂ ಉತ್ತಮ. ಚಾರಣವು ದೇಹಕ್ಕೆ ವ್ಯಾಯಾಮದ ಜೊತೆ ಮನಸ್ಸಿಗೆ ಮುದ ನೀಡಲಿದೆ. ಬಂಧು, ಸ್ನೇಹಿತರ ಒಡನಾಟ, ನಗು, ಬಾಂಧವ್ಯವನ್ನು ಇಮ್ಮಡಿಗೊಳಿಸಲಿದೆ. ನಗುವಿನಲ್ಲೂ ಆರೋಗ್ಯವಿದೆ ಎಂಬುದನ್ನು ಆಗಾಗ ನೆನಪಿಸಿಕೊಳ್ಳಿ. ಮುಕ್ತವಾಗಿ ನಕ್ಕು ಮನಸ್ಸನ್ನು ಹಗುರಾಗಿಸಿಕೊಳ್ಳಿ.

ಮನೆಯಲ್ಲಿ ಪುಟ್ಟದಾದರೂ ಕೈತೋಟ/ಉದ್ಯಾನವಿರಲಿ. ಅದು ಮನೆ ಹೊರಗಿದ್ದರೂ ಸರಿ. ಬಾಲ್ಕನಿಯಲ್ಲಾದರೂ ಸರಿ. ಅದರಲ್ಲಿ ಇಷ್ಟದ ಹೂವಿನ ಗಿಡ, ಆಲಂಕಾರಿಕ ಗಿಡಗಳನ್ನು ಬೆಳೆಸಿ ಪ್ರೀತಿಯಿಂದ ಪೋಷಿಸಿ. ಅದರಿಂದ ಸಿಗುವ ಖುಷಿಗೆ ಬೆಲೆಕಟ್ಟಲಾಗದು. ಅದನ್ನು ಅನುಭವಿಸಿಯೇ ಅರಿಯಬೇಕು. ಈಗೆಲ್ಲ ಈಗೆಲ್ಲ ಮನೆಯೊಳಗೆ ಇಂಡೋರ್ ಪ್ಲಾಂಟ್ ಬೆಳೆಸುವುದು ಟ್ರೆಂಡ್ ಆಗುತ್ತಿದೆ. ಆಮ್ಲಜನಕವನ್ನು ನೀಡುವ ಇಂಡೋರ್ ಪ್ಲಾಂಟ್‌ಗಳು ಮನೆಯೊಳಗೆ ಹಸಿರ ವಾತಾವರಣ ನಿರ್ಮಿಸಿ ಮೈಮನಕ್ಕೆ ತಂಪು ಎರೆಯಲಿದೆ.

ಇಲ್ಲಿ ಹೇಳಲಾದ ನೀರು, ಗಾಳಿ, ಸೂರ್ಯ, ನದಿ, ಕಾಡು, ಹೂವಿನ ಗಿಡ, ಧ್ಯಾನ, ಯೋಗ, ಕುಟುಂಬ, ಸ್ನೇಹಿತರ ಬಳಗ - ಹೀಗೆ ಎಲ್ಲವೂ ಆರೋಗ್ಯವನ್ನು ವೃದ್ಧಿಸುವ ಔಷಧಗಳಾಗಿ ಕೆಲಸ ಮಾಡಲಿವೆ. ಮತ್ತೇಕೆ ತಡ; ಇಂದಿನಿಂದಲೇ ಪ್ರಕೃತಿಯೊಂದಿಗೆ ಗಟ್ಟಿ ಗೆಳೆತನ ಬೆಳೆಸಿ. ನಿಮ್ಮನ್ನು ಪ್ರೀತಿಸಿ. ಪ್ರಕೃತಿಯನ್ನು ಪ್ರೀತಿಸಿ. ಮರಳಿ ಪ್ರಕೃತಿಯೆಡೆಗೆ ಸಾಗಿ.

'ನಿಸರ್ಗಮನೆ'ಯ ಆರಂಕಿ ಸೂತ್ರಗಳು

ಉತ್ತಮ ಆರೋಗ್ಯಕ್ಕಾಗಿ ಶಿರಸಿಯ 'ನಿಸರ್ಗಮನೆ'ಯ ಡಾ. ವೆಂಕಟ್ರಮಣ ಹೆಗಡೆಯವರು ಆರಂಕಿ ಸೂತ್ರದ ಸಲಹೆ ನೀಡಿದ್ದಾರೆ. ಅದೇನೆಂದರೆ: 642211. ಇದರಲ್ಲಿ 6, ಅಂದರೆ ದಿನಕ್ಕೆ ಕನಿಷ್ಠ ತಾಸು ನಿದ್ರೆ ಮಾಡಬೇಕು. 4, ಅಂದರೆ 3-4 ಲೀಟರ್ ನೀರು ಕುಡಿಯಬೇಕು. 2, ಅಂದರೆ ದಿನಕ್ಕೆ ಎರಡು ಸಮಯ ಆಹಾರ ಸೇವಿಸಬೇಕು. 2, ಅಂದರೆ ದಿನಕ್ಕೆ ಎರಡು ಬಾರಿ (ಬೆಳಿಗ್ಗೆ ಹಾಗೂ ರಾತ್ರಿ) ಪ್ರಾರ್ಥನೆ ಮಾಡಬೇಕು. 1, ಅಂದರೆ ವಾರಕ್ಕೆ ಒಂದು ದಿನ ಉಪವಾಸ (ಹಣ್ಣು ಅಥವಾ ಹಣ್ಣುಗಳ ರಸಸೇವನೆ, ಮಜ್ಜಿಗೆ ಸೇವನೆ ಮಾತ್ರ) ಮಾಡಬೇಕು. 1, ಅಂದರೆ ದಿನಕ್ಕೆ ಒಂದು ತಾಸು ಯೋಗಾಭ್ಯಾಸ ಮಾಡಬೇಕು. ನಮ್ಮ ಆರೋಗ್ಯ ಪ್ರಕೃತಿಯಲ್ಲೇ ಇದೆ. ಅದನ್ನು ನಾವು ಪ್ರಕೃತಿಯಿಂದ ಪಡೆದುಕೊಳ್ಳಬೇಕು.





ಆರೋಗ್ಯವೆಂದರೆ ಕೇವಲ ಕಾಯಿಲೆ ಅಥವಾ ವಿಕಲತೆಗಳಿಲ್ಲದ ಸ್ಥಿತಿಯಷ್ಟೆ ಅಲ್ಲ; ಅದು ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸುಸ್ಥಿತಿ...

ಆರೋಗ್ಯವರ್ಧನೆಗೆ ಬೇಕು ಸಂತೋಷದ ಮದ್ದು

ಡಾ. ಕವಿತಾ ಸದಾಶಿವ

ಕಸ್ತೂರಿಮೃಗ ತನ್ನ ಹೊಕ್ಕಳೊಳಗೆ ಸುವಾಸನೆಯನ್ನು ಇಟ್ಟುಕೊಂಡು, ಜಗದಲೆಲ್ಲಾ ಅದನ್ನು ಹುಡುಕಾಡುವಂತೆ ಮನುಷ್ಯರೂ ತನ್ನಲ್ಲೇ ಅಡಗಿರುವ ಸಂತೋಷವನ್ನು ಬಾಹ್ಯ ಜಗತ್ತಿನಲ್ಲಿ ಇಂದು ಹುಡುಕುತ್ತಿದ್ದಾರೆ. ಈ ಹುಡುಕಾಟದಲ್ಲಿ ನಿರಾಶೆ, ಅತೃಪ್ತಿ, ಅಶಾಂತಿ, ಖಿನ್ನತೆಗೊಳಗಾಗಿ ಅನವಶ್ಯಕ ಔಷಧಗಳನ್ನು ಮತ್ತು ಮಾದಕ ವಸ್ತುಗಳನ್ನು ಸೇವಿಸುತ್ತಿದ್ದಾರೆ.

ಆರೋಗ್ಯವೆಂದರೆ ಕೇವಲ ಕಾಯಿಲೆ ಅಥವಾ ವಿಕಲತೆಗಳಿಲ್ಲದ ಸ್ಥಿತಿಯಷ್ಟೆ ಅಲ್ಲ; ಅದು ದೈಹಿಕ, ಮಾನಸಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸುಸ್ಥಿತಿ ಎಂದು ವಿಶ್ವ ಆರೋಗ್ಯ ಸಂಸ್ಥೆಯು ವ್ಯಾಖ್ಯಾನಿಸಿದೆ. ಸುಸ್ಥಿತಿ ಎಂದರೆ ಸಂತೋಷ, ಶಾಂತಿ ಮತ್ತು ಸಮಾಧಾನದ ಸ್ಥಿತಿ ಎಂದರ್ಥ. ಈ ಸುಸ್ಥಿತಿಯಲ್ಲಿ ಡೋಪಮಿನ್, ಸೆರೆಟೋನಿನ್, ಎಂಡಾರ್ಫಿನ್, ಆಕ್ಸಿಟೋಸಿನ್ ಎಂಬ ರಸದೂತಗಳು (ಹಾರ್ಮೋನ್‌ಗಳು) ನಮ್ಮ ದೇಹದಲ್ಲೇ ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗಿ, ದೇಹದ ಸಹಜಕ್ರಿಯೆಗಳಿಗೆ ಪೂರಕವಾಗಿ, ಅದರಿಂದ ನಮ್ಮ ಆರೋಗ್ಯ ವೃದ್ಧಿಯಾಗುತ್ತದೆ. ಆದರೆ ಅಸಂತೋಷದ ಸ್ಥಿತಿಯಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗುವ ಅಡ್ರಿನಲಿನ್, ನಾರ್ ಅಡ್ರಿನಲಿನ್, ಸ್ಟಿರಾಯಿಡ್ ಇತ್ಯಾದಿ ರಸದೂತಗಳು ದೇಹದ ಸಹಜ ಕ್ರಿಯೆಗಳನ್ನು ಅಸ್ತವ್ಯಸ್ಥಗೊಳಿಸಿ ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಈ ಕುರಿತು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ 75 ವರ್ಷಗಳ ಸುದೀರ್ಘ ಸಂಶೋಧನೆ ನಡೆದಿದ್ದು, ಸಂತೋಷವಾಗಿರುವ ಜನರು ಆರೋಗ್ಯವಂತರಾಗಿರುವುದಲ್ಲದೆ ದೀರ್ಘ ಆಯುಷ್ಯವನ್ನೂ ಉತ್ತಮ ಬಾಂಧವ್ಯವನ್ನೂ ಹೊಂದಿರುತ್ತಾರೆ ಎಂದು ಸಾಬೀತಾಗಿದೆ.

ಇಂದಿನ ಒತ್ತಡದ ಹಾಗೂ ಧಾವಂತದ ಬದುಕಿನಲ್ಲೂ ನಮ್ಮ ದೈನಂದಿನ ಚಟುವಟಿಕೆಗಳನ್ನು ಸರಿಯಾಗಿ ನಿರ್ವಹಿಸಿ ನಮ್ಮಲ್ಲೇ ಅಡಗಿರುವ ಸಂತೋಷದ ರಸದೂತಗಳನ್ನು ಹೆಚ್ಚಿಸಿಕೊಳ್ಳೋಣ. ಈ ಕೆಲವೊಂದು ಅಂಶಗಳತ್ತ ಗಮನವನ್ನು ಕೊಡೋಣ:

1. ಆಹಾರ: ನಾವು ಸೇವಿಸುವ ಆಹಾರ ನಮ್ಮ ಶರೀರ ಮತ್ತು ಮನಸ್ಸಿನ ಆರೋಗ್ಯದ ಮೇಲೆ ಅತ್ಯಂತ ಪ್ರಭಾವ ಬೀರುತ್ತದೆ. ಹಿತ-ಮಿತವಾದ ಸಾತ್ವಿಕ ಆಹಾರಸೇವನೆ ನಮ್ಮದಾಗಬೇಕು. ಕಾರ್ಬೊಹೈಡ್ರೇಟ್ಸ್ ಮತ್ತು ಕೊಬ್ಬು ಅಧಿಕವಾಗಿರುವ ಜಂಕ್ ಫುಡ್‌ಗಳನ್ನು ಹೆಚ್ಚು ಸಂಸ್ಕರಿಸಿದ ಆಹಾರಪದಾರ್ಥಗಳನ್ನು, ಆಳವಾಗಿ ಎಣ್ಣೆಯಲ್ಲಿ ಕರಿದ ಆಹಾರಗಳ ಸೇವನೆ ಬೇಡ.

ನಮ್ಮ ದೇಹದಲ್ಲಿ ಉತ್ಪಾದನೆ ಆಗದ 'ಟ್ರಿಪ್ಟೊಫಾನ್' ಎಂಬ ಪೌಷ್ಟಿಕಾಂಶ ಅಧಿಕವಾಗಿರುವ ಆಹಾರಗಳಾದ ಹಾಲು, ಬಾಳೆಹಣ್ಣು, ತತ್ತಿಗಳನ್ನು ಸೇವಿಸಿರಿ. ಒಮೆಗಾ-3 ಅಧಿಕವಾಗಿರುವ ಆಹಾರಗಳಾದ ತುಪ್ಪ, ಬಾದಾಮಿ, ಅಂಜೂರ, ಉತ್ತುತ್ತಿ, ಬೇಳೆಕಾಳುಗಳನ್ನು ಸೇವಿಸಬೇಕು. ಇವು ಸೆರೆಟೋನಿನ್ ಮತ್ತು ಡೋಪಮಿನ್ ಬಿಡುಗಡೆಗೆ ಸಹಾಯಕವಾಗುತ್ತವೆ. ಖಿನ್ನತೆಯನ್ನು ದೂರ ಮಾಡಲು 50-100 ಗ್ರಾಂ ಡಾರ್ಕ್ ಚಾಕಲೇಟ್ ಅನ್ನು ತಿಂಗಳಿಗೊಮ್ಮೆ ತಿನ್ನಬಹುದು.

2. ವ್ಯಾಯಾಮ: ನಿಮ್ಮ ವಯಸ್ಸಿಗನುಗುಣವಾಗಿ, ಸಾಮರ್ಥ್ಯಕ್ಕೆ ತಕ್ಕಷ್ಟು, ನಿಮಗೆ ಇಷ್ಟವಾಗುವ ಹಾಗೂ ಸೂಕ್ತವಾದ ವ್ಯಾಯಾಮಗಳನ್ನು ದಿನನಿತ್ಯ ಮಾಡಿ. ಮುಂಜಾನೆಯ ವ್ಯಾಯಾಮ ಬಹು ಪ್ರಯೋಜನಕಾರಿ. ಗುಂಪಿನಲ್ಲಿ ಸಂತಸದಿಂದ ಮಾಡುವ ವ್ಯಾಯಾಮ ಮತ್ತು ಕ್ರೀಡೆಗಳು ನೋವುನಿವಾರಕ ಎಂಡಾರ್ಫಿನ್‌ಗಳ ಬಿಡುಗಡೆಗೆ ಕಾರಣವಾಗುತ್ತವೆ.

ವಾರದಲ್ಲಿ ಒಮ್ಮೆಯಾದರೂ ಕನಿಷ್ಠ 30 ನಿಮಿಷ ಪ್ರಕೃತಿಯ ಹಸಿರು ವಾತಾವರಣದಲ್ಲಿ ವಿಹರಿಸಬೇಕು. ಬೆಳಗಿನ ಬಿಸಿಲಿನ ಕಿರಣಗಳು ವಿಟಮಿನ್ ಡಿಯನ್ನು ಉತ್ಪಾದನೆ ಮಾಡುವ ಮತ್ತು ಖಿನ್ನತೆಯನ್ನು ದೂರಮಾಡಿ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಸೆರೆಟೋನಿನ್/ ಡೋಪಮಿನ್ ಬಿಡುಗಡೆ ಮಾಡುವಂತಹ ಒಂದು ಪ್ರಾಕೃತಿಕ ಔಷಧ. ಹೀಗಾಗಿ ಸಾಧ್ಯವಾದಷ್ಟು ಎಳೆಬಿಸಿಲಿನಲ್ಲಿ ವ್ಯಾಯಾಮವನ್ನು ಮಾಡುವ ಅಭ್ಯಾಸವನ್ನು ಮಾಡಿಕೊಳ್ಳಿರಿ.

3. ನಿದ್ರೆ: 6-8ಗಂಟೆಗಳ ಸುಖನಿದ್ರೆಯಿಂದ ಮನುಷ್ಯನ ದಣಿದ ದೇಹಕ್ಕೆ ಸಂಪೂರ್ಣ ವಿಶ್ರಾಂತಿ ಸಿಗುವುದು; ರೋಗನಿರೋಧಕ ಶಕ್ತಿ ಹೆಚ್ಚುವುದು; ನೆನಪಿನ ಶಕ್ತಿಯೂ ವೃದ್ಧಿಸುವುದು. ನಿದ್ರೆಯು ಡೋಪಮಿನ್ ಬಿಡುಗಡೆ ಮಾಡುವಂತೆ ಮೆದುಳಿಗೆ ಸಂಕೇತಗಳನ್ನು ಕಳುಹಿಸುವುದರಿಂದ ನಿದ್ರೆಯ ಆರೋಗ್ಯವನ್ನು ಕಾಪಾಡಲು ಮನಸ್ಸನ್ನೂ, ಮಲಗುವ ಕೋಣೆಯ ವಾತಾವರಣವನ್ನೂ ಪ್ರಶಾಂತವಾಗಿಟ್ಟುಕೊಳ್ಳಬೇಕು.

4. ಧ್ಯಾನ: ಧ್ಯಾನ ಮಾಡುವುದು ಕಷ್ಟ; ಧ್ಯಾನ ಮಾಡಲು ಸಮಯವಿಲ್ಲ; ಧ್ಯಾನ ನಿವೃತ್ತಿ ಹೊಂದಿ ಬಿಡುವಾಗಿರುವವರಿಗೆ - ಹೀಗೆ ಅನೇಕ ಕಾರಣಗಳನ್ನು ನೀಡುತ್ತಾ ಧ್ಯಾನವನ್ನು ಮುಂದೂಡುವವರಿದ್ದಾರೆ. ಆದರೆ, ಒತ್ತಡಕ್ಕೆ ಕಾರಣವಾದ ಕಾರ್ಟಿಸೋಲ್ ಎಂಬ ರಸದೂತವನ್ನು ಧ್ಯಾನದ ಪ್ರಕ್ರಿಯೆ ಕಡಿಮೆಮಾಡಿ, ನಮ್ಮ ಸಂತೋಷವನ್ನು, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಎಂಡಾರ್ಫಿನ್‌ಗಳ ಉತ್ಪಾದನೆಯನ್ನು ವೃದ್ಧಿಸುತ್ತದೆ. ದಿನಕ್ಕೆ ಕನಿಷ್ಠ 30 ನಿಮಿಷಗಳ ಧ್ಯಾನವಾದರೂ ಸಾಕು. ಧ್ಯಾನದಲ್ಲಿ ಹಲವಾರು ವಿಧಾನಗಳಿದ್ದು, ಪ್ರಾರಂಭದಲ್ಲಿ ಸದ್ದಿಲ್ಲದೆ ಹತ್ತು ನಿಮಿಷ ನಮ್ಮ ಸ್ವಂತ ಆಲೋಚನೆಗಳ ಜತೆ ಕುಳಿತು, ಅವುಗಳನ್ನು ಗಮನಿಸುವಂಥ ಸರಳ ವಿಧಾನವನ್ನು ಆರಿಸಿಕೊಳ್ಳಿರಿ. ದೀರ್ಘವಾದ ಉಸಿರಾಟ ಕೂಡ ಧ್ಯಾನದ ಒಂದು ರೂಪ.

5. ಸ್ವ-ಆರೈಕೆ: ನಾಗಾಲೋಟದ ಈ ಬದುಕಿನಲ್ಲಿ ಎಲ್ಲರೂ ತಮಗಾಗಿ ಸ್ವಲ್ಪ ಸಮಯವನ್ನು ಮೀಸಲಾಗಿಡಲೇಬೇಕು. ಹಿತವಾದ ಬಿಸಿನೀರಿನ ಸ್ನಾನ, ದೇಹದ ಮಸಾಜ್, ಪ್ರಯಾಣ, ಭೋಜನ, ಸತ್ಸಂಗ, ಸಂಗೀತ, ಸಿನಿಮಾವೀಕ್ಷಣೆ - ಹೀಗೆ ನಿಮಗೆ ಇಷ್ಟವಾದ ಪ್ರವೃತ್ತಿಗಳನ್ನು ವೃತ್ತಿಯೊಟ್ಟಿಗೆ ರೂಢಿಸಿಕೊಳ್ಳಬೇಕು; ಇಂಥ ಸರಳ ಜೀವನಶೈಲಿಯ ವಿಧಾನಗಳಿಂದ ಸ್ವ-ಆರೈಕೆ ಮಾಡಿಕೊಳ್ಳಬೇಕು. ಇದು ಸೆರೆಟೋನಿನ್ ಮತ್ತು ಆಕ್ಸಿಟೋಸಿನ್‌ಗಳ ಬಿಡುಗಡೆಗೆ ಕಾರಣವಾಗಿ ಸದಾ ಲವಲವಿಕೆಯಿಂದ ಇರಲು ಸಹಾಯಕವಾಗುತ್ತದೆ.

ಸಂತೋಷವೆಂದರೆ ಆರೋಗ್ಯ, ಅಸಂತೋಷವೆಂದರೆ ಅನಾರೋಗ್ಯ. ಒಟ್ಟಿನಲ್ಲಿ ಯಾವುದೇ ಒತ್ತಡಕ್ಕೆ ಒಳಪಡದೆ ನಮ್ಮ ಜೀವನಕ್ರಮದಲ್ಲಿ ಸಣ್ಣ ಬದಲಾವಣೆಗಳನ್ನು ಮಾಡಿಕೊಂಡು ಜೀವನದ ಮುಖ್ಯ ಉದ್ದೇಶವಾದ ಸಂತೋಷ ಮತ್ತು ಆರೋಗ್ಯವನ್ನು ಗಳಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ

ವಿಜ್ಞಾನ

17) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಕೊಟ್ಟಿರುವ ಬೀಜದಳದ ಚಿತ್ರದಲ್ಲಿ ಮತ್ತು ಎಂದು ಗುರುತಿಸಲಾದ ಭಾಗಗಳು ಕ್ರಮವಾಗಿ.....................



ಎ) ಹಣ್ಣು ಕಾಂಡ
ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು
ಸಿ) ದ್ವಿತೀಯ ಬೇರು ಮತ್ತು ಪ್ರಥಮ ಕಾಂಡ
ಡಿ) ಮೊಗ್ಗು ಮತ್ತು ಎಲೆ

ಉತ್ತರ:- (ಬಿ) ಪ್ರಥಮ ಕಾಂಡ ಮತ್ತು ಪ್ರಥಮ ಬೇರು

2) ಶಾರ್ಟ್ ಸರ್ಕೀಟ್ ಸಂದರ್ಭದಲ್ಲಿ ಮಂಡಲದಲ್ಲಿನ ವಿದ್ಯುತ್ ಪ್ರವಾಹವು.................
ಎ) ಗಣನೀಯವಾಗಿ ಕಡಿಮೆಯಾಗುತ್ತದೆ.
ಬಿ) ಬಹಳ ಹೆಚ್ಚಾಗಿರುತ್ತದೆ.
ಸಿ) ಒಮ್ಮೆ ಹೆಚ್ಚು ಒಮ್ಮೆ ಕಡಿಮೆ ಆಗುತ್ತದೆ
ಡಿ) ವಿದ್ಯುತ್ ಸ್ಥಿರವಾಗಿರುತ್ತದೆ

ಉತ್ತರ:-(ಬಿ) ಬಹಳ ಹೆಚ್ಚಾಗಿರುತ್ತದೆ.

3) ಥೈರಾಕ್ಸಿನ್ ಹಾರ್ಮೋನ್ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು?
ಎ) ಇದು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ.
ಬಿ) ಇದರ ಕೊರತೆಯಿಂದ ಗಳಗಂಡಂ ರೋಗ ಉಂಟಾಗುತ್ತದೆ.
ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.
ಡಿ) ಆಹಾರದಲ್ಲಿನ ಅಯೋಡಿನ್ ಇದರ ಉತ್ಪಾದನೆಗೆ ಅಗತ್ಯವಾಗಿದೆ.

ಉತ್ತರ:- (ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.

4) ವಿದ್ಯುತ್ ಬಲ್ಬಿನಲ್ಲಿರುವ ತಂತುಗಳಲ್ಲಿ ಬಳಸುವ ಲೋಹ ಯಾವುದು?
ಎ) ಮ್ಯಾಂಗನೀಸ್ ಬಿ) ಟಂಗಸ್ಟನ್
ಸಿ) ನಿಕ್ಕೆಲ್ ಡಿ) ಕ್ರೋಮಿಯಂ

ಉತ್ತರ:- (ಬಿ) ಟಂಗಸ್ಟನ್

5) ಓಮ್(ohm) ಎಂಬುದು ಇದರ SLಮಾನವಾಗಿದೆ?
ಎ) ವಿದ್ಯುತ್ ವಿಭವಾಂತರ ಬಿ) ರೋಧ
ಸಿ) ವಿದ್ಯುತ್ ಪ್ರವಾಹ ಡಿ) ವಿದ್ಯುದಾವೇಶ

ಉತ್ತರ:- (ಬಿ) ರೋಧ

6) ನ್ಯೂಕ್ಲಿಯರ್ ವಿದ್ಯುತ್ ಕ್ರಿಯಾಕಾರಿಯಲ್ಲಿ ಶಕ್ತಿಯ ಮೂಲ ಯಾವುದು?
ಎ) ನ್ಯೂಕ್ಲೀಯರ್ ವಿದಳನ ಕ್ರಿಯೆ
ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ
ಸಿ) ಬಹೀರುಷ್ಣಕ ಕ್ರಿಯೆ
ಡಿ) ನ್ಯೂಕ್ಲಿಯರ್ ಸಮ್ಮಿಲನ ಕ್ರಿಯೆ

ಉತ್ತರ:- ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ

18) ನ್ಯೂಲ್ಯಾಂಡ್ಸ್ ಅವರ ಅಷ್ಟಕಗಳ ನಿಯಮದ ಮಿತಿಗಳಾವುವು?

ಉತ್ತರ:- ನ್ಯೂಲ್ಯಾಂಡ್ಸ್ ಅವರ ಅಷ್ಟಕಗಳ ನಿಯಮದ ಮಿತಿಗಳು
1) ಅಷ್ಟಕಗಳ ನಿಯಮವು ಕೇವಲ ಕ್ಯಾಲ್ಸಿಯಂ ಮಾತ್ರ ಅನ್ವಯಿಸುತ್ತದೆ., ಕ್ಯಾಲ್ಸಿಯಂ ನಂತರದ ಪ್ರತಿ ಎಂಟನೇ ಧಾತುವಿನ ಗುಣಗಳು ಮೊದಲನೇ ಧಾತುವಿನ ಗುಣಗಳಂತೆ ಇರುವುದಿಲ್ಲ
2) ನ್ಯೂಲ್ಯಾಂಡ್ಸ್ ರವರು ನಿಸರ್ಗದಲ್ಲಿ ಕೇವಲ 56 ಧಾತುಗಳಿವೆ ಮತ್ತು ಭವಿಷ್ಯದಲ್ಲಿ ಯಾವುದೇ ಧಾತುಗಳು ಆವಿಷ್ಕಾರವಾಗುವುದಿಲ್ಲ ಎಂದು ಊಹಿಸಿದ್ದರು, ಆದರೆ ನಂತರದ ದಿನಗಳಲ್ಲಿ ಹಲವಾರು ಧಾತುಗಳು ಆವಿಷ್ಕರಿಸಲಾಯಿತು.
3) ತನ್ನ ಕೋಷ್ಟಕವನ್ನು ಸರಿಹೊಂದಿಸಲು ನ್ಯೂಲ್ಯಾಂಡ್ಸ್ ರವರು ಒಂದೇ ಸ್ಥಳದಲ್ಲಿ ಎರಡು ಧಾತುಗಳನ್ನು ಇರಿಸಿದರು. ಅಥವಾ ಜೀವಿಗಳು ಹೆಚ್ಚು ಸಂಕೀರ್ಣವಾದಂತೆಲ್ಲ ಅಂಗಾಂಶಗಳ ವೈಶಿಷ್ಟತೆಯು ಹೆಚ್ಚುತ್ತಾ ಹೋಗುತ್ತದೆ ಈ ಸಮಸ್ಯೆಗೆ ಅನೇಕ ಬಹುಕೋಶೀಯ ಜೀವಿಗಳು ಯಾವ ರೀತಿಯ ಉತ್ತರವನ್ನು ಕಂಡುಕೊಂಡಿವೆ?

ಉತ್ತರ:- ಜೀವಿಗಳು ಹೆಚ್ಚು ಸಂಕೀರ್ಣವಾದಂತೆಲ್ಲ ಅಂಗಾಂಶಗಳ ವೈಶಿಷ್ಟತೆಯು ಹೆಚ್ಚುತ್ತಾ ಹೋಗುತ್ತದೆ ಈ ಸಮಸ್ಯೆಗೆ ಅನೇಕ ಬಹುಕೋಶೀಯ ಜೀವಿಗಳು ಒಂದುಉತ್ತರವನ್ನು ಕಂಡುಕೊಂಡಿವೆ. ಅದೆಂದರೆ ಸಂತಾನೋತ್ಪತ್ತಿ ನಡೆಸದ ದೇಹದಲ್ಲಿನ ಜೀವಕೋಶಗಳಿಗೆ ಹೋಲಿಸಿದರೆ ಕೇವಲ ಅರ್ಧದಷ್ಟು ಸಂಖ್ಯೆಯ ಕ್ರೋಮೋಸೋಮ್‌ಗಳನ್ನು ಮತ್ತು ಅರ್ಧದಷ್ಟು ಪ್ರಮಾಣದ ಡಿಎನ್‌ಎಯನ್ನು ಹೊಂದಿರುವ ಭಿನ್ನವಾದ ವಂಶಾವಳಿಯನ್ನು ಹೊಂದಿರುವ ಜೀವಕೋಶಗಳನ್ನು ವಿಶಿಷ್ಟ ಅಂಗಗಳಲ್ಲಿ ಹೊಂದುವುದು. ಮಿಯಾಸಿಸ್ ಕೋಶವಿಭಜನೆಯ ಮೂಲಕ ಇದನ್ನು ಸಾಧಿಸಲಾಗುತ್ತದೆ. ಲೈಂಗಿಕ ಸಂತಾನೋತ್ಪತ್ತಿಯ ಸಮಯದಲ್ಲಿ ಎರಡು ಜೀವಿಗಳ ಲಿಂಗ ಕೋಶಗಳು ಸಂಯೋಜಿಸಿ ಹೊಸ ಜೀವಿ ಉಂಟಾಗುತ್ತದೆ. ಇದರ ಪರಿಣಾಮವಾಗಿ ಹೊಸ ಪೀಳಿಗೆಯಲ್ಲಿ ಕ್ರೋಮೋಸೋಮ್‌ಗಳ ಸಂಖ್ಯೆಯಲ್ಲಿ ಮತ್ತು ಡಿಎನ್‌ಎ ಪ್ರಮಾಣದಲ್ಲಿ ಮರುಹೊಂದಾಣಿಕೆ ಉಂಟಾಗುತ್ತದೆ.

19) ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಎಷ್ಟು ಗುಂಪುಗಳನ್ನಾಗಿ ವಿಂಗಡಿಸಬಹುದು? ಯಾವುವು?

ಉತ್ತರ:- ಕ್ರಿಯಾಶೀಲತೆಯ ಆಧಾರದ ಮೇಲೆ ಲೋಹಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು.
(i)ಕಡಿಮೆ ಕ್ರಿಯಾಪಟುತ್ವ ಹೊಂದಿರುವಲೋಹಗಳು
(ii) ಮಧ್ಯಮ ಕ್ರಿಯಾಪಟುತ್ವ ಹೊಂದಿರುವ ಲೋಹಗಳು
(iii) ಹೆಚ್ಚಿನ ಕ್ರಿಯಾಪಟುತ್ವ ಹೊಂದಿರುವ ಲೋಹಗಳು. ಪ್ರತಿಯೊಂದು ಗುಂಪಿನ ಲೋಹಗಳನ್ನು ವಿಭಿನ್ನ ತಂತ್ರಗಳನ್ನು ಬಳಸಿ ಪಡೆಯಲಾಗುತ್ತದೆ.

20) ಪ್ಲನೇರಿಯ ಎಂಬ ಸರಳ ಜೀವಿಯ ಪುನರುತ್ಪಾದನೆಯ ಚಿತ್ರ ಬರೆಯಿರಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಪಿಯುಸಿ

ಭೌತವಿಜ್ಞಾನ

1) ಯಾವುದೇ ಬಿಂದುವಿನಲ್ಲಿ ವಿದ್ಯುತ್ ಕ್ಷೇತ್ರದ ಪರಿಮಾಣವು, ಆ ಬಿಂದುವಿನ ಸಮವಿಭವ ಮೇಲ್ಮೈಗೆ ....ವಾಗಿ ವಿಭವದ ಪರಿಮಾಣದಲ್ಲಿ ಪ್ರತಿ ಸ್ಥಳಪಲ್ಲಟಕ್ಕೆ ಆದ ಬದಲಾವಣೆಯಾಗಿರುತ್ತದೆ
ಎ) ಅಡ್ಡಲಾಗಿ ಬಿ) ಸಮತಲ
ಸಿ) ಲಂಬ ಡಿ) ಸಮಾಂತರ

ಉತ್ತರ:- ಸಿ

2) ಸಂರಕ್ಷೀ ಬಲಕ್ಕೆ ಉದಾಹರಣೆಗಳು ಯಾವುದೆಂಬುದನ್ನು ಗುರುತಿಸಿ
ಎ) ಸ್ಪಿಂಗ್ ಬಲ ಮತ್ತು ಗುರುತ್ವಾಕರ್ಷಣಾ ಬಲ
ಬಿ) ದೈವ ಬಲ ಮತ್ತು ಮನುಷ್ಯ ಬಲ
ಸಿ) ನೂಕಾಟದ ಬಲ ಮತ್ತು ಜೈವಿಕ ಬಲ
ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- ಎ

3) ಅರೋರಾ ಬೊರಿಯಾಲಿಸ್ ಎಲ್ಲಿ ನೋಡಲು ಸಾಧ್ಯ?
ಎ) ಭೂಮಿಯ ಸಮಭಾಜಕ ವೃತ್ತ ಪ್ರದೇಶ
ಬಿ) ಭೂಮಿಯ ಧ್ರುವ ಪ್ರದೇಶ
ಸಿ) ಭೂಮಿಯ ಸುದ್ರದ ಒಳಗೆ
ಡಿ) ಭೂಮಿಯಲ್ಲಿರುವ ಮರುಭೂಮಿ ಪ್ರದೇಶ

ಉತ್ತರ:- ಬಿ

4) 1953ರಲ್ಲಿ ಕೊಲ್ಕತ್ತದ ಸಹಾ ಇನ್‌ಸ್ಟಿಟ್ಯೂಟ್ ಆಫ್ ನ್ಯೂಕ್ಲಿಯಾರ್ ಫಿಸಿಕ್ಸ್‌ನಲ್ಲಿ, ...ಇವರ ಕಲ್ಪನೆಯಿಂದಾಗಿ ಸೈಕ್ಲೋಟ್ರಾನ್ ನಿರ್ಮಿಸಲಾಯಿತು.
ಎ) ಎ ಪಿ ಜೆ ಅಬ್ದುಲ್ ಕಲಾಂ
ಬಿ) ಡಾ. ಹೋಮಿ ಜೆ ಬಾಬಾ
ಸಿ) ಸಿ.ವಿ ರಾಮನ್
ಡಿ) ಡಾ. ಮೇಘನಾಥ್ ಸಹಾ

ಉತ್ತರ:- ಡಿ

5) ಬೆಳಕು ಯಾವುದೇ ವಸ್ತುವಿನ ಜತೆ ಪರಸ್ಪರ ಕ್ರಿಯೆಯಲ್ಲಿ ವರ್ತಿಸುವಾಗ ಅದು ....ಗಳಿಂದ ಮಾಡಲ್ಪಟ್ಟಿದೆ ಎಂಬಂತೆ ವರ್ತಿಸುತ್ತದೆ
ಎ) ಕ್ವಾಂಟ ಅಥವಾ ಶಕ್ತಿಯ ಘಟಕ (Packets)
ಬಿ) ಕಿರಣ ಅಥವಾ ರೇಖೆ
ಸಿ) ಜ್ವಾಲೆ ಡಿ) ಬೆಂಕಿಯ ರೂಪ

ಉತ್ತರ:- ಎ

25)LC ಮಂಡಲ ನಿರ್ಬಂಧರಹಿತ ಆಂದೋಲನಗಳಲ್ಲಿ ಧಾರಕ ಮತ್ತು ಪ್ರೇರಕಗಳಲ್ಲಿ ಶೇಖರವಾದ ಶಕ್ತಿ ಕಾಲದೊಂದಿಗೆ ಸ್ಥಿರವಾಗಿರುತ್ತದೆ ಎಂದು ತೋರಿಸಿ.

ಉತ್ತರ : ಧಾರಕದ ಪ್ರಾರಂಭಿಕ ಆವೇಶ q_0 ಆಗಿರಲಿ, ಆವೇಶಭರಿತ ಧಾರಕವನ್ನು L. ಪ್ರೇರಕತೆ ಹೊಂದಿರುವ ಪ್ರೇರಕಕ್ಕೆ ಜೋಡಿಸಿದೆ ಎಂದಿಟ್ಟುಕೊಳ್ಳೋಣ.

$\omega \left(= 2\pi v = \frac{1}{\sqrt{LC}}\right)$ ಆವೃತ್ತಿ ಹೊಂದಿದ ನಿರಂತರ ಆಂದೋಲನ ಹೊಂದುತ್ತದೆ.

ಯಾವುದೇ ಕ್ಷಣದಲ್ಲಿ $q(t) = q0 \cos \omega t$ ಆವೇಶ ಮತ್ತು ವಿದ್ಯುತ್ ಧಾರಕದಲ್ಲಿರುತ್ತದೆ. ಸಮಯ t ನಲ್ಲಿ ಸಂಚಯಿತ ಧಾರಕದ ಶಕ್ತಿ ಈ ಮೊತ್ತವು ಕಾಲದೊಂದಿಗೆ ಸ್ಥಿರವಾಗಿದೆ ಏಕೆಂದರೆ q_0 ಮತ್ತು c, ಕಾಲಾತೀತವಾಗಿದೆ. ಗಮನಿಸಬಹುದಾದುದು ಏನೆಂದರೆ ಈ ಶಕ್ತಿಯು ಧಾರಕದ ಪ್ರಾರಂಭಿಕ ಶಕ್ತಿಗೆ ಸಮವಾಗಿದೆ.

$$U_E = \frac{1}{2} C V^2 = \frac{1}{2}\frac{q^2}{C} = \frac{q_0^2}{2C}\cos^2(\omega t)$$

$$U_M = \frac{1}{2} L i^2 = \frac{1}{2} L q_0^2 \omega^2 \sin^2(\omega t)$$

$$= \frac{q_0^2}{2C}\sin^2(\omega t) \quad (\because \omega = 1/\sqrt{LC})$$

ಇದರ ಒಟ್ಟು ಮೊತ್ತ

$$U_E + U_M = \frac{q_0^2}{2C}(\cos^2 \omega t + \sin^2 \omega t)$$

$$= \frac{q_0^2}{2C}$$

26) ಯಾವುದಕ್ಕೆ 'ಪರಿವರ್ತಕ' ಎನ್ನುತ್ತಾರೆ?

ಉತ್ತರ:- ಹಲವಾರು ಉದ್ದೇಶಗಳಿಗಾಗಿ ಪರ್ಯಾಯ ವಿದ್ಯುತ್ ವಿಭವವನ್ನು (ಪರಿವರ್ತನೆ) ಹೆಚ್ಚು ಅಥವಾ ಕಡಿಮೆ ಮಾಡಬೇಕಾಗುತ್ತದೆ. ಇದನ್ನು ಮಾಡುವ ಸಾಧನಕ್ಕೆ 'ಪರಿವರ್ತಕ' ಎನ್ನುತ್ತಾರೆ. ಈ ಸಾಧನ ವಿದ್ಯುತ್ಕಾಂತೀಯ ಪ್ರೇರಣೆಯ ತತ್ವದ ಮೇಲೆ ಕಾರ್ಯ ನಿರ್ವಹಿಸುತ್ತದೆ.

27) ಪ್ರತಿ ಬಿಂಬ (Image), ನೈಜಬಿಂಬ (Real Image), ಮಿಥ್ಯ ಬಿಂಬ (virtual Image) ಬಗ್ಗೆ ಬರೆಯಿರಿ

ಉತ್ತರ:- ಒಂದು ಬಿಂದುವಿನಿಂದ ಹೊರಸೂಸುವ ಕಿರಣಗಳು ಪ್ರತಿಫಲನಗೊಂಡು ಮತ್ತು / ಅಥವಾ ವಕ್ರೀಭವನಗೊಂಡ ನಂತರ ಒಂದು ಬಿಂದುವಿನಲ್ಲಿ ಸಂಧಿಸಿದರೆ, ಆ ಬಿಂದುವನ್ನು ಮೊದಲನೇ ಬಿಂದುವಿನ ಪ್ರತಿ ಬಿಂಬ (Image) ಎನ್ನುತ್ತಾರೆ. ಕಿರಣಗಳು ಒಂದೇ ಬಿಂದುವಿನಲ್ಲಿ ಸಂಧಿಸಿದರೆ ಅದನ್ನು ನೈಜಬಿಂಬ (Real Image) ಎನ್ನುತ್ತಾರೆ. ಕಿರಣಗಳು ಒಂದು ಬಿಂದುವಿನಲ್ಲಿ ಸಂಧಿಸದೆ ಕಿರಣಗಳನ್ನು ಹಿಂದಕ್ಕೆ ವೃದ್ಧಿಸಿದಾಗ ಒಂದು ಬಿಂದುವಿನಿAದ ಹೊರಬಂದAತೆ ಕಂಡರೆ ಆ ಬಿಂಬವನ್ನು ಮಿಥ್ಯ ಬಿಂಬ (virtual Image) ಎನ್ನುತ್ತಾರೆ.

28) ವಕ್ರೀಭವನದ ಕುರಿತಾದ ಸ್ನೆಲ್ ಅವರಿಂದ ರೂಪಿತ ನಿಯಮಗಳನ್ನು ತಿಳಿಸಿ

ಉತ್ತರ:- ಸ್ನೆಲ್ ಎಂಬ ವಿಜ್ಞಾನಿಯು ಪ್ರಯೋಗಗಳ ಮೂಲಕ ವಕ್ರೀಭವನದ ಈ ಕೆಳಗಿನ ನಿಯಮಗಳನ್ನು ಪ್ರತಿಪಾದಿಸಿದನು.
(i) ಆಪಾತ ಕಿರಣ, ಆಪಾತ ಬಿಂದುವಿನಿಂದ ಸೀಮಾತಲಕ್ಕೆ ಎಳೆದ ಲಂಬ ರೇಖೆ ಮತ್ತು ವಕ್ರೀಭವಿತ ಕಿರಣ ಇವೆಲ್ಲವೂ ಒಂದೇ ಸಮತಲದಲ್ಲಿರುತ್ತವೆ.
(ii) ಬೆಳಕಿನ ಆಪಾತ ಕೋನದ ಸೈನ್ (Sine) ಹಾಗೂ ವಕ್ರೀಭವನ ಕೋನದ ಸೈನ್‌ಗಳ ಅನುಪಾತವು ಸ್ಥಿರಾಂಕವಾಗಿರುತ್ತದೆ.

ಪ್ರಜಾವಾಣಿ ನೋಡಿಯೊ
ಎಸ್ಸೆಸ್ಸೆಲ್ಸಿ ರಸಾಯನವಿಜ್ಞಾನ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಕ್ಕೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾತಿಗೆ ಅಡ್ಡ ಬಂದ ಪ್ರಕರಣ ● ಸಂಸದರಿಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಎಚ್ಚರಿಕೆ

‘ಜಾತಿ, ಧರ್ಮ ಉಲ್ಲೇಖಿಸಿ ಮಾತನಾಡಬೇಡಿ’

ನವದೆಹಲಿ (ಪಿಟಿಐ): ‘ಸದನದ ಯಾವ ಸದಸ್ಯರೂ ತಮ್ಮ ಜಾತಿ ಮತ್ತು ಧರ್ಮವನ್ನು ಉಲ್ಲೇಖಿಸಿ ಮಾತನಾಡಬಾರದು’ ಎಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ಸೋಮವಾರ ಸಂಸದರಿಗೆ ಎಚ್ಚರಿಕೆ ನೀಡಿದ್ದಾರೆ.

ಓಂ ಬಿರ್ಲಾ

ಪ್ರಶ್ನೋತ್ತರ ವೇಳೆಯಲ್ಲಿ ಮಾತನಾಡಿದ ಕಾಂಗ್ರೆಸ್ ಸಂಸದ ಎ.ಆರ್.ರೆಡ್ಡಿ, ‘ನಾನು ಕೆಳಜಾತಿಗೆ ಸೇರಿದವನು. ಹೀಗಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹಿಂದಿ ಭಾಷೆಯಲ್ಲಿನ ನನ್ನ ಪ್ರಾವೀಣ್ಯತೆ ಕುರಿತು ಅಣಕವಾಡಿದ್ದಾರೆ’ ಎಂದು ಆರೋಪಿಸಿದರು.

ಇದನ್ನು ಗಂಭೀರವಾಗಿ ಪರಿಗಣಿಸಿದ ಸ್ಪೀಕರ್, ‘ಜನರು ಜಾತಿ ಮತ್ತು ಧರ್ಮದ ಆಧಾರದಲ್ಲಿ ಲೋಕಸಭಾ ಸದಸ್ಯರನ್ನು ಆಯ್ಕೆ ಮಾಡುವುದಿಲ್ಲ’ ಎಂದರು.

‘ಇಲ್ಲಿರುವ ಯಾರೊಬ್ಬರೂ ಇನ್ನು ಮುಂದೆ ಸದನದಲ್ಲಿ ಇಂತಹ ಪದಗಳನ್ನು ಪ್ರಯೋಗಿಸಬಾರದು. ಹಾಗೊಮ್ಮೆ ಪ್ರಯೋಗಿಸಿದ್ದೇ ಆದರೆ ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿದಿರುವುದನ್ನು ಕುರಿತು ಮಾತನಾಡುತ್ತಿದ್ದ ರೆಡ್ಡಿ, ‘ಪ್ರಧಾನಿ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ರೂಪಾಯಿ ತುರ್ತು ನಿಗಾ ಘಟಕದಲ್ಲಿದೆ (ಐಸಿಯು) ಎಂದು ಆರೋಪಿಸಿದ್ದಾಗಿ ಹೇಳಿದರು.

ಸಂಸತ್ತು ಅಧಿವೇಶನ

ಆಗ ಮಧ್ಯಪ್ರವೇಶಿಸಿದ ಸ್ಪೀಕರ್, ನೀವು ನೇರವಾಗಿ ಪ್ರಶ್ನೆ ಕೇಳಿ ಎಂದು ಸೂಚಿಸಿದರು. ಆಗ ರೆಡ್ಡಿ, ‘ಸಭಾಧ್ಯಕ್ಷರೆ, ನನ್ನ ಮಾತಿಗೆ ನೀವು ಅಡ್ಡಿಪಡಿಸುವಂತಿಲ್ಲ’ ಎಂದು ಹೇಳಿದರು.

ಇದರಿಂದ ಸಿಡಿಮಿಡಿಗೊಂಡ ಸ್ಪೀಕರ್, ‘ಸ್ಪೀಕರ್ ವಿರುದ್ಧ ನೀವು ಹೀಗೆಲ್ಲಾ ಮಾತನಾಡುವಂತಿಲ್ಲ’ ಎಂದು ತರಾಟೆಗೆ ತೆಗೆದುಕೊಂಡರು.

‘ನೀವು ಸದನದ ನಾಯಕರಾಗಿದ್ದೀರಿ. ಸ್ಪೀಕರ್ ವಿರುದ್ಧ ಹೀಗೆಲ್ಲಾ ಮಾತನಾಡಬಾರದೆಂದು ನಿಮ್ಮ ಪಕ್ಷದ ಸಂಸದರಿಗೆ ತಿಳಿಹೇಳಿ’ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರಿಗೆ ಸೂಚಿಸಿದರು. ಬಳಿಕ ರೆಡ್ಡಿ ಅವರಿಗೆ ಪ್ರಶ್ನೆ ಕೇಳಲು ಅನುವು ಮಾಡಿಕೊಟ್ಟರು.

ರೆಡ್ಡಿ ಅವರ ಪ್ರಶ್ನೆಗೆ ಉತ್ತರಿಸುವ ವೇಳೆ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ‘ನಿಮಗೆ ಗೊತ್ತಿರುವ ಅರೆಬರೆ ಹಿಂದಿಯಲ್ಲಿಯೇ ನಾನೂ ಉತ್ತರಿಸುತ್ತೇನೆ’ ಎಂದಿದ್ದರು.

‘ಆಗ ರೂಪಾಯಿ ಮೌಲ್ಯ ಕುಸಿದಿತ್ತು. ಅದನ್ನು ಮೋದಿ ಅವರು ಉಲ್ಲೇಖಿಸಿದ್ದರು. ಈಗ ಭಾರತವು ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯ ದೇಶವಾಗಿದೆ. ಇದು ಹೆಮ್ಮೆಯ ವಿಚಾರ. ಆದರೆ ವಿರೋಧ ಪಕ್ಷದವರು ಈ ಕುರಿತು ವ್ಯಂಗ್ಯವಾಡುತ್ತಿದ್ದಾರೆ. ಅಸೂಯೆಯಿಂದ ಅವರು ಹೀಗೆಲ್ಲಾ ಮಾತನಾಡುತ್ತಿದ್ದಾರೆ’ ಎಂದೂ ನಿರ್ಮಲಾ ಟೀಕಿಸಿದರು.

‘ಆಧಾರರಹಿತ ಆರೋಪ: ಸದನದ ಹಕ್ಕಿನ ಉಲ್ಲಂಘನೆಗೆ ಸಮ’

ನವದೆಹಲಿ (ಪಿಟಿಐ): ‘ಯಾರೂ ಆಧಾರ ರಹಿತ ಆರೋಪ ಮಾಡಬಾರದು. ಹಾಗೊಮ್ಮೆ ಮಾಡಿದರೆ ಅದು ಸದನದ ಹಕ್ಕಿನ ಉಲ್ಲಂಘನೆಗೆ ಸಮನಾಗಲಿದೆ’ ಎಂದು ರಾಜ್ಯಸಭಾ ಸಭಾಪತಿ ಜಗದೀಪ್ ಧನಕರ್ ಅವರು ಸಂಸದರಿಗೆ ಸೋಮವಾರ ಎಚ್ಚರಿಕೆ ನೀಡಿದ್ದಾರೆ.

ಜಗದೀಪ್ ಧನಕರ್

ಶೂನ್ಯ ವೇಳೆಯಲ್ಲಿ ಮಾತನಾಡಿದ ಎಎಪಿ ಸಂಸದ ಸಂಜಯ್ ಸಿಂಗ್, ‘ಕೇಂದ್ರ ಸರ್ಕಾರವು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ. ಅವುಗಳ ಮೂಲಕ ವಿರೋಧ ಪಕ್ಷಗಳ ನಾಯಕರ ಮೇಲೆ ದಾಳಿ ನಡೆಸಲಾಗುತ್ತಿದೆ. ಜಾರಿ ನಿರ್ದೇಶನಾಲಯವು (ಇ.ಡಿ) ಎಂಟು ವರ್ಷಗಳಲ್ಲಿ ವಿರೋಧ ಪಕ್ಷಗಳ ನಾಯಕರಿಗೆ ಸೇರಿದ ಒಟ್ಟು 3,000 ಸ್ಥಳಗಳ ಮೇಲೆ ದಾಳಿ ನಡೆಸಿದೆ. ಈ ಪೈಕಿ 23 ಮಂದಿಯನ್ನು ಶಿಕ್ಷೆಗೆ ಗುರಿಪಡಿಸಲಾಗಿದೆ’ ಎಂದು ಆರೋಪಿಸಿದರು.

‘ನೀರವ್ ಮೋದಿ, ವಿಜಯ್ ಮಲ್ಯ, ಲಲಿತ್ ಮೋದಿ ಮತ್ತು ರೆಡ್ಡಿ ಸಹೋದರರರಂತಹ ವಂಚಕರ ಮೇಲೆ ಕೇಂದ್ರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಆದರೆ ಶಿವಸೇನಾ ಸಂಸದ ಸಂಜಯ್ ರಾವುತ್, ದೆಹಲಿ ಸಚಿವ ಸತ್ಯೇಂದರ್ ಜೈನ್ ಅವರನ್ನು ಜೈಲಿಗಟ್ಟಿದೆ. ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರ ನಿವಾಸದ ಮೇಲೆ ತನಿಖಾ ಸಂಸ್ಥೆಗಳು ದಾಳಿ ನಡೆಸಿವೆ. ಆಡಳಿತಾರೂಢ ಸರ್ಕಾರದ ಜೊತೆ ನಿಕಟ ಸಂಪರ್ಕ ಹೊಂದಿರುವ ಭ್ರಷ್ಟರ ಮೇಲೆ ತನಿಖಾ ಸಂಸ್ಥೆಗಳು ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ’ ಎಂದೂ ದೂರಿದರು.

ಇದಕ್ಕೆ ಆಡಳಿತ ಪಕ್ಷದ ಕೆಲ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಸಭಾಪತಿಯವರು ಮಧ್ಯಪ್ರವೇಶಿಸಬೇಕು ಎಂದು ಒತ್ತಾಯಿಸಿದರು.

ಆಗ ಮಾತನಾಡಿದ ಜಗದೀಪ್ ಧನಕರ್, ‘ಸದನದಲ್ಲಿ ಏನೇ ಮಾತನಾಡುವುದಿದ್ದರೂ ಅದು ನಿಖರತೆಯಿಂದ ಕೂಡಿರಬೇಕು. ಪಾವಿತ್ರ್ಯತೆ ಹಾಗೂ ಹಕ್ಕನ್ನು ಪ್ರತಿಪಾದಿಸುವಂತಿರಬೇಕು. ವಾಸ್ತವಾಂಶಕ್ಕೆ ದೂರವಾಗಿರುವ ವಿಚಾರಗಳನ್ನು ಪ್ರಸ್ತಾಪಿಸಲು ಯಾರಿಗೂ ಅವಕಾಶ ನೀಡುವುದಿಲ್ಲ. ಈ ವಿಚಾರದಲ್ಲಿ ನಾನು ತುಂಬಾ ಸ್ಪಷ್ಟವಾಗಿದ್ದೇನೆ’ ಎಂದು ತಿಳಿಸಿದರು.

‘ದಿನಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ–ವರದಿಗಳು ಅಥವಾ ಬೇರೆ ಯಾರೋ ಹೇಳಿದ್ದರ ಆಧಾರದಲ್ಲಿ ಮಾತನಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ಸದನದಲ್ಲಿ ಏನೇ ಆರೋಪ ಮಾಡುವುದಿದ್ದರೂ ಸೂಕ್ತ ದಾಖಲೆಗಳನ್ನು ಇಟ್ಟುಕೊಂಡಿರಬೇಕಾಗುತ್ತದೆ’ ಎಂದೂ ಹೇಳಿದರು.

‘ಸದನದಲ್ಲಿ ಕೇಳಲಾದ ಪ್ರಶ್ನೆಗೆ ಸಿಗುವ ಉತ್ತರ, ಮಾಧ್ಯಮಗಳ ವರದಿಗಳು ಹಾಗೂ ಸಂಸತ್ತಿನ ಹೊರಗೆ ಪ್ರಧಾನಿಯವರು ನೀಡಿರುವ ಹೇಳಿಕೆಗಳನ್ನು ಆಧಾರವಾಗಿ ಇಟ್ಟುಕೊಂಡೇ ಸಂಸದರು ಮಾತನಾಡುತ್ತಾರೆ’ ಎಂದು ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ತಿಳಿಸಿದರು.

ಈ ವಿಚಾರದಲ್ಲಿ ಅಭಿಪ್ರಾಯ ತಿಳಿಸುವಂತೆ ಅಧ್ಯಕ್ಷರು ಸದನದ ನಾಯಕ ಪೀಯೂಷ್ ಗೋಯಲ್ ಅವರಿಗೆ ಸೂಚಿಸಿದರು.

‘ಸಂಜಯ್ ಸಿಂಗ್ ಅವರ ಆರೋಪಗಳಲ್ಲಿ ಹುರುಳಿಲ್ಲ. ಅವು ಆಧಾರರಹಿತವಾಗಿವೆ. ಆರ್ಥಿಕ ಹಾಗೂ ಇತರ ಪ್ರಕರಣಗಳಲ್ಲಿ ಸಂಸದರು ಹಾಗೂ ಶಾಸಕರ ಮೇಲಿನ ಆರೋಪ ಸಾಬೀತಾದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಾಲಯ ನಿರ್ದೇಶನ ನೀಡಿದೆ’ ಎಂದು ಗೋಯಲ್ ತಿಳಿಸಿದರು.

ರಾಮ್‌ಸಾರ್: ಮತ್ತೆ 3 ಪ್ರದೇಶಗಳ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಬಳ್ಳಾರಿಯ ಅಂಕಸಮುದ್ರ, ಗದಗ ಜಿಲ್ಲೆಯ ಮಾಗಡಿ ಕೆರೆ ಹಾಗೂ ಉತ್ತರ ಕನ್ನಡದ ಅಘನಾಶಿನಿ ಜೌಗು ಪ್ರದೇಶಗಳನ್ನು ರಾಮ್‌ಸಾರ್ ಪಟ್ಟಿಗೆ ಸೇರಿಸಬೇಕು ಎಂದು ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಕರ್ನಾಟಕ ಸರ್ಕಾರ ಶಿಫಾರಸು ಮಾಡಿದೆ.

ಕರ್ನಾಟಕದ ರಂಗನತಿಟ್ಟು ಪಕ್ಷಿಧಾಮ ಸೇರಿದಂತೆ 10 ಜೌಗು ಪ್ರದೇಶಗಳನ್ನು ರಾಮ್‌ಸಾರ್ ಪಟ್ಟಿಗೆ ಆಗಸ್ಟ್‌ನಲ್ಲಿ ಸೇರ್ಪಡೆ ಮಾಡಲಾಗಿತ್ತು. ಈ ಮೂಲಕ ಈ ಜೌಗು ಪ್ರದೇಶಗಳಿಗೆ ಅಂತರರಾಷ್ಟ್ರೀಯ ಮಾನ್ಯತೆ ಸಿಕ್ಕಿತ್ತು.

ಲೋಕಸಭೆಯಲ್ಲಿ ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಸೋಮವಾರ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ಪರಿಸರ ಖಾತೆಯ ರಾಜ್ಯ ಸಚಿವ ಅಶ್ವಿನ್ ಕುಮಾರ್ ಚೌಬೆ ಅವರು, ‘ಸಂರಕ್ಷಿತ ಪ್ರದೇಶಗಳ ಅಭಿವೃದ್ಧಿ ಆಯಾ ರಾಜ್ಯಗಳ ಜವಾಬ್ದಾರಿ. ಆದರೂ, ರಂಗನತಿಟ್ಟು ಪಕ್ಷಿಧಾಮ ಸೇರಿದಂತೆ ಸಂರಕ್ಷಿತ ಪ್ರದೇಶಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರವು ವಿಶೇಷ ಯೋಜನೆಯಡಿ ಅನುದಾನ ನೀಡುತ್ತಿದೆ’ ಎಂದು ತಿಳಿಸಿದ್ದಾರೆ.

ರಂಗನತಿಟ್ಟು ಪಕ್ಷಿಧಾಮದಲ್ಲಿ 188 ಪ್ರಭೇದದ ಮರಗಳು, 225 ಪ್ರಭೇದದ ಪಕ್ಷಿಗಳು, 69 ಜಾತಿಯ ಮೀನುಗಳು, 13 ಪ್ರಭೇದದ ಕಪ್ಪೆಗಳು ಹಾಗೂ 30 ಪ್ರಭೇದದ ಚಿಟ್ಟೆಗಳು ಇವೆ. ಇದು ಭಾರತದ ಪ್ರಮುಖ ಪಕ್ಷಿಧಾಮ ಎಂದು ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಈ ಹಿಂದೆ ಗುರುತಿಸಿತ್ತು.

ಹಂಪಿ ಅಭಿವೃದ್ಧಿಗೆ ಸಿಗದ ಒಪ್ಪಿಗೆ

ನವದೆಹಲಿ: ಕರ್ನಾಟಕದ ಹಂಪಿ ಸೇರಿದಂತೆ ದೇಶದ ಪ್ರಖ್ಯಾತ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಗೆ ಸಿದ್ಧಪಡಿಸಿರುವ ಕ್ರಿಯಾಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿಲ್ಲ.

ಲೋಕಸಭೆಯಲ್ಲಿ ದಾವಣಗೆರೆಯ ಸಂಸದ ಜಿ.ಎಂ. ಸಿದ್ದೇಶ್ವರ ಸೋಮವಾರ ಕೇಳಿರುವ ಪ್ರಶ್ನೆಗೆ ಕೇಂದ್ರ ಪ್ರವಾಸೋದ್ಯಮ ಸಚಿವ ಜಿ.ಕಿಶನ್ ರೆಡ್ಡಿ ಲಿಖಿತ ಉತ್ತರ ನೀಡಿದ್ದು, ‘ಹಂಪಿಯನ್ನು ಮಾದರಿ ಪ್ರವಾಸಿ ತಾಣವನ್ನಾಗಿ ರೂಪಿಸಲು ಕ್ರಿಯಾಯೋಜನೆ ರೂಪಿಸಲಾಗಿತ್ತು. ಆದರೆ, ಈ ಯೋಜನೆಗೆ ಒಪ್ಪಿಗೆ ಸಿಕ್ಕಿಲ್ಲ’ ಎಂದು ತಿಳಿಸಿದ್ದಾರೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ

ಸಂ:ವಾಕರಸಾಸಂ:ಕಾನಿಅ:1158 ರಿಂದ 1160/2022–23 ದಿನಾಂಕ : 12–12–2022.

ಇ–ಪ್ರಕ್ಯೂರ್‌ಮೆಂಟ್ ಟೆಂಡರ ಪ್ರಕಟಣೆ ಸಂಖ್ಯೆ: 21 ರಿಂದ 23 / 2022–23

(Through GOK e-procurement platform https://eproc.karnataka.gov.in)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮ 1999 ಮತ್ತು ನಿಯಮಾವಳಿ 2000 ರ ಪ್ರಕಾರ ಇಡಿಗಂಟು (Lumpsum) ಟೆಂಡರ್ ಎಕ ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕೆಲಸಕ್ಕಾಗಿ ಅರ್ಹ ಪೋಜೆಕ್ಟ್ ಮ್ಯಾನೆಜಮೆಂಟ್ ಕನ್ಸಲ್ಟನ್ಸಿ ಫರ್ಮ/ಪ್ರೋಜೆಕ್ಟ್ ಮೆನೆಜಮೆಂಟ್ ಸರ್ವಿಸ್ ಎಜೆನ್ಸಿ /ಸರಕಾರದ ನೊಂದಾಯಿತ ಪ್ರಾಕ್ಟಿಸಿಂಗ್ ಸಿವಿಲ್ ಇಂಜನೀಯರ್ಸ್ (Project Management consultancy firms/Project Management Service Agencies/ Practicing Civil Engineers registered in Government Registering Authorities) ರವರಿಗೆ ಮೂರನೇ ಪಕ್ಷಗಾರರಿಂದ ಪರಿವೀಕ್ಷಣೆಗಾಗಿ (Third Party Inspection) ಟೆಂಡರ್ ಕರೆಯಲಾಗಿದ್ದು, ನೊಂದಾಯಿತ ಅರ್ಹ ಕನ್ಸಲ್ಟೆಂಟ್ಸ್ ಟೆಂಡರ್‌ನ ವಿವರಗಳಿಗಾಗಿ ವೆಬ್‌ಸೈಟ್ (https://www.eproc.karnataka.gov.in) ಲಾಗಾನ್ ಆಗಿ ಟೆಂಡರ್‌ನ್ನು ಅರ್ಹ ದಸ್ತಾವೆಜ್‌ನೊಂದಿಗೆ ನಿಗದಿತ ದಿನಾಂಕ ಮತ್ತು ವೇಳೆಯಲ್ಲಿ ಆಪ್–ಲೋಡ್ ಮಾಡಬೇಕಾಗಿರುತ್ತದೆ.

ಅ. ಸಂ	ಪ್ರಕಟಣೆ ಸಂ.	ಕೆಲಸದ ಹೆಸರು	ಇ.ಎಂ.ಡಿ ಮೊತ್ತ ರೂ.ಗಳಲ್ಲಿ	ಸೇವೆಗೆ ಬೇಕಾದ ನಿಗದಿತ ಅವಧಿ
1.	21	Third Party Inspection Services for the Work of **“Construction of Automated Driving Test track for RTO Gadag”.**	**35,213.00**	12 Months or till the completion of project.
2.	22	Third Party Inspection Services for the Work of **“Construction of Bus Depot with its sub works at Mundgod”.** (2nd Call)	**20,000.00**	12 Months or till the completion of project.
3.	23	Third Party Inspection Services for the Work of **“Construction of Bus Depot with sub works at Kumta”.** (2nd Call)	**22,050.00**	12 Months or till the completion of project.

ವೇಳಾಪಟ್ಟಿ (1) ಪ್ರೀ ಬಿಡ್ ಮೀಟಿಂಗ್‌ಗಾಗಿ ದಿನಾಂಕ ಮತ್ತು ವೇಳೆ : **19/12/2022** at 12:00 Hrs, (2) ವಿಚಾರಣೆ ಮತ್ತು ಆಕ್ಷೇಪಣೆಗಾಗಿ ಕೊನೆಯ ದಿನಾಂಕ ಮತ್ತು ವೇಳೆ : **19/12/2022** at 17:00 Hrs (3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ : **30/12/2022** at 16:00 Hrs, (4) ಟೆಂಡರ್ ತೆರೆಯುವ ದಿನಾಂಕ ಮತ್ತು ವೇಳೆ : **02/01/2023** at 11:00 Hrs.

ಇನ್ನುಳಿದ ವಿವರಗಳನ್ನು ವಿವರವಾದ ಟೆಂಡರ್ ಪ್ರಕಟಣೆಯಲ್ಲಿರುವಂತೆ ಖಚಿತ ಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸುವುದು. ಹೆಚ್ಚಿನ ವಿವರಗಳನ್ನು ಈ ಕಛೇರಿಯಿಂದ ಪಡೆಯಬಹುದಾಗಿದೆ ಮತ್ತು ಈ ಕಛೇರಿ ದೂರವಾಣಿ ಸಂ. **0831–2332383** ಗೆ ಸಂಪರ್ಕಿಸಬಹುದಾಗಿದೆ ಹಾಗೂ ಸಹಾಯವಾಣಿ (help desk): **080–25501216, 080–25501227** ಸಂಪರ್ಕಿಸಬಹುದಾಗಿದೆ. ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ

2024ಕ್ಕೆ ಪರ್ಯಾಯ ಸರ್ಕಾರ ತರಲು ಯತ್ನ: ಅಖಿಲೇಶ್

ನವದೆಹಲಿ (ಪಿಟಿಐ): 2024ರ ಲೋಕಸಭಾ ಚುನಾವಣೆಯಲ್ಲಿ ಆಡಳಿತಾರೂಢ ಬಿಜೆಪಿಯನ್ನು ಸೋಲಿಸಿ ಪರ್ಯಾಯ ಸರ್ಕಾರ ರಚಿಸುವ ಯತ್ನಗಳು ಆರಂಭವಾಗಿವೆ ಎಂದು ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಸೋಮವಾರ ಹೇಳಿದ್ದಾರೆ.

ಹಣದುಬ್ಬರ ಗರಿಷ್ಠ ಮಟ್ಟ ತಲುಪಿದೆ, ನಿರುದ್ಯೋಗ ಏರಿಕೆಯಾಗುತ್ತಿದೆ ಹಾಗೂ ಸಂವಿಧಾನವು ಜನರಿಗೆ ನೀಡಿರುವ ಹಕ್ಕುಗಳನ್ನು ಸರ್ಕಾರ ಕಸಿದುಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ಪರ್ಯಾಯ ಆಯ್ಕೆ ಅಗತ್ಯ ಎಂದು ಅವರು ಪ್ರತಿಪಾದಿಸಿದ್ದಾರೆ. 2024ರಲ್ಲಿ ಪರ್ಯಾಯ ಸರ್ಕಾರ ಸ್ಥಾಪಿಸಲು ಸತತ ಯತ್ನಗಳು ನಡೆಯುತ್ತಿವೆ. ಪ್ರತಿಪಕ್ಷಗಳ ಮುಖಂಡರಾದ ನಿತೀಶ್‌ಕುಮಾರ್, ಮಮತಾ ಬ್ಯಾನರ್ಜಿ, ಕೆ.ಚಂದ್ರಶೇಖರ ರಾವ್ ಅವರು ಈ ದಿಸೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದಿದ್ದಾರೆ.

ಅಖಿಲೇಶ್ ಅವರ ಪತ್ನಿ, ಮೈನ್‌ಪುರಿ ಲೋಕಸಭಾ ಉಪಚುನಾವಣೆಯಲ್ಲಿ ಗೆದ್ದಿರುವ ಡಿಂಪಲ್ ಯಾದವ್ ಅವರು ಸಂಸತ್ ಸದಸ್ಯರಾಗಿ ಸೋಮವಾರ ಪ್ರಮಾಣವಚನ ಸ್ವೀಕರಿಸಿದರು.

₹2 ಸಾವಿರ ಮುಖಬೆಲೆಯ ನೋಟು ರದ್ದು ಮಾಡಿ: ಬಿಜೆಪಿ ಸಂಸದ ಒತ್ತಾಯ

ನವದೆಹಲಿ (ಪಿಟಿಐ): ‘₹2 ಸಾವಿರ ಮುಖಬೆಲೆಯ ನೋಟುಗಳನ್ನು ಹಂತ ಹಂತವಾಗಿ ರದ್ದುಗೊಳಿಸಬೇಕು. ಅವುಗಳನ್ನು ಹಿಂತಿರುಗಿಸಲು ನಾಗರಿಕರಿಗೆ ಎರಡು ವರ್ಷ ಕಾಲಾವಕಾಶ ನೀಡಬೇಕು’ ಎಂದು ಬಿಜೆಪಿ ಸಂಸದ ಸುಶೀಲ್ ಕುಮಾರ್ ಮೋದಿ ಅವರು ರಾಜ್ಯಸಭೆಯಲ್ಲಿ ಸೋಮವಾರ ಒತ್ತಾಯಿಸಿದ್ದಾರೆ.

ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿ ಮಾತನಾಡಿದ ಅವರು, ‘ದೇಶದ ಬಹುತೇಕ ಎಟಿಎಂಗಳಲ್ಲಿ ₹2 ಸಾವಿರ ಮುಖಬೆಲೆಯ ನೋಟುಗಳು ಲಭ್ಯವಿಲ್ಲ. ಮುಂದಿನ ದಿನಗಳಲ್ಲಿ ಈ ನೋಟುಗಳನ್ನು ಅಮಾನ್ಯೀಕರಿಸಲಾಗುತ್ತದೆ ಎಂಬ ಗಾಳಿ ಸುದ್ದಿ ಕೂಡ ಹಬ್ಬಿದೆ. ಈ ಕುರಿತು ಸರ್ಕಾರವು ಸ್ಪಷ್ಟನೆ ನೀಡಬೇಕು’ ಎಂದು ಆಗ್ರಹಿಸಿದ್ದಾರೆ.

‘ಭಾರತೀಯ ರಿಸರ್ವ್ ಬ್ಯಾಂಕ್, ಮೂರು ವರ್ಷಗಳ ಹಿಂದೆಯೇ ₹2 ಸಾವಿರ ಮುಖಬೆಲೆಯ ನೋಟುಗಳ ಮುದ್ರಣ ಸ್ಥಗಿತಗೊಳಿಸಿದೆ. ₹1 ಸಾವಿರ ಮುಖಬೆಲೆಯ ನೋಟುಗಳ ಚಲಾವಣೆ ಸ್ಥಗಿತವಾಗಿದ್ದ ಸಂದರ್ಭದಲ್ಲೇ ₹2 ಸಾವಿರ ಮುಖಬೆಲೆಯ ನೋಟುಗಳನ್ನು ಚಲಾವಣೆಗೆ ತಂದಿದ್ದರ ಹಿಂದಿನ ಉದ್ದೇಶವೇ ಅರ್ಥವಾಗುತ್ತಿಲ್ಲ’ ಎಂದು ಹೇಳಿದ್ದಾರೆ.

‘₹2 ಸಾವಿರ ಮುಖಬೆಲೆಯ ನೋಟುಗಳನ್ನು ಸಂಗ್ರಹಿಸಿಡಲಾಗುತ್ತಿದೆ. ಡ್ರಗ್ಸ್ ಸೇರಿದಂತೆ ಇತರ ಅಕ್ರಮ ವ್ಯವಹಾರಗಳಿಗೆ ಇದನ್ನು ಬಳಸಲಾಗುತ್ತಿದೆ. ಹಣ ಅಕ್ರಮ ವರ್ಗಾವಣೆಯಲ್ಲೂ ಇದರ ಬಳಕೆ ಹೆಚ್ಚಿದೆ’ ಎಂದಿದ್ದಾರೆ.

ಸಾಲ ನೀಡುವ ಮೊಬೈಲ್ ಆಧಾರಿತ ಆ್ಯಪ್‌ಗಳನ್ನು ನಿಷೇಧಿಸಬೇಕು ಎಂದು ವೈಎಸ್‌ಆರ್ ಕಾಂಗ್ರೆಸ್ ಪಕ್ಷದ ಸಂಸದ ವಿ.ವಿಜಯ್‌ಸಾಯಿ ರೆಡ್ಡಿ ಒತ್ತಾಯಿಸಿದ್ದಾರೆ.

‘ಇಂತಹ ಬಹುಪಾಲು ಆ್ಯಪ್‌ಗಳು ಚೀನಾದಿಂದ ಕಾರ್ಯಾಚರಣೆ ನಡೆಸುತ್ತಿದ್ದು, ಬಳಕೆದಾರರ ಮೊಬೈಲ್‌ನಲ್ಲಿನ ಅತಿ ಸೂಕ್ಷ್ಮ ಹಾಗೂ ಖಾಸಗಿ ಮಾಹಿತಿ ಕದಿಯುವ ಸಾಧ್ಯತೆ ಇದೆ. ಹೀಗಾಗಿ ಕೇಂದ್ರ ಸರ್ಕಾರ ಇವುಗಳನ್ನು ನಿಷೇಧಿಸಬೇಕು’ ಎಂದು ಆಗ್ರಹಿಸಿದ್ದಾರೆ.

16 ಸಚಿವರ ಸಂಪುಟ ಅಸ್ತಿತ್ವಕ್ಕೆ; ಸಮಾರಂಭದಲ್ಲಿ ಪ್ರಧಾನಿ ಮೋದಿ, ಗೃಹ ಸಚಿವ ಶಾ ಭಾಗಿ

ಗುಜರಾತ್: ಭೂಪೇಂದ್ರ ಪಟೇಲ್ ಪ್ರಮಾಣ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಎರಡನೇ ಅವಧಿಗೆ ಗುಜರಾತ್ ಮುಖ್ಯಮಂತ್ರಿಯಾಗಿ ಭೂಪೇಂದ್ರ ಪಟೇಲ್ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದರು. ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಕೇಂದ್ರ ಸಚಿವರು ಹಾಗೂ ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು, ರಾಜ್ಯ ಬಿಜೆಪಿ ಘಟಕದ ಮುಖಂಡರು ಸಮಾರಂಭಕ್ಕೆ ಸಾಕ್ಷಿಯಾದರು.

ಗುಜರಾತ್ ರಾಜ್ಯಪಾಲ ಆಚಾರ್ಯ ದೇವವ್ರತ ಅವರು, ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಭೂಪೇಂದ್ರ ಪಟೇಲ್ ಅವರಿಗೆ ಹೂಗುಚ್ಛ ನೀಡಿ ಅಭಿನಂದಿಸಿದರು. ಪ್ರಧಾನಿ ನರೇಂದ್ರ ಮೋದಿ ಉಪಸ್ಥಿತರಿದ್ದರು –ಪಿಟಿಐ ಚಿತ್ರ

ಪಟೇಲ್ ಅವರ ಜೊತೆ 16 ಶಾಸಕರು ಸಚಿವರಾಗಿ ಪದಗ್ರಹಣ ಮಾಡಿದರು. ಈ ಪೈಕಿ ಎಂಟು ಸಚಿವರಿಗೆ ಸಂಪುಟ ದರ್ಜೆ ನೀಡಲಾಗಿದೆ. 16 ಸಚಿವರ ಪೈಕಿ ಏಳು ಮಂದಿ ಒಬಿಸಿ, ಮೂವರು ಪ್ರಭಾವಿ ಪಾಟೀದಾರ್, ಇಬ್ಬರು ಬುಡಕಟ್ಟು ಹಾಗೂ ತಲಾ ಒಬ್ಬರು ಪರಿಶಿಷ್ಟ ಜಾತಿ, ಬ್ರಾಹ್ಮಣ, ಜೈನ ಹಾಗೂ ರಜಪೂತ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಸಂಪುಟದಲ್ಲಿ ಒಬ್ಬ ಮಹಿಳೆ ಸ್ಥಾನ ಪಡೆದಿದ್ದಾರೆ. ಸಚಿವ ಸ್ಥಾನ ಹಂಚಿಕೆಯಲ್ಲಿ ಸೌರಾಷ್ಟ್ರ ಭಾಗದವರಿಗೆ ಹೆಚ್ಚು ಆದ್ಯತೆ ನೀಡಲಾಗಿದೆ.

ಗಾಂಧಿನಗರದ ಹೆಲಿಪ್ಯಾಡ್ ಮೈದಾನದಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಆಚಾರ್ಯ ದೇವವ್ರತ ಅವರು ಪ್ರತಿಜ್ಞಾವಿಧಿ ಬೋಧಿಸಿದರು. ಪ್ರಮಾಣವಚನದ ಬಳಿಕ, ಭೂಪೇಂದ್ರ ಅವರು ನಗರದ ತ್ರಿಮೂರ್ತಿ ದೇವಸ್ಥಾನಕ್ಕೆ ತೆರಳಿದರು. ಸಂಜೆ ಸಚಿವ ಸಂಪುಟದ ಮೊದಲ ಸಭೆ ನಡೆಸಿದರು. ಕಾಂಗ್ರೆಸ್‌ನಿಂದ ಬಿಜೆಪಿಗೆ ವಲಸೆ ಬಂದಿದ್ದ ಬಲವಂತ್ ಸಿಂಗ್ ರಜಪೂತ್, ರಾಘವ್‌ಜೀ ಪಟೇಲ್ ಹಾಗೂ ಕುನ್ವರ್‌ಜೀ ಬಾಲವಿಯಾ ಅವರಿಗೆ ಸಚಿವ ಸ್ಥಾನ ನೀಡಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರೂ ಪ್ರಮಾಣವಚನ ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಗೃಹ, ಕಂದಾಯ ಖಾತೆ ಸಿ.ಎಂಗೆ

ಸೋಮವಾರ ರಾತ್ರಿ ನೂತನ ಸಚಿವರಿಗೆ ಖಾತೆಗಳನ್ನು ಹಂಚಿಕೆ ಮಾಡಿದ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು, ಗೃಹ ಹಾಗೂ ಕಂದಾಯ ಖಾತೆಗಳನ್ನು ತಮ್ಮ ಬಳಿ ಉಳಿಸಿಕೊಂಡಿದ್ದಾರೆ. ಕನುಭಾಯಿ ದೇಸಾಯಿ ಅವರಿಗೆ ಹಣಕಾಸು ಖಾತೆಯ ಜವಾಬ್ದಾರಿ ವಹಿಸಿದ್ದಾರೆ. ಸಂಪುಟದ ಏಕೈಕ ಮಹಿಳೆ ಭಾನುಬೆನ್ ಬಬಾರಿಯಾ ಅವರಿಗೆ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಗಳನ್ನು ಹಂಚಿಕೆ ಮಾಡಲಾಗಿದೆ.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ರಾಯಚೂರು

ಸಂ:ಜಿಪರಾ/ಅಭಿವೃದ್ಧಿ/ಸ್ಮಾ.ಕ್ಲಾಸ್/ಇ–ಟೆಂಡರ್/2022–23 ದಿನಾಂಕ: 07–12–2022

ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ

ವಿಷಯ: 2022–23ನೇ ಸಾಲಿನ ರಾಜ್ಯ ಹಣಕಾಸು ಆಯೋಗ ಜಿಲ್ಲಾ ಪಂಚಾಯತ್ ನಿರ್ಬಂಧಿತ ಅನುದಾನದ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡ ಸರ್ಕಾರಿ ಹಿರಿಯ/ಕಿರಿಯ ಪ್ರೌಢ ಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ನಿರ್ಮಾಣ ಕಾಮಗಾರಿಗಳಿಗಾಗಿ ಇ–ಟೆಂಡರ್ ಆಹ್ವಾನ ಕುರಿತು.

ರಾಯಚೂರು ಜಿಲ್ಲೆಯ ಗ್ರಾಮೀಣ ಪದೇಶಗಳಲ್ಲಿನ ಸರ್ಕಾರಿ ಹಿರಿಯ/ಕಿರಿಯ/ಪ್ರೌಢಶಾಲೆಯ ವಿದ್ಯಾರ್ಥಿಗಳ ಶೈಕ್ಷಣಿಕ ಉಪಯೋಗಕ್ಕಾಗಿ ಸ್ಮಾರ್ಟ್‌ಕ್ಲಾಸ್ ನಿರ್ಮಾಣ ಕಾಮಗಾರಿಗಳಿಗಾಗಿ 2022–23ನೇ ಸಾಲಿನ “ರಾಜ್ಯ ಹಣಕಾಸು ಆಯೋಗ ಜಿಲ್ಲಾ ಪಂಚಾಯತ್ ನಿರ್ಬಂಧಿತ ಅನುದಾನ”ದ ಕ್ರಿಯಾ ಯೋಜನೆಯಲ್ಲಿ ಒಟ್ಟು 23 ಶಾಲೆಗಳಿಗೆಒಟ್ಟು ರೂ.92.00 ಲಕ್ಷಗಳಿಗೆ ಅನುಮೋದನೆ ನೀಡಲಾಗಿರುತ್ತದೆ.

2022–23ನೇ ಸಾಲಿನ “ರಾಜ್ಯ ಹಣಕಾಸು ಆಯೋಗ ಜಿಲ್ಲಾ ಪಂಚಾಯತ್ ನಿರ್ಬಂಧಿತ ಅನುದಾನ” ದ ಕ್ರಿಯಾ ಯೋಜನೆಯಲ್ಲಿ ಅನುಮೋದನೆಗೊಂಡ ಸರ್ಕಾರಿ ಹಿರಿಯ/ಕಿರಿಯ/ಪ್ರೌಢಶಾಲೆಗಳಿಗೆ ಸ್ಮಾರ್ಟ್‌ಕ್ಲಾಸ್ ನಿರ್ಮಾಣ ಕಾಮಗಾರಿಗಳಿಗಾಗಿ e-tender ಕರೆಯಲಾಗಿದೆ. ಸಕ್ಷಮಪ್ರಾಧಿಕಾರದಲ್ಲಿ ನೊಂದಾಯಿತ ಮಾರಾಟಗಾರರು/ಸರಬರಾಜುದಾರರು ಟೆಂಡರ್ ನಲ್ಲಿ ಭಾಗವಹಿಸಬಹುದಾಗಿದ್ದು, ಟೆಂಡರ್‌ನಲ್ಲಿ ಅನುಮೋದಿಸುವ ದರಗಳು ದಿನಾಂಕ: 31–03–2023 ರ ವರೆಗೆ ಚಾಲ್ತಿಯಲ್ಲಿರುತ್ತವೆ. ಒಪ್ಪಿದದರಗಳ ಅವಧಿಯನ್ನು ನಿಗಧಿತ ದಿನಾಂಕ್ಕಿಂತ ಮುಂಚಿತವಾಗಿ ಮುಕ್ತಾಯಗೊಳಿಸುವ ಅಥವಾರದ್ದು ಪಡಿಸುವ ಅಧಿಕಾರ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಪಂಚಾಯತ್, ರಾಯಚೂರುರವರು ಹೊಂದಿರುತ್ತಾರೆ.

1) ಶೆಡ್ಯೂಲಗಳನ್ನು ಆನ್‌ಲೈನ್‌ನಲ್ಲಿ ಪ್ರಚುರಪಡಿಸುವ ದಿನಾಂಕ:07–12–2022 2) EMD ಮೊತ್ತ. ರೂ.1,85,000.00 3) ಭರ್ತಿಮಾಡಿದ ಟೆಂಡರ್ ರಂಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ: 07–12–2022 to 26–12–2022 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸ್ಥಳ 27–12–2022, ಜಲ ನಿರ್ಮಲ ಸಭಾಂಗಣ, ಜಿಲ್ಲಾ ಪಂಚಾಯತ್, ರಾಯಚೂರು 5) ಇ–ಮೇಲ್ ವಿಳಾಸ ceo_zp_rch@nic.in AND zpraichurceo@gmail.com ಟೆಂಡರ್ ಪ್ರಕಟಣೆಯಲ್ಲಿನ ಮಾಹಿತಿಯನ್ನು ಜಿಲ್ಲಾ ಪಂಚಾಯತ್ ಅಧಿಕೃತ Website:http://zpraichur.kar.nic.in ನಿಂದಲೂ ಪಡೆಯಬಹುದಾಗಿದೆ. ಸದರಿಟೆಂಡರನ್ನು e-procurement portal ಪದ್ಧತಿಯಂತೆ website:http//eproc. karnataka.gov. in online ಮುಖಾಂತರಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳ ಅಗತ್ಯವಿದ್ದಲ್ಲಿ ಕಛೇರಿ ಸಮಯದಲ್ಲಿ ದೂರವಾಣಿ ಸಂಖ್ಯೆ:08532–227055 ರಲ್ಲಿ ಸಂಪರ್ಕಿಸಿ, ಮಾಹಿತಿ ಪಡೆಯಬಹುದಾಗಿದೆ.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ವಾ.ಸಾ.ಸಂ.ಇ/ರಾಯಚೂರು/465/ಎಂ.ಸಿ & ಎ/2022–23 ಜಿಲ್ಲಾ ಪಂಚಾಯತಿ ರಾಯಚೂರು

ಸಂಕ್ಷಿಪ್ತ ಸುದ್ದಿ

ಪಳೆಯುಳಿಕೆಯೇತರ ಇಂಧನ ಬಳಕೆ: ಮಸೂದೆ ಅಂಗೀಕಾರ

ನವದೆಹಲಿ (ಪಿಟಿಐ): ‘ಪಳೆಯುಳಿಕೆಯೇತರ ಇಂಧನ ಮೂಲಗಳಾದ ಬಯೋಮಾಸ್, ಇಥೆನಾಲ್ ಮತ್ತು ಹಸಿರು ಹೈಡ್ರೋಜನ್ ಬಳಕೆಯನ್ನು ಕಡ್ಡಾಯಗೊಳಿಸುವ ಇಂಧನ ಸಂರಕ್ಷಣಾ ಮಸೂದೆ (ತಿದ್ದುಪಡಿ)–2022ಕ್ಕೆ ರಾಜ್ಯಸಭೆಯಲ್ಲಿ ಅಂಗೀಕಾರ ದೊರೆತಿದೆ.

ಈ ವರ್ಷದ ಆಗಸ್ಟ್‌ನಲ್ಲಿ ನಡೆದಿದ್ದ ಲೋಕಸಭಾ ಅಧಿವೇಶನದಲ್ಲಿ ಈ ಮಸೂದೆಗೆ ಅಂಗೀಕಾರ ದೊರೆತಿತ್ತು. ರಾಜ್ಯಸಭೆಯಲ್ಲಿ ಸೋಮವಾರ ಇದನ್ನು ಧ್ವನಿ ಮತದ ಮೂಲಕ ಅಂಗೀಕರಿಸಲಾಯಿತು. ಇಂಧನ ಬಳಕೆಯ ಮಾನದಂಡಗಳನ್ನು ಅನುಸರಿಸಲು ವಿಫಲವಾಗುವ ಕೈಗಾರಿಕಾ ಘಟಕಗಳು ಅಥವಾ ಹಡಗುಗಳು, ವಾಹನ ಉತ್ಪಾದನಾ ಕಂಪನಿಗಳಿಗೆ ದಂಡ ವಿಧಿಸುವ ಅವಕಾಶವನ್ನು ಈ ಮಸೂದೆ ನೀಡಿದೆ.

ನವೀಕರಿಸಬಹುದಾದ ಇಂಧನಗಳ ಬಳಕೆ ಉತ್ತೇಜಿಸುವ ಹಾಗೂ ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ ತನ್ನ ಅಂತರರಾಷ್ಟ್ರೀಯ ಬದ್ಧತೆ ಸಾಧಿಸಲು ದೇಶಕ್ಕೆ ಈ ಮಸೂದೆ ಸಹಕಾರಿಯಾಗಿದೆ. ಪ್ಯಾರಿಸ್ ಒಪ್ಪಂದಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲೂ ಇದು ಭಾರತಕ್ಕೆ ನೆರವಾಗಲಿದೆ.

ಮಸೂದೆ ಮೇಲಿನ ಚರ್ಚೆಯ ವೇಳೆ ಮಾತನಾಡಿದ ನವೀಕರಿಸಬಹುದಾದ ಇಂಧನ ಸಚಿವ ಆರ್.ಕೆ.ಸಿಂಗ್, ‘ಈ ಮಸೂದೆಯು ಪರಿಸರ ಸ್ನೇಹಿಯಾಗಿದ್ದು, ದೇಶದಲ್ಲಿ ಕಾರ್ಬನ್ ಟ್ರೇಡಿಂಗ್‌ಗೆ ಅನುವು ಮಾಡಿಕೊಡಲಿದೆ’ ಎಂದು ಹೇಳಿದ್ದಾರೆ.

‘11 ಸಾವಿರ ಬೋಧಕ ಹುದ್ದೆ ಖಾಲಿ’

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ (ಐಐಎಂ) 11 ಸಾವಿರ ಬೋಧಕ ಹುದ್ದೆಗಳು ಖಾಲಿಯಿವೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಲೋಕಸಭೆಗೆ ತಿಳಿಸಿದರು.

‘ತ್ವರಿತ ಗತಿಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸೂಚಿಸಲಾಗಿದೆ. ಕೇಂದ್ರೀಯ ವಿಶ್ವವಿದ್ಯಾಲಯವು ಸ್ವಾಯತ್ತ ಸಂಸ್ಥೆಯಾಗಿದ್ದು, ನಿಯಮದ ಪ್ರಕಾರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಸಂಸ್ಥೆ	ಮಂಜೂರಾದ ಹುದ್ದೆ	ಖಾಲಿ ಇರುವ ಹುದ್ದೆ
ಕೇಂದ್ರೀಯ ವಿಶ್ವವಿದ್ಯಾಲಯ	18,956	6,180
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ	11,170	4,502
ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್	1,566	493

ಸಿಬಿಎಸ್‌ಇ 10ನೇ ತರಗತಿ: ಸಾಮರ್ಥ್ಯ ಆಧಾರಿತ ಪ್ರಶ್ನೆಗಳು

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಮಂಡಳಿಯು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ (2022–23) ನಡೆಸುವ 10ನೇ ತರಗತಿ ಪರೀಕ್ಷೆಯಲ್ಲಿ ಶೇ 40 ಹಾಗೂ 12ನೇ ತರಗತಿ ಪರೀಕ್ಷೆಯಲ್ಲಿ ಶೇ 30ರಷ್ಟು ಸಾಮರ್ಥ್ಯ ಆಧಾರಿತ ಪ್ರಶ್ನೆಗಳು ಒಳಗೊಂಡಿರುತ್ತವೆ ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.

ಈ ಪ್ರಶ್ನೆಗಳು ವಸ್ತುನಿಷ್ಠ ಮಾದರಿ, ಸಮರ್ಥನೆ ಮತ್ತು ತಾರ್ಕಿಕ ವಿವರಣೆಗಳನ್ನು ಒಳಗೊಂಡಿರುತ್ತವೆ ಎಂದು ಶಿಕ್ಷಣ ಸಚಿವಾಲಯದ ರಾಜ್ಯ ಖಾತೆ ಸಚಿವರಾದ ಅನ್ನಪೂರ್ಣಾ ದೇವಿ ಅವರು ಲೋಕಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದಾರೆ.

ನೂತನ ಶಿಕ್ಷಣ ನೀತಿಯು (2020) ಶೈಕ್ಷಣಿಕ ಮಾದರಿಗೆ ಸಂಬಂಧಿಸಿದಂತೆ ಮಾಡಿರುವ ಶಿಫಾರಸುಗಳನ್ನು ಪಾಲಿಸುವಂತೆ ಸಿಬಿಎಸ್‌ಇಯ ನೋಂದಾಯಿತ ಶಾಲೆಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

‘ಆಶಿಶ್ ಮಿಶ್ರಾರನ್ನು ಎಷ್ಟು ದಿನ ಕಸ್ಟಡಿಯಲ್ಲಿ ಇರಿಸಲು ಸಾಧ್ಯ?’

ನವದೆಹಲಿ (ಪಿಟಿಐ): ಕೇಂದ್ರ ಸಚಿವ ಅಜಯ್ ಕುಮಾರ್ ಮಿಶ್ರಾ ಅವರ ಪುತ್ರ ಆಶಿಶ್ ಮಿಶ್ರಾ ಅವರನ್ನು ಎಷ್ಟು ದಿನ ಕಸ್ಟಡಿಯಲ್ಲಿ ಇರಿಸಲು ಸಾಧ್ಯ ಎಂದು ಸುಪ್ರೀಂ ಕೋರ್ಟ್ ಸೋಮವಾರ ಉತ್ತರ ಪ್ರದೇಶ ಸರ್ಕಾರವನ್ನು ಪ್ರಶ್ನಿಸಿದೆ.

ಲಖಿಂಪುರ ಖೀರಿ ಹಿಂಸಾಚಾರ ಪ್ರಕರಣದ ವಿಚಾರಣೆಯನ್ನು ಪೂರ್ಣಗೊಳಿಸಲು ಬೇಕಾಗುವ ಕಾಲಾವಧಿಯನ್ನು ಸ್ಪಷ್ಟಪಡಿಸುವಂತೆಯೂ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರಿಗೆ ಸೂಚಿಸಿದೆ.

‘ಆರೋಪಿಗಳು ಒಂದು ವರ್ಷದಿಂದ ಜೈಲಿನಲ್ಲಿದ್ದಾರೆ. ಇದೀಗ ಆರೋಪಪಟ್ಟಿಯೂ ಸಲ್ಲಿಕೆಯಾಗಿ, ನ್ಯಾಯಾಲಯವು ಅವರ ವಿರುದ್ಧ ದೋಷಾರೋಪವನ್ನೂ ಹೊರಿಸಿದೆ. ಈ ಪ್ರಕರಣದಲ್ಲಿ ಎಲ್ಲರ ಹಿತಾಸಕ್ತಿಯನ್ನೂ ನಾವು ಸಮತೋಲನಗೊಳಿಸಬೇಕಾಗಿದೆ’ ಎಂದು ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಕೃಷ್ಣ ಮುರಾರಿ ಅವರಿದ್ದ ನ್ಯಾಯಪೀಠ ಹೇಳಿದೆ.

ಹಿಂಸಾಚಾರದ ವೇಳೆ ವಾಹನದಲ್ಲಿದ್ದ ಮೂವರು ಸಾವಿಗೀಡಾಗಿರುವುದಕ್ಕೆ ಸಂಬಂಧಿಸಿ ದಾಖಲಾಗಿದ್ದ ಇನ್ನೊಂದು ಪ್ರಕರಣದ ಸ್ಥಿತಿಗತಿಗಳ ಕುರಿತು ಪ್ರಮಾಣಪತ್ರ ಸಲ್ಲಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನ್ಯಾಯಾಲಯವು ನಿರ್ದೇಶನ ನೀಡಿದೆ.

ಪ್ರಕರಣದ ಮುಂದಿನ ವಿಚಾರಣೆಯನ್ನು ನ್ಯಾಯಾಲಯವು ಜನವರಿ 11ಕ್ಕೆ ನಿಗದಿಪಡಿಸಿದೆ. ಆಶಿಶ್, ಇತರ 12 ಮಂದಿ ಆರೋಪಿಗಳ ವಿರುದ್ಧ ಡಿಸೆಂಬರ್ 6ರಂದು ವಿಚಾರಣಾ ನ್ಯಾಯಾಲಯವು ದೋಷಾರೋಪ ಹೊರಿಸಿತ್ತು.

ಜ.5ಕ್ಕೆ ಶಿವಸೇನಾ ಬಣಗಳ ವಿಚಾರಣೆ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಬಣಗಳ ವಾದ ಆಲಿಸಲು ಮುಂದಿನ ವಿಚಾರಣೆಯನ್ನು ಜನವರಿ 5ಕ್ಕೆ ಚುನಾವಣಾ ಆಯೋಗವು(ಇ.ಸಿ) ನಿಗದಿಪಡಿಸಿದೆ.

ಬಣ ವಿವಾದಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಇ.ಸಿ ಸೋಮವಾರ ನಡೆಸಿತು. ಪಕ್ಷದ ಹೆಸರು ಮತ್ತು ಚಿಹ್ನೆಗಾಗಿ ಹಕ್ಕು ಮಂಡಿಸಿ ಎದುರಾಳಿ ಬಣ ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲು ಸಮಯಾವಕಾಶ ನೀಡಬೇಕೆಂದು ಉಭಯ ಬಣಗಳ ಪರ ವಕೀಲರು ಮನವಿ ಮಾಡಿದ ನಂತರ ಇ.ಸಿ ಈ ನಿರ್ಧಾರ ತೆಗೆದುಕೊಂಡಿತು. ಠಾಕ್ರೆ ಮತ್ತು ಶಿಂದೆ ಬಣಗಳ ಪರವಾಗಿ ಕ್ರಮವಾಗಿ ಹಿರಿಯ ನಾಯಕರಾದ ಕಪಿಲ್ ಸಿಬಲ್ ಮತ್ತು ಮಹೇಶ್ ಜೇಠ್ಮಲಾನಿ ಅವರು ಚುನಾವಣಾ ಆಯೋಗದ ಎದುರು ಹಾಜರಾಗಿದ್ದರು.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

An ISO9001:2015 & 14001:2015 Company

ಶ್ರೀಗಂಧ ನಗರ, ಅಂಚೆ ಪೆಟ್ಟಿಗೆ ಸಂಖ್ಯೆ. 5531, ನಂ. 27, ಕೈಗಾರಿಕಾ ಉಪನಗರ, ಬೆಂಗಳೂರು–ಪುಣೆ ಹೆದ್ದಾರಿ, ಬೆಂಗಳೂರು–560055, ದೂರವಾಣಿ: 22164879, 22164886, 22164880
ಇ–ಮೇಲ್: ksdl.dgmmtls@gmail.com ವೆಬ್‌ಸೈಟ್: www.mysoresandal.org

ದಿನಾಂಕ: 12.12.2022

ಟೆಂಡರ್ ಆಹ್ವಾನ ಪ್ರಕಟಣೆ

ಸರಬರಾಜುದಾರರು/ಗುತ್ತಿಗೆದಾರರುಗಳ ನೋಂದಣಿಗಾಗಿ ಟೆಂಡರ್ ಪ್ರಕಟಣೆ. (2023–2024)

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಬೆಂಗಳೂರು–55 (ಕೆಎಸ್&ಡಿಎಲ್) ಕಂಪನಿಯು ಸಾಬೂನುಗಳು, ಮಾರ್ಜಕಗಳು, ಸೌಂದರ್ಯ ಸಾಧನಗಳು ಮತ್ತು ಅಗರಬತ್ತಿಗಳ ತಯಾರಿಕೆಯಲ್ಲಿ ನಿರತವಾಗಿದೆ. ಸದರಿ ಕಂಪನಿಗೆ ಕೆಳಕಂಡವುಗಳ ಉತ್ಪಾದನೆ, ನಿರ್ವಹಣೆ ಮತ್ತು ಸರ್ವೀಸಿಂಗ್‌ಗಾಗಿ ಹಲವಾರು ಕಚ್ಚಾ ಸಾಮಗ್ರಿಗಳು, ಪ್ಯಾಕಿಂಗ್ ಸಾಮಗ್ರಿಗಳು, ಇಂಜಿನಿಯರಿಂಗ್ ಸ್ಪೇರ್‌ಗಳು, ಲೇಖನ ಸಾಮಗ್ರಿಗಳ ಅಗತ್ಯವಿರುತ್ತದೆ. ಅವುಗಳೆಂದರೆ:

(1)ಡಿಎಫ್ಎ ಸೋಪ್ ನೂಡಲ್ಸ್, ಕೊಬ್ಬರಿ ಎಣ್ಣೆ (2) ಸುಗಂಧ ರಾಸಾಯನಿಕಗಳು, ಎಸೆನ್ಷಿಯಲ್ ಆಯಿಲ್‌ಗಳು ಮತ್ತು ಇತರೆ ಸುಗಂಧ ಸಾಮಗ್ರಿಗಳು (3) ಮಾರ್ಜಕಗಳು, ಸೌಂದರ್ಯ ಸಾಧನಗಳ ಕಚ್ಚಾ ಸಾಮಗ್ರಿಗಳು (4) ಪ್ಯಾಕಿಂಗ್ ಸಾಮಗ್ರಿಗಳಾದ ಕಾಗದ ಮತ್ತು ಪೇಪರ್ ಬೋರ್ಡ್ ಉತ್ಪನ್ನಗಳು, ಪ್ರಿಂಟೆಡ್ ಕಾರ್ಟನ್‌ಗಳು, ರ್‍ಯಾಪರ್‌ಗಳು, ಪಾಲಿ ಬ್ಯಾಗ್‌ಗಳು, ಕಾರುಗೇಟೆಡ್ ಬಾಕ್ಸ್‌ಗಳು ಮತ್ತು PET/HDPE Bottles ಇತ್ಯಾದಿ (5) ರಾಸಾಯನಿಕಗಳಾದ LABSA, Soda Ash, Caustic Soda Lye ಮುಂತಾದವುಗಳು (6) 8'' ಮತ್ತು 9''ನ ಕಚ್ಚಾ ಅಗರಬತ್ತಿ ಮತ್ತು ಅಗರಬತ್ತಿ ಪ್ಯಾಕಿಂಗ್ ಸಾಮಗ್ರಿಗಳು (7) ಹೊರ ಗುತ್ತಿಗೆ ಆಧಾರದ ಮೇಲೆ ಟೂತ್‌ಪೇಸ್ಟ್ ಮತ್ತು ಸ್ಯಾನಿಟರಿ ನ್ಯಾಪ್‌ಕಿನ್ ಪೂರೈಕೆ (8) ಮಾನವ ಸಂಪನ್ಮೂಲವನ್ನು ಗುತ್ತಿಗೆ ಆಧಾರದ ಮೇಲೆ ಹೊರಗುತ್ತಿಗೆ ನೀಡುವುದು. (9) ಬಿಡಿಭಾಗಗಳು, ಇಂಜಿನಿಯರಿಂಗ್ ಐಟಂಗಳು, ಯಂತ್ರೋಪಕರಣಗಳು ಮತ್ತು ಬಳಕೆ ಸಾಮಗ್ರಿಗಳು, ಲೇಖನ ಸಾಮಗ್ರಿ ಐಟಂಗಳು (10) ಭಾರತದಾದ್ಯಂತ ಇರುವ ನಮ್ಮ ವಿವಿಧ ಶಾಖೆಗಳಿಗೆ ಸಿದ್ಧಪಡಿಸಿದ ಉತ್ಪನ್ನಗಳ ಸಾಗಾಣಿಕೆ. (11) ಸೋಪುಗಳ ತಯಾರಿಕೆಗೆ ಹೊರಗುತ್ತಿಗೆಗೆ ನೀಡುವುದು (12) ಸಿವಿಲ್ ಕಾಮಗಾರಿಗಳು (13) ವಿವಿಧ ದೇಶಗಳಿಗೆ ಉತ್ಪನ್ನವಾರು ಆಮದು ಮತ್ತು ರಫ್ತು ಬಗ್ಗೆ ಕ್ಲಿಯರಿಂಗ್ ಮತ್ತು ಫಾರ್ವರ್ಡಿಂಗ್ ಏಜೆಂಟ್ (14) ಜಾಹೀರಾತುಗಳು (15) ಸಾಬೂನುಗಳು (ಪ್ರೀಮಿಯಂ, ಪಾಪ್ಯೂಲರ್), ಮಾರ್ಜಕಗಳು, ಸೌಂದರ್ಯ ಸಾಧನಗಳು, ಅಗರಬತ್ತಿಗಳ ರಫ್ತು (16) ಶ್ರೀಗಂಧದೆಣ್ಣೆ ಮತ್ತು ಇತರೆ ಸಾಮಗ್ರಿಗಳು ಮತ್ತು ಸೇವೆಗಳು ಇತ್ಯಾದಿ.

ಸಾಮಗ್ರಿಯ ಬೆಲೆ ಪ್ರತಿ ಖರೀದಿಗೆ ರೂ. 1.00 ಲಕ್ಷ ಮತ್ತು ಅದಕ್ಕೂ ಹೆಚ್ಚಿದ್ದರೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಿಸಲಾಗುತ್ತದೆ. ಈ ಸಂಬಂಧವಾಗಿ ನಿಮ್ಮ ಕಂಪನಿಯನ್ನು ಕರ್ನಾಟಕ ಸರ್ಕಾರದ ಇ–ಆಡಳಿತ ಇಲಾಖೆಯಲ್ಲಿ ನೋಂದಣಿ ಮಾಡಿಸಬೇಕಾಗಿ ಕೋರುತ್ತೇವೆ. ಹೆಚ್ಚಿನ ವಿವರಗಳಿಗಾಗಿ ನೀವು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನ್ನು ವೀಕ್ಷಿಸಬಹುದಾಗಿದೆ.

ಸದರಿ ಸಾಮಗ್ರಿಗಳ ಸರಬರಾಜುದಾರರು/ಗುತ್ತಿಗೆದಾರರುಗಳು ಇದುವರೆಗೆ ಕೆಎಸ್&ಡಿಎಲ್‌ನಲ್ಲಿ ನೋಂದಣಿ ಮಾಡಿಸಿರದಿದ್ದಲ್ಲಿ ಕೆಎಸ್&ಡಿಎಲ್‌ನ ಸಾಮಗ್ರಿ ವಿಭಾಗ, ಅಂಚೆ ಪೆಟ್ಟಿಗೆ ಸಂಖ್ಯೆ. 5531, ಶ್ರೀಗಂಧದ ನಗರ, ನಂ. 27, ಕೈಗಾರಿಕಾ ಉಪನಗರ, ಬೆಂಗಳೂರು–ಪುಣೆ ಹೆದ್ದಾರಿ, ರಾಜಾಜಿನಗರ, ಬೆಂಗಳೂರು–560055 ಇಲ್ಲಿಂದ ನಗದಾಗಿ ಅಥವಾ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ, ಬೆಂಗಳೂರು–55 ಇವರ ಪರವಾಗಿ ಪಡೆದ ಡಿಡಿ ರೂಪದಲ್ಲಿ ರೂ.615/– ಮೊತ್ತದ ನಿಗದಿತ ಶುಲ್ಕ ಪಾವತಿ ಮಾಡಿ ನಿಗದಿತ ನಮೂನೆ ಪಡೆದು ಸ್ವತಃ ನೋಂದಣಿ ಮಾಡಿಸಿಕೊಳ್ಳುವುದು. ಭರ್ತಿ ಮಾಡಿದ ನೋಂದಣಿ ನಮೂನೆಯನ್ನು ಸಂಬಂಧಿಸಿದ ದಾಖಲೆ ಪತ್ರಗಳೊಡನೆ ಅರ್ಜಿ ಪಡೆದುಕೊಂಡ ಕೂಡಲೇ ಕಂಪನಿಗೆ ಸಲ್ಲಿಸತಕ್ಕದ್ದು. ಇದನ್ನು e-Procurement/ಕಂಪನಿಯ ಖರೀದಿ ಕೈಪಿಡಿ ಉಪಬಂಧಗಳ ಅನ್ವಯ ನೋಂದಣಿ ಮಾಡಲಾಗುವುದು. ಆಸಕ್ತಿಯುಳ್ಳ ವ್ಯಕ್ತಿಗಳು ಈ ಸಂಬಂಧ ಯಾವುದೇ ಸ್ಪಷ್ಟನೆಗಳು ಬೇಕಿದ್ದಲ್ಲಿ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ ವಿಭಾಗ), ಕೆಎಸ್&ಡಿಎಲ್ ಇವರನ್ನು ಸಂಪರ್ಕಿಸಬಹುದು.

ತಯಾರಕರುಗಳಿಗೆ **(Direct Manufacturers)** ಆದ್ಯತೆ ನೀಡಲಾಗುವುದು. ಆದ್ದರಿಂದ ಆಸಕ್ತಿಯುಳ್ಳ ತಯಾರಕರು ಇ–ಪ್ರೊಕ್ಯೂರ್‌ಮೆಂಟ್ ಪ್ರಕ್ರಿಯೆ ಮೂಲಕ ನಮ್ಮ ಟೆಂಡರಿನಲ್ಲಿ ಭಾಗವಹಿಸಬಹುದು.

ಸಹಿ/– ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

❦ ಸುಭಾಷಿತ ❦

ಶಾಲೆಯಲ್ಲಿ ವಿದ್ಯೆ ಕಲಿಸುವವರು ಮಾತ್ರ ಶಿಕ್ಷಕರಲ್ಲ. ನಮ್ಮ ಸರಿ- ತಪ್ಪುಗಳನ್ನು ಗುರುತಿಸಿ ಬುದ್ಧಿ ಹೇಳುವ ಪ್ರತಿಯೊಬ್ಬರೂ ಶಿಕ್ಷಕರೇ. **- ಎಸ್. ರಾಧಾಕೃಷ್ಣನ್**

ಉಪರಾಷ್ಟ್ರಪತಿ ಧನಕರ್ ಮಾತು ಅನಗತ್ಯ ಹಾಗೂ ಅಪಾಯಕಾರಿ

ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಈಚೆಗೆ ಕೆಲವು ಸಮಯದಿಂದ ಕಟು ಟೀಕೆಗಳನ್ನು ಮಾಡುತ್ತ ಬಂದಿದ್ದಾರೆ. ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಈಗ ರಿಜಿಜು ಅವರ ಟೀಕೆಗಳನ್ನು ಮೇಲ್ಪಟ್ಟಕ್ಕೆ ಒಯ್ದಿದ್ದಾರೆ. ನ್ಯಾಯಮೂರ್ತಿಗಳ ನೇಮಕಕ್ಕೆ ಈಗ ಚಾಲ್ತಿಯಲ್ಲಿ ಇರುವ ವ್ಯವಸ್ಥೆಯನ್ನು ಕೆಟ್ಟದಾಗಿ ಬಿಂಬಿಸಲು ಅಧಿಕಾರದಲ್ಲಿ ಇರುವ ವ್ಯಕ್ತಿಗಳಿಂದ ನಡೆದಿರುವ ಸಾಮೂಹಿಕ ಯತ್ನವೊಂದರ ಭಾಗ ಈ ಟೀಕೆಗಳು ಎಂಬ ಆರೋಪಗಳಿಗೆ ಪುರಾವೆಯಾಗುವಂತೆ ಇವೆ ಉಪರಾಷ್ಟ್ರಪತಿಯವರ ಮಾತುಗಳು. ಇದುವರೆಗೆ ಇಂತಹ ಮಾತುಗಳನ್ನು ಸಚಿವರು ಆಡುತ್ತಿದ್ದರು. ಈಗ, ಇಂತಹ ಮಾತುಗಳ ಪರವಾಗಿ ತಾವೂ ಇದ್ದೇವೆ ಎಂಬಂತೆ ರಾಜ್ಯಸಭೆಯ ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿ ತೋರಿಸಿಕೊಳ್ಳಬಾರದಿತ್ತು. ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದ ಕ್ರಮವನ್ನು ಧನಕರ್ ಅವರು ಈಚೆಗೆ ಟೀಕಿಸಿದ್ದಾರೆ. ಕಾಯ್ದೆಯನ್ನು ಅಸಿಂಧುಗೊಳಿಸಿದ್ದು ಸಂಸದೀಯ ಸಾರ್ವಭೌಮತ್ವವನ್ನು ದೊಡ್ಡಮಟ್ಟದಲ್ಲಿ ಬಿಟ್ಟುಕೊಟ್ಟ ಹಾಗೂ ಜನರ ಆದೇಶವನ್ನು ಉಪೇಕ್ಷೆ ಮಾಡಿದ ಕಣ್ಣಿಗೆ ರಾಚುವಂತಹ ನಿದರ್ಶನ ಎಂದು ಧನಕರ್ ಈಚೆಗೆ ಹೇಳಿದ್ದಾರೆ. ರಾಜ್ಯಸಭೆಯ ಸಭಾಪತಿಯಾಗಿ ಮಾಡಿದ ಮೊದಲ ಭಾಷಣದಲ್ಲಿಯೇ ಅವರು ಈ ಮಾತುಗಳನ್ನು ಆಡಿದ್ದಾರೆ. ಇಂತಹ ಟೀಕೆಗಳನ್ನು ಅವರು ಈ ಮೊದಲೂ ಮಾಡಿದ್ದಾರೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರ ಸಮ್ಮುಖದಲ್ಲಿಯೇ ಅವರು ಇಂತಹ ಮಾತನ್ನು ಆಡಿದ್ದಾರೆ.

ಉಪರಾಷ್ಟ್ರಪತಿಯವರ ಮಾತಿನ ಹಿಂದಿರುವ ಚಿಂತನೆಯು ನ್ಯಾಯಾಂಗ, ಕಾರ್ಯಾಂಗ ಹಾಗೂ ಶಾಸಕಾಂಗದ ಅಧಿಕಾರದ ಗಡಿಗಳನ್ನು ಗುರುತಿಸಿರುವ ವ್ಯವಸ್ಥೆಗೆ ಪೂರಕವಾಗಿ ಇಲ್ಲ

ಉನ್ನತ ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವ ವ್ಯಕ್ತಿಯಾಗಿ ಧನಕರ್ ಅವರು ಇಂತಹ ಹೇಳಿಕೆ ನೀಡಿದ್ದು ತಪ್ಪು. ಸಂಸತ್ತು ಅನುಮೋದನೆ ನೀಡಿದ ಒಂದು ಕಾನೂನನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿತು, 'ಇಂಥ ನಿದರ್ಶನ ಬೇರೆ ಎಲ್ಲಿಯೂ ಇಲ್ಲ' ಎಂದು ಅವರು ಹೇಳಿದ್ದಾರೆ. ಈ ಮಾತು ಸತ್ಯವಲ್ಲ. ಸಂಸತ್ತು ಅನುಮೋದನೆ ನೀಡಿದ ಯಾವುದೇ ಕಾನೂನನ್ನು ಪರಿಶೀಲಿಸುವ ಜವಾಬ್ದಾರಿ ಹಾಗೂ ಸಾಂವಿಧಾನಿಕ ಅಧಿಕಾರವು ಕೋರ್ಟ್‌ಗೆ ಇದೆ. ಆ ಕಾನೂನು ಎಷ್ಟರಮಟ್ಟಿಗೆ ಸಿಂಧು ಎಂಬುದನ್ನು ನಿಕಷಕ್ಕೆ ಒಳಪಡಿಸುವ ಅಧಿಕಾರವು ನ್ಯಾಯಾಲಯಕ್ಕೆ ಇದೆ. ಸಂಸತ್ತು ಅನುಮೋದನೆ ನೀಡುವ ಕಾನೂನುಗಳನ್ನು ನ್ಯಾಯಾಲಯಗಳು ಅಸಿಂಧುಗೊಳಿಸಬಾರದು, ಏಕೆಂದರೆ ಆ ಕಾನೂನುಗಳು ಜನರ ಇಚ್ಛೆಯನ್ನು ಬಿಂಬಿಸುತ್ತವೆ ಎಂದು ಧನಕರ್ ಅವರು ಹೇಳುತ್ತಿರುವಂತಿದೆ. ಇಂತಹ ಮಾತುಗಳ ಹಿಂದಿರುವ ಚಿಂತನೆಯು ನ್ಯಾಯಾಂಗ, ಕಾರ್ಯಾಂಗ ಹಾಗೂ ಶಾಸಕಾಂಗದ ಅಧಿಕಾರದ ಗಡಿಗಳನ್ನು ಗುರುತಿಸಿರುವ ವ್ಯವಸ್ಥೆಗೆ ಪೂರಕವಾಗಿ ಇಲ್ಲ. ಕಾರ್ಯಾಂಗ ಕೈಗೊಂಡ ತೀರ್ಮಾನಗಳನ್ನು ಪರಿಶೀಲಿಸುವ ಅಧಿಕಾರ ನ್ಯಾಯಾಂಗಕ್ಕೆ ಇದೆ. ಶಾಸಕಾಂಗ ರೂಪಿಸುವ ಕಾನೂನುಗಳನ್ನು ಪರಾಮರ್ಶಿಸುವ ಅಧಿಕಾರ ನ್ಯಾಯಾಂಗಕ್ಕೆ ಇದೆ. ಶಾಸಕಾಂಗದ ವ್ಯಾಪ್ತಿಗೆ ಸುಪ್ರೀಂ ಕೋರ್ಟ್ ಪ್ರವೇಶಿಸಿದೆ ಎಂದು ಧನಕರ್ ಭಾವಿಸಿದ್ದಾರೆ. ಅದರ ಬಗ್ಗೆ ಗಮನಹರಿಸಬೇಕಾದ ಹೊಣೆ ಸಂಸತ್ತಿನ ಮೇಲಿದೆ ಎಂದು ಧನಕರ್ ಅವರು ಹೇಳಿದ್ದಾರೆ. ಬಹಳ ಸೂಕ್ಷ್ಮ ವಿಚಾರವೊಂದಕ್ಕೆ ಸಂಬಂಧಿಸಿದಂತೆ ಧನಕರ್ ಅವರು ತೀವ್ರವಾದ ನಿಲುವನ್ನು ತಾಳಿದ್ದಾರೆ. ಎನ್‌ಜೆಎಸಿ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದಾಗ [illegible] ಧನಕರ್ ಅವರ [illegible] ಅವರು ಈಗ ಅಲ್ಲಿನ [illegible] ಎಂಬುದನ್ನು ತೀರ್ಮಾನಿಸುವುದು ಕಷ್ಟವಾಗುತ್ತದೆ.

ಸರ್ಕಾರದ ಕಡೆಯಿಂದ ನಡೆಯುತ್ತಿರುವ ವಾಗ್ದಾಳಿಗಳ ವಿಚಾರವಾಗಿ ಸುಪ್ರೀಂ ಕೋರ್ಟ್ ಅತೃಪ್ತಿ ವ್ಯಕ್ತಪಡಿಸಿದೆ. ಮಾತನಾಡುವವರು ಸಂಯಮ ಪ್ರದರ್ಶಿಸಬೇಕೆಂಬ ಸಲಹೆ ನೀಡುವಂತೆ ಅಟಾರ್ನಿ ಜನರಲ್ ಅವರಿಗೆ ಹೇಳಿದೆ. ನ್ಯಾಯಾಂಗದ ನೇಮಕಾತಿಗಳಿಗೆ ಸಂಬಂಧಿಸಿದಂತೆ ಹೊಸ ಕಾನೂನು ರೂಪಿಸುವುದನ್ನು ತಾನು ತಡೆದಿಲ್ಲ ಎಂದೂ ನ್ಯಾಯಾಲಯ ಹೇಳಿದೆ. ಆದರೆ ಹೊಸ ಕಾನೂನು ಜಾರಿಗೆ ಬರುವವರೆಗೂ ಈಗಿರುವ ವ್ಯವಸ್ಥೆ ಜಾರಿಯಲ್ಲಿ ಇರುತ್ತದೆ. ಯಾವುದೇ ವಿಚಾರದ ಸಾಂವಿಧಾನಿಕ ಮಾನ್ಯತೆಯ ವಿಚಾರದಲ್ಲಿ ಅಂತಿಮ ತೀರ್ಮಾನ ಹೇಳುವ ಅಧಿಕಾರ ಇರುವುದು ನ್ಯಾಯಾಲಯಕ್ಕೆ. ಇದು ನಮ್ಮ ವ್ಯವಸ್ಥೆ. ಈ ವ್ಯವಸ್ಥೆಯನ್ನು ಅಲ್ಲಗಳೆವ ರೀತಿಯಲ್ಲಿ ಮಾತನಾಡುವುದು ಅಪಾಯಕಾರಿ.

ದಿನದ ಟ್ವೀಟ್

ಕೃಷಿ ಯೋಜಿತವಾಗಿರಲಿ

ಅತಿಯಾದರೆ ಅಮೃತವೂ ವಿಷವಾಗುತ್ತದೆ. ಮಲೆನಾಡಿಗೆ ಸೀಮಿತವಾಗಿದ್ದ ಅಡಿಕೆ ಕೃಷಿ ಈಗ ಬಯಲು ಪ್ರದೇಶದಲ್ಲಿ ಹೆಚ್ಚಾಗಿ ಸಮಸ್ಯೆಯಾಗುತ್ತಿದೆ.

ಪ್ರಕಾಶ್ ಎಸ್., ಬಿಜೆಪಿ ಮುಖಂಡ

ಕಿಡಿನುಡಿ

ರೂಪಾಯಿ ಈ ಒಂದು ವರ್ಷದ ಅವಧಿಯಲ್ಲೇ ಡಾಲರ್ ಎದುರು ಹಲವು ಬಾರಿ ದಾಖಲೆಯ ಕುಸಿತ ಕಂಡಿದೆ. ಹಣದುಬ್ಬರವು ದಾಖಲೆಯ ಗರಿಷ್ಠ ಮಟ್ಟದಲ್ಲಿದೆ. ಸಮಸ್ಯೆ ಇದೆ ಎಂದು ಒಪ್ಪಿಕೊಳ್ಳುವುದೇ ಅದನ್ನು ಸರಿಪಡಿಸಲು ಇರುವ ಏಕೈಕ ಮಾರ್ಗ. ಆದರೆ ನಿರ್ಮಲಾ ಸೀತಾರಾಮನ್ ಅವರು ದೇಶದ ಆರ್ಥಿಕತೆ ಅತ್ಯುತ್ತಮವಾಗಿದೆ ಹಾಗೂ ರೂಪಾಯಿಯು ತುಂಬಾ ಸದೃಢವಾಗಿದೆ ಎಂಬ ಭ್ರಾಮಕ ಜಗತ್ತಿನಲ್ಲಿ ಬದುಕುತ್ತಿದ್ದಾರೆ!

ಡಾ. ಶಮಾ ಮಹಮ್ಮದ್, ರಾಷ್ಟ್ರೀಯ ವಕ್ತಾರೆ, ಕಾಂಗ್ರೆಸ್ ಪಕ್ಷ

25 ವರ್ಷಗಳ ಹಿಂದೆ

ಶನಿವಾರ, 13-12-1997

• ಹೊಸ ಜಾತ್ಯತೀತ ರಂಗ ರಚನೆ: ಲಾಲೂ ನಿರ್ಧಾರ

ಪಟ್ನಾ, ಡಿ. 12 (ಪಿಟಿಐ)– ಮುಖ್ಯಮಂತ್ರಿ ಸ್ಥಾನವನ್ನು ತಮ್ಮ ಪತ್ನಿ ರಾಬ್ಡಿದೇವಿ ಅವರಿಂದ ವಾಪಸು ಪಡೆಯುವುದನ್ನು ತಳ್ಳಿಹಾಕಿರುವ ಬಿಹಾರದ ಮಾಜಿ ಮುಖ್ಯಮಂತ್ರಿ ಮತ್ತು ರಾಷ್ಟ್ರೀಯ ಜನತಾ ದಳದ ಅಧ್ಯಕ್ಷ ಲಾಲೂ ಪ್ರಸಾದ್ ಯಾದವ್ ಅವರು, ಕಾಂಗ್ರೆಸ್, ಬಹುಜನ ಸಮಾಜ ಪಕ್ಷ ಮತ್ತು ಸಂಯುಕ್ತ ರಂಗದ ಕೆಲವು ಘಟಕ ಪಕ್ಷಗಳ ನೆರವಿನೊಂದಿಗೆ 'ಹೊಸ ಜಾತ್ಯತೀತ ರಂಗ'ವೊಂದನ್ನು ಸ್ಥಾಪಿಸುವುದಾಗಿ ಪ್ರಕಟಿಸಿದ್ದಾರೆ.

• ಮಹಾಜನ ವರದಿ ಗೋಷ್ಠಿಗೆ 'ಮಹಾ' ಜನರ ಗೈರುಹಾಜರಿ

ಅಬ್ಬಕ್ಕರಾಣಿ ನಗರ, ಮಂಗಳಾ ಕ್ರೀಡಾಂಗಣ, ಡಿ. 12– ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ 'ಗಡಿನಾಡ ಕಿಡಿ' ಕಯ್ಯಾರ ಕಿಞ್ಞಣ್ಣ ರೈ ಅವರನ್ನು ಆಯ್ಕೆ ಮಾಡಿದಾಗಲೇ 'ಮಹಾಜನ್ ವರದಿ' ಈ ಸಮ್ಮೇಳನದ ಪ್ರಮುಖ ಆಕರ್ಷಣೆಯಾಗಲಿದೆ ಎಂಬ ಭಾವನೆ ಮೂಡಿತ್ತು. ಇದಕ್ಕೆಂದೇ ಸೀಮಿತವಾದ 'ಮಹಾಜನ್ ವರದಿ' ಗೋಷ್ಠಿಯಲ್ಲಿ ಒಬ್ಬ ಮಾಜಿ ಪ್ರಧಾನಿ, ಮೂವರು ಮಾಜಿ ಮುಖ್ಯಮಂತ್ರಿಗಳು, ಹಾಲಿ ಮುಖ್ಯಮಂತ್ರಿ ಭಾಗವಹಿಸುವರೆಂದು ಘೋಷಿಸಲಾಗಿತ್ತು.

ಆದರೆ ಎಲ್ಲರ ಉತ್ಸಾಹಕ್ಕೆ ತಣ್ಣೀರೆರಚುವಂತೆ ಈ 'ಮಹಾ'ಜನರ ಗೈರುಹಾಜರಿಯಲ್ಲಿ ಮಹಾಜನ ವರದಿಯ ಬಗ್ಗೆ ಪೇಲವ ಚರ್ಚೆ ನಡೆಯಿತು. ಗೋಷ್ಠಿಯಲ್ಲಿ ಭಾಗವಹಿಸುವವರ ಪಟ್ಟಿ ಈ ರೀತಿ ಇತ್ತು: ಮಾಜಿ ಮುಖ್ಯಮಂತ್ರಿಗಳಾದ ಎಸ್. ನಿಜಲಿಂಗಪ್ಪ, ರಾಮಕೃಷ್ಣ ಹೆಗಡೆ, ವೀರಪ್ಪ ಮೊಯಿಲಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಭಾಗವಹಿಸುವರೆಂದು ತಿಳಿಸಲಾಗಿತ್ತು.

50 ವರ್ಷಗಳ ಹಿಂದೆ

ಬುಧವಾರ, 13-12-1972

• ಜಮ್ಮು-ಕಾಶ್ಮೀರದ ಗಡಿಯ ಎರಡು ಗ್ರಾಮಗಳು ಪಾಕ್‌ಗೆ

ನವದೆಹಲಿ, ಡಿ. 12– ಸೌಹಾರ್ದ ಸೂಚಕವಾಗಿ ಜಮ್ಮು-ಕಾಶ್ಮೀರ ಹತೋಟಿ ರೇಖೆಯಲ್ಲಿನ ಧುಮ್ ಮತ್ತು ಫಿಕೋಟ್ ಗ್ರಾಮಗಳನ್ನು ಪಾಕಿಸ್ತಾನಕ್ಕೆ ಭಾರತ ಬಿಟ್ಟುಕೊಟ್ಟಿದೆ. ಈ ಎರಡು ಗ್ರಾಮಗಳ ವಿಸ್ತೀರ್ಣ ಅರ್ಧ ಚದರ ಮೈಲಿಗೂ ಕಡಿಮೆ.

ಅಂತರರಾಷ್ಟ್ರೀಯ ಗಡಿಯಲ್ಲಿನ ಠಾಕೂರ್ ಚೌಕ್ ಪ್ರದೇಶದಿಂದ ಸೈನ್ಯ ವಾಪಸು ಕರೆಸಿಕೊಳ್ಳಲು ಪಾಕಿಸ್ತಾನ ಒಪ್ಪಿಕೊಂಡ ನಂತರ ಸೌಹಾರ್ದತೆಯ ಸೂಚಕವಾಗಿ ಈ ಎರಡು ಪುಟ್ಟ ಗ್ರಾಮಗಳ ಮೇಲಿನ ಹಕ್ಕನ್ನು ಬಿಟ್ಟುಕೊಡಲು ಭಾರತ ಒಪ್ಪಿಕೊಂಡಿತೆಂದು ವಿದೇಶಾಂಗ ಸಚಿವ ಸ್ವರಣ್ ಸಿಂಗ್ ಅವರು ಇಂದು ಲೋಕಸಭೆಯಲ್ಲಿ ಪ್ರಕಟಿಸಿದರು.

• ವರ್ಗವಾದ ನೌಕರರು ತೆರಳದಿದ್ದರೆ ಅಮಾನತು: ಸಚಿವರ ಆದೇಶ

ಬೆಂಗಳೂರು, ಡಿ. 12– ಬರಗಾಲಪೀಡಿತ ಪ್ರದೇಶಗಳಲ್ಲಿ ಕೆಲಸವನ್ನು ತ್ವರಿತಗೊಳಿಸುವ ದೃಷ್ಟಿಯಿಂದ ವರ್ಗ ಮಾಡಿರುವ ಯಾವುದೇ ಅಧಿಕಾರಿ ಅಥವಾ ನೌಕರ ಮೂರು-ನಾಲ್ಕು ದಿನಗಳಲ್ಲಿ ಅಲ್ಲಿಗೆ ತೆರಳದಿದ್ದರೆ ಅವರನ್ನು ಕೂಡಲೇ ಸಸ್ಪೆಂಡ್ ಮಾಡುವಂತೆ ಮುಖ್ಯ ಎಂಜಿನಿಯರುಗಳಿಗೆ ಸೂಚನೆ ನೀಡಲಾಗಿದೆಯೆಂದು ಕೃಷಿ ಸಚಿವ ಶ್ರೀ ಕೆ.ಎಚ್. ಪಾಟೀಲ್ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಭಾಷೆ– ಭಾವ– ಸಮಾಜದ ಹದಗೆಡಿಸುತ್ತಿವೆ ಮುತ್ತೊಡೆದಂಥ ಮಾತುಗಳು

ರಾಜಕೀಯ ಕುಭಾಷೆಯ ನುಡಿದುರಂತ

ವಿಶ್ಲೇಷಣೆ

ಡಾ. ಬಸವರಾಜ ಸಾದರ

ಅದೊಂದು ಊಹಿಸಲು ಅಸಾಧ್ಯವಾದ ಘಟನೆ. ಅಷ್ಟೇ ಅವಮಾನಕರವಾದದ್ದು ಕೂಡ. ಅಬ್ರಹಾಂ ಲಿಂಕನ್ ಅಮೆರಿಕದ ಅಧ್ಯಕ್ಷರಾಗಿ ಆಯ್ಕೆಯಾದ ನಂತರ, ಸೆನೆಟ್ ಅನ್ನು ಉದ್ದೇಶಿಸಿ ತಮ್ಮ ಚೊಚ್ಚಲ ಭಾಷಣ ಮಾಡಲಿದ್ದ ಸಂದರ್ಭವದು. ಇನ್ನೇನು ಅವರು ಮಾತು ಆರಂಭಿಸಬೇಕು, ಅಷ್ಟರಲ್ಲೇ ಒಬ್ಬ ವ್ಯಕ್ತಿ ಎದ್ದು ನಿಂತವನೇ 'ಮಿಸ್ಟರ್ ಲಿಂಕನ್, ನಿಮಗೊಂದು ಮಾತು ಹೇಳುವುದಿದೆ, ನಿಮ್ಮ ತಂದೆ ನನ್ನ ಇಡೀ ಕುಟುಂಬದವರಿಗೆ ಬೂಟುಗಳನ್ನು ತಯಾರಿಸಿಕೊಡುತ್ತಿದ್ದ ಎಂಬುದನ್ನು ನೀವು ಮರೆಯಬಾರದು' ಎಂದುಬಿಟ್ಟ!

ತಮ್ಮಂಥ ಕೋಟ್ಯಧಿಪತಿಗಳು ಮಾತ್ರ ಅಮೆರಿಕದ ಅಧ್ಯಕ್ಷರಾಗಬೇಕೇ ವಿನಾ ನಿಮ್ಮಂಥವರಲ್ಲ ಎಂಬ ಅಹಮಿಕೆ, ಮತ್ಸರ ಆ ವ್ಯಕ್ತಿಯ ಅಂತರಾಳದಲ್ಲಿ ಕುದಿಯುತ್ತಿದ್ದವು. ಲಿಂಕನ್ ಅವರಿಗೆ ಅವಮಾನ ಮಾಡುವುದೇ ಅವನ ದುರುದ್ದೇಶವಾಗಿತ್ತು. ಆ ಮಾತು ಕೇಳಿ, ಇಡೀ ಸೆನೆಟ್ ಗಹಗಹಿಸಿ ನಗತೊಡಗಿತು. ಲಿಂಕನ್‌ರನ್ನು ಮೂರ್ಖನನ್ನಾಗಿಸಿದ್ದೇವೆ ಎಂಬ ಜಂಬ ಅಲ್ಲಿದ್ದವರ ಮುಖಗಳಲ್ಲಿತ್ತು.

ತಕ್ಷಣ ಎದ್ದುನಿಂತ ಲಿಂಕನ್ ಆ ಕೋಟ್ಯಧಿಪತಿಯತ್ತ ತಿರುಗಿ, ಅತ್ಯಂತ ತಾಳ್ಮೆಯಿಂದ 'ಸರ್, ನೀವು ಹೇಳಿದ್ದು ನಿಜ. ನನ್ನ ತಂದೆ ನಿಮ್ಮ ಕುಟುಂಬದ ಸದಸ್ಯರಿಗೆಲ್ಲ ಬೂಟುಗಳನ್ನು ಮಾಡಿಕೊಡುತ್ತಿದ್ದರೆಂಬುದು ನನಗೂ ಗೊತ್ತು. ಅಷ್ಟೇ ಅಲ್ಲ, ಇಲ್ಲಿರುವ ಇನ್ನೂ ಅನೇಕರಿಗೆ ಅವರು ಬೂಟುಗಳನ್ನು ಮಾಡಿಕೊಡುತ್ತಿದ್ದರು. ಯಾಕೆಂದರೆ, ಅವರು ಮಾಡುತ್ತಿದ್ದಂಥ ಬೂಟುಗಳನ್ನು ಇನ್ನಾರಿಗೂ ಮಾಡಲು ಬರುತ್ತಿದ್ದಿಲ್ಲ. ಅವರು ನಿಜಕ್ಕೂ ಸೃಜನಶೀಲ ಶೂಮೇಕರ್ ಆಗಿದ್ದರು. ಬೂಟು ಸಿದ್ಧಪಡಿಸುವಾಗ ಅವರು ತಮ್ಮ ದೇಹ-ಮನಸ್ಸು ಎರಡನ್ನೂ ಆ ಕೆಲಸದಲ್ಲಿ ತೊಡಗಿಸುತ್ತಿದ್ದರು. ಅದಿರಲಿ, ನನ್ನ ತಂದೆ ಮಾಡಿಕೊಟ್ಟ ಬೂಟುಗಳ ಬಗ್ಗೆ ಈಗ ನಿಮಗೇನಾದರೂ ತಕರಾರು ಇದೆಯೆ? ಯಾಕೆ ಹಾಗೆ ಕೇಳಿದೆನೆಂದರೆ, ನನಗೂ ಒಳ್ಳೆಯ ಬೂಟುಗಳನ್ನು ಮಾಡಲು ಬರುತ್ತದೆ. ಅವರು ಮಾಡಿಕೊಟ್ಟಿರುವ ಬೂಟುಗಳಿಂದ ನಿಮಗೆ ತೊಂದರೆಯಾಗಿದ್ದಲ್ಲಿ, ನಾನೀಗ ನಿಮಗೆ ಮತ್ತೊಂದು ಜೋಡು ಬೂಟುಗಳನ್ನು ತಯಾರಿಸಿಕೊಡುವೆ. ಆದರೆ ಒಂದು ಸತ್ಯ, ನನ್ನ ತಂದೆ ಮಾಡಿದ ಬೂಟುಗಳ ಬಗ್ಗೆ ಈವರೆಗೆ ಒಂದೇ ಒಂದು ತಕರಾರು ಬಂದಿಲ್ಲ. ಬೂಟು ತಯಾರಿಸುವಲ್ಲಿ ಆತ ಅಷ್ಟೊಂದು ನಿಷ್ಣಾತನಿದ್ದ. ಅದಕ್ಕಾಗಿಯೇ ನನ್ನ ತಂದೆಯ ಬಗ್ಗೆ ನನಗೆ ಅಪಾರ ಹೆಮ್ಮೆಯಿದೆ' ಎಂದಾಗ, ಇಡೀ ಸೆನೆಟ್ ಬಾಯಿ ಮುಚ್ಚಿಕೊಂಡು ಮೌನದಲ್ಲಿ ಕುಳಿತಿತ್ತು! ಲಿಂಕನ್‌ರನ್ನು ಮೂರ್ಖನನ್ನಾಗಿಸಲು ಹೊರಟಿದ್ದ ಆ ವ್ಯಕ್ತಿ ಮತ್ತು ಅದೇ ಮನೋಭಾವದ ಇತರೆಲ್ಲರ ಮುಖಗಳು ಒಣಗಿ ಹೋಗಿದ್ದವು, ಅವರೇ ಮೂರ್ಖರಾಗಿದ್ದರು.

ಸಂಯಮ ಮತ್ತು ವಿವೇಕದ ಮೊತ್ತವೇ ಆಗಿದ್ದ ಲಿಂಕನ್ ಅವರ ಬಾಯಿಂದ ಸಹಜವಾಗಿ ಹೊರಬಂದ ಆ ಮಾತುಗಳು ಅವರೊಬ್ಬ ಸುಸಂಸ್ಕೃತ ವ್ಯಕ್ತಿ ಎಂಬುದನ್ನು ಸಾಬೀತುಪಡಿಸುತ್ತವೆ. ಅವು ಕೇವಲ ಮಾತಾಗಿರಲಿಲ್ಲ, ಶೂಗಳನ್ನು ಸಿದ್ಧಪಡಿಸುವ ರಚನಾತ್ಮಕ ಕೆಲಸವೂ ಅವರಿಗೆ ಗೊತ್ತಿತ್ತು. ಜೊತೆಗೆ ತಮ್ಮ ತಂದೆ ಮಾಡುತ್ತಿದ್ದ ವೃತ್ತಿಯ ಬಗ್ಗೆಯೂ ಅವರಿಗೆ ಅಷ್ಟೇ ಆದರ, ಗೌರವವಿತ್ತು. ಅಂತೆಯೇ ಅವರಾಡಿದ ಮಾತುಗಳು ಎದುರಾಳಿಯ ಮರ್ಮವನ್ನೇ ಭೇದಿಸಿದ್ದವು. ಅರಿವಿಲ್ಲದ ಅಹಂಕಾರದ ಮಾತುಗಳಿಗೆ ಸಂಯಮ ಮತ್ತು ವಿವೇಕಪೂರ್ಣ ಪ್ರತಿಕ್ರಿಯೆ ಹೇಗಿರುತ್ತದೆ ಮತ್ತು ಹೇಗಿರಬೇಕು ಎಂಬುದಕ್ಕೆ ಲಿಂಕನ್ ಅವರ ಆ ಮಾತುಗಳೇ ಸಾರ್ವಕಾಲಿಕ ಸಾಕ್ಷಿ.

ಇಂಥದೇ ಪ್ರಶ್ನೆಯನ್ನು ಇಂದಿನ ರಾಜಕೀಯ ವಲಯದಲ್ಲಿ ಯಾರಾದರೂ ಕೇಳಿದ್ದರೆ ಅದಕ್ಕೆ ಬರಬಹುದಾದ ಪ್ರತಿಕ್ರಿಯೆಯ ಸ್ವರೂಪ ಮತ್ತು ಕಾಣುವ ದೃಶ್ಯಗಳು ಹೇಗಿರುತ್ತಿದ್ದವು? ಊಹಿಸಲು ಅಸಾಧ್ಯ. ಇಂದು ಪಕ್ಷಾತೀತವಾಗಿ 'ಹೆಚ್ಚಿನ' ರಾಜಕಾರಣಿಗಳ ಬಾಯಿಂದ ಬಹಿರಂಗವಾಗಿಯೇ ತೂರಿ ಬರುತ್ತಿರುವ ಮಾತು ಮತ್ತು ಪ್ರತಿಕ್ರಿಯೆಗಳನ್ನು ಗಮನಿಸಿದರೆ, ಲಿಂಕನ್‌ರಂಥವರ ಸಂಯಮದ ಭಾವ-ಭಾಷೆಗಳು ಸಂಪೂರ್ಣ ಮರೆಯಾದದ್ದು ಸ್ಪಷ್ಟವಾಗಿ ಗೋಚರವಾಗುತ್ತದೆ.

'ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಸದಾ ಸಮನಾಗಿರುತ್ತವೆ ಮತ್ತು ಪರಸ್ಪರ ವಿರುದ್ಧ ದಿಕ್ಕಿನಲ್ಲಿರುತ್ತವೆ' ಎಂಬುದು ಜಗತ್ಪ್ರಸಿದ್ಧ ವಿಜ್ಞಾನಿ ನ್ಯೂಟನ್‌ನ ಚಲನೆಯ ಮೂರನೆಯ ನಿಯಮ. ವರ್ತಮಾನದ ರಾಜಕಾರಣಿಗಳ ಅಪದ್ಧ ಭಾಷೆ, ಅಸಹ್ಯ ಹೇಳಿಕೆ ಮತ್ತು ಪ್ರತಿಹೇಳಿಕೆಗಳನ್ನು ಆಧರಿಸಿ, ಈ ವೈಜ್ಞಾನಿಕ ನಿಯಮವನ್ನು ಈಗ 'ಕ್ರಿಯೆಗಿಂತ ಪ್ರತಿಕ್ರಿಯೆಯು ನೂರು ಪಟ್ಟು ಹೆಚ್ಚಾಗಿರುತ್ತದೆ, ಜೋರಾಗಿರುತ್ತದೆ ಮತ್ತು ಅಪಾಯಕಾರಿಯಾಗಿರುತ್ತದೆ' ಎಂದು ಬದಲಿಸಬೇಕಾದ ಅನಿವಾರ್ಯವಿದೆ. ಅಷ್ಟರ ಮಟ್ಟಿಗೆ ರಾಜಕಾರಣಿಗಳ ವರಸೆ, ಮಾತಿನ ಎರಚಾಟ, ಪ್ರತಿ ಎರಚಾಟಗಳು ಮಿತಿಮೀರಿದ್ದು ಕನ್ನಡಿಯ ಪ್ರತಿಬಿಂಬದಷ್ಟೇ ಸತ್ಯ.

ರಾಜಕಾರಣಿಗಳ ಇಂಥ ಅನಿಯಂತ್ರಿತ ಮಾತುಗಳಲ್ಲಿ ಸೈದ್ಧಾಂತಿಕ ಮತ್ತು ತಾತ್ವಿಕ ಭಿನ್ನಾಭಿಪ್ರಾಯಗಳಿಗಿಂತ ದ್ವೇಷಪೂರಿತ ಆರೋಪ- ಪ್ರತ್ಯಾರೋಪಗಳೇ ತುಂಬಿರುವುದು ಸತ್ಯ. ಹಾಗೆಯೇ ಪರಸ್ಪರ ವೈರತ್ವ ಮತ್ತು ವೈಯಕ್ತಿಕ ಚಾರಿತ್ರ್ಯ ಹನನಗಳೇ ಎದ್ದು ಕಾಣುತ್ತಿರುವುದೂ ಆತಂಕಕಾರಿ ಬೆಳವಣಿಗೆ. ಇದೆಲ್ಲವನ್ನೂ ಒಳಗೊಂಡ ಒಂದು 'ಶ್ರುತಿ ಅಸಹ್ಯ' ರಾಜಕೀಯ ಕುಭಾಷೆಯೇ ನಿರ್ಮಾಣವಾಗುತ್ತಿರುವುದು ನುಡಿ ದುರಂತ. ಹೀಗೆ ಹದಗೆಡುತ್ತಿರುವ ಭಾವ- ಭಾಷೆಗಳ ಕರಿಛಾಯೆ ಎಲ್ಲ ಕ್ಷೇತ್ರಗಳ ಮೇಲೆಯೂ ಬೀಳುತ್ತಿದ್ದು, ಅದುವೇ ಈಗಿನ ಮಕ್ಕಳಿಗೆ ಕುಸಂಸ್ಕೃತಿಯ ದರ್ಶನಕ್ಕೆ ಮುನ್ನುಡಿಯಾಗುತ್ತಿದೆ.

ವಿವೇಕ ಮತ್ತು ಅರಿವಿನ ಲವಲೇಶವೂ ಇಲ್ಲದ ಇಂಥ ಮಾತು-ಪ್ರತಿಕ್ರಿಯೆಗಳಿಂದ ಸಾಮಾಜಿಕ ಸಭ್ಯತೆ ಮತ್ತು ಸಂಬಂಧಗಳೂ ಹಳ್ಳ ಹಿಡಿಯುತ್ತಿವೆ. ಇದು ಇಡೀ ನೆಲದ ಸಾಂಸ್ಕೃತಿಕ ಬರಕ್ಕೆ ಮುನ್ನುಡಿಯಂತಿದೆ. ಸೈದ್ಧಾಂತಿಕ ಪ್ರಶ್ನೆಗಳನ್ನು ಕೇಳುವುದು, ಅವುಗಳಿಗೆ ಸಕಾರಣವಾಗಿ, ವೈಚಾರಿಕವಾಗಿ ಪ್ರತಿಕ್ರಿಯಿಸುವುದು ಹಾಗೂ ಇದೆಲ್ಲದಕ್ಕೂ ಸಂಯಮದ ಮತ್ತು ಗೌರವಯುತ ಭಾಷೆ ಬಳಸುವುದು- ಈ ಎಲ್ಲ ಸದ್ವಿವೇಕದ ಮಾರ್ಗಗಳನ್ನು ನಮ್ಮ ರಾಜಕಾರಣಿಗಳು ಮರು ರೂಢಿಸಿಕೊಳ್ಳದೇ ಹೋದರೆ ಒಟ್ಟು ವ್ಯವಸ್ಥೆಯೇ ಅರಾಜಕತೆಗೆ ತಲುಪುವುದು ಖಚಿತ. ಈ ಕಾರಣದಿಂದ, ಮೌಲ್ಯಾಧಾರಿತ ರಾಜಕಾರಣ ಮತ್ತು ಅದನ್ನು ಪೋಷಿಸುವ ಸುಸಂಸ್ಕೃತ ನಡವಳಿಕೆಗಳನ್ನು ಬಿತ್ತಿ ಬೆಳೆಯುವುದು ಇಂದಿನ ಆದ್ಯ ಅಗತ್ಯವಾಗಿದೆ.

ಸಮಗ್ರ ಸಾಮಾಜಿಕ ಕ್ರಾಂತಿ ಮಾಡಹೊರಟ ಬಸವಣ್ಣನವರ ಮೇಲೆಯೂ ರಾಜಕೀಯ ಆರೋಪಗಳು ಕೇಳಿಬಂದಾಗ ಅವುಗಳಿಗೆ ಅವರು ಕೊಟ್ಟ ಉತ್ತರಗಳೇ ಲಿಂಕನ್‌ರ ಮಾತುಗಳಲ್ಲಿ ಪ್ರತಿಧ್ವನಿಸಿದಂತಿವೆ. ಮುಖ್ಯವಾಗಿ ಹಣಕಾಸಿನ ಆರೋಪ ಮತ್ತು ದೊರೆ ಬಿಜ್ಜಳನನ್ನು ಓಲೈಸುತ್ತಿದ್ದಾರೆಂಬ ಪುಕಾರು ಕೇಳಿಬಂದಾಗ ಬಸವಣ್ಣನವರು ಕೊಟ್ಟ ದಿಟ್ಟ ಪ್ರತಿಕ್ರಿಯೆಗಳು ಗಮನಾರ್ಹವಾಗಿವೆ. 'ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ, ಎನ್ನ ಒಡಲಿಂಗೆ, ಎನ್ನ ಒಡವೆಗೆಂದು, ಎನ್ನ ಮಡದಿ-ಮಕ್ಕಳಿಗೆಂದು, ಕುದಿದೆನಾದಡೆ ಎನ್ನ ಮನಕ್ಕೆ ಮನವೇ ಸಾಕ್ಷಿ... ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹನೆಂದು ನುಡಿವರಯ್ಯಾ ಪ್ರಮಥರು. ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ. ಹೊಲೆಹೊಲೆಯರ ಮನೆಯ ಹೊಕ್ಕಾದಡೆಯೂ, ಸಲೆ ಕೈಕೂಲಿಯ ಮಾಡಿಯಾದಡೆಯೂ, ನಿಮ್ಮ ನಿಲವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದಡೆ ತಲೆದಂಡ ಕೂಡಲಸಂಗಮದೇವಾ'.

ಇಂಥದ್ದೇ ಮತ್ತೊಂದು ವಚನ, 'ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು, ಓರೆಯಾವಿನ ಬೆನ್ನಲ್ಲಿ ಹರಿಯಲೇಕಯ್ಯಾ? ಲಜ್ಜೆಗೆಡಲೇಕೆ? ನಾಣುಗೆಡಲೇಕೆ? ಕೂಡಲಸಂಗಮದೇವಯ್ಯನುಳ್ಳನ್ನಕ್ಕ, ಬಿಜ್ಜಳನ ಭಂಡಾರವೆನಗೇಕಯ್ಯಾ?' ಎಂದಿದೆ. ಈ ಮಾತುಗಳು ಅವರ ಪರಿಶುದ್ಧ ಬದುಕು ಮತ್ತು ವ್ಯಕ್ತಿತ್ವದ ಪಡಿನುಡಿಗಳಂತಿವೆ. 'ಭಕ್ತಿ ಸುಭಾಷೆಯ ನುಡಿಯ ನುಡಿವೆ, ನುಡಿದಂತೆ ನಡೆವೆ. ನಡೆಯೊಳಗೆ ನುಡಿಯ ಪೂರೈಸುವೆ. ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ. ಒಂದು ಜವೆ ಕೊರತೆಯಾದಡೆ, ಎನ್ನನದ್ದಿ ನೀನೆದ್ದು ಹೋಗು, ಕೂಡಲಸಂಗಮದೇವಾ' ಎಂಬ ಮಾತಂತೂ ಅವರ ಸಂಯಮ, ಧ್ಯೇಯಾದರ್ಶ ಮತ್ತು ಸೈದ್ಧಾಂತಿಕತೆಯ ಪ್ರತೀಕವಾಗಿವೆ. ನಡೆ-ನುಡಿಯೆರಡರಲ್ಲೂ ಏಕತೆ ಮತ್ತು ನೈತಿಕತೆ ಸಾಧಿಸಿದವರ ಬಾಯಲ್ಲಿ ಮಾತ್ರ ಇಂಥ ಮಾತು ಹೊರಬರಲು ಸಾಧ್ಯ.



ಬಸವಣ್ಣ- ಲಿಂಕನ್‌ರಂಥವರ ಸಂಯಮದ ವ್ಯಕ್ತಿತ್ವ ಹಾಗೂ ಮತ್ತೊಬ್ಬರಿಗೆ ಕೇಡಿಲ್ಲದ ಪಾಠದಂತೆ ಪ್ರತಿಕ್ರಿಯಿಸುವ ಅವರದೇ ಆದ ಅಭಿವ್ಯಕ್ತಿಯ ರೀತಿ ವರ್ತಮಾನದ ರಾಜಕಾರಣಿಗಳಿಗೆ ಪಾಠವಾಗಬೇಕಿದೆ.

ಇದಕ್ಕೆ ಮೊದಲು ಮೌಲ್ಯಾಧಾರಿತ ಬದುಕು ಬೇಕು. ಬದುಕಿನಲ್ಲಿ ಶುದ್ಧತೆ, ಪ್ರಾಮಾಣಿಕತೆ ಬಂದಾಗ ಮಾತು ಮತ್ತು ಪ್ರತಿಕ್ರಿಯೆಗಳಲ್ಲೂ ಅದು ಪಡಿಮೂಡುತ್ತದೆ. ಒಡೆಯುವ ರಾಜಕಾರಣ ಬಿಟ್ಟು, ಒಟ್ಟುಗೂಡಿಸುವ ಹಾಗೂ ಸುಸಂಸ್ಕೃತ ನಾಡು ಕಟ್ಟಬೇಕೆಂಬ ಸದ್ಬುದ್ಧಿ ರಾಜಕಾರಣಿಗಳಲ್ಲಿ ಬರಬೇಕಾದರೆ ಇಂಥ ವ್ಯಕ್ತಿಗಳ ಚರಿತ್ರೆ- ಚಾರಿತ್ರ್ಯಗಳ ಅನುಸರಣೆ ಅತ್ಯಗತ್ಯ.

ಚುರುಮುರಿ



ವಸೂಲಿಗೇಟು!

• ಲಿಂಗರಾಜು ಡಿ.ಎಸ್.

'ಗೆಯ್ಮೆಲ್ಲಿಲ್ಲ ಗದಕಲಿಲ್ಲ ಊರಿಗಾಗುವಷ್ಟು ಉಸ್ಸಂತೀರಲ್ಲ, ಏನಾಯ್ತು ಸಾ?' ಉಸ್ಸೋ ಅಂತಿದ್ದ ತುರೇಮಣೆ ವಿಚಾರಿಸಿದೆ.

'ಮೊನ್ನೆ ಮೈಸೂರಿಗೋಗಿದ್ದೆ ಕಲಾ. ಹೊಸ ರೋಡು ಬಂದ್ ಮಾಡಿದ್ರು. ಸರ್ವೀಸ್ ರೋಡಲ್ಲೇ ಬಂದು ಜಲ್ಮ ರೋಸೋಯ್ತು' ಅಂತಂದರು.

'ಮೈಸೂರು ಎಕ್ಸ್‌ಪ್ರೆಸ್ ವೇ ತೆವಳಿಕ್ಯಂಡು ರೆಡಿಯಾಗಕೆ ಎರಡು ವರ್ಸ ಬೇಕು. ಎರಡನೇ ಹಂತಕ್ಕೆ ನೆಲವೇ ಅಗೆದಿಲ್ಲ, ಗಡ್ಕರಿ ಮೂರು ತಿಂಗಳು ಸಾಕು ಅಂದದೆ. ಟೋಲಿಗರು ಗೇಟಿಗೆ ಬಣ್ಣ ಹೊಡ್ದು ವಸೂಲಿಗೆ ರೆಡಿಯಾಯ್ತಾವ್ರೆ' ಅಂದ ಚಂದ್ರು.

'ಕಾಸು ಕೊಟ್ಟು ಟ್ರಾಫಿಕ್ ತಪ್ಪಿಸ್ಕ್ಯಳದೇ ಸರಿ ಅನ್ನೋ ಮಟ್ಟಿಗೆ ನಿಮ್ಮನ್ನ ಮಾನಸಿಕವಾಗಿ ರೆಡಿ ಮಾಡಕೆ ಅಂತ್ಲೇ ಹೊಸ ರೋಡು ಮುಚ್ಚಿ ಸರ್ವೀಸ್ ರೋಡಿಗೆ ಬುಟ್ಟದ್ದು' ಅಂತ ಚುಚ್ಚಿದೆ.

'ಕಾರು ತಕ್ಕೋವಾಗಲೇ ಜಿಎಸ್‌ಟಿ, ಎಕ್ಸೈಸು, ಸೆಸ್ಸು, ಲೈಫ್ ಟೈಮ್ ರೋಡ್ ಟ್ಯಾಕ್ಸು ಕಕ್ಕಿರಕುಲ್ವಾ, ಈಗ ಟೋಲು ಯಾಕೋ?' ಅಂತ ಸಿಟ್ಟಾದರು.

'ಟೋಲು ತೆಗೆಸಕೆ ಸುರತ್ಕಲ್ ಜನ ಆರೋರ್ಸ ಹೋರಾಟ ಮಾಡಿದ್ರಂತೆ. ಸರ್ಕಾರ ಟೋಲು ರದ್ದು ಮಾಡಿ ಮುಂದ್ಲ ಟೋಲಿನ ರೇಟು ಡಬಲ್ ಮಾಡ್ಯದಂತೆ' ಅಂದೆ.

'ಗುತ್ತಿಗೆ ವಯಿಸಿಕೊಂಡೋರು ದಿವಾಳಿ ಅಂತ ಲೆಕ್ಕ ಕೊಡೋ ಮೊದಲು ಕಾಸು ವಸೂಲಿ ಮಾಡಿಕ್ಯಬಕಲ್ಲವಾ. ಇಪ್ಪತ್ತೊರ್ಸದಿಂದ ತುಮಕೂರು ರೋಡಲ್ಲಿ ವಸೂಲಿ ನಡಿತ್ಲೇ ಅದೆ' ತುರೇಮಣೆ ವಿಶ್ಲೇಷಿಸಿದರು.

'ನಮ್ಮ ಏರಿಯಾದಲ್ಲೂ ಇವನಂಗೆ ಪುಗಸಟ್ಟೆ ಉಪದೇಸ ಕೊಡೋ ಜನ ಅವ್ರೆ. ನಾವು ಅವರಿಗೆ ಪೀಡೆಗಳು ಅಂತ ಹೆಸರಿಟ್ಟೀವಿ. ಸುಲಿಗೆ ಮಾಡ್ತಿರೋ ಟೋಲುಗಳಿಗೆ ಏನು ಹೆಸರು ಕೊಟ್ಟೀಯೇ?' ಅಂತು ಯಂಟಪ್ಪಣ್ಣ.

'ಅಣ್ಣೈ, ಒತ್ತಾಯಕ್ಕೆ ಕಾಸು ತೆರಬೇಕಾದ ಟೋಲ್‌ಮಾಲ್ ವಿಚಾರ ಇದು. ಇಂಗ್ಲೀಷಲ್ಲಿ ಸ್ಟೀಲ್, ಸ್ಟೋಲ್, ಸ್ಟೋಲನ್ ಅನ್ನಕುಲ್ವೇ, ಹಂಗೇ ರೋಡು ರೋಡಲ್ಲೆಲ್ಲಾ ನಮ್ಮ ಕಾಸು ಕದಿಯೋ ಟೋಲ್‌ಗೇಟುಗಳನ್ನ ಸ್ಟೋಲ್ ಗೇಟುಗಳು ಅಂದ್ರೆ ಸರೋಯ್ತದೆ!' ಅಂತ ನಾಮಕರಣ ಮಾಡಿದರು.

ಸಂಗತ

ಉರ್ದು ಶಿಕ್ಷಣ: ಆಗಲಿ ಸುಧಾರಣೆ

ಐದನೇ ತರಗತಿಯವರೆಗೆ ಉರ್ದು ಮಾಧ್ಯಮದಲ್ಲಿ ಕಲಿಯುವ ಮಕ್ಕಳಲ್ಲಿ ಕೆಲವರು ಅಷ್ಟಕ್ಕೇ ಶಿಕ್ಷಣ ಮೊಟಕುಗೊಳಿಸುವುದೇಕೆ?

• ಮಲ್ಲಿಕಾರ್ಜುನ ಹೆಗ್ಗಳಗಿ

ಉರ್ದು ಪ್ರಾಥಮಿಕ ಶಾಲೆಯೊಂದರ ಮುಖ್ಯ ಶಿಕ್ಷಕರೊಬ್ಬರು ನವೆಂಬರ್ ಕೊನೆಯ ದಿನ ನಿವೃತ್ತಿ ಹೊಂದಿದರು. ಆದರೆ ಅಂದು ಸಂಜೆ ಶಾಲೆಯಲ್ಲಿ ಅವರಿಗೆ ಬೀಳ್ಕೊಡುಗೆ ಸಮಾರಂಭ ಇರಲಿಲ್ಲ. ಮೂವರು ಶಿಕ್ಷಕರುಳ್ಳ ಆ ಶಾಲೆಯ ಒಬ್ಬ ಶಿಕ್ಷಕ ಕೆಲವು ತಿಂಗಳುಗಳ ಹಿಂದೆ ನಿವೃತ್ತಿ ಹೊಂದಿದ್ದರು. ಇನ್ನೊಬ್ಬ ಶಿಕ್ಷಕ ಒಂದು ವಾರ ರಜೆ ಹಾಕಿದ್ದರು. ಮಕ್ಕಳ ಸಂಖ್ಯೆ ಬಹಳ ಕಡಿಮೆ ಇತ್ತು. 'ರಜೆ ಮೇಲಿರುವ ಶಿಕ್ಷಕ ನಾಳೆ ಬರದಿದ್ದರೆ ಶಾಲೆಯ ಬಾಗಿಲು ತೆರೆಯುವುದು ಕಷ್ಟ' ಎಂಬುದು ನಿವೃತ್ತಿಯಾಗಲಿದ್ದ ಶಿಕ್ಷಕರ ಆತಂಕವಾಗಿತ್ತು.

ರಾಜ್ಯದಲ್ಲಿರುವ ಅನೇಕ ಉರ್ದು ಮಾಧ್ಯಮ ಶಾಲೆಗಳ ಸ್ಥಿತಿ ಇದೇ ರೀತಿಯಲ್ಲಿದೆ. ಮುಸ್ಲಿಂ ಸಮುದಾಯದ ಮಕ್ಕಳು ಮಾತೃಭಾಷೆಯಲ್ಲಿ ಕಲಿಯಲು ಅವಕಾಶ ಮಾಡಿಕೊಡುವ ಉದ್ದೇಶದಿಂದ ಸರ್ಕಾರ ಪ್ರತೀ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಿರಿಯ ಉರ್ದು ಮಾಧ್ಯಮ ಶಾಲೆಗಳನ್ನು ನಡೆಸುತ್ತಿದೆ. ಇವು 5ನೇ ತರಗತಿಯವರೆಗೆ ಮಾತ್ರ ಶಿಕ್ಷಣ ನೀಡುತ್ತವೆ. ಹಳ್ಳಿಗಳಲ್ಲಿ ಉರ್ದು ಮಾಧ್ಯಮದ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಲ್ಲ. 8ನೇ ತರಗತಿವರೆಗೆ ಕಡ್ಡಾಯ ಶಿಕ್ಷಣ ಪೂರ್ಣಗೊಳಿಸಲು ಆ ಮಕ್ಕಳು ದೂರದ ತಾಲ್ಲೂಕು ಕೇಂದ್ರದಲ್ಲಿರುವ ಉರ್ದು ಮಾಧ್ಯಮ ಶಾಲೆಗೆ ಹೋಗಬೇಕಾಗುತ್ತದೆ. ಸಣ್ಣ ವಯಸ್ಸಿನಲ್ಲಿ ತಮ್ಮ ಹಳ್ಳಿಯಿಂದ ತಾಲ್ಲೂಕು ಕೇಂದ್ರದಲ್ಲಿನ ಶಾಲೆಗೆ ಹೋಗಿ ಶಿಕ್ಷಣ ಮುಂದುವರಿಸಲು ಅನೇಕರಿಗೆ ಆಗುವುದಿಲ್ಲ. ಅದರಲ್ಲೂ ಹೆಣ್ಣು ಮಕ್ಕಳು ಈ ಹಂತದಲ್ಲಿ ಓದು ನಿಲ್ಲಿಸಿಬಿಡುತ್ತಾರೆ.

ಕಡ್ಡಾಯ ಶಿಕ್ಷಣ ನೀತಿ ಪಾಲಿಸುವ ಉದ್ದೇಶದಿಂದ ಶಿಕ್ಷಕರು, ಪಾಲಕರು ಸ್ಥಳೀಯ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಗೆ ಅಥವಾ ತಾಲ್ಲೂಕು ಕೇಂದ್ರದಲ್ಲಿರುವ ಉರ್ದು ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಗೆ ಉರ್ದು ಮಾಧ್ಯಮದಲ್ಲಿ ಐದನೇ ತರಗತಿ ಪಾಸಾದ ಮಕ್ಕಳ ಹೆಸರು ದಾಖಲಿಸಿ ತಮ್ಮ ಪಾಲಿನ 'ಜವಾಬ್ದಾರಿ' ಪೂರ್ಣಗೊಳಿಸುತ್ತಾರೆ. ಆದರೆ ವಾಸ್ತವವಾಗಿ ಈ ಮಕ್ಕಳು ಶಿಕ್ಷಣ ಮುಂದುವರಿಸುವುದು ಬಹಳ ಕಡಿಮೆ. ಆದರೆ ಸರ್ಕಾರಿ ದಾಖಲೆಯಲ್ಲಿ ಈ ಮಕ್ಕಳು ಕಡ್ಡಾಯ ಶಿಕ್ಷಣವನ್ನು ಪೂರ್ಣಗೊಳಿಸಿರುತ್ತಾರೆ.

ಗ್ರಾಮೀಣ ಪ್ರದೇಶದ ಬಡ ಮುಸ್ಲಿಂ ಕುಟುಂಬದ ಮಕ್ಕಳು ಉರ್ದು ಮಾಧ್ಯಮ ಶಾಲೆಗಳಿಗೆ ಹೋಗುತ್ತಾರೆ. ಇವರಿಗೆ ಉರ್ದು ಮಾಧ್ಯಮದಲ್ಲಿ ಕಲಿಯುವ ಆಸಕ್ತಿ ಇರಲಿ ಅಥವಾ ಇಲ್ಲದಿರಲಿ, ಸ್ಥಳೀಯ ಉರ್ದು ಶಾಲೆಗಳ ಶಿಕ್ಷಕರು ತಮ್ಮ ಶಾಲೆಯ ಮಕ್ಕಳ ಹಾಜರಿ ಸಂಖ್ಯೆ ಕಾಯ್ದುಕೊಳ್ಳುವ ಉದ್ದೇಶದಿಂದ, ಆಗ್ರಹಪಡಿಸಿ ಮಕ್ಕಳನ್ನು ಶಾಲೆಗೆ ಕರೆತರುವ ಉದಾಹರಣೆಗಳು ಬಹಳಷ್ಟಿವೆ. ಶ್ರೀಮಂತ ಮತ್ತು ಮಧ್ಯಮ ವರ್ಗದ ಮುಸ್ಲಿಂ ಕುಟುಂಬದವರು ತಮ್ಮ ಮಕ್ಕಳನ್ನು ಕನ್ನಡ ಅಥವಾ ಇಂಗ್ಲಿಷ್ ಮಾಧ್ಯಮ ಶಾಲೆಗಳಿಗೆ ಸೇರಿಸುತ್ತಾರೆ.

ಐದನೇ ತರಗತಿವರೆಗೆ ಉರ್ದು ಮಾಧ್ಯಮದಲ್ಲಿ ಓದಿ ಆರನೇ ತರಗತಿಗೆ ಕನ್ನಡ ಮಾಧ್ಯಮ ಶಾಲೆಗೆ ಸೇರುವ ಮಕ್ಕಳು ಕಲಿಕೆಯಲ್ಲಿ ಬಹಳ ಹಿನ್ನಡೆ ಅನುಭವಿಸುತ್ತಾರೆ. ದ್ವಿತೀಯ ಭಾಷೆಯಾಗಿ ಕನ್ನಡ ಕಲಿತ ಇವರು ಪ್ರಥಮ ಭಾಷೆಯಾಗಿ ಕನ್ನಡ ಮಾಧ್ಯಮಕ್ಕೆ ಹೊಂದಿಕೊಳ್ಳಲು ಬಹಳ ಪರದಾಡಬೇಕಾಗುತ್ತದೆ. ಉರ್ದು ಮಾಧ್ಯಮದಲ್ಲಿ ಕಲಿತ ಮಕ್ಕಳು ಶಾಲೆ ತಪ್ಪಿಸುವುದಕ್ಕೆ ಇದು ಮುಖ್ಯ ಕಾರಣವಾಗಿದೆ.

ಸರ್ಕಾರವು ಕನ್ನಡ ಶಾಲೆಗಳಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ಉರ್ದು ಶಾಲೆಗಳಿಗೂ ನೀಡುತ್ತಿದೆ. ಎಸ್‌ಡಿಎಂಸಿ ನೇಮಕ ಮಾಡಲಾಗುತ್ತದೆ. ಮುಸ್ಲಿಂ ಸಮುದಾಯದವರೇ ಇಲ್ಲಿ ಸದಸ್ಯರಾಗಿರುತ್ತಾರೆ. ಆದರೆ ಶಾಲಾ ಕಟ್ಟಡಗಳು ಚೆನ್ನಾಗಿಲ್ಲ. ಆಟದ ಮೈದಾನಗಳಿಲ್ಲ. ಸಾಂಸ್ಕೃತಿಕ ಹಾಗೂ ಪಠ್ಯೇತರ ಚಟುವಟಿಕೆಗಳು ಬಹಳ ಕಡಿಮೆ ಪ್ರಮಾಣದಲ್ಲಿ ನಡೆಯುತ್ತವೆ. ಮುಖ್ಯವಾಗಿ ಶಿಕ್ಷಕರ ಕೊರತೆ ಬಹಳ ಇದೆ.



ಗಮನಿಸಬೇಕಾದ ಸಂಗತಿ ಎಂದರೆ, ಅನೇಕ ಉರ್ದು ಶಾಲೆಗಳ ಮುಖ್ಯ ಅಧ್ಯಾಪಕರು ಕನ್ನಡ ಮಾಧ್ಯಮದಲ್ಲಿ ಓದಿದವರಾಗಿದ್ದಾರೆ. ಅವರಿಗೆ ಉರ್ದು ಓದಲು, ಬರೆಯಲು, ಮಾತನಾಡಲು ಬರುವುದಿಲ್ಲ. ಅದೇ ರೀತಿ ದೈಹಿಕ ಶಿಕ್ಷಣ ಶಿಕ್ಷಕರು ಕೂಡ ಕನ್ನಡ ಮಾಧ್ಯಮದವರಾಗಿದ್ದಾರೆ. ದೈಹಿಕ ಶಿಕ್ಷಣ ಪಠ್ಯಪುಸ್ತಕ ಉರ್ದು ಭಾಷೆಯಲ್ಲಿದೆ. ಇಂಥ ಶಿಕ್ಷಕರಿಂದ ಪರಿಣಾಮಕಾರಿ ಸಂವಹನ ಸಾಧ್ಯವಾಗುವುದಿಲ್ಲ.

ಉರ್ದು ಮಾಧ್ಯಮದಲ್ಲಿ ಓದಿ ಐದನೇ ತರಗತಿ ಪಾಸಾದ ವಿದ್ಯಾರ್ಥಿಗಳು ಆರನೇ ತರಗತಿಗೆ ಕನ್ನಡ ಮಾಧ್ಯಮ ಶಾಲೆಗಳಿಗೆ ಸೇರಿಕೊಳ್ಳುವ ಹಂತದಲ್ಲಿ ಈ ಮಕ್ಕಳಿಗೆ ಮೂರು ಅಥವಾ ನಾಲ್ಕು ತಿಂಗಳ ಕನ್ನಡ ಭಾಷೆ ಹೆಚ್ಚುವರಿ ಕಲಿಕೆಗೆ ವ್ಯವಸ್ಥೆ ಮಾಡಬೇಕು. ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಬೇಕು. ಕನ್ನಡ ಮಾಧ್ಯಮ ಶಾಲೆಗಳ ಪ್ರತಿಯೊಂದು ಕಾರ್ಯಕ್ರಮದಲ್ಲಿ ಉರ್ದು ಮಾಧ್ಯಮದಿಂದ ಬಂದ ಮಕ್ಕಳು ಸಮಾನ ಮನಸ್ಕರಾಗಿ ಆಸಕ್ತಿಯಿಂದ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು. ಇದರಿಂದ ಶಾಲೆ ಬಿಡುವವರ ಸಂಖ್ಯೆ ಕಡಿಮೆಯಾಗಬಹುದು.

ರಾಜ್ಯದ ಉರ್ದು ಶಾಲೆಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಮಕ್ಕಳು ಕಲಿಯುತ್ತಿದ್ದಾರೆ. ಈ ಶಾಲೆಗಳ ಸ್ಥಿತಿಗತಿಯ ಬಗ್ಗೆ ಸರ್ಕಾರ ಅಧ್ಯಯನ ನಡೆಸಿ ಸುಧಾರಣೆಗೆ ಸೂಕ್ತ ಕ್ರಮ ಕೈಗೊಳ್ಳುವುದು ತೀರಾ ಅವಶ್ಯವಿದೆ.

ವಾಚಕರ ವಾಣಿ

'ಸಲಾಂ' ಹೆಸರು ಬದಲಾವಣೆ ಸರಿಯೇ?

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯ ದೇವಾಲಯಗಳಲ್ಲಿ ರೂಢಿಯಾಗಿ ಬಂದಿರುವ 'ದೀವಟಿಗೆ ಸಲಾಂ', 'ಸಲಾಂ ಆರತಿ', 'ಸಲಾಂ ಮಂಗಳಾರತಿ' ಎಂಬ ಪೂಜಾ ಕಾರ್ಯಗಳ ಹೆಸರನ್ನು 'ದೀವಟಿಗೆ ನಮಸ್ಕಾರ', 'ಆರತಿ ನಮಸ್ಕಾರ', 'ಮಂಗಳಾರತಿ ನಮಸ್ಕಾರ' ಎಂದು ಬದಲಿಸಲು ಮುಜರಾಯಿ ಇಲಾಖೆ ಮುಂದಾಗಿರುವುದು (ಪ್ರ.ವಾ., ಡಿ. 11) ಸರಿಯಲ್ಲ. ಹಿಂದೂ ಆರತಿಯ ಜೊತೆ 'ಸಲಾಂ' ಸೇರಿರುವುದು ಹಿಂದೂ– ಮುಸ್ಲಿಂ ಸಮುದಾಯಗಳ ಬಾಂಧವ್ಯದ ಸಂಕೇತ. ಟಿಪ್ಪು ಆಳ್ವಿಕೆಯ ಕಾಲದಿಂದ ನಡೆದುಬಂದ ರೂಢಿ. ಅನ್ಯೋನ್ಯತೆಯ ಇಂತಹ ಕೊಂಡಿಗಳನ್ನು ಕಳಚುವ ಮೂಲಕ ಯುವ ಪೀಳಿಗೆಗೆ ಸರ್ಕಾರ ಯಾವ ಸಂದೇಶ ನೀಡಲಿದೆ?

'ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು, ಹೊಸ ಯುಕ್ತಿ ಹಳೆ ತತ್ವದೊಡಗೂಡೆ ಧರ್ಮ' ಎಂಬ ಅರ್ಥಪೂರ್ಣ ಸಂದೇಶವನ್ನು ಡಿವಿಜಿ ನೀಡಿದ್ದಾರೆ. ಅದನ್ನು ನಾವು ಈಗ ಉಪೇಕ್ಷಿಸುತ್ತಿದ್ದೇವೆ. 'ಸಲಾಂ' ಪದವನ್ನು ಬದಲಿಸಬೇಕು ಎಂದು ಭಕ್ತಾದಿಗಳಿಂದ ಒತ್ತಾಯ ಬಂದಿತ್ತು ಎಂಬುದೆಲ್ಲ ನೆವ ಅಷ್ಟೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಇದೆಂಥ ಪಕ್ಷಾಂತರ ಪ್ರಹಸನ?!

ದೆಹಲಿ ಮಹಾನಗರಪಾಲಿಕೆಗೆ ಈಚೆಗೆ ನಡೆದ ಚುನಾವಣೆಯಲ್ಲಿ ಗೆದ್ದ ಇಬ್ಬರು ಕಾಂಗ್ರೆಸ್ ಸದಸ್ಯರು ಎಎಪಿ ಸೇರಿದ ಕೆಲವೇ ಗಂಟೆಗಳಲ್ಲಿ ಕಾಂಗ್ರೆಸ್‌ಗೆ ವಾಪಸಾಗಿರುವುದು ವರದಿಯಾಗಿದೆ (ಪ್ರ.ವಾ., ಡಿ. 11). ಯಾವುದೇ ಅಭ್ಯರ್ಥಿ ಯಾವುದೇ ಚುನಾವಣೆಯಲ್ಲಿ ಒಂದು ಪಕ್ಷದ ಚಿಹ್ನೆಯಡಿ ಸ್ಪರ್ಧಿಸಿದಾಗ, ಆ ಪಕ್ಷದ ತತ್ವ, ಸಿದ್ಧಾಂತಗಳನ್ನು ಗಮನಿಸಿ ಮತದಾರರು ಆಯಾ ಅಭ್ಯರ್ಥಿಗೆ ಮತ ನೀಡಿರುತ್ತಾರೆ. ಆದರೆ ಹೀಗೆ ನಡೆದ ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿ ಕೆಲವೇ ಕೆಲವು ತಾಸುಗಳಲ್ಲಿ ಪಕ್ಷಾಂತರ ಮಾಡಿ, ಮತ್ತೆ ಅಲ್ಲೇನೊ ವ್ಯವಹಾರ ಗಿಟ್ಟಲಿಲ್ಲವಾಗಿ, ತಾನು ಗೆದ್ದ ಪಕ್ಷಕ್ಕೆ ಮರಳುವುದು ಮತ್ತು ಅದನ್ನು ಕಾಂಗ್ರೆಸ್ ಪಕ್ಷ ಸ್ವಾಗತಿಸಿರುವುದು... ಇವೆಲ್ಲ ಎಂಥ ಪ್ರಹಸನ?! ಇಲ್ಲಿ ಇವರ ವ್ಯವಹಾರ ಏನಿರಬಹುದು ಮತ್ತು ಅಸಹಾಯಕತೆ ಏನಿರಬಹುದು ಎಂಬುದಕ್ಕಿಂತ ಮತದಾರರ ಮತಮೌಲ್ಯಕ್ಕೇನು ಬೆಲೆ ಎಂಬುದೇ ಬಹಳ ಮುಖ್ಯ. ಹೀಗೆ ಮಾಡುವುದರಿಂದ ಚುನಾವಣಾ ಪಾವಿತ್ರ್ಯವನ್ನು ಪಕ್ಷಗಳೇ ಹಾಳು ಮಾಡಿದಂತೆ ಆಗುವುದಿಲ್ಲವೇ?

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಹಳ್ಳಿ ಪಂಚಾಯಿತಿ: ಮರು ಚಿಂತಿಸಿ

ಹಳ್ಳಿಗಳಲ್ಲಿ ಗೌರವಾನ್ವಿತ, ತಿಳಿವಳಿಕೆ ಇರುವ ವ್ಯಕ್ತಿಗಳ ಸಮಕ್ಷಮದಲ್ಲಿ ಆಗುವ ನ್ಯಾಯ ತೀರ್ಮಾನಗಳಿಗೂ ಕಾನೂನು ಮಾನ್ಯತೆ ನೀಡಲು ಅಗತ್ಯ ಕ್ರಮಕ್ಕೆ ಸರ್ಕಾರ ಚಿಂತನೆ ನಡೆಸಿರುವುದು ಸರಿಯಷ್ಟೆ. ಲೋಕಅದಾಲತ್ ತೀರ್ಮಾನಗಳನ್ನು ಮತ್ತೆ ಕೋರ್ಟ್‌ನಲ್ಲಿ ಪ್ರಶ್ನಿಸುತ್ತಿರುವುದರಿಂದ ಅದಾಲತ್ ತೀರ್ಮಾನಗಳಿಗೂ ತೀರ್ಪಿನ ಮಾನ್ಯತೆ ನೀಡಲು ನ್ಯಾಯಮೂರ್ತಿಗಳನ್ನೂ ಒಳಗೊಂಡು ಚರ್ಚಿಸಿ ತೀರ್ಮಾನಿಸಲಾಗುವುದು ಎಂದು ಕಾನೂನು ಸಚಿವರು ಹೇಳಿದ್ದಾರೆ. ಲೋಕಅದಾಲತ್ ತೀರ್ಪನ್ನೇ ಪ್ರಶ್ನಿಸುವ ಜನರು ಇನ್ನು ಪಂಚಾಯಿತಿ ಕಟ್ಟೆ ತೀರ್ಮಾನವನ್ನು ಹೇಗೆ ಒಪ್ಪಿಕೊಳ್ಳುತ್ತಾರೆ ಎನ್ನುವ ಬಗ್ಗೆ ಸಚಿವರು ಚಿಂತಿಸಬೇಕು. ಹಾಗೆಯೇ ಗ್ರಾಮಗಳಲ್ಲಿ ಹಳೆ ತಲೆಮಾರಿನ, ನ್ಯಾಯ ಮಾಡುವ ವ್ಯಕ್ತಿಗಳು ಈಗ ಇಲ್ಲವಾಗಿದ್ದಾರೆ. ಈಗೇನಿದ್ದರೂ ನ್ಯಾಯ ತೀರ್ಮಾನಕ್ಕೆ ಬರುವ ವ್ಯಕ್ತಿಗಳು ಪ್ರಭಾವ ಬೀರಿ ನ್ಯಾಯ ವಂಚಿಸಿ ತೀರ್ಮಾನ ಬರುವಂತೆ ಮಾಡುವ ಸಂಭವ ಇರುತ್ತದೆ. ಪಂಚಾಯಿತಿ ಮಾಡುವ ವ್ಯಕ್ತಿಗಳೂ ಒಂದು ರಾಜಕೀಯ ಪಕ್ಷದ ಪರ ವಹಿಸಿ ತೀರ್ಮಾನ ಮಾಡುವ ಸಂಭವವೇ ಹೆಚ್ಚಿರುತ್ತದೆ. ಇದರಿಂದ ನೈತಿಕ ಪೊಲೀಸ್‌ಗಿರಿಗೆ ಅವಕಾಶ ಕೊಟ್ಟಂತಾಗುತ್ತದೆ. ಬಹಳಷ್ಟು ವೇಳೆ ಪಂಚಾಯಿತಿ ತೀರ್ಮಾನಗಳು ಎದುರು ಪಕ್ಷದವರಿಗೆ ಇಷ್ಟವಾಗದಿದ್ದರೂ ಬಲವಂತವಾಗಿ ಒಪ್ಪಿಕೊಳ್ಳುವಂತೆ ಒತ್ತಡ ಹೇರಲಾಗುತ್ತದೆ. ಇದು ಅಪಾಯಕಾರಿ.

ಆದ್ದರಿಂದ ಈಗ ಹಳ್ಳಿಗಳಲ್ಲಿ ನಡೆಯುತ್ತಿರುವ ನ್ಯಾಯ ಪಂಚಾಯಿತಿಗಳು ಹಾಲಿ ನಡೆಯುವ ರೀತಿಯಲ್ಲೇ ನಡೆಯಲಿ. ತೀರ್ಮಾನ ಒಪ್ಪಿಗೆಯಾಗದಿದ್ದರೆ ಈಗಿರುವಂತೆ ಪೊಲೀಸ್ ಠಾಣೆ ಮೆಟ್ಟಿಲೇರುವ ಅಥವಾ ಲೋಕ ಅದಾಲತ್‌ನಲ್ಲಿ ಪ್ರಶ್ನಿಸುವ ಅಥವಾ ನ್ಯಾಯಾಲಯದಲ್ಲಿ ದಾವೆ ಹೂಡುವ ಆಯ್ಕೆ ಇದ್ದೇ ಇರುತ್ತದೆ. ಈ ಬಗ್ಗೆ ಸರ್ಕಾರ ಮರು ಚಿಂತಿಸಬೇಕು ಹಾಗೂ ಈಗ ಗ್ರಾಮಗಳಲ್ಲಿ ನಡೆಯುತ್ತಿರುವ ಗ್ರಾಮ ನ್ಯಾಯದ ಬಗ್ಗೆ ಅವಲೋಕನ ನಡೆಯಬೇಕು.

ಮುಳ್ಳೂರು ಪ್ರಕಾಶ್, ಮೈಸೂರು

ಬೇಕು ಗಮಕಗೋಷ್ಠಿ, ಹಳಗನ್ನಡ ಕಾವ್ಯ ಉಳಿವಿಗೆ

ಹಳಗನ್ನಡ ಕಾವ್ಯಗಳು ಸಮೃದ್ಧ ಕನ್ನಡ ಸಾಹಿತ್ಯದ ಅಸ್ಮಿತೆ. ಕನ್ನಡ ಭಾಷೆಯು ಶಾಸ್ತ್ರೀಯ ಭಾಷೆ ಎನಿಸಲು ಹಳಗನ್ನಡ ಕಾವ್ಯಗಳು ಕಾರಣವಾಗಿವೆ. ಈಗ ಅವುಗಳನ್ನು ಉಳಿಸಿ ಬೆಳೆಸಲು ಗಮಕಕಲೆ ಅವಶ್ಯವೆನಿಸಿದೆ. ಗಮಕ ಒಂದು ಕಲೆ. ಹಿಂದಿನ ನಮ್ಮ ಸಾಹಿತ್ಯ ಆಸಕ್ತ ಹಿರಿಯರು, ಶಿಕ್ಷಕರು ಹಳಗನ್ನಡ ಕಾವ್ಯಗಳನ್ನು ಗಮಕವಾಚನ, ವ್ಯಾಖ್ಯಾನ ಮಾಡುವ ಮೂಲಕ ಮನೋಜ್ಞಗೊಳಿಸುತ್ತಿದ್ದರು. ಪಂಪ, ರನ್ನ, ಜನ್ನರಂಥ ಕವಿಗಳು ತಮ್ಮ ಕಾವ್ಯಗಳನ್ನು ಆಶ್ರಯ ದೊರೆಗಳ ಎದುರು ಗಮಕದಲ್ಲಿ ವಾಚಿಸಿ ಅವರನ್ನು ಆನಂದಗೊಳಿಸುತ್ತಿದ್ದರು. ಇಂದಿನ ಯುವಕರು ಹಳಗನ್ನಡ ಕಾವ್ಯವನ್ನು ಓದುವುದಿರಲಿ; ಅದರ ಮೇಲಿನ ಅಭಿಮಾನ– ಅಭಿರುಚಿಗಳನ್ನು ಕಳೆದುಕೊಂಡಿರುವುದು ದೌರ್ಭಾಗ್ಯವೇ ಸರಿ.

ಹಳಗನ್ನಡ ಕಾವ್ಯಗಳ ಬಗೆಗೆ ಆಸಕ್ತಿ ಮೂಡಿಸುವಂತಹ ತರಬೇತಿ, ಕಾರ್ಯಾಗಾರಗಳಿಗೆ ಉತ್ತೇಜನ ನೀಡಬೇಕಾಗಿದೆ. ಈ ಕಾರ್ಯವು ಕನ್ನಡ ಸಾಹಿತ್ಯ ಪರಿಷತ್ತಿಗೆ ಬಹುದೊಡ್ಡ ಕರ್ತವ್ಯವಾಗಿದೆ. ಈಗ ಪರಿಷತ್ತು ಮಾಡಬೇಕಾದ ಮೊದಲ ಕಾರ್ಯವೆಂದರೆ, ಪ್ರತಿಯೊಂದು ಸಾಹಿತ್ಯ ಸಮ್ಮೇಳನದಲ್ಲೂ ಗಮಕ ಗೋಷ್ಠಿಯನ್ನು ಏರ್ಪಡಿಸುವುದು. ಅಂತೆಯೇ, ಹಾವೇರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಗಮಕ ಗೋಷ್ಠಿಯನ್ನು ಏರ್ಪಡಿಸಿ ತನ್ಮೂಲಕ ಹಳಗನ್ನಡ ಕಾವ್ಯಗಳನ್ನು ಉಳಿಸುವ ದಿಸೆಯಲ್ಲಿ ದಿಟ್ಟ ಹೆಜ್ಜೆಯನ್ನಿಡಲಿ. ಗಮಕ ಕಲೆಯ ಪರಂಪರೆಯನ್ನು ಮುಂದುವರಿಸಲಿ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನಿರ್ಭಯಾ ನಿಧಿ ಕಡೆಗಣನೆ

ನಿರ್ಭಯಾ ನಿಧಿ ಅಡಿ ಮಹಿಳೆಯರ ಸುರಕ್ಷತೆಗೆಂದು ಖರೀದಿಸಲಾದ ವಾಹನಗಳನ್ನು, ಮಹಾರಾಷ್ಟ್ರ ಸರ್ಕಾರವು ಸಚಿವರು ಮತ್ತು ಶಾಸಕರ ಬೆಂಗಾವಲಿಗೆ ಬಳಸಿದೆ ಎಂಬ ಆರೋಪ ಕೇಳಿ ಬಂದಿದೆ. ಈ ಸಂಬಂಧ ವ್ಯಾಪಕ ಟೀಕೆ ಮತ್ತು ಆಕ್ಷೇಪ ವ್ಯಕ್ತವಾಗಿದೆ. ಆದರೆ, ನಿರ್ಭಯಾ ನಿಧಿಯಿಂದ ನೀಡಲಾದ ಅನುದಾನವು ದೇಶದ ಬಹುತೇಕ ರಾಜ್ಯಗಳಲ್ಲಿ ಬಳಕೆಯೇ ಆಗುತ್ತಿಲ್ಲ ಎನ್ನುತ್ತವೆ ಸರ್ಕಾರಿ ದಾಖಲೆಗಳು. ಒಟ್ಟಾರೆಯಾಗಿ ಮಹಿಳೆಯರ ಸುರಕ್ಷತೆಗಾಗಿ ರೂಪಿಸಲಾದ ಈ ಕಾರ್ಯಕ್ರಮವನ್ನು ಕಡೆಗಣಿಸಲಾಗಿದೆ ಎಂಬುದನ್ನು ಈ ದಾಖಲೆಗಳು ಬೊಟ್ಟುಮಾಡಿ ಹೇಳುತ್ತವೆ

ಪ್ರಜಾವಾಣಿ ವಾರ್ತೆ

ಮಹಿಳೆಯರ ಮೇಲಿನ ಅತ್ಯಾಚಾರವನ್ನು ತಡೆಯುವ ಉದ್ದೇಶದಿಂದ ಕೇಂದ್ರ ಸರ್ಕಾರವು ನಿರ್ಭಯಾ ನಿಧಿಯನ್ನು ಆರಂಭಿಸಿತ್ತು. ಮನೆ, ಕೆಲಸದ ಸ್ಥಳ, ಸಾರ್ವಜನಿಕ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆಯನ್ನು ಹೆಚ್ಚಿಸುವುದು, ತುರ್ತು ಸಂದರ್ಭದಲ್ಲಿ ಕ್ಷಿಪ್ರ ಸ್ಪಂದನೆ ಹಾಗೂ ಅತ್ಯಾಚಾರದಂತಹ ಸಂದರ್ಭದಲ್ಲಿ ತ್ವರಿತ ಸಾಂತ್ವನ ಮತ್ತು ನ್ಯಾಯದಾನಕ್ಕೆ ಅಗತ್ಯವಿರುವ ಸವಲತ್ತುಗಳನ್ನು ಈ ನಿಧಿಯ ಅಡಿ ಒದಗಿಸುವುದು ಸರ್ಕಾರದ ಉದ್ದೇಶವಾಗಿತ್ತು. ಆದರೆ, ಈ ನಿಧಿಯ ಅಡಿ ಈವರೆಗೆ ಒದಗಿಸಲಾಗಿರುವ ಅನುದಾನವು ಪೂರ್ಣ ಪ್ರಮಾಣದಲ್ಲಿ ಬಳಕೆಯೇ ಆಗಿಲ್ಲ.

ನಿರ್ಭಯಾ ನಿಧಿ ಅಡಿ ಕೇಂದ್ರ ಸರ್ಕಾರವೇ ಏಕಪಕ್ಷೀಯವಾಗಿ ಯಾವುದೇ ಕಾರ್ಯಕ್ರಮವನ್ನು ರೂಪಿಸುವುದಿಲ್ಲ. ಬಹುತೇಕ ಸಂದರ್ಭಗಳಲ್ಲಿ ರಾಜ್ಯ ಸರ್ಕಾರಗಳು ಇಂತಹ ಕ್ರಮ ತೆಗೆದುಕೊಳ್ಳಲು ಇಷ್ಟು ಅನುದಾನದ ಅಗತ್ಯವಿದೆ ಎಂಬ ಪ್ರಸ್ತಾವ ಸಲ್ಲಿಸಬೇಕು. ಇಂತಹ ಪ್ರಸ್ತಾವಗಳು ಎಲ್ಲಾ ರಾಜ್ಯಗಳಿಗೂ ಅನ್ವಯವಾಗುವಂತಿದ್ದರೆ, ಕೇಂದ್ರ ಸರ್ಕಾರವು ಅದನ್ನು ಸಾರ್ವತ್ರಿಕ ಕಾರ್ಯಕ್ರಮವಾಗಿ ರೂಪಿಸುತ್ತದೆ. ಅದಕ್ಕೆ ಅಗತ್ಯವಿರುವ ಅನುದಾನದ ಮೊತ್ತವನ್ನು ಪರಿಶೀಲಿಸಲಾಗುತ್ತದೆ ಮತ್ತು ಅದನ್ನು ಮಂಜೂರು ಮಾಡಲಾಗುತ್ತದೆ. ಅನುದಾನವನ್ನು ಪ್ರತಿ ವರ್ಷವೂ ಕಂತಿನಲ್ಲಿ ಬಿಡುಗಡೆ ಮಾಡಲಾಗುತ್ತದೆ.

ಹೀಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ 2014ರಿಂದ 2022ರ ಏಪ್ರಿಲ್‌ವರೆಗೆ ಒಟ್ಟು ₹9,176.65 ಕೋಟಿ ಮೊತ್ತದ ಕಾರ್ಯಕ್ರಮಗಳನ್ನು ರೂಪಿಸಿವೆ. ಕೇಂದ್ರ ಸರ್ಕಾರವು ಒಟ್ಟು ₹7,418.46 ಕೋಟಿಯಷ್ಟು ಅನುದಾನವನ್ನು ಮಾತ್ರ ಮಂಜೂರು ಮಾಡಿದೆ. ಆದರೆ, ಇಷ್ಟೂ ಹಣ ಬಿಡುಗಡೆಯಾಗಿಲ್ಲ. ಬದಲಿಗೆ ಈವರೆಗೆ ₹4,480.30 ಕೋಟಿಯಷ್ಟು ಅನುದಾನ ಬಿಡುಗಡೆಯಾಗಿದೆ.

ಇದಕ್ಕಿಂತಲೂ ಕಳವಳಕಾರಿಯಾದ ಅಂಶವೆಂದರೆ, ಬಿಡುಗಡೆಯಾದ ಅನುದಾನವೂ ಪೂರ್ಣ ಬಳಕೆಯಾಗಿಲ್ಲ ಎಂಬುದು. ನಿರ್ಭಯಾ ನಿಧಿ ಅಡಿ ಈವರೆಗೆ ₹ 4,480 ಕೋಟಿ ಬಿಡುಗಡೆಯಾಗಿದೆ. ಆದರೆ, ಇದರಲ್ಲಿ ಬಳಕೆಯಾಗಿದ್ದು ₹3,140 ಕೋಟಿ ಮಾತ್ರ.

ಕೆಲವು ಕಾರ್ಯಕ್ರಮಗಳನ್ನು ಈಚೆಗಷ್ಟೇ ರೂಪಿಸಿರುವುದು ಅನುದಾನ ಬಳಕೆ ಪ್ರಮಾಣ ಕಡಿಮೆ ಇರಲು ಕಾರಣ ಎನ್ನಲಾಗಿದೆ. ಆದರೆ, 2014 ಮತ್ತು 2015ರಲ್ಲಿ ರೂಪಿಸಿದ ಕೆಲವು ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿದ ಅನುದಾನವೂ ಪೂರ್ಣ ಪ್ರಮಾಣದಲ್ಲಿ ಬಳಕೆಯಾಗಿಲ್ಲ. ಕೆಲವು ಕಾರ್ಯಕ್ರಮಗಳ ಅನುದಾನವು ಸ್ವಲ್ಪವೂ ಬಳಕೆಯಾಗಿಲ್ಲ. ಹೀಗೆ ಅನುದಾನವನ್ನು ಬಳಕೆ ಮಾಡದಿರುವವರಲ್ಲಿ ಹಲವು ರಾಜ್ಯ ಸರ್ಕಾರಗಳು ಮತ್ತು ಕೇಂದ್ರದ ಹಲವು ಸಚಿವಾಲಯಗಳೂ ಇವೆ. ಒಟ್ಟಾರೆ, ಈ ಕಾರ್ಯಕ್ರಮಗಳನ್ನು ಕಡೆಗಣಿಸಲಾಗಿದೆ ಎಂಬುದನ್ನು ಈ ಅಂಕಿಅಂಶಗಳು ಹೇಳುತ್ತವೆ.

ಹೆಣ್ಣುಮಕ್ಕಳ ಸುರಕ್ಷತೆಗಾಗಿ ಆರಂಭಿಸಲಾದ ಈ ನಿಧಿಯು ಬಳಕೆಯಾಗದೇ ಇರುವ ಸಂದರ್ಭದಲ್ಲೇ, ದೇಶದಲ್ಲಿ ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳು ಏರಿಕೆಯಾಗಿವೆ. ಈ ಏರಿಕೆಯು, ಕೇಂದ್ರದ ಸಚಿವಾಲಯಗಳು ಮತ್ತು ರಾಜ್ಯ ಸರ್ಕಾರಗಳ ನಿರ್ಲಕ್ಷ್ಯದಿಂದ ನಿರ್ಭಯಾ ನಿಧಿಯು ವಿಫಲವಾಗುತ್ತಿದೆ ಎಂಬುದನ್ನು ಸೂಚಿಸುತ್ತದೆ.

ಅನುದಾನದ ಸ್ಥಿತಿಗತಿ



ಅನುಷ್ಠಾನವಾಗದ ಕಾರ್ಯಕ್ರಮಗಳು

ನಿರ್ಭಯಾ ನಿಧಿ ಅಡಿಯಲ್ಲಿ ಹಲವು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಅವುಗಳಲ್ಲಿ ಕೆಲವು ಅನುಷ್ಠಾನವಾಗಿವೆ. ಕೆಲವು ಕುಂಟುತ್ತಿವೆ. ಕೆಲವು ಕಾರ್ಯಕ್ರಮಗಳು ಆರಂಭವಾಗಿಯೇ ಇಲ್ಲ. ಅಂತಹ ಕೆಲ ಕಾರ್ಯಕ್ರಮಗಳ ವಿವರ ಇಂತಿದೆ

ಮಹಿಳಾ ಪೊಲೀಸ್ ಸ್ವಯಂಸೇವಕರು

ಮಹಿಳೆಯರ ಸುರಕ್ಷತೆಯನ್ನು ಹೆಚ್ಚಿಸುವ ಕಾರ್ಯದಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಗಿದೆ. ಇದರ ಅಡಿಯಲ್ಲಿ ಮಹಿಳಾ ಪೊಲೀಸ್ ಸ್ವಯಂಸೇವಕರ ಆಯ್ಕೆ, ತರಬೇತಿ ಮತ್ತು ನಿಯೋಜನೆಗೆ ಕಾರ್ಯಕ್ರಮ ರೂಪಿಸಲಾಗಿತ್ತು. ದೇಶದ ಎಲ್ಲಾ ರಾಜ್ಯಗಳಲ್ಲಿ ಇದನ್ನು ಜಾರಿಗೆ ತರಬೇಕಿತ್ತು. 2016ರಲ್ಲಿ ಈ ಕಾರ್ಯಕ್ರಮ ರೂಪಿಸಿದ್ದರೂ, ಇದು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನವಾಗಿಲ್ಲ. ಈ ಕಾರ್ಯಕ್ರಮಕ್ಕೆ ಒಟ್ಟು ₹27 ಕೋಟಿ ಅನುದಾನವನ್ನು ಮೀಸಲಿರಿಸಲಾಗಿದ್ದು, ಕೇಂದ್ರ ಸರ್ಕಾರವು ಈವರೆಗೆ ₹16.32 ಕೋಟಿಯನ್ನು ಬಿಡುಗಡೆ ಮಾಡಿದೆ. ಆದರೆ, ಇದರಲ್ಲಿ ಬಳಕೆಯಾಗಿದ್ದು ₹3.07 ಕೋಟಿ ಮಾತ್ರ.

ಒನ್ ಸ್ಟಾಪ್ ಸೆಂಟರ್

ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯದಂತಹ ಸಂದರ್ಭದಲ್ಲಿ ಸಂತ್ರಸ್ತರಿಗೆ ಅಗತ್ಯವಿರುವ ಎಲ್ಲಾ ಸೇವೆಗಳು ಹಾಗೂ ನೆರವುಗಳು ಒಂದೇ ಸ್ಥಳದಲ್ಲಿ ದೊರೆಯುವ ಕೇಂದ್ರಗಳನ್ನು ಸ್ಥಾಪಿಸಬೇಕು ಎಂದು 2015ರ ಏಪ್ರಿಲ್‌ನಲ್ಲಿ ಕಾರ್ಯಕ್ರಮ ರೂಪಿಸಲಾಗಿತ್ತು. ಇದಕ್ಕಾಗಿ ₹867.74 ಕೋಟಿ ಅನುದಾನದ ಅಗತ್ಯವಿದೆ ಎಂದು ಅಂದಾಜಿಸಲಾಗಿತ್ತು. ಇಷ್ಟೂ ಅನುದಾನವನ್ನು ಕೇಂದ್ರ ಸರ್ಕಾರವು ಮಂಜೂರು ಮಾಡಿದೆ. ಅದರಲ್ಲಿ ₹672 ಕೋಟಿ ಬಿಡುಗಡೆಯಾಗಿದೆ. ಆದರೆ, ಅದರಲ್ಲಿ ಬಳಕೆಯಾಗಿದ್ದು ₹164.71 ಕೋಟಿ ಮಾತ್ರ. ಈ ಕಾರ್ಯಕ್ರಮದ ಅನುಷ್ಠಾನದ ಪ್ರಮಾಣ ಶೇ 19ಕ್ಕಿಂತಲೂ ಕಡಿಮೆ.

ಸಿ–ಡಾಕ್



ದೇಶದ ಎಲ್ಲಾ ಬಸ್‌ಗಳು, ಟ್ಯಾಕ್ಸಿ ಮತ್ತು ಕ್ಯಾಬ್‌ಗಳ ಓಡಾಟದ ಮೇಲೆ ನಿಗಾ ಇರಿಸುವ ಏಕೀಕೃತ ಪ್ಲಾಟ್‌ಫಾರಂ ಅನ್ನು ರೂಪಿಸುವ ಉದ್ದೇಶದಿಂದ ಸಿ–ಡಾಕ್ ಎಂಬ ಕಾರ್ಯಕ್ರಮವನ್ನು 2019ರಲ್ಲಿ ಆರಂಭಿಸಲಾಗಿತ್ತು. ಇದಕ್ಕಾಗಿ ಒಟ್ಟು ₹465 ಕೋಟಿ ಮೊತ್ತದ ಅನುದಾನದ ಅಗತ್ಯವಿದೆ ಎಂದು ಪ್ರಸ್ತಾವ ಸಲ್ಲಿಸಲಾಗಿತ್ತು. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಸಲ್ಲಿಸಿದ್ದ ಪ್ರಸ್ತಾವ ಮತ್ತು ಅನುದಾನಕ್ಕೆ ಕೇಂದ್ರ ಸರ್ಕಾರವು ಪೂರ್ಣ ಒಪ್ಪಿಗೆ ನೀಡಿತ್ತು. ಇದಕ್ಕಾಗಿ ₹192 ಕೋಟಿ ಅನುದಾನವನ್ನು ಮೊದಲ ಹಂತದಲ್ಲಿ ಬಿಡುಗಡೆ ಮಾಡಲಾಗಿತ್ತು. ಆದರೆ, ಈವರೆಗೆ ಈ ಅನುದಾನದಲ್ಲಿ ಒಂದು ರೂಪಾಯಿಯೂ ಬಳಕೆಯಾಗಿಲ್ಲ. ಈ ಕಾರ್ಯಕ್ರಮದ ಅನುಷ್ಠಾನ ಪ್ರಮಾಣ ಶೂನ್ಯ. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಹಾಗೂ ರಾಜ್ಯಗಳ ಸಾರಿಗೆ ಇಲಾಖೆಗಳು ಜಂಟಿಯಾಗಿ ಇದನ್ನು ಅನುಷ್ಠಾನಕ್ಕೆ ತರಬೇಕಿತ್ತು. ಆದರೆ, ಈ ಕಾರ್ಯಕ್ರಮವನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ.

ನಿರ್ಲಕ್ಷ್ಯಕ್ಕೆ ಸ್ಥಾಯಿಸಮಿತಿ ಆಕ್ಷೇಪ

‘ಶಿಕ್ಷಣ, ಮಹಿಳೆ, ಮಕ್ಕಳು, ಯುವಜನತೆ ಹಾಗೂ ಕ್ರೀಡಾ ಸಂಸದೀಯ ಸ್ಥಾಯಿಸಮಿತಿ’ಯು ನಿರ್ಭಯಾ ನಿಧಿಯ ಬಳಕೆ, ಯೋಜನೆಗಳ ಅನುಷ್ಠಾನ ಕುರಿತು ಸರ್ಕಾರಕ್ಕೆ ಕೆಲವು ಶಿಫಾರಸುಗಳನ್ನು ಮಾಡಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಗೃಹಸಚಿವಾಲಯಗಳು ಈ ದಿಸೆಯಲ್ಲಿ ತೆಗೆದುಕೊಂಡಿರುವ ಕ್ರಮಗಳನ್ನೂ ಸಮಿತಿಗೆ ವಿವರಿಸಿವೆ

- **ಶಿಫಾರಸು: ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸುರಕ್ಷತೆ ಒದಗಿಸುವುದಕ್ಕಾಗಿ ಎಲ್ಲ ರಾಜ್ಯಗಳ ಸಾರಿಗೆ ಸೇವಾ ಸಂಸ್ಥೆಗಳು ಕೇಂದ್ರದ ಹೆದ್ದಾರಿ ಸಚಿವಾಲಯದ ಜೊತೆ ಸಂಪರ್ಕದಲ್ಲಿರಬೇಕು. ತುರ್ತು ಪರಿಸ್ಥಿತಿಯನ್ನು ನಿಭಾಯಿಸಲು ವಿಶೇಷ ಘಟಕವೊಂದನ್ನು ಆರಂಭಿಸುವ ಅಗತ್ಯವಿದೆ**

ಸರ್ಕಾರದ ಕ್ರಮ: ಸಾರ್ವಜನಿಕ ಸಾರಿಗೆಯ ಬಸ್‌ಗಳ ಓಡಾಟದ ಮೇಲೆ ಸದಾ ನಿಗಾ ವಹಿಸುವ ವ್ಯವಸ್ಥೆಯನ್ನು ರೂಪಿಸುವುದು ಹಾಗೂ ಅಪಾಯದ ಕರೆಗಂಟೆ ಸೌಲಭ್ಯ ಒದಗಿಸುವುದು ಮೊದಲಾದ ವಿಚಾರಗಳಲ್ಲಿ ವಿವಿಧ ರಾಜ್ಯಗಳ ಜೊತೆ ಕೇಂದ್ರ ಸಚಿವಾಲಯ ಸಂಪರ್ಕದಲ್ಲಿದೆ

- **ಶಿಫಾರಸು: ಬಸ್‌ಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮರಾ, ಅಪಾಯದ ಕರೆಗಂಟೆ ಅಳವಡಿಕೆ ಹಾಗೂ ನಿಯಂತ್ರಕರನ್ನು ನೇಮಿಸುವ ಕುರಿತಂತೆ ಕೆಲವು ರಾಜ್ಯಗಳು ಶಿಫಾರಸು ಮಾಡಿವೆ. ಕೇಂದ್ರ ಸರ್ಕಾರವು ಈ ಕ್ರಮಗಳನ್ನು ಕಡ್ಡಾಯವಾಗಿ ಜಾರಿಗೊಳಿಸುವುದಕ್ಕಾಗಿ ಎಲ್ಲ ರಾಜ್ಯಗಳಿಗೂ ಅನ್ವಯವಾಗುವ ಏಕೀಕೃತ ನೀತಿಯನ್ನು ಕಾಲಮಿತಿಯೊಳಗೆ ರೂಪಿಸುವ ಅಗತ್ಯವಿದೆ**

ಸರ್ಕಾರದ ಕ್ರಮ: ಬಹುತೇಕ ರಾಜ್ಯಗಳಿಗೆ ಸಾರಿಗೆ ಬಸ್‌ಗಳ ಮೇಲೆ ನಿಗಾ ವಹಿಸುವ ಘಟಕಗಳನ್ನು ಸ್ಥಾಪಿಸಲು ಸಾಧ್ಯವಾಗಿಲ್ಲ. ರಾಜ್ಯಗಳು ಈ ಕ್ರಮಗಳನ್ನು ಕಟ್ಟುನಿಟ್ಟಾಗಿ ಜಾರಿಮಾಡಲು ಸಾಧ್ಯವಾಗುವಂತೆ ನಿರ್ಭಯಾ ನಿಧಿಯಲ್ಲಿ ಇದಕ್ಕೆ ಬೇಕಾದ ಹಣಕಾಸನ್ನು ಸರ್ಕಾರ ಒದಗಿಸುತ್ತಿದೆ

- **ಶಿಫಾರಸು: ರೈಲುಗಳಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ದಾಖಲಿಸುವ ವ್ಯವಸ್ಥೆ ಇಲ್ಲ ಎಂಬುದನ್ನು ಸಮಿತಿ ಮನಗಂಡಿದೆ. ಹೀಗಾಗಿ, ರೈಲಿನಲ್ಲೇ ಪ್ರಕರಣ ದಾಖಲಿಸಲು ಸಾಧ್ಯವಾಗುವ ವ್ಯವಸ್ಥೆಯನ್ನು ಗೃಹಸಚಿವಾಲಯ ಜೊತೆ ಸೇರಿ ರೈಲ್ವೆ ಸಚಿವಾಲಯ ರೂಪಿಸಬೇಕಿದೆ**

ಸರ್ಕಾರದ ಕ್ರಮ: ರೈಲು ಹಾಗೂ ನಿಲ್ದಾಣಗಳಲ್ಲಿ ನಡೆಯುವ ಲೈಂಗಿಕ ದೌರ್ಜನ್ಯಗಳ ಕುರಿತು ದೂರು ನೀಡಲು ಸಹಾಯವಾಣಿ (139) ಇದೆ

- **ಶಿಫಾರಸು: ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರು ದೂರು ದಾಖಲಿಸುವಲ್ಲಿಂದ ಹಿಡಿದು, ಪ್ರತಿ ಹಂತದಲ್ಲೂ ಅಡೆತಡೆಗಳನ್ನು ಎದುರಿಸುತ್ತಿರುವುದು ಗಮನಕ್ಕೆ ಬಂದಿದೆ. ಹೀಗಾಗಿ ಪ್ರತೀ ಪೊಲೀಸ್ ಠಾಣೆಯಲ್ಲಿ ಇಂತಹ ಪ್ರಕರಣಗಳನ್ನು ನಿಭಾಯಿಸಲು ತರಬೇತಿ ಪಡೆದ ಒಬ್ಬ ಪೊಲೀಸ್ ಅಧಿಕಾರಿಯನ್ನು ನಿಯೋಜಿಸಬೇಕು**

ಸರ್ಕಾರದ ಕ್ರಮ: ಪ್ರತೀ ಠಾಣೆಯಲ್ಲಿ ಮಹಿಳಾ ಸಹಾಯ ಘಟಕಗಳನ್ನು ಸ್ಥಾಪಿಸುವ ಉದ್ದೇಶದಿಂದ ನಿರ್ಭಯಾ ನಿಧಿಯಡಿ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ₹100 ಕೋಟಿ ಅನುದಾನ ಒದಗಿಸಲಾಗಿದೆ. ಪ್ರತೀ ಠಾಣೆಯಲ್ಲಿ ಶೇ 33ರಷ್ಟು ಮಹಿಳಾ ಸಿಬ್ಬಂದಿ ಇರುವಂತೆ ನೋಡಿಕೊಳ್ಳಬೇಕು ಎಂಬ ಆದೇಶವನ್ನು ಪಾಲಿಸುವಂತೆ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ಸೂಕ್ಷ್ಮವಾಗಿ ನಿರ್ವಹಣೆ ಮಾಡಲು ಪೊಲೀಸ್ ಸಿಬ್ಬಂದಿಯನ್ನು ತರಬೇತಿಗೊಳಿಸಲಾಗುತ್ತಿದೆ

- **ಶಿಫಾರಸು: ನಿರ್ಭಯಾ ನಿಧಿಯಡಿ ಜಾರಿಮಾಡಲಾಗಿರುವ ವಿವಿಧ ಯೋಜನೆಗಳ ಪ್ರಗತಿ ಕುಂಠಿತವಾಗಿದ್ದು, ಅವುಗಳಿಗೆ ವೇಗ ನೀಡುವುದಕ್ಕಾಗಿ ಸಂಪುಟ ಕಾರ್ಯದರ್ಶಿ ನೇತೃತ್ವದಲ್ಲಿ ಸಮಿತಿ ರಚಿಸಬೇಕು. ಬಹುತೇಕ ರಾಜ್ಯಗಳು ಶೇ 20ರಿಂದ ಶೇ 30ರಷ್ಟು ಮಾತ್ರ ನಿರ್ಭಯಾ ನಿಧಿ ಬಳಕೆ ಮಾಡಿವೆ**

ಸರ್ಕಾರದ ಕ್ರಮ: ಕಾಲಮಿತಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸುವ ನಿಟ್ಟಿನಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ನಿರಂತರವಾಗಿ ಪ್ರಗತಿ ಪರಿಶೀಲನೆ ನಡೆಸುತ್ತಿದೆ. ಸಮಿತಿ ರಚನೆಯೂ ಪ್ರಗತಿಯಲ್ಲಿದೆ ಎಂದು ತಿಳಿಸಿದೆ. ನಿರ್ಭಯಾ ನಿಧಿ ಬಳಸುವಂತೆ ರಾಜ್ಯ ಸರ್ಕಾರಗಳಿಗೆ ದೂರವಾಣಿ ಕರೆ, ಇ–ಮೇಲ್ ಮೂಲಕ ತಿಳಿಸಲಾಗುತ್ತಿದೆ

ಆಧಾರ: ನಿರ್ಭಯಾ ನಿಧಿ ಡ್ಯಾಶ್‌ಬೋರ್ಡ್, ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, ಪಿಐಬಿ ಪ್ರಕಟಣೆಗಳು, ಪಿಟಿಐ, ‘ಶಿಕ್ಷಣ, ಮಹಿಳೆ, ಮಕ್ಕಳು, ಯುವಜನತೆ ಹಾಗೂ ಕ್ರೀಡಾ ಸಂಸದೀಯ ಸ್ಥಾಯಿಸಮಿತಿ’ಯ ವರದಿ

ದೇಶಕ್ಕೆ ಅಡ್ಡದಾರಿಯ ರಾಜಕೀಯ ಅಗತ್ಯವಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಹೇಳಿರುವುದನ್ನು ನಂಬಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಜಿ20: ಕ್ರಿಯಾಶೀಲ ಕಾರ್ಯಸೂಚಿ

• ಅಜಯ್ ಸೇಠ್, ಮೈಕೆಲ್ ದೇಬಬ್ರತಾ ಪಾತ್ರಾ

ಜಗತ್ತು ನೀತಿ ನಿರೂಪಣೆಗೆ ಸಂಬಂಧಿಸಿದ ಬಿಕ್ಕಟ್ಟಿನಿಂದ ಜರ್ಜರಿತವಾಗಿರುವ ಸನ್ನಿವೇಶದಲ್ಲಿ ಭಾರತವು ಜಿ–20ರ ಅಧ್ಯಕ್ಷತೆ ವಹಿಸಿಕೊಂಡಿದೆ. ಜಾಗತಿಕವಾಗಿ ಪ್ರಗತಿ ಮತ್ತು ವ್ಯಾಪಾರ ಕುಂಠಿತಗೊಂಡಿದೆ, ಹಣದುಬ್ಬರ ಏರಿಕೆಯಾಗಿದೆ, ಹಣಕಾಸು ನೀತಿಯನ್ನು ಆಕ್ರಮಣಶೀಲವಾಗಿ ಬಿಗಿಗೊಳಿಸಲಾಗಿದೆ ಮತ್ತು ಇದಕ್ಕೆ ಸಂಬಂಧಿಸಿದಂತೆ ಇತರ ಸಮಸ್ಯೆಗಳೂ ತಲೆದೋರಿವೆ. ಭೌಗೋಳಿಕ–ರಾಜಕೀಯ ತಿಕ್ಕಾಟಗಳು, ಸಾಲ ಬಿಕ್ಕಟ್ಟು, ಹವಾಮಾನ ಬದಲಾವಣೆ ತಂದಿರುವ ಸಮಸ್ಯೆಗಳು, ಸಾಂಕ್ರಾಮಿಕದ ಹೊಡೆತಗಳೆಲ್ಲವೂ ಸೇರಿದ ಮಹಾ ಬಿಕ್ಕಟ್ಟನ್ನು ಜಿ–20 ದೇಶಗಳು ಎದುರಿಸುತ್ತಿವೆ.

ವಿವಿಧ ಶಕ್ತಿಗಳು ಜಾಗತೀಕರಣದ ಹೆಣಿಗೆಗಳನ್ನು ವಿವಿಧ ಭಾಗಗಳತ್ತ ಎಳೆದಾಡುತ್ತಿರುವ ಈ ಹೊತ್ತಿನಲ್ಲಿ, ಜಾಗತಿಕ ನೀತಿ ಸಹಕಾರಕ್ಕೆ ಉತ್ತೇಜನ ನೀಡುವಲ್ಲಿ ಜಿ20ರ ಪಾತ್ರವು ನಿರ್ಣಾಯಕ.

ಭಾರತದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) 2023ರಲ್ಲಿ ಶೇ 6.1ರ ದರದಲ್ಲಿ ಏರಿಕೆ ಕಾಣಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯು ಅಂದಾಜಿಸಿದೆ. ಇದು ಜಿ20 ರಾಷ್ಟ್ರಗಳಲ್ಲಿಯೇ ಅತ್ಯಧಿಕ. ಹೊಣೆಗಾರಿಕೆ ಮತ್ತು ಮಹತ್ವಾಕಾಂಕ್ಷೆಯ ನಡುವೆ ಸಮತೋಲನ, ಏಕತೆ ಮತ್ತು ಅಂತರಸಂಬಂಧವನ್ನು ಸಾಧಿಸುವುದು ಜಿ20ಯ ಭಾರತದ ಅಧ್ಯಕ್ಷತೆಯ ಅವಧಿಯ ಮುನ್ನೋಟವಾಗಿದೆ.

ಡಿಜಿಟಲ್ ತಂತ್ರಜ್ಞಾನದಲ್ಲಿ ನಾವು ಬಹಳಷ್ಟನ್ನು ಸಾಧಿಸಿದ್ದೇವೆ ಮತ್ತು ನಮ್ಮಲ್ಲಿ ಅತ್ಯಂತ ಚಲನಶೀಲವಾದ ಹಣಕಾಸು ತಂತ್ರಜ್ಞಾನ ವ್ಯವಸ್ಥೆ ಇದೆ. ಹೀಗಾಗಿ, ಆರ್ಥಿಕ ಒಳಗೊಳ್ಳುವಿಕೆಯ ವಿಸ್ತರಣೆ, ಉತ್ಪಾದಕತೆ ಹೆಚ್ಚಳ ಮತ್ತು ಆರ್ಥಿಕ ಸಮನ್ವಯಕ್ಕಾಗಿ ತಂತ್ರಜ್ಞಾನವನ್ನು ಬಳಸಿಕೊಳ್ಳುವಂತೆ ಮಾಡಲು ಸಾಧ್ಯವಿರುವ ಸ್ಥಿತಿಯಲ್ಲಿ ಭಾರತ ಇದೆ. ಹವಾಮಾನ ಬದಲಾವಣೆಯ ದುಷ್ಪರಿಣಾಮಗಳನ್ನು ಕಡಿಮೆ ಮಾಡಲು ಅಭಿವೃದ್ಧಿಶೀಲ ದೇಶಗಳಿಗೆ ನೆರವಾಗಲು ಸಾಧ್ಯವಾಗುವ ಸ್ಥಿತಿಯಲ್ಲಿಯೂ ಭಾರತವು ಇದೆ.

ಹಣಕಾಸು ವಿಭಾಗದ ಮೊದಲ ಸಭೆಯು ಬೆಂಗಳೂರಿನಲ್ಲಿ ಇದೇ ಮಂಗಳವಾರದಿಂದ ಗುರುವಾರದ ವರೆಗೆ ನಡೆಯಲಿದೆ. ಭಾರತದ ಆದ್ಯತೆಗಳೇನು ಮತ್ತು ಏನೆಲ್ಲವನ್ನು ಮಾಡಲು ಸಾಧ್ಯವಿದೆ ಎಂಬುದನ್ನು ಈ ಸಭೆಯಲ್ಲಿ ವಿವರಿಸಲಾಗುವುದು. ಅಂತರರಾಷ್ಟ್ರೀಯ ಹಣಕಾಸು, ಜಾಗತಿಕ ಅರ್ಥವ್ಯವಸ್ಥೆ, ಮೂಲಸೌಕರ್ಯ ಹೂಡಿಕೆ, ಸುಸ್ಥಿರ ಹಣಕಾಸು, ಅಂತರರಾಷ್ಟ್ರೀಯ ತೆರಿಗೆ, ಆರೋಗ್ಯ ಮತ್ತು ಹಣಕಾಸು, ಹಣಕಾಸು ಕ್ಷೇತ್ರದ ಮೇಲೆ ನಿಯಂತ್ರಣ, ಹಣಕಾಸು ಒಳಗೊಳ್ಳುವಿಕೆ ಎಂಬ ಎಂಟು ವಿಚಾರಗಳಲ್ಲಿ ಚರ್ಚೆ ನಡೆಯಲಿದೆ.

ಜಾಗತಿಕ ಹಣಕಾಸು ಸುರಕ್ಷತಾ ಜಾಲಗಳನ್ನು ಬಲಪಡಿಸುವುದು, ಜಾಗತಿಕ ಸಾಲ ಸಮಸ್ಯೆಗಳ ನಿರ್ವಹಣೆ, ಆಹಾರ ಮತ್ತು ಇಂಧನ ಅಸುರಕ್ಷತೆಯ ಆರ್ಥಿಕ ಪರಿಣಾಮಗಳ ಅಂದಾಜು, ಭವಿಷ್ಯದ ನಗರಗಳಿಗೆ ಸುಸ್ಥಿರ ಹಣಕಾಸು ಮುಂತಾದ ವಿಚಾರಗಳು ನಮ್ಮ ಆದ್ಯತೆಗಳಲ್ಲಿ ಸೇರಿವೆ. ಹವಾಮಾನ ಬದಲಾವಣೆ ತಡೆಗೆ ಬೇಕಾದಷ್ಟು ಮತ್ತು ಸಕಾಲದಲ್ಲಿ ಹಣಕಾಸು ಸಂಪನ್ಮೂಲ ಒದಗಿಸುವ ದಿಸೆಯಲ್ಲಿಯೂ ಭಾರತವು ಕೆಲಸ ಮಾಡಲಿದೆ. ಅಂತರರಾಷ್ಟ್ರೀಯ ತೆರಿಗೆ ವಿಚಾರದಲ್ಲಿ ಜಿ20 ಮಾಡಿರುವ ಕೆಲಸಗಳನ್ನು ಇನ್ನಷ್ಟು ಮುಂದಕ್ಕೆ ಒಯ್ಯಲಾಗುವುದು. ಸಾಂಕ್ರಾಮಿಕದ ಅಪಾಯಗಳು ಮತ್ತು ಅದರಿಂದಾದ ದೌರ್ಬಲ್ಯಗಳು ಹಾಗೂ ಹೊಸ ಸಾಂಕ್ರಾಮಿಕ ಒಡ್ಡಬಹುದಾದ ಬೆದರಿಕೆಗಳ ಸ್ಪಂದನೆಗಾಗಿ ಜಿ20 ನೇತೃತ್ವದ ಹಣಕಾಸು ಮತ್ತು ಆರೋಗ್ಯ ಸಮನ್ವಯ ವ್ಯವಸ್ಥೆ ರೂಪಿಸಲಾಗುವುದು.

ಡಿಜಿಟಲ್ ಹಣಕಾಸು ಸೇವೆಗಳ ಹೆಚ್ಚಳ ಮತ್ತು ಮೂರನೇ ಸೇವಾ ಸಂಸ್ಥೆ ಮೇಲಿನ ಅವಲಂಬನೆ ಹೆಚ್ಚಳವು ಹಣಕಾಸು ವ್ಯವಸ್ಥೆಯನ್ನು ವಿವಿಧ ರೀತಿಯ ಅಪಾಯಗಳಿಗೆ ತೆರೆದಿಟ್ಟಿವೆ. ಈ ಅಪಾಯಗಳನ್ನು ತಗ್ಗಿಸಲು ಅಂತರರಾಷ್ಟ್ರೀಯ ಸಹಕಾರಕ್ಕೆ ನಾವು ಪ್ರೋತ್ಸಾಹ ನೀಡಲಿದ್ದೇವೆ.

ಜಾಗತಿಕ ಸಮಸ್ಯೆಗಳಿಗೆ ಜಾಗತಿಕ ಮಟ್ಟದಲ್ಲಿ ಸಮನ್ವಯಗೊಂಡ ಪರಿಹಾರಗಳು ಅಗತ್ಯ ಎಂಬ ಬದ್ಧತೆಯು ಜಿ20ಯ ನೆಲೆಗಟ್ಟಾಗಿದೆ. ಪ್ರಬಲ, ಸುಸ್ಥಿರ, ಸಮತೋಲಿತ ಮತ್ತು ಎಲ್ಲರನ್ನೂ ಒಳಗೊಂಡ ಪ್ರಗತಿಯನ್ನು ಸಾಧಿಸುವುದಕ್ಕಾಗಿ ಜಗತ್ತಿನ ಎಲ್ಲ ಪ್ರಮುಖ ಅರ್ಥವ್ಯವಸ್ಥೆಗಳನ್ನು ಜೊತೆಗೂಡಿಸುವ ಭರವಸೆ ಈಗ ನಮ್ಮ ಮುಂದೆ ಇದೆ. ಪ್ರತಿಯೊಂದು ಬಿಕ್ಕಟ್ಟು ಕೂಡ ಅವಕಾಶವನ್ನು ಮುಂದಿಡುತ್ತದೆ. ಹಾಗಾಗಿಯೇ, ಈಗ ನಮ್ಮ ಮುಂದೆ ಇರುವ ಮಹಾಬಿಕ್ಕಟ್ಟು ಮುಂದಿರುವ ಸವಾಲುಗಳನ್ನು ಎದುರಿಸಲು ಜಾಗತಿಕ ನೀತಿ ಸಹಕಾರವು ಪುನಶ್ಚೇತನಗೊಳ್ಳಲಿದೆ. ಸಮಾನ ಮತ್ತು ಎಲ್ಲರನ್ನೂ ಒಳಗೊಂಡ ಪ್ರಗತಿ ಎಂದರೆ ವಸುಧೈವ ಕುಟುಂಬಕಂ, ಅಂದರೆ, ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ.

ಲೇಖಕರು: ಅಜಯ್ ಸೇಠ್, ಕಾರ್ಯದರ್ಶಿ, ಆರ್ಥಿಕ ವ್ಯವಹಾರಗಳ ಇಲಾಖೆ, ಹಣಕಾಸು ಸಚಿವಾಲಯ; ಡಾ. ಮೈಕೆಲ್ ಡಿ ಪಾತ್ರಾ, ಡೆಪ್ಯುಟಿ ಗವರ್ನರ್, ಭಾರತೀಯ ರಿಸರ್ವ್ ಬ್ಯಾಂಕ್

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಡಿಸೆಂಬರ್ 13, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ಪಂಚಮಿ ಗಂ. 21-22 ನಕ್ಷತ್ರ: ಆಶ್ಲೇಷ ಗಂ. 26-33 ಯೋಗ: ವೈಧೃತಿ ಅಹೋರಾತ್ರ ಕರಣ: ಕೌಲವ ಗಂ. 08-06, ವೃಶ್ಚಿಕ ಮಾಸದ 26 ನೇ ದಿನ.
ರಾಹುಕಾಲ : ಮಧ್ಯಾಹ್ನ 03-00 –04-30
ಸೂರ್ಯೋದಯ : 06-48 **ಸೂರ್ಯಾಸ್ತ :** 06-01
ಮುಸ್ಲಿಂ ದಿನಾಂಕ : 18 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 4, 9

ಮೇಷ: ಅಪವಾದದ ಭೀತಿಗೆ ಒಳಗಾಗದಿರಿ. ಆದಾಯ ವೃದ್ಧಿ ವ್ಯಯಾಧಿಕ್ಯವೂ ಸಮತೋಲನವನ್ನು ಸಾಧಿಸುವುದು. ಅವಿವಾಹಿತರು ಬಾಳ ಸಂಗಾತಿಯನ್ನು ಪಡೆಯುವಂತಾಗಲಿದೆ. ಒತ್ತಡಗಳಿಂದ ಹೊರಬರಲು ವಿಶ್ರಾಂತಿ ಬಯಸುವಿರಿ.

ವೃಷಭ: ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಪ್ರಸಂಗ ಬರಬಹುದು. ಇದಕ್ಕಾಗಿ ವಿಚಲಿತರಾಗಬೇಕಾಗಿಲ್ಲ. ಸಮಸ್ಯೆ ಬಗೆಹರಿಸಲು ಜಾಣತನ ತೋರುವಿರಿ. ಮೇಧಾವಿಗಳೊಂದಿಗಿನ ಸಂಪರ್ಕದಿಂದಾಗಿ ಅರಿವು ಹೆಚ್ಚಾಗಲಿದೆ.

ಮಿಥುನ: ಸಲಹೆ ಸೂಚನೆಗಳನ್ನು ನಿಮ್ಮ ಮೇಲಧಿಕಾರಿಗಳು ಮಾನ್ಯ ಮಾಡಿದ್ದಕ್ಕೆ ಸಂತೋಷವಾಗಲಿದೆ. ಇಂದು ಚಿನ್ನ ಬೆಳ್ಳಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು. ಬದುಕಿನ ತಿರುವಿಗೆ ಸ್ನೇಹಿತರ ಕೊಡುಗೆ ಬಹಳ ಎಂದು ತಿಳಿದುಕೊಳ್ಳುವಿರಿ.

ಕರ್ಕಾಟಕ: ಹಣಕಾಸಿನ ವಿಚಾರದಲ್ಲಿ ವ್ಯತ್ಯಾಸಗಳಾಗಿ ಉದ್ಯೋಗದಲ್ಲಿ ಛೀಮಾರಿಯ ಪ್ರಸಂಗ ಇದ್ದೀತು. ನಿಮ್ಮ ಅಭಿರುಚಿಗೆ ಹೊಂದುವಂತಹ ಜನರೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ಸಿಂಹ: ಹೊಸ ಕಾರ್ಯದಿಂದ ಹೆಜ್ಜೆ ಹೆಜ್ಜೆಗೂ ಸಮಸ್ಯೆಗಳು ಎದುರಾಗುವುದು. ಆದ್ದರಿಂದ ಈ ದಿನದಂದು ಯಾವುದೇ ಹೊಸ ನಿರ್ಧಾರವನ್ನು ತೆಗೆದುಕೊಳ್ಳಬೇಡಿ. ಆದರೆ ಹೊಸ ಜವಾಬ್ದಾರಿಗಳು ನಿಮ್ಮನ್ನು ಅರಸಿ ಬರಲಿದೆ.

ಕನ್ಯಾ: ಕಾರ್ಯಕ್ಷೇತ್ರದಲ್ಲಿ ಶತ್ರುಗಳು ಹಿನ್ನಡೆ ಅನುಭವಿಸಿ ಮನಸ್ಸಿಗೆ ಸಮಾಧಾನ ದೊರಕಲಿದೆ. ಕುಟುಂಬದ ಶುಭ ಕಾರ್ಯಗಳಿಗಾಗಿ ಪ್ರಯಾಣ ಮಾಡಬೇಕಾಗುವುದು. ಗೃಹಾಲಂಕಾರ ವಸ್ತುಗಳ ವ್ಯಾಪಾರದಿಂದ ಅಧಿಕ ಲಾಭ ಕಾಣುವಿರಿ.

ತುಲಾ: ಅಧಿಕ ಆತ್ಮವಿಶ್ವಾಸದಿಂದ ನಿಮ್ಮ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸವನ್ನು ಮಾಡಲು ಹೋಗುವುದು ಸರಿಯಲ್ಲ. ಮಧ್ಯವರ್ತಿಗಳ ಸಹಾಯದಿಂದಾಗಿ ವಿವಾಹದ ವಿಷಯದಲ್ಲಿ ಅನುಕೂಲವಾಗಲಿದೆ.

ವೃಶ್ಚಿಕ: ಅನಗತ್ಯ ಮಾಡುವ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ವೃತ್ತಿ ಪರವಾಗಿ ಬಹಳ ಮುಖ್ಯವಾದ ಕೆಲಸವನ್ನು ಮಾತ್ರ ಈ ದಿನ ಕೈಗೆತ್ತಿಕೊಳ್ಳಿ.

ಧನು: ನಿಮ್ಮ ಸಾಮರ್ಥ್ಯ, ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆಯನ್ನು ನಿಮ್ಮದಾಗಿಸಿಕೊಳ್ಳುವಿರಿ. ಸತ್ಕಾರ ಸಮಾರಂಭಗಳಲ್ಲಿ ಭಾಗವಹಿಸಬೇಕಾಗುವುದು.

ಮಕರ: ಸ್ಪರ್ಧಾತ್ಮಕ ಪರಿಕ್ಷೆಗಳಿಗಾಗಿ ಹೆಚ್ಚಿನ ತಯಾರಿ ನಡೆಸುವುದರಿಂದ ಮನೋಲ್ಲಾಸವಾದ ಪ್ರತಿಫಲ ಸಿಗುತ್ತದೆ. ಬರಬೇಕಾಗಿದ್ದ ಹಣಕ್ಕಾಗಿ ಓಡಾಡಬೇಕಾಗುವುದು. ಉಷ್ಣ ವ್ಯಾಧಿ ಉಪಶಮನಕ್ಕೆ ಬೇಕಾದ ಔಷಧಿ ಸ್ವೀಕರಿಸಿ.

ಕುಂಭ: ಜಾಣ್ಮೆಯಿಂದ ಅವಕಾಶವನ್ನು ಬಳಸಿಕೊಂಡಲ್ಲಿ ಅಧಿಕಾರ ಪಡೆದುಕೊಳ್ಳುವುದು ಕಷ್ಟದ ಕೆಲಸವೇನಲ್ಲ. ಸುತ್ತಲು ನಡೆಯುತ್ತಿರುವ ವಿದ್ಯಮಾನಗಳ ಬಗೆಗೆ ಅರಿತಿರುವುದು ಒಳ್ಳೆಯದು. ಮಾತು ಮಿತವಾಗಿ ಮತ್ತು ಸತ್ಯವಾಗಿರಲಿ.

ಮೀನ: ಇತರರ ಮಾತಿಗೆ ಕಿವಿಗೊಡದೆ ನಿಮ್ಮಂತೆ ನೀವಿರುವುದು ಕಷ್ಟವೆಂದು ಅನಿಸಿದರೂ ಅದೇ ಒಳ್ಳೆಯದು. ರಾಸಾಯನಿಕ ವಸ್ತುಗಳ ಮಾರಾಟಗಾರರಿಗೆ ಅಧಿಕ ಮಟ್ಟದ ಲಾಭವಾಗುವುದು. ಮಗನ ವಿದ್ಯಾಭ್ಯಾಸದ ಕಡೆ ಗಮನ ಹರಿಸಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಅರಿಯದ ಸೌಭಾಗ್ಯ

ಪರಿಪರಿಯ ರೂಪದಲಿ ಪರದೈವ ಕಣ್ಮುಂದೆ |
ಚರಿಸುತಿರೆ ನರನದರ ಗುರುತನರಿಯದೆಯೆ ||
ಧರೆಯದದು ತನ್ನಂದದ ಪ್ರಾಣಿಯೆಂದೆಣಿಸಿ |
ತೊರೆಯುವನು ದೊರೆತುದನು – ಮಂಕುತಿಮ್ಮ ||
776 ||

ಪದ-ಅರ್ಥ: ಪರಿಪರಿಯ = ವಿಧವಿಧದ, ಕಣ್ಮುಂದೆ- = ಕಣ್ಣ + ಮುಂದೆ, ನರನದರ = ನರನು + ಅದರ, ಗುರುತನರಿಯದೆಯೆ = ಗುರುತನು + ಅರಿಯದೆಯೆ, ಧರೆಯದದು = ಧರೆಯದು + ಅದು, ತನ್ನದದ = - ತನ್ನ + ಅಂದದ(ತರಹದ) ಪ್ರಾಣಿಯೆಂದೆಣಿಸಿ = - ಪ್ರಾಣಿಯೆಂದು + ಎಣಿಸಿ(ತಿಳಿದು)

ವಾಚ್ಯಾರ್ಥ: ವಿಧವಿಧದ ರೂಪಗಳಿಂದ ಪರದೈವ ಕಣ್ಣಮುಂದೆಯೇ ಸುಳಿದರೆ, ಮನುಷ್ಯ ಅದರ ಗುರುತನ್ನು ಹಿಡಿಯದೆ, ಅದೂ ಭೂಮಿಯಲ್ಲಿ ತನ್ನಂತಹುದೇ ಪ್ರಾಣಿ ಎಂದು ಬಗೆದು ದೊರೆತದ್ದನ್ನು ಕಳೆದುಕೊಳ್ಳುತ್ತಾನೆ.

ವಿವರಣೆ: ಈ ಕಗ್ಗ ಬದುಕಿನ ದೊಡ್ಡ ವಿಪರ್ಯಾಸವನ್ನು ಗುರುತಿಸುತ್ತದೆ. ಮಹತ್ತಾದದ್ದು ಕಣ್ಣಮುಂದೆಯೇ ಇದ್ದರೂ ಅದನ್ನು ಗಮನಿಸಿದೆ, ಅದರಿಂದ ಯಾವ ಲಾಭವನ್ನು ಪಡೆಯದೆ, ತನಗಾಗಿ ದೊರೆತದ್ದನ್ನು ಕಳೆದುಕೊಳ್ಳುವುದು ಮಾನವ ಇತಿಹಾಸದ ದುರ್ದೈವ. ಶ್ರೀರಾಮ ಇಂದು ದೇವರು, ಪರದೈವ, ಕೋಟ್ಯಾಂತರ ಜನರಿಗೆ. ಆದರೆ ರಾಮ ಬದುಕಿದ್ದಾಗ ಎಷ್ಟು ಜನ ಅವನಲ್ಲಿ ದೈವತ್ವವನ್ನು ಕಂಡಿದ್ದರು? ಅವನ ದೈವತ್ವ ಅವನ ತಾಯಿ ಕೈಕೇಯಿಗೇ ತಿಳಿಯಲಿಲ್ಲ. ಶೂರ್ಪನಖಿಗೆ, ರಾವಣನಿಗೆ, ಅವನ ಮಗ ಮೇಘನಾದನಿಗೆ ಅವನು ವೈರಿಯಾಗಿಯೇ ಕಂಡ. ಅವನ ದರ್ಶನಪಡೆದ ಸಾವಿರಾರು ಜನರಲ್ಲಿ ಲಕ್ಷ್ಮಣ, ಹನುಮಂತ, ಶಬರಿ, ವಿಭೀಷಣ ಇಂಥವರು ನಾಲ್ಕಾರು ಜನ ಅವನಲ್ಲಿ ವಿಶೇಷವಾದದ್ದನ್ನು ಕಂಡು, ಬದುಕಿ, ಅವನ ಹಾರೈಕೆಯನ್ನು ಪಡೆದರು. ಅಯೋಧ್ಯೆಗೆ ಮರಳಿ ಬಂದ ಮೇಲೆ, ಕೇವಲ ಅಗಸ ಮಾತ್ರವಲ್ಲ, ಊರಿನ ಜನರೆಲ್ಲ ಸೀತೆಯ ಪಾತಿವ್ರತ್ಯದ ಬಗ್ಗೆ ಅಪನುಡಿಯನ್ನಾಡಿದರು ಎಂದರೆ ಬಹುಜನರಿಗೆ ರಾಮನ ಮಹತ್ವ ತಿಳಿಯಲೇ ಇಲ್ಲ. ಕೃಷ್ಣ ಇದ್ದಾಗ ಅವನ ಮಹಾತ್ಮೆಯನ್ನು ತಿಳಿದವರಿಗಿಂತ, ಅವನನ್ನು ದ್ವೇಷಿಸುವ, ಟೀಕಿಸುವ, ಅಪಹಾಸ್ಯ ಮಾಡುವವರೇ ಹೆಚ್ಚಾಗಿದ್ದರಲ್ಲ! ಎಲ್ಲೋ ಒಬ್ಬ ವಿದುರ, ಭೀಷ್ಮ, ವೇದವ್ಯಾಸ, ಉದ್ಧವ ಮತ್ತು ಗೋಪಿಯರು ಇಂಥವರು ಮಾತ್ರ ಅವನ ಸಂಪರ್ಕದಿಂದ ಜ್ಞಾನವನ್ನು ಪಡೆದರು. ಈ ಮಾತು ಪ್ರಪಂಚದ ಎಲ್ಲ ಮಹಾನುಭಾವರಿಗೆ ಅನ್ವಯಿಸುತ್ತದೆ. ಬುದ್ಧ ಅನುಭವಿಸಿದ್ದು ಕಡಿಮೆಯೇ? ಮಹಾವೀರನಿಗೆ ಕಲ್ಲು ಹೊಡೆಯಲಿಲ್ಲವೆ? ಏಸುಕ್ರಿಸ್ತನನ್ನಂತೂ ಶಿಲುಬೆಗೇ ಏರಿಸಿದರು.

ಸಾಕ್ರೆಟಸ್‌ನಿಗೆ ವಿಷಪ್ರಾಶನವಾದರೆ, ಗಾಂಧೀಜಿಗೆ ಗುಂಡಿನ ನೈವೇದ್ಯವಾಯಿತು. ಕಗ್ಗ ಈ ದುರಂತದ ಬಗ್ಗೆ ಮಾತನಾಡುತ್ತದೆ. ಪರದೈವ ಕಣ್ಣ ಮುಂದೆಯೇ ಸುಳಿದಾಡಿದರೂ, ಅದರ ಮಹಿಮೆಯನ್ನರಿಯದೆಯೆ, ಉಳಿದವರು ಅದನ್ನು ತಮ್ಮ ಹಾಗೆಯೇ ಇರುವ ಸಾಮಾನ್ಯ ಪ್ರಾಣಿ ಎಂದು ಬಗೆಯುತ್ತಾರೆ. ಆ ಮಹಾನ್ ಶಕ್ತಿಯಿಂದ ದೊರೆಯಬಹುದಾಗಿದ್ದ ಜ್ಞಾನವನ್ನು, ಶಕ್ತಿಯನ್ನು ಪಡೆಯದೆಯೇ, ಅನಾಯಾಸವಾಗಿ ದೊರೆತದ್ದನ್ನು ಕಳೆದುಕೊಳ್ಳುತ್ತಾರೆ.

ಪದಬಂಧ 5167

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸೋಲು ಹೀಗೆ ಬಂದಿದೆಯಲ್ಲಾ? (4)
3.ಜ್ಞಾನವನ್ನು ಬೋಧಿಸುವುದು (4)
5.ಸಮಾಧಾನ ಈ ರೀತಿ ಬಂದಿದೆ (3)
6.ಅತಿಯಾದ ಬಯಕೆ (3)
8.ಮರದ ಹತ್ತಿರ ನಿಂತಿರುವ ಹೆಡ್ಡ (3)
9.ವಿನಿಯೋಗದಲ್ಲಿ ಕಾಡಿದ ವಿರಹ (3)
10.ಮಲಗುವಾಗ ಕಾಣಿಸಿದ ಸೇವಕ (3)
12.ಕುಣಿಯುತ್ತಾ ಹಾಕಿದ ಜೀರುಗಂಟು (3)
14.ಕರದಲ್ಲಿರುವ ಮೃತದೇಹ (4)
15.ನಗಿಸಲು ಕಂಕುಳಲ್ಲಿ ಗುಳು ಗುಳು ಬೆರಳಾಡಿಸುವುದು (4)

ಮೇಲಿಂದ ಕೆಳಕ್ಕೆ
1.ಉತ್ತಮ ಕುಲದಲಿ ಹುಟ್ಟಿದವನು (4)
2.ವರ್ತಕನ ರೂಢಿ (3)
3.ನಾದಿನಿ ಹಾಕಿರುವ ಅಡಿಪಾಯ (3)
4.ದರದೊಳಗಿರುವ ಅಗತ್ಯ ಕಾಣುತ್ತಿದೆಯೇ? (4)
7.ಕೈ ಮೊದಲಿದ್ದಾಗ ಉತ್ಸವ ಕಾಣುತ್ತದೆ (3)
8.ಹೀಗೆ ತಪ್ಪಿಸಿಕೊಳ್ಳು (3)
9.ಗಣಪತಿಯ ಇನ್ನೊಂದು ಹೆಸರು (4)
11.ಮರೆಯುವ ಸ್ವಭಾವದವನು (4)
12.ವಠಾರದವರು ಹಿಡಿದಿರುವ ಕೊಡಲಿ (3)
13.ಕೇಡು ಮಾಡುವವನು (3)



5166ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಎಡಬಿಡಂಗಿ
4.ತಾಕತ್ತು 5.ಡಮರು
9.ಮಂದ್ರ 10.ಗಯ್ಯಾಳಿ
11.ನಾನಾ 12.ಲಥುನ
15.ಸರೀಕ 16.ವನಸಂಚಾರ

ಮೇಲಿಂದ ಕೆಳಕ್ಕೆ:
1.ತಂಬಿಗೆ 2.ಎತ್ತು 3.ಗಿಡ
4.ತಾರಾಮಂಡಲ
6.ರುದ್ರನಾಟಕ
7.ದೊಗಲೆ 8.ಗಳಿಕೆ
13.ನವ 14.ಪ್ರಸಂಗ
15.ಸರ

ಸುಡೊಕು 5553

		1		8	3		7	5
			2		7		1	
7		3		9		8		2
	5				1			
6		7		5		2		8
	3		9					1
	2				8		6	
				3				
1		8	5			3		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5552 ಸುಡೊಕು

9	4	3	8	5	1	7	2	6
8	1	7	6	3	2	4	5	9
6	2	5	4	7	9	1	8	3
1	6	2	9	4	5	3	7	8
5	7	4	1	8	3	9	6	2
3	9	8	2	6	7	5	4	1
7	8	9	3	2	4	6	1	5
2	5	1	7	9	6	8	3	4
4	3	6	5	1	8	2	9	7

ಸುಧಾ, ಮಯೂರ ಓದಿ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ

ಲಕ್ಷ್ಮೀನಾರಾಯಣ ಧನ್ಯ

(ಜನನ: 19-12-1934 ● ನಿಧನ: 11-12-2022)

ನಿಮ್ಮ ಪ್ರೀತಿ ಮತ್ತು ಕಾಳಜಿ ನಮಗೆ ಮರೆಯಲಾಗದಂತಹ ಕ್ಷಣಗಳು. ನಿಮ್ಮ ಆತ್ಮಕ್ಕೆ ಶಾಂತಿ ಕೋರುವ

ಇಂತಿ ದುಃಖತಪ್ತರು:
ನಿಮ್ಮ ಧರ್ಮಪತ್ನಿ: ಪಾರ್ವತಮ್ಮ,
ಮಕ್ಕಳಾದ: ಪದ್ಮನಾಭ, ಡಾ॥ ಕೃಷ್ಣಮೂರ್ತಿ,
ಉಪೇಂದ್ರ ಮತ್ತು ಕುಟುಂಬದ ಸದಸ್ಯರು.

32ನೇ ವರ್ಷದ ನೆನಪು

ಶ್ರೀ ದಿಬ್ಬೂರ್ ಕುಮಾರ್

31.3.36 – 13.12.90

ಪತ್ನಿ, ಮಕ್ಕಳು ಮತ್ತು ಮೊಮ್ಮಕ್ಕಳು

2ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಕೆ. ಪಿ. ಶ್ರೀನಿವಾಸ ರೆಡ್ಡಿ

ಮರಣ: 13–12–2020

ಇಂತಿ ದುಃಖತಪ್ತರು:
ಪತ್ನಿ, ಮಕ್ಕಳು, ಮೊಮ್ಮಕ್ಕಳು
ಮತ್ತು ಕುಟುಂಬವರ್ಗದವರು.

ಭಾವಪೂರ್ಣ ಶ್ರದ್ಧಾಂಜಲಿ



ಮೊನ್ಸಿಜ್ಞೊರ್ ಐ. ಚಿನ್ನಪ್ಪರವರು

ದಿನಾಂಕ: 11.12.2022 ರಾತ್ರಿ 10.00 ಗಂಟೆಗೆ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಅವರ ಪಾರ್ಥಿವ ಶರೀರವನ್ನು 13.12.2022 ಮಂಗಳವಾರ ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ ಬೆಂಗಳೂರು ಮಹಾಧರ್ಮಕ್ಷೇತ್ರದ ರಿಚ್ಮಂಡ್ ರಸ್ತೆಯಲ್ಲಿರುವ ಸೇಕ್ರೆಡ್ ಹಾರ್ಟ್ ಚರ್ಚ್‌ನಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ತದನಂತರ ಬೆಂಗಳೂರು ಮಹಾಧರ್ಮಾಧ್ಯಕ್ಷರಿಂದ ಬೆಳಿಗ್ಗೆ 10.30ಕ್ಕೆ ಬಲಿಪೂಜೆಯನ್ನು ಅರ್ಪಿಸಲಾಗುವುದು. ಅಲ್ಲಿಂದ ಅವರ ಪಾರ್ಥಿವ ಶರೀರವನ್ನು ಸ್ವಗ್ರಾಮ ಹಾರೋಬಲೆಗೆ ಕೊಂಡೊಯ್ಯಲಾಗುವುದು, ಬುಧವಾರ 14.12.2022 ರಂದು ಬೆಳಿಗ್ಗೆ 10.30ಕ್ಕೆ ಬಲಿಪೂಜೆಯನ್ನು ನೆರವೇರಿಸಿ, ಅಂತಿಮ ಸಂಸ್ಕಾರವನ್ನು ಮಾಡಲಾಗುವುದು.

ದಯಾಮಯ ದೇವರು ದಿವಂಗತರಿಗೆ ಚಿರಶಾಂತಿಯನ್ನು ದಯಪಾಲಿಸಲಿ!

ಬೆಂಗಳೂರು ಮಹಾಧರ್ಮಕ್ಷೇತ್ರ

LOOKING FOR JOB OPPORTUNITY

Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಬಿಜೆಪಿ ನಾಯಕರ ಟೀಕಾಪ್ರಹಾರ; ಮಾಜಿ ಸಚಿವ ಪಟೇರಿಯಾ ವಿರುದ್ಧ ಎಫ್‌ಐಆರ್ ದಾಖಲು

ಮೋದಿ ಹತ್ಯೆಗೆ ಕಾಂಗ್ರೆಸ್ ನಾಯಕನ ಕರೆ

ಭೋಪಾಲ್ (ಪಿಟಿಐ): ಸಂವಿಧಾನ, ದಲಿತರು ಮತ್ತು ಅಲ್ಪಸಂಖ್ಯಾತರನ್ನು ರಕ್ಷಿಸಲು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೊಲ್ಲಲು ತಯಾರಾಗಿ ಎಂದು ಜನರಿಗೆ ಪ್ರಚೋದನಕಾರಿ ಕರೆ ನೀಡುವ ಮೂಲಕ ಮಧ್ಯಪ್ರದೇಶದ ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸಚಿವ ರಾಜ ಪಟೇರಿಯಾ ರಾಜಕೀಯ ಬಿರುಗಾಳಿ ಎಬ್ಬಿಸಿದ್ದಾರೆ.

ಇಂತಹ ವಿವಾದಾತ್ಮಕ ಹೇಳಿಕೆ ನೀಡಿರುವ ರಾಜ ಪಟೇರಿಯಾ ವಿರುದ್ಧ ರಾಜ್ಯ ಸರ್ಕಾರದ ಆದೇಶದ ಮೇರೆಗೆ ಎಫ್‌ಐಆರ್ ದಾಖಲಾಗಿದೆ. ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ್ದ ಪಟೇರಿಯಾ, 'ಮೋದಿ ಕೊಲ್ಲಲು ಸಜ್ಜಾಗಿ. ಕೊಲ್ಲುವುದೆಂದರೆ ಅವರನ್ನು ಮಣಿಸುವುದು ಎಂದರ್ಥ' ಎಂದು ಕರೆ ಕೊಟ್ಟಿರುವ ಹೇಳಿಕೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಸೋಮವಾರ ಬೆಳಿಗ್ಗೆ ಹರಿದಾಡಿದೆ.

ಪನ್ನಾ ಜಿಲ್ಲೆಯ ಪವಾಯಿ ಪಟ್ಟಣದಲ್ಲಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, 'ಮೋದಿ ಚುನಾವಣೆ ಕೊನೆಗೊಳಿಸಲಿದ್ದಾರೆ. ಧರ್ಮ, ಜಾತಿ, ಭಾಷೆಯ ಆಧಾರದಲ್ಲಿ ವಿಭಜನೆ ಮಾಡುತ್ತಾರೆ. ದಲಿತರು, ಬುಡಕಟ್ಟು ಹಾಗೂ ಅಲ್ಪಸಂಖ್ಯಾತರ ಭವಿಷ್ಯ ಅಪಾಯದಲ್ಲಿದೆ. ಸಂವಿಧಾನ ಉಳಿಯಬೇಕಿದ್ದರೆ, ಮೋದಿ ಕೊಲ್ಲಲು ಸಜ್ಜಾಗಿ, ಅಂದರೆ ಅವರನ್ನು ಸೋಲಿಸಿ' ಎಂದಿರುವುದು ವಿಡಿಯೊದಲ್ಲಿದೆ.

'ಭಾರತ್ ಜೋಡೊ ಯಾತ್ರೆ ಕೈಗೊಂಡಿರುವವರ ವಾಸ್ತವತೆ ಈಗ ಮುನ್ನೆಲೆಗೆ ಬರುತ್ತಿದೆ. ಮೋದಿಯವರನ್ನು ರಾಜಕಾರಣದಲ್ಲಿ ಸೋಲಿಸಲಾಗದೆ, ಕೊಲ್ಲುವ ಮಾತು ಆಡುತ್ತಿದ್ದಾರೆ. ಕಾನೂನು ತನ್ನದೇ ಆದ ಕ್ರಮ ತೆಗೆದುಕೊಳ್ಳಲಿದೆ' ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

'ಇಂಥ ಹೇಳಿಕೆಗಳು ಈಗಿನ ಕಾಂಗ್ರೆಸ್ ಮಹಾತ್ಮಾ ಗಾಂಧಿ ಅವರ ಕಾಂಗ್ರೆಸ್ ಅಲ್ಲ ಎನ್ನುವುದನ್ನು ತೋರಿಸುತ್ತದೆ. ಇದು ಮುಸಲೋನಿ ಮನಸ್ಥಿತಿಯ ಇಟಲಿ ಕಾಂಗ್ರೆಸ್' ಎಂದು ರಾಜ್ಯದ ಗೃಹ ಸಚಿವ ನರೋತ್ತಮ ಮಿಶ್ರಾ ಟೀಕಿಸಿದ್ದಾರೆ.

ಬಿಜೆಪಿ ರಾಜ್ಯ ಅಧ್ಯಕ್ಷ ವಿ.ಡಿ. ಶರ್ಮಾ ಅವರು ಪಟೇರಿಯಾ ಅವರ ಈ ವಿವಾದಾತ್ಮಕ ಹೇಳಿಕೆಯ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡು, ತನಿಖೆಗೆ ಆಗ್ರಹಿಸಿದ್ದರು.

ಮೋದಿ ಕೊಲ್ಲಿ ಎಂದಿಲ್ಲ: ರಾಜ ಸ್ಪಷ್ಟನೆ

ತಮ್ಮ ಹೇಳಿಕೆ ವಿವಾದ ಸೃಷ್ಟಿಸಿದ ಬಳಿಕ ರಾಜ ಪಟೇರಿಯಾ, 'ನಾನು ಇಲ್ಲಿ ಹತ್ಯೆ ಪದವನ್ನು ಮೋದಿಯವರನ್ನು ಸೋಲಿಸಬೇಕೆಂಬ ಅರ್ಥದಲ್ಲಿ ಹೇಳಿದ್ದೇನೆ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ. ನಾನು ಮಹಾತ್ಮ ಗಾಂಧಿಯ ಅನುಯಾಯಿ. ನಾನು ಯಾರನ್ನೂ ಕೊಲ್ಲುವ ಬಗ್ಗೆ ಮಾತನಾಡುವುದಿಲ್ಲ. ಸಂವಿಧಾನ, ದಲಿತರು, ಅಲ್ಪಸಂಖ್ಯಾತರನ್ನು ರಕ್ಷಿಸಲು ಮತ್ತು ನಿರುದ್ಯೋಗ ಸಮಸ್ಯೆ ನಿವಾರಿಸಲು ಪ್ರಧಾನಿ ಮೋದಿಯವರನ್ನು ಚುನಾವಣೆಯಲ್ಲಿ ಸೋಲಿಸಬೇಕಿದೆ ಎಂದಷ್ಟೇ ಹೇಳಿರುವೆ' ಎಂದು ಸ್ಪಷ್ಟನೆ ನೀಡಿದ್ದಾರೆ.

ಸಿಸೋಡಿಯಾಗೆ 'ಸುಪ್ರೀಂ' ತಪರಾಕಿ

ಮಾನನಷ್ಟ ಮೊಕದ್ದಮೆ: ಹೈಕೋರ್ಟ್ ಆದೇಶ ಪ್ರಶ್ನಿಸಿದ್ದ ಅರ್ಜಿ ವಾಪಸ್

ನವದೆಹಲಿ (ಪಿಟಿಐ): 'ಸಾರ್ವಜನಿಕ ಚರ್ಚೆಯನ್ನು ತಳಮಟ್ಟಕ್ಕೆ ಇಳಿಸಿದರೆ, ನೀವು ಅದರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ' ಎಂದು ಸುಪ್ರೀಂ ಕೋರ್ಟ್ ಸೋಮವಾರ ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರಿಗೆ ಎಚ್ಚರಿಕೆ ನೀಡಿದೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ತಮ್ಮ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿದ್ದ ಮನೀಶ್ ಸಿಸೋಡಿಯಾ ವಿರುದ್ಧ ಕ್ರಿಮಿನಲ್ ಮಾನನಷ್ಟ ಪ್ರಕರಣ ದಾಖಲಿಸಿದ್ದರು. ಈ ಮೊಕದ್ದಮೆ ವಜಾಗೊಳಿಸುವಂತೆ ಕೋರಿ ಸಿಸೋಡಿಯಾ ಅವರು ಸಲ್ಲಿಸಿದ್ದ ಅರ್ಜಿಯನ್ನು ಗುವಾಹಟಿ ಹೈಕೋರ್ಟ್ ತಿರಸ್ಕರಿಸಿ ನವೆಂಬರ್ 4ರಂದು ಆದೇಶಿಸಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಸೋಡಿಯಾ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಹೈಕೋರ್ಟ್ ಆದೇಶ ಪ್ರಶ್ನಿಸಿದ್ದ ಅರ್ಜಿ ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಎ.ಎಸ್. ಓಕಾ ಅವರ ಪೀಠದ ಎದುರು ವಿಚಾರಣೆಗೆ ಬಂದಿತು.

ಸಿಸೋಡಿಯಾ ಅವರ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಅವರು ಎಎಪಿ ನಾಯಕ ಎಲ್ಲಿಯೂ ಯಾವುದೇ ಹಣ ತೆಗೆದುಕೊಳ್ಳಲಾಗಿದೆ ಎಂದು ಹೇಳಿಲ್ಲ ಎಂದು ವಾದಿಸಿದರು. ಆಗ ಪೀಠವು, 'ನೀವು ಸಾರ್ವಜನಿಕ ಚರ್ಚೆಯನ್ನು ಈ ಮಟ್ಟಕ್ಕೆ ಇಳಿಸಿದರೆ, ನೀವು ಅದರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ' ಎಂದು ಚಾಟಿ ಬೀಸಿತು. ಬೇಷರತ್ ಕ್ಷಮೆಯಾಚಿಸುವಂತೆಯೂ ಅರ್ಜಿದಾರರಿಗೆ ಪೀಠ ಸೂಚಿಸಿತು. ನಂತರ ವಕೀಲ ಸಿಂಘ್ವಿ ಅರ್ಜಿಯನ್ನು ಹಿಂಪಡೆದರು.

ಶರ್ಮಾ ಅವರು ಕೋವಿಡ್ ವೇಳೆ ಪಿಪಿಇ ಕಿಟ್ ಖರೀದಿಗಾಗಿ ತಮ್ಮ ಪತ್ನಿಯ ಒಡೆತನದ ಕಂಪನಿಗೆ ಸರ್ಕಾರದಿಂದ ಅನುಕೂಲ ಮಾಡಿಕೊಟ್ಟು, ಭ್ರಷ್ಟಾಚಾರ ಎಸಗಿದ್ದಾರೆ ಎಂದು ಸಿಸೋಡಿಯಾ ಆರೋಪಿಸಿದ್ದರು. ಈ ಆರೋಪ ತಳ್ಳಿಹಾಕಿದ್ದ ಶರ್ಮಾ, ಸಿಸೋಡಿಯಾ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದರು. ಶರ್ಮಾ ಅವರ ಪತ್ನಿ ರಿನಿಕಿ ಭುಯಾನ್ ಶರ್ಮಾ ಅವರೂ ಇದೇ ಆರೋಪ ಸಂಬಂಧ ಸಿಸೋಡಿಯಾ ವಿರುದ್ಧ ಜೂನ್ 21ರಂದು ಮಾನನಷ್ಟ ಮೊಕದ್ದಮೆ ದಾಖಲಿಸಿ, ₹100 ಕೋಟಿ ಪರಿಹಾರ ಕೋರಿದ್ದರು.

ತಮಿಳುನಾಡಿನಲ್ಲಿ ಮಳೆ: ಶಾಲೆಗಳಿಗೆ ರಜೆ

ಚೆನ್ನೈ (ಪಿಟಿಐ): ಮ್ಯಾಂಡಸ್ ಚಂಡಮಾರುತದ ಪರಿಣಾಮ ಚೆನ್ನೈ ಸೇರಿದಂತೆ ತಮಿಳುನಾಡಿನ ಹಲವೆಡೆ ಸೋಮವಾರವೂ ಮಳೆಯಾಗಿದೆ.

ಚಂಡಮಾರುತದ ಕಾರಣ ಮಂಗಳವಾರದ ವೇಳೆಗೆ ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿಯಲಿದೆ. ಈ ಕಾರಣದಿಂದ ಗುರುವಾರದವರೆಗೆ ರಾಜ್ಯದಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ತಿರುವಲ್ಲೂರ್, ಉದುಕೊಟ್ಟೈ ತಾಲ್ಲೂಕು, ಕಾಂಚೀಪುರ ಜಿಲ್ಲೆಗಳಲ್ಲಿ ಸೋಮವಾರ ಶಾಲೆಗಳಿಗೆ ರಜೆ ಘೋಷಣೆ ಮಾಡಲಾಗಿತ್ತು.

ರ‍್ಯಾಗಿಂಗ್ ಪತ್ತೆಗೆ 3 ತಿಂಗಳು ವಿದ್ಯಾರ್ಥಿನಿ ವೇಷ ಧರಿಸಿದ ಪೊಲೀಸ್!

ಇಂದೋರ್, ಮಧ್ಯಪ್ರದೇಶ (ಪಿಟಿಐ): ಇಲ್ಲಿನ ಮಹಾತ್ಮ ಗಾಂಧಿ ಸ್ಮಾರಕ ವೈದ್ಯಕೀಯ ಕಾಲೇಜಿನಲ್ಲಿ ನಡೆಯುತ್ತಿದ್ದ ರ‍್ಯಾಗಿಂಗ್ ತಡೆಗೆ, 24 ವರ್ಷದ ಮಹಿಳಾ ಪೊಲೀಸ್ ಅಧಿಕಾರಿ ಶಾಲಿನಿ ಚೌಹಾಣ್ ಮೂರು ತಿಂಗಳು ವಿದ್ಯಾರ್ಥಿನಿಯಂತೆ ವೇಷ ಧರಿಸಿ ಕಾಲೇಜಿಗೆ ತೆರಳಿ ಆರೋಪಿಗಳನ್ನು ಪತ್ತೆ ಮಾಡಿದ್ದಾರೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಕಾಲೇಜಿನ ವಿದ್ಯಾರ್ಥಿನಿಯೊಬ್ಬರು ರ‍್ಯಾಗಿಂಗ್ ಬಗ್ಗೆ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಸಹಾಯವಾಣಿಯಲ್ಲಿ ದೂರು ದಾಖಲಿಸಿದ್ದರು.

ಶಾಲಿನಿ ಚೌಹಾಣ್

ಇದರ ಬೆನ್ನಲ್ಲೇ ಸಂಸ್ಥೆಯ ಆಡಳಿತ ಮಂಡಳಿ ಜುಲೈ 24ರಂದು ಅಪರಿಚಿತ ವಿದ್ಯಾರ್ಥಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿತ್ತು. ಯುಜಿಸಿಗೆ ನೀಡಿರುವ ದೂರಿನಲ್ಲಿ ರ‍್ಯಾಗಿಂಗ್ ಘಟನೆಯ ಪೂರ್ಣ ಮಾಹಿತಿ ನೀಡಲಾಗಿತ್ತು. ಆದರೆ ಆರೋಪಿಗಳ ಹೆಸರು ಮತ್ತು ದೂರುದಾರರ ಹೆಸರನ್ನು ಬಹಿರಂಗಪಡಿಸಿರಲಿಲ್ಲ. ಹೀಗಾಗಿ ಶಾಲಿನಿ ಚೌಹಾಣ್ ಅವರು ವೈದ್ಯಕೀಯ ವಿದ್ಯಾರ್ಥಿನಿಯಂತೆ ವೇಷ ಧರಿಸಿ ಕಾಲೇಜಿಗೆ ತೆರಳಿ ಪ್ರಕರಣದ ಆರೋಪಿಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಈ ಕಾರ್ಯಾಚರಣೆಗೆ ಮತ್ತೊಬ್ಬ ಮಹಿಳಾ ಸಿಬ್ಬಂದಿಯನ್ನು ನರ್ಸ್ ವೇಷದಲ್ಲಿ ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಕ್ಯಾಂಟೀನ್ ಕೆಲಸಗಾರರ ವೇಷದಲ್ಲಿ ಕಾಲೇಜಿಗೆ ಕಳುಹಿಸಲಾಗಿತ್ತು ಎಂದು ಅವರು ತಿಳಿಸಿದ್ದಾರೆ.

11 ಆರೋಪಿಗಳ ಪಟ್ಟಿ ಲಭಿಸಿದ ಮೇಲೆ ಕಾಲೇಜು ಆಡಳಿತವು ಅವರನ್ನು ತಕ್ಷಣದಿಂದ ಮೂರು ತಿಂಗಳು ಅಮಾನತು ಮಾಡಿದೆ.

ನಾಳೆ ಸ್ಟಾಲಿನ್ ಸಂಪುಟಕ್ಕೆ ಪುತ್ರ ಉದಯನಿಧಿ ಸೇರ್ಪಡೆ

ಚೆನ್ನೈ: ಹಲವು ತಿಂಗಳ ಚರ್ಚೆ ನಂತರ, ಡಿಎಂಕೆ ಕುಟುಂಬದ ವಂಶಸ್ಥ ಉದಯನಿಧಿ ಅವರು ಬುಧವಾರ ತಮ್ಮ ತಂದೆ ಎಂ.ಕೆ.ಸ್ಟಾಲಿನ್ ಅವರ ಸಂಪುಟಕ್ಕೆ ಸೇರಲಿದ್ದಾರೆ.

45 ವರ್ಷದ ಉದಯನಿಧಿ ಅವರು ಇದೇ 14ರಂದು ಬೆಳಿಗ್ಗೆ 9.30 ಕ್ಕೆ ರಾಜಭವನದಲ್ಲಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ ಎಂದು ರಾಜ್ಯಪಾಲರ ಕಚೇರಿಯ ಅಧಿಕೃತ ಪ್ರಕಟಣೆ ಸೋಮವಾರ ಸಂಜೆ ತಿಳಿಸಿದೆ.

ವಿಶೇಷ ಕಾರ್ಯಕ್ರಮ ಅನುಷ್ಠಾನ (ಎಸ್‌ಪಿಐ) ಜೊತೆಗೆ ಉದಯ್ ಅವರಿಗೆ ಯುವ ಕಲ್ಯಾಣ ಮತ್ತು ಕ್ರೀಡಾ ಅಭಿವೃದ್ಧಿ ಖಾತೆ ನೀಡಬಹುದು ಎಂದು ಡಿಎಂಕೆ ಮತ್ತು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.



ಶಬರಿಮಲೆ: ದಿನಕ್ಕೆ 90 ಸಾವಿರ ಭಕ್ತರಿಗಷ್ಟೇ ದರ್ಶನ ಅವಕಾಶ

ತಿರುವನಂತಪುರ (ಪಿಟಿಐ): ಶಬರಿಮಲೆ ಅಯ್ಯಪ್ಪ ದೇವಾಲಯಕ್ಕೆ ಭೇಟಿ ನೀಡುವ ಭಕ್ತರ ಸಂಖ್ಯೆ ಏರಿಕೆಯಾಗುತ್ತಿರುವ ಕಾರಣ ದಿನಕ್ಕೆ 90 ಸಾವಿರ ಮಂದಿ ಭಕ್ತರಿಗಷ್ಟೇ ದೇವರ ದರ್ಶನಕ್ಕೆ ಅವಕಾಶ ನೀಡಲು ಕೇರಳ ಸರ್ಕಾರ ಸೋಮವಾರ ತೀರ್ಮಾನಿಸಿದೆ.

ದೇವರ ದರ್ಶನ ಸಮಯವನ್ನು ಒಂದು ಗಂಟೆ ವಿಸ್ತರಿಸಲಾಗಿದೆ. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಕಚೇರಿಯ ಮೂಲಗಳು ತಿಳಿಸಿವೆ.

ಭಕ್ತರ ಸಂದಣಿಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿ ಎಂದು ಕೇರಳ ಹೈಕೋರ್ಟ್ ಭಾನುವಾರ ಪತ್ತನಂತಿಟ್ಟ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶನ ನೀಡಿದ ಬಳಿಕ ಈ ತೀರ್ಮಾನ ಕೈಗೊಂಡಿದೆ.

'ಶಿವಾಜಿಗೆ ಅವಮಾನ: ಕನಸಿನಲ್ಲೂ ಎಣಿಸಲಾರೆ'

ಮುಂಬೈ (ಪಿಟಿಐ): 'ಛತ್ರಪತಿ ಶಿವಾಜಿ ಮಹಾರಾಜರಿಗೆ ಅವಮಾನಿಸುವುದನ್ನು ನಾನು ನನ್ನ ಕನಸಿನಲ್ಲಿಯೂ ಭಾವಿಸಲಾರೆ' ಎಂದು ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ. ಕೇಂದ್ರ ಗೃಹ ಸಚಿವರಿಗೆ ಪತ್ರ ಬರೆಯುವ ಮೂಲಕ ರಾಜ್ಯಪಾಲರು ವಿರೋಧ ಪಕ್ಷಗಳ ಟೀಕೆಗೆ ಮತ್ತೊಮ್ಮೆ ಗುರಿಯಾಗಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಸುವರ್ಣಾವಕಾಶ ಕರ್ನಾಟಕದಾದ್ಯಂತ ಹೆಸರಾಂತ ಕಂಪನಿಗಳಿಗೆ ಹಾಗೂ ಆಫೀಸ್‌ಗಳಿಗೆ ವಿದ್ಯಾರ್ಹತೆಯಿರುವ ಹಾಗೂ ಇಲ್ಲದ ಯುವಕ/ಯುವಕರಿಯರು ಬೇಕಾಗಿದ್ದಾರೆ, ಸಂಬಳ+ಓಟಿ 15,800/- 29000/- ಸಂಪರ್ಕಿಸಿ: 9164188386, 9164805206

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

28.12.2022 13 ದಿನಗಳ ವಿಮಾನ/ A/C ರೂಂ/ A/C ಬಸ್ಸಿನಲ್ಲಿ ಕಚ್‌ಬುಜ್ ಸೋಮನಾಥ ದ್ವಾರಕ ಓಂಕಾರೇಶ್ವರ್ ಮಂಹಾಕಾಳೇಶ್ವರ್ 24.12.2022 9 ದಿನಗಳ ರಾಮೇಶ್ವರ,ಮದುರೈ ಕನ್ಯಾಕುಮಾರಿ ನವಗ್ರಹ ಸಮೇತ 25.12.2022 8 ದಿನಗಳ ಬುದ್ಧಗಯಾ ಅಲಹಾಬಾದ್ ನೈಮಿಶಾರಣ್ಯ 11.02.2023 ಮಹಾ ಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708 9686708171

ಜನವರಿ 21 ರಿಂದ ವಿಮಾನದಲ್ಲಿ ಕಾಶಿ ಗಯಾ, ಬುದ್ಧಗಯಾ, ಅಯೋಧ್ಯ ಪ್ರಯೋಗ ನೈಮಿಷಾರಣ್ಯ 29000/ ಮತ್ತು 23/2/23 ರಿಂದ ನೇಪಾಳ 45000/ ಶ್ರೀರಾಮ್ ಟೂರ್ 9108933383, 9606600383

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9902433500/ 9945445809

Pilgrimage Tours

ನಿಗದಿತ ಪ್ರವಾಸಗಳು. 19.12.2022, ಕರ್ನಾಟಕ ಅಷ್ಟದೇವತೆಗಳು. 10.01.2023 ವಿಮಾನದಲ್ಲಿ ಕಾಶಿ, ಗಯಾ, ಅಯೋಧ್ಯ. 20.01.2023 ಚಿಕ್ಕಮಗಳೂರು, ಕೆಮ್ಮಣ್ಣುಗುಂಡಿ. ಅನುಗ್ರಹಯಾತ್ರ. 9880079351

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

'ಕಾಲಮಿತಿಯಲ್ಲಿ ವಿಶ್ವಸಂಸ್ಥೆ ಸುಧಾರಣೆಯಾಗಲಿ'

ವಿಶ್ವಸಂಸ್ಥೆ(ಪಿಟಿಐ): 'ವಿಶ್ವಸಂಸ್ಥೆಯ ಸುಧಾರಣೆಗೆ ನಿಗದಿತ ಕಾಲಮಿತಿ ವಿಧಿಸಿಕೊಳ್ಳದೆ ಹಾಗೆಯೇ ಉಳಿಸುವುದು ಭದ್ರತಾ ಮಂಡಳಿಯು ನಿಜವಾಗಿಯೂ ವೈವಿಧ್ಯತೆಯಿಂದ ದೂರವಿರುವುದನ್ನು ಪ್ರತಿಬಿಂಬಿಸುತ್ತದೆ' ಎಂದು ಭಾರತ ಅಭಿಪ್ರಾಯಪಟ್ಟಿದೆ.

ಭದ್ರತಾ ಮಂಡಳಿಯಲ್ಲಿ ವಿದೇಶಾಂಗ ಸಚಿವರ ಮಟ್ಟದ ಸಭೆಯಲ್ಲಿ 'ಸುಧಾರಿತ ಬಹುಪಕ್ಷೀಯತೆಗಾಗಿ ಹೊಸ ದೃಷ್ಟಿಕೋನ'ದ ಅಡಿಯಲ್ಲಿನ 'ಅಂತರರಾಷ್ಟ್ರೀಯ ಶಾಂತಿ ಮತ್ತು ಸುರಕ್ಷತೆಯ ನಿರ್ವಹಣೆ' ಕುರಿತು ಮುಕ್ತ ಚರ್ಚೆ ನಡೆಯಲಿದ್ದು, ಮೊದಲ ಸಹಿ ಕಾರ್ಯಕ್ರಮಕ್ಕೆ ಸಿದ್ಧಪಡಿಸಿರುವ ಪರಿಕಲ್ಪನೆಗಳ ಟಿಪ್ಪಣಿಯಲ್ಲಿ ಭಾರತ ತನ್ನ ನಿಲುವು ವ್ಯಕ್ತಪಡಿಸಿದೆ.

ಭದ್ರತಾ ಮಂಡಳಿಯ ಸಮಗ್ರ ಸುಧಾರಣೆಯೊಂದಿಗೆ ವಿಶ್ವಸಂಸ್ಥೆಯ ಆರಂಭಿಕ ಸುಧಾರಣೆಯ ಅಗತ್ಯವಿದೆ ಎಂದೂ ಅದು ಒತ್ತಿ ಹೇಳಿದೆ.

ಇದೇ 14 ಮತ್ತು 15 ರಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅಧ್ಯಕ್ಷತೆಯಲ್ಲಿ 15 ರಾಷ್ಟ್ರಗಳ ಸದಸ್ಯರ ಭದ್ರತಾ ಮಂಡಳಿಯ ಸಭೆ ನಡೆಯಲಿದೆ. ಮಂಡಳಿಯ ಪ್ರಸ್ತುತ ಅಧ್ಯಕ್ಷ ಸ್ಥಾನವನ್ನು ಭಾರತ ವಹಿಸಿದ್ದು, ಸುಧಾರಿತ ಬಹುಪಕ್ಷೀಯತೆ ಮತ್ತು ಭಯೋತ್ಪಾದನೆ ನಿಗ್ರಹದ ಬಗ್ಗೆ ಮೊದಲ ಸಹಿ ಕಾರ್ಯಕ್ರಮ ನಡೆಯಲಿದೆ.

ಸಂಕ್ಷಿಪ್ತ ಸುದ್ದಿ

ಧರ್ಮಗಳ ವಿರುದ್ಧ ಗಂಭೀರ ಆರೋಪ: 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): 'ಬಲವಂತದ ಮತಾಂತರಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿರುವ ಅರ್ಜಿಯಲ್ಲಿ ಬಳಕೆ ಮಾಡಲಾಗಿರುವ ಪದ ಪ್ರಯೋಗವು ನಿರ್ದಿಷ್ಟ ಧರ್ಮದ ಜನರಿಗೆ ನೋವುಂಟು ಮಾಡುವಂತಿದೆ. ಹೀಗಾಗಿ ಅದನ್ನು ಪರಿಷ್ಕರಿಸಿ' ಎಂದು ಸುಪ್ರೀಂ ಕೋರ್ಟ್ ಸೋಮವಾರ ಅರ್ಜಿದಾರರ ಪರ ವಕೀಲರಿಗೆ ಸೂಚಿಸಿದೆ.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಎಸ್. ರವೀಂದ್ರ ಭಟ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ ಸೋಮವಾರ ಅರ್ಜಿಯ ವಿಚಾರಣೆ ನಡೆಸಿತು.

ಈ ವೇಳೆ ಕಕ್ಷಿದಾರರೊಬ್ಬರ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ದುಷ್ಯಂತ್ ದವೆ, 'ಅಶ್ವಿನಿಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿರುವ ಅರ್ಜಿಯಲ್ಲಿ ಕೆಲ ಧರ್ಮದವರ ವಿರುದ್ಧ ಅತ್ಯಂತ ಗಂಭೀರ ಹಾಗೂ ಕೆರಳಿಸುವ ರೀತಿಯ ಆರೋಪಗಳನ್ನು ಮಾಡಲಾಗಿದೆ. ಆ ಧರ್ಮದವರಿಗೆ ಅತ್ಯಾಚಾರ ಮತ್ತು ಕೊಲೆಗಡುಕರ ಹಣೆಪಟ್ಟಿ ಕಟ್ಟಲು ಯತ್ನಿಸಲಾಗಿದೆ. ಈ ಆರೋಪಗಳನ್ನು ಹಿಂಪಡೆಯುವಂತೆ ಅರ್ಜಿದಾರರಿಗೆ ಸೂಚಿಸಿ' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇರಾನ್: ಮತ್ತೊಬ್ಬ ವ್ಯಕ್ತಿಗೆ ನೇಣು

ದುಬೈ(ಎಪಿ): ದೇಶದಾದ್ಯಂತ ನಡೆಯುತ್ತಿರುವ ವಸ್ತ್ರಸಂಹಿತೆ ವಿರೋಧಿ ಹೋರಾಟದ ವೇಳೆ ಅಪರಾಧ ಕೃತ್ಯ ಎಸಗಿದ್ದ ಮತ್ತೊಬ್ಬ ಕೈದಿಯನ್ನು ಇರಾನ್ ಸೋಮವಾರ ಸಾರ್ವಜನಿಕವಾಗಿ ಗಲ್ಲಿಗೇರಿಸಿತು.

ಮಜಿದ್ರೆಝಾ ರಹ್‌ನವಾರ್ಡ್ ಶಿಕ್ಷೆಗೊಳಪಟ್ಟ ಕೈದಿ. ಪ್ರತಿಭಟನಕಾರರನ್ನು ಭದ್ರತಾ ಪಡೆ ಹತ್ಯೆ ಮಾಡಿದ್ದನ್ನು ಖಂಡಿಸಿ ಅರೆಸೇನಾ ಪಡೆಯ ಇಬ್ಬರಿಗೆ ಚೂರಿಯಿಂದ ಇರಿದ ಎಂಬ ಆರೋಪ ಮಜಿದ್ರೆಝಾ ವಿರುದ್ಧ ಕೇಳಿ ಬಂದಿತ್ತು. ಪ್ರಕರಣ ಸಂಬಂಧ ಬಂಧಿಸಿದ ತಿಂಗಳ ಅಂತರದಲ್ಲಿ ಇರಾನ್ ಸರ್ಕಾರ ಗಲ್ಲು ಶಿಕ್ಷೆ ವಿಧಿಸಿದೆ. ಕಟ್ಟಡ ನಿರ್ಮಾಣಕ್ಕೆ ಬಳಸುವ ಕ್ರೇನ್‌ಗೆ ನೇತು ಹಾಕಿ ಸಾರ್ವಜನಿಕವಾಗಿ ಗಲ್ಲಿಗೇರಿಸುವ ಮೂಲಕ ಇತರರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ನಟ ದಿಲೀಪ್ ಕುಮಾರ್ 100ನೇ ಜನ್ಮ ದಿನಾಚರಣೆ

ಪೆಶಾವರ (ಪಿಟಿಐ): ಬಾಲಿವುಡ್ ನಟ ದಿವಂಗತ ದಿಲೀಪ್ ಕುಮಾರ್ 100ನೇ ಜನ್ಮ ದಿನದ ಸಂಭ್ರಮವನ್ನು ಅವರ ಅಭಿಮಾನಿಗಳು ಮತ್ತು ಹಿತೈಷಿಗಳು ಪೇಶಾವರದಲ್ಲಿನ ನಟನ ಪೂರ್ವಿಕರ ಮನೆಯಲ್ಲಿ ಆಚರಿಸಿದರು. ಖೈಬರ್ ಪಖ್ತುಂಖ್ವಾದ ಸಾಂಸ್ಕೃತಿಕ ಪಾರಂಪಾರಿಕ ಮಂಡಳಿ ಭಾನುವಾರ ದಿಲೀಪ್ ಕುಮಾರ್ ಅವರ ಜನ್ಮ ಶತಮಾನೋತ್ಸವ ಆಚರಣೆಗಾಗಿ ಕಾರ್ಯಕ್ರಮವನ್ನು ಐತಿಹಾಸಿಕ ಖಿಸ್ಸಾ ಖ್ವಾನಿ ಬಜಾರ್‌ನ ಮೊಹ್ಮದ್ ಖುದಾದ್‌ನಲ್ಲಿರುವ ನಟ ಮೂಲ ಮನೆಯಲ್ಲಿ ಆಯೋಜಿಸಿತ್ತು. ನಟನ ಪೂರ್ವಿಕರ ಮನೆಯ ನೆರೆಹೊರೆಯವರು, ಸಂಬಂಧಿಕರು ಮತ್ತು ವಿವಿಧ ಕ್ಷೇತ್ರದ ಗಣ್ಯರು ಪಾಲ್ಗೊಂಡು, ನಟನಿಗೆ ಗೌರವ ಸಲ್ಲಿಸಿದರು. ದಿಲೀಪ್ ಕುಟುಂಬ ಭಾರತಕ್ಕೆ ವಲಸೆ ಬರುವ ಮೊದಲು ದಿಲೀಪ್ ತಮ್ಮ ಬಾಲ್ಯವನ್ನು ಕಳೆದಿದ್ದರು.

ಗುಂಡಿನ ದಾಳಿ ಮತ್ತು ಸ್ಫೋಟದ ಬಳಿಕ ಕಾಬೂಲ್‌ನ ಕೇಂದ್ರ ಸ್ಥಾನದಲ್ಲಿರುವ ಹೋಟೆಲ್‌ವೊಂದರಿಂದ ದಟ್ಟ ಹೊಗೆ ಹೊರಬಂದಿತು –ಎಪಿ ಚಿತ್ರ

ಕಾಬೂಲ್ ಹೋಟೆಲ್ ಮೇಲೆ ದಾಳಿ: ದಾಳಿಕೋರರ ಹತ್ಯೆ

ಕಾಬೂಲ್ / ಇಸ್ಲಾಮಾಬಾದ್ (ರಾಯಿಟರ್ಸ್/ಎಪಿ): ವಿದೇಶಿಯರು ಉಳಿದುಕೊಂಡಿದ್ದ ಕಾಬೂಲ್‌ನ ಕೇಂದ್ರ ಭಾಗದ ಹೋಟೆಲ್ ಮೇಲೆ ಸೋಮವಾರ ಗುಂಡಿನ ದಾಳಿ ಮತ್ತು ಸ್ಫೋಟ ನಡೆದಿದೆ. ದಾಳಿಕೋರ ಮೂವರು ಶಸ್ತ್ರಧಾರಿಗಳನ್ನು ಕೊಲ್ಲಲಾಗಿದೆ ಎಂದು ಸೋಮವಾರ ತಾಲಿಬಾನ್ ಸರ್ಕಾರ ಹೇಳಿದೆ.

ಶೇರ್-ಎ-ನಾವ್ ಪ್ರದೇಶದ ಹೋಟೆಲ್‌ನ ಮಹಡಿಯೊಂದರಲ್ಲಿ ಹಲವು ಗಂಟೆಗಳ ಕಾಲ ಗುಂಡಿನ ದಾಳಿ ನಡೆದಿದೆ. ಈ ಕುರಿತು ಪ್ರತಿಕ್ರಿಯಿಸಿದ ತಾಲಿಬಾನ್ ಸರ್ಕಾರದ ವಕ್ತಾರ ಜಬಿಹುಲ್ಲಾ ಮಜಾಹಿದ್, 'ದಾಳಿಯಿಂದ ತಪ್ಪಿಸಿಕೊಳ್ಳಲು ಇಬ್ಬರು ವಿದೇಶಿಯರು ಕೊಠಡಿಯ ಕಿಟಕಿಯಿಂದ ಹೊರ ಜಿಗಿದಿದ್ದರು. ಇಬ್ಬರೂ ಗಾಯಗೊಂಡಿದ್ದಾರೆ' ಎಂದರು.

ಹೋಟೆಲ್ ಕಟ್ಟಡದಲ್ಲಿ ಬೆಂಕಿ ಮತ್ತು ಹೊಗೆ ಕಾಣಿಸುವ ಚಿತ್ರಗಳು, ವಿಡಿಯೊಗಳನ್ನು ಸ್ಥಳೀಯ ನಿವಾಸಿಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ.

'ಚೀನೀಯರು ಹಾಗೂ ಇತರ ವಿದೇಶಿಯರು ಹೆಚ್ಚಿನ ಸಂಖ್ಯೆಯಲ್ಲಿ ಉಳಿದುಕೊಂಡಿರುವ ಮಹಡಿಯನ್ನೇ ಗುರಿಯಾಗಿಸಿಕೊಂಡು ದಾಳಿ ನಡೆದಿದೆ. ಗುಂಡಿನ ದಾಳಿಯ ಶಬ್ದವು ನಿರಂತರ ಕೇಳುತ್ತಿತ್ತು. ನಂತರ ಒಮ್ಮೆ ಭಾರಿ ಸ್ಫೋಟದ ಶಬ್ದ ಕೇಳಿಸಿತು' ಎಂದು ಸ್ಥಳೀಯ ನಿವಾಸಿಯೊಬ್ಬರು ಹೇಳಿದ್ದಾರೆ.

'ಚೀನಾದ ಅತಿಥಿ ಗೃಹದ ಬಳಿಯೇ ದಾಳಿ ನಡೆದಿದೆ. ಕಾಬೂಲ್‌ನಲ್ಲಿರುವ ಚೀನಾದ ರಾಯಭಾರಿ ಕಚೇರಿ ಘಟನೆಯ ಬಗ್ಗೆ ನಿಗಾ ವಹಿಸಿದೆ' ಎಂದು ಚೀನಾದ ಸುದ್ದಿ ಸಂಸ್ಥೆ ವರದಿ ಮಾಡಿದೆ.

ದಾಳಿ ಹೊಣೆಹೊತ್ತ ಐ.ಎಸ್ ಉಗ್ರ ಸಂಘಟನೆ: ಘಟನೆ ನಡೆದಾಗ ತಕ್ಷಣಕ್ಕೆ ಯಾರೂ ಹೊಣೆ ಹೊತ್ತಿರಲಿಲ್ಲ. ಆದರೆ, ಇಸ್ಲಾಮಿಕ್ ಸ್ಟೇಟ್ (ಐ.ಎಸ್) ಉಗ್ರರ ಪ್ರಾದೇಶಿಕ ಗುಂಪೊಂದು ದಾಳಿಯ ಹೊಣೆ ಹೊತ್ತುಕೊಂಡಿದೆ. ಅಫ್ಗಾನಿಸ್ತಾನದಲ್ಲಿ ಮತ್ತೆ ತಾಲಿಬಾನ್ ಆಡಳಿತ ಶುರುವಾದ ಮೇಲೆ ಐ.ಎಸ್. ಉಗ್ರರು ದೇಶದಲ್ಲಿ ನಿರಂತರ ದಾಳಿ ನಡೆಸುತ್ತಿದ್ದಾರೆ.

ರಷ್ಯಾ, ಇರಾನ್: ಮತ್ತಷ್ಟು ನಿರ್ಬಂಧ ಸಾಧ್ಯತೆ

ಬ್ರಸೆಲ್ಸ್ (ರಾಯಿಟರ್ಸ್): ಉಕ್ರೇನ್ ಮೇಲಿನ ಆಕ್ರಮಣಕ್ಕಾಗಿ ರಷ್ಯಾ ಮತ್ತು ಇರಾನ್ ವಿರುದ್ಧ ಮತ್ತಷ್ಟು ಹೆಚ್ಚಿನ ನಿರ್ಬಂಧಗಳನ್ನು ಹೇರಲು ಯುರೋಪ್ ಒಕ್ಕೂಟದ ವಿದೇಶಾಂಗ ಸಚಿವರು ಸೋಮವಾರ ಸಭೆ ಸೇರಿ ಚರ್ಚಿಸಿದರು.

ಉಕ್ರೇನ್ ರಕ್ಷಣೆಗೆ ಇನ್ನಷ್ಟು ಹೆಚ್ಚಿನ ಶಸ್ತ್ರಾಸ್ತ್ರ ನೆರವು ಒದಗಿಸುವ ಸಂಬಂಧವೂ ಚರ್ಚಿಸಿ, ₹17,500 ಕೋಟಿ ಮೊತ್ತದ ಶಸ್ತ್ರಾಸ್ತ್ರಗಳನ್ನು ಪೂರೈಸಲು ತೀರ್ಮಾನಿಸಲಾಯಿತು.

ಚೆಸ್: ಗೋವಾದ ಖುತ್ವಿಜ್‌ಗೆ ಪ್ರಶಸ್ತಿ

ಮಂಗಳೂರು: ಗೋವಾದ ಖುತ್ವಿಜ್ ಪರಬ್ ಅವರು ಕೆಐಒಸಿಎಲ್ ಆಯೋಜಿಸಿದ್ದ ಕುದುರೆಮುಖ ಟ್ರೋಫಿ ಫಿಡೆ ರೇಟೆಡ್ ಅಖಿಲ ಭಾರತ ಚೆಸ್ ಟೂರ್ನಿಯ ಪ್ರಶಸ್ತಿ ಮುಡಿಗೇರಿಸಿಕೊಂಡರು.

ನಗರದ ಕಾವೂರಿನ ಕೆಐಒಸಿಎಲ್ ಟೌನ್‌ಷಿಪ್‌ನ ನೆಹರು ಭವನದಲ್ಲಿ ಭಾನುವಾರ ಮುಕ್ತಾಯಗೊಂಡ ಟೂರ್ನಿಯ 9 ಸುತ್ತುಗಳ ಸ್ಪರ್ಧೆಯಲ್ಲಿ ಒಟ್ಟು 8.5 ಪಾಯಿಂಟ್ ಕಲೆ ಹಾಕಿದ ಅವರು ಟ್ರೋಫಿ ಮತ್ತು ₹ 30 ಸಾವಿರ ನಗದು ತಮ್ಮದಾಗಿಸಿಕೊಂಡರು. ಕೊನೆಯ ಸುತ್ತಿನಲ್ಲಿ ಅವರು ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿಯ ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್ ಇಶಾ ಶರ್ಮಾ (ಒಟ್ಟು 7.5 ಪಾಯಿಂಟ್) ಅವರೊಂದಿಗೆ ಡ್ರಾ ಮಾಡಿಕೊಂಡರು.

ಜಯರಾಮಪ್ಪಗೆ ಚಿನ್ನ

ಜಯರಾಮಪ್ಪ

ಬೆಂಗಳೂರು: ಕರ್ನಾಟಕದ ಜಯರಾಮಪ್ಪ ಅವರು ಆಸ್ಟ್ರೇಲಿಯಾದ ಗೋಲ್ಡ್‌ಕೋಸ್ಟ್‌ನಲ್ಲಿ ಇತ್ತೀಚೆಗೆ ನಡೆದ ಪಾನ್ ಪ್ಯಾನ್ ಪೆಸಿಫಿಕ್ ಮಾಸ್ಟರ್ಸ್ ಅಥ್ಲೆಟಿಕ್ಸ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಪದಕ ಗೆದ್ದಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯ ಚೀಮಸಂದ್ರದ, 70 ವರ್ಷದ ಜಯರಾಮಪ್ಪ 3,000 ಮೀಟರ್ಸ್ ನಡಿಗೆ ಸ್ಪರ್ಧೆಯಲ್ಲಿ 22 ನಿಮಿಷಕ್ಕೆ ಗುರಿ ಮುಟ್ಟಿ ಚಿನ್ನ ಗೆದ್ದರೆ, 400 ಮೀ. ಓಟದಲ್ಲಿ 1 ನಿ. 40 ಸೆಕೆಂಡುಗಳಲ್ಲಿ ಗುರಿ ತಲುಪಿ ಬೆಳ್ಳಿ ಪದಕ ಜಯಿಸಿದ್ದಾರೆ.

ಅಬ್ದು ಕೆಬೆಬೆಗೆ ಪ್ರಶಸ್ತಿ

ಬೆಂಗಳೂರು: ಇಥಿಯೊಪಿಯಾದ ಅಬ್ದು ಕೆಬೆಬೆ ಅವರು ಬೆಂಗಳೂರು ಮಿಡ್‌ನೈಟ್ ಮ್ಯಾರಥಾನ್‌ನಲ್ಲಿ ಪ್ರಶಸ್ತಿ ಜಯಿಸಿದರು.

ಪುರುಷರ ವಿಭಾಗದಲ್ಲಿ ಅಬ್ದು 2 ತಾಸು 24 ನಿಮಿಷ 33 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಭಾರತೀಯ ಪುರುಷರ ವಿಭಾಗದಲ್ಲಿ ಭೂಪೇಂದ್ರ ಸಾಹು (2 ತಾಸು 55 ನಿ. 57 ಸೆ.) ಮತ್ತು ಮಹಿಳೆಯರ ಓಪನ್ ವಿಭಾಗದಲ್ಲಿ ಕೆನ್ಯಾದ ಎಮಿ ಚೆಪ್ಕೊಚ್ (3 ತಾಸು 2 ನಿ. 3 ಸೆ.) ಅಗ್ರಸ್ಥಾನ ಗಳಿಸಿದರು.

ಪರಿಕ್ರಮ ಜಯಭೇರಿ

ಬೆಂಗಳೂರು: ಪರಿಕ್ರಮ ಸೆಂಟರ್ ಫಾರ್ ಲರ್ನಿಂಗ್ ಮತ್ತು ಟಿಐಎಸ್‌ಬಿ ತಂಡಗಳು ಪರಿಕ್ರಮ ಚಾಂಪಿಯನ್ಸ್ ಲೀಗ್ 16 ವರ್ಷದೊಳಗಿನವರ ಫುಟ್‌ಬಾಲ್ ಟೂರ್ನಿಯ ಪ್ಲೇಟ್ ಸೆಮಿಫೈನಲ್‌ನಲ್ಲಿ ಜಯ ಗಳಿಸಿದವು.

ಪರಿಕ್ರಮ ತಂಡವು 1–0ಯಿಂದ ರ‍್ಯಾನ್ ಇಂಟರ್‌ನ್ಯಾಷನಲ್ ಎದುರು, ಟಿಐಎಸ್‌ಬಿ 2–1ರಿಂದ ಲೊಯೊಲಾ ಹೈಸ್ಕೂಲ್ ಗೋವಾ ಎದುರು ಗೆದ್ದವು.

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಇಂದಿನಿಂದ; ಕರ್ನಾಟಕ –ಸರ್ವಿಸಸ್ ಹಣಾಹಣಿ

ಮಯಂಕ್ ಬಳಗಕ್ಕೆ ಶುಭಾರಂಭದ ವಿಶ್ವಾಸ

• ಗಿರೀಶ ದೊಡ್ಡಮನಿ

ಮುಖ್ಯಾಂಶಗಳು
- ಮೊದಲ ಬಾರಿ ಕರ್ನಾಟಕ–ಸರ್ವಿಸಸ್ ಮುಖಾಮುಖಿ
- ಮಯಂಕ್, ಮನೀಷ್ ಮೇಲೆ ಭರವಸೆ
- ಟೂರ್ನಿಯಲ್ಲಿ ಕರ್ನಾಟಕ ತಂಡ ಮುನ್ನಡೆಸಲಿರುವ 52ನೇ ನಾಯಕ ಮಯಂಕ್

ಬೆಂಗಳೂರು: ವಿಪರೀತ ಮಳೆ ಮತ್ತು ಚಳಿಯಲ್ಲಿ ನಡುಗುತ್ತಿರುವ 'ಸಿಲಿಕಾನ್ ಸಿಟಿ'ಯಲ್ಲಿ ಮಂಗಳವಾರದಿಂದ ದೇಶಿ ಕ್ರಿಕೆಟ್ ಗಾಳಿಯೂ ಬೀಸಲಿದೆ.

ರಣಜಿ ಟ್ರೋಫಿ ಟೂರ್ನಿಯ ಸಿ ಗುಂಪಿನ ಮೊದಲ ಪಂದ್ಯಕ್ಕೆ ಚಿನ್ನಸ್ವಾಮಿ ಕ್ರೀಡಾಂಗಣ ವೇದಿಕೆಯಾಗಲಿದೆ. ಆತಿಥೇಯ ಕರ್ನಾಟಕ ಮತ್ತು ಸರ್ವಿಸಸ್ ತಂಡಗಳು ಮುಖಾಮುಖಿಯಾಗಲಿವೆ. ಉಭಯ ತಂಡಗಳು ಹಣಾಹಣಿ ನಡೆಸುತ್ತಿರುವುದು ಇದೇ ಮೊದಲ ಸಲ.

2014–15ರಲ್ಲಿ ವಿನಯಕುಮಾರ್ ನಾಯಕತ್ವದ ಬಳಗವು ಚಾಂಪಿಯನ್ ಆದ ನಂತರ ಕರ್ನಾಟಕ ತಂಡವು ಇಲ್ಲಿಯವರೆಗೂ ಟ್ರೋಫಿ ಜಯಿಸಿಲ್ಲ.

ಆಗಿನ ವಿಜಯದಲ್ಲಿ ಪ್ರಮುಖ ಕಾಣಿಕೆ ನೀಡಿದ್ದ ಬ್ಯಾಟರ್ ಮಯಂಕ್ ಅಗರವಾಲ್ ಈ ಬಾರಿ ರಾಜ್ಯ ತಂಡವನ್ನು ಮುನ್ನಡೆಸುತ್ತಿದ್ದಾರೆ. ಅವರ ಬಹುಕಾಲದ ಗೆಳೆಯರಾದ ಮನೀಷ್ ಪಾಂಡೆ, ಆರ್. ಸಮರ್ಥ್ ಅವರಂತಹ ಅನುಭವಿಗಳು ತಂಡದಲ್ಲಿದ್ದಾರೆ. ಅಲ್ಲದೇ ಇತ್ತೀಚೆಗೆ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಮಿಂಚಿದ್ದ ನಿಕಿನ್ ಜೋಸ್, ಕೆ.ವಿ. ಸಿದ್ಧಾರ್ಥ್ ಕೂಡ ಬಳಗದಲ್ಲಿದ್ದಾರೆ. ಸ್ವತಃ ಮಯಂಕ್ ಲಯ ಕಂಡುಕೊಂಡರೆ ಉತ್ತಮ ಬ್ಯಾಟಿಂಗ್ ಪಡೆ ಸಿದ್ಧವಾಗುವುದರಲ್ಲಿ ಅನುಮಾನವಿಲ್ಲ. ಆದರೆ ದೇವದತ್ತ ಪಡಿಕ್ಕಲ್ ಅವರ ಕೊರತೆ ಕಾಡಬಹುದು.

'ಫಲಿತಾಂಶಗಳ ಬಗ್ಗೆ ಹೆಚ್ಚು ಯೋಚಿಸುತ್ತಿಲ್ಲ. ನಮ್ಮ ಸಾಮರ್ಥ್ಯವನ್ನು ಸಂಪೂರ್ಣ ಪಣಕ್ಕೊಡ್ಡಿ ಆಡಿದರೆ ಉತ್ತಮ ಫಲಿತಾಂಶಗಳು ಬರುವುದರಲ್ಲಿ ಸಂಶಯವಿಲ್ಲ. ಈ ವರ್ಷದಿಂದ ರಣಜಿ ಟೂರ್ನಿಯು ಹಳೆಯ ಮಾದರಿಯಲ್ಲಿ ನಡೆಯುತ್ತಿರುವುದು ಆಶಾದಾಯಕವಾಗಿದೆ. ತವರು ಮತ್ತು ಎದುರಾಳಿ ತಂಡಗಳ ತವರಿನಂಗಳಲ್ಲಿ ನಾವು ಆಡಬೇಕಿರುವುದು ಕೂಡ ಸವಾಲಿನದ್ದು. ವಿಭಿನ್ನ ಪರಿಸ್ಥಿತಿ ಮತ್ತು ವಾತಾವರಣಗಳಿಗೆ ಹೊಂದಿಕೊಂಡು ಆಡಬೇಕಿದೆ' ಎಂದು ನಾಯಕ ಮಯಂಕ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಆದರೆ, ವಿಕೆಟ್‌ಕೀಪಿಂಗ್ ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಕಳೆದ ಹಲವು ಪಂದ್ಯಗಳಲ್ಲಿ ವೈಫಲ್ಯ ಅನುಭವಿಸಿರುವ ಬಿ.ಆರ್. ಶರತ್ ಮತ್ತು ಶರತ್ ಶ್ರೀನಿವಾಸ್ ಅವರಿಬ್ಬರಿಗೂ ಮತ್ತೊಂದು ಅವಕಾಶ ಲಭಿಸಿದೆ. ಅವರಿಗೆ ತಮ್ಮ ಸಾಮರ್ಥ್ಯ ಸಾಬೀತು ಮಾಡಲು ಬಹುಶಃ ಕೊನೆಯ ಅವಕಾಶವೂ ಆಗಬಹುದು.

ಆದರೆ ಬೌಲಿಂಗ್ ವಿಭಾಗದಲ್ಲಿ ಭರವಸೆ ಇದೆ. ಯುವ ವೇಗಿ ವಿದ್ವತ್ ಕಾವೇರಪ್ಪ ವೈಶಾಖ ವಿಜಯಕುಮಾರ್ ಭರವಸೆ ಮೂಡಿಸಿದ್ದಾರೆ. ಅನುಭವಿ ಸ್ಪಿನ್–ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಉತ್ತಮ ಲಯದಲ್ಲಿದ್ದಾರೆ. ಕೆ. ಗೌತಮ್ ಮತ್ತು ಪ್ರಸಿದ್ಧಕೃಷ್ಣ, ರೋನಿತ್ ಮೋರೆ ತಮ್ಮ ಅನುಭವವನ್ನು ಧಾರೆಯೆರೆದರೆ ಯಶಸ್ಸು ಲಭಿಸುವುದರಲ್ಲಿ ಅನುಮಾನವಿಲ್ಲ.

ಸಿ ಗುಂಪಿನಲ್ಲಿ ರಾಜಸ್ಥಾನ, ಕೇರಳ ಮತ್ತು ಜಾರ್ಖಂಡ್ ತಂಡಗಳಿಂದ ಕಠಿಣ ಪೈಪೋಟಿ ಎದುರಾಗಬಹುದು. ಉಳಿದ ನಾಲ್ಕು ತಂಡಗಳ ಮುಂದೆ ಕರ್ನಾಟಕವೇ ಬಲಿಷ್ಠವಾಗಿದೆ. ಆದ್ದರಿಂದ ನಾಕೌಟ್ ಹಾದಿ ಸುಲಭವಾಗಬಹುದು.

ಆದರೆ ಕಳೆದ ಕೆಲ ವರ್ಷಗಳಿಂದ ಎಲ್ಲ ಮಾದರಿಯ ದೇಶಿ ಟೂರ್ನಿಗಳಲ್ಲಿ ಕರ್ನಾಟಕವು ನಾಕೌಟ್ ಹಂತಗಳಲ್ಲಿಯೇ ಎಡವುತ್ತಿದೆ. ಲೀಗ್ ಹಂತದಲ್ಲಿ ಮಿಂಚಿದ ಆಟಗಾರರು ಕ್ವಾರ್ಟರ್, ಸೆಮಿಫೈನಲ್‌ಗಳಲ್ಲಿ ವಿಫಲರಾಗುತ್ತಿದ್ದಾರೆ. ಇದರಿಂದ ಹೊರಬರಲು ಕೋಚ್ ಪಿ.ವಿ. ಶಶಿಕಾಂತ್ ರೂಪಿಸುವ ತಂತ್ರಗಾರಿಕೆಯೂ ಇಲ್ಲಿ ಪ್ರಮುಖವಾಗಲಿದೆ. ಆದರೆ ಮಂಗಳವಾರ ಮತ್ತು ಬುಧವಾರವೂ ಮಳೆ ಸುರಿಯುವ ಸಾಧ್ಯತೆಗಳಿವೆ. ಆದ್ದರಿಂದ ನಾಲ್ಕು ದಿನಗಳಲ್ಲಿ ಎಷ್ಟು ಅವಧಿ ಆಟ ನಡೆಯಲು ಅವಕಾಶ ಸಿಗಲಿದೆ ಎಂಬುದೂ ಪಂದ್ಯದ ಫಲಿತಾಂಶದ ಮೇಲೆ ಪರಿಣಾಮ ಬೀರಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9



ಮಯಂಕ್ ಅಗರವಾಲ್ –ಪ್ರಜಾವಾಣಿ ಚಿತ್ರ ಎಸ್.ಕೆ. ದಿನೇಶ್

ಕರ್ನಾಟಕದ ರಣಜಿ ಟ್ರೋಫಿ ವಿಜಯ

ವರ್ಷ	ಎದುರಾಳಿ	ಸ್ಥಳ	ನಾಯಕ
1973-74	ರಾಜಸ್ಥಾನ	ಜೈಪುರ	ಇಎಎಸ್ ಪ್ರಸನ್ನ
1977-78	ಉತ್ತರಪ್ರದೇಶ	ಮೋಹನನಗರ್	ಇಎಎಸ್ ಪ್ರಸನ್ನ
1982-83	ಮುಂಬೈ	ಮುಂಬೈ	ಬ್ರಿಜೇಶ್ ಪಟೇಲ್
1995-96	ತಮಿಳುನಾಡು	ಚೆನ್ನೈ	ಅನಿಲ್ ಕುಂಬ್ಳೆ
1997-98	ಉತ್ತರಪ್ರದೇಶ	ಬೆಂಗಳೂರು	ರಾಹುಲ್ ದ್ರಾವಿಡ್
1998-99	ಮಧ್ಯಪ್ರದೇಶ	ಬೆಂಗಳೂರು	ಸುನಿಲ್ ಜೋಶಿ
2013-14	ಮಹಾರಾಷ್ಟ್ರ	ಹೈದರಾಬಾದ್	ವಿನಯಕುಮಾರ್
2014-15	ತಮಿಳುನಾಡು	ಮುಂಬೈ	ವಿನಯಕುಮಾರ್

ಎರಡಕ್ಕಿಂತ ಹೆಚ್ಚು ಸಲ ಟ್ರೋಫಿ ಗೆದ್ದ ತಂಡಗಳು

ತಂಡಗಳು	ಟ್ರೋಫಿ
ಮುಂಬೈ	41
ಕರ್ನಾಟಕ	8
ದೆಹಲಿ	7
ಬರೋಡಾ	5
ಹೋಳ್ಕರ್	4
ಹೈದರಾಬಾದ್	2
ಬಂಗಾಳ	2
ರಾಜಸ್ಥಾನ	2
ಮಹಾರಾಷ್ಟ್ರ	2
ರೈಲ್ವೆಸ್	2
ತಮಿಳುನಾಡು	2
ವಿದರ್ಭ	2

2022ರ ಲೀಗ್‌ನಲ್ಲಿ ಕರ್ನಾಟಕ ಎದುರಿಸಲಿರುವ ತಂಡಗಳ ವಿರುದ್ಧ ಸಾಧನೆ

ತಂಡ	ಪಂದ್ಯ	ಜಯ	ಸೋಲು	ಡ್ರಾ
ಸರ್ವಿಸಸ್	0	0	0	0
ಪುದುಚೇರಿ	1	1	0	0
ಗೋವಾ	17	15	1	1
ಛತ್ತೀಸಗಢ	1	1	0	0
ರಾಜಸ್ಥಾನ	10	7	1	2
ಕೇರಳ	48	40	2	6
ಜಾರ್ಖಂಡ್	2	0	0	2

ಅಂಕಿಸಂಖ್ಯೆ: ಚನ್ನಗಿರಿ ಕೇಶವಮೂರ್ತಿ

ಹಾಕಿ: ಭಾರತಕ್ಕೆ ಗೆಲುವು

ವಲೆನ್ಸಿಯಾ, ಸ್ಪೇನ್ (ಪಿಟಿಐ): ಭಾರತ ತಂಡದವರು ಇಲ್ಲಿ ನಡೆಯುತ್ತಿರುವ ಎಫ್‌ಐಎಚ್ ಹಾಕಿ ಮಹಿಳೆಯರ ನೇಷನ್ಸ್ ಕಪ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ಪಡೆದರು.

ಸೋಮವಾರ ಸವಿತಾ ಪೂನಿಯಾ ಬಳಗ 2–1 ಗೋಲುಗಳಿಂದ ಜಪಾನ್ ವಿರುದ್ಧ ಗೆದ್ದಿತು. ಸಲೀಮಾ ಟೇಟೆ (5ನೇ ನಿ.) ಮತ್ತು ಬ್ಯೂಟಿ ಡಂಗ್‌ಡಂಗ್ (40ನೇ ನಿ.) ಅವರು ಭಾರತದ ಪರ ಗೋಲು ಗಳಿಸಿದರು. ಜಪಾನ್ ಪರ ರುಯಿ ತಕಶಿಮ ಚೆಂಡನ್ನು ಗುರಿ ಸೇರಿಸಿದರು. ಮೊದಲ ಪಂದ್ಯದಲ್ಲಿ 3–1ರಲ್ಲಿ ಚಿಲಿ ತಂಡವನ್ನು ಮಣಿಸಿದ್ದ ಭಾರತ, 'ಬಿ' ಗುಂಪಿನಲ್ಲಿ 6 ಪಾಯಿಂಟ್ಸ್ ಗಳಿಸಿದೆ. ಕೊನೆಯ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ಎದುರು ಕನಿಷ್ಠ ಡ್ರಾ ಸಾಧಿಸಿದರೂ ಸೆಮಿ ಪ್ರವೇಶಿಸಲಿದೆ.

ವಿವಿಧ ವಿಭಾಗಗಳಲ್ಲಿ ಪ್ರಶಸ್ತಿ ಜಯಿಸಿದವರು: (ಎಡದಿಂದ) ಅನಿರ್ಬನ್ ರಾಯ್ ಚೌಧರಿ, ಆಕಾಶ್ ಕೆ.ಜೆ, ಆರ್ಯ, ದೇಶ್ನಾ, ಮರಿಯಾ ಮತ್ತು ರೋಹಿತ್

ಟಿಟಿ: ಆಕಾಶ್, ದೇಶ್ನಾಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶ್ನಾ ಎಂ.ವಂಶಿಕಾ ಮತ್ತು ಆಕಾಶ್ ಕೆ.ಜೆ. ಅವರು ಸಿವಿಎಲ್ ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ 19 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಮಲ್ಲೇಶ್ವರಂ ಕೆನರಾ ಯೂನಿಯನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 19 ವರ್ಷದೊಳಗಿನವರ ವಿಭಾಗದ ಫೈನಲ್‌ನಲ್ಲಿ ಡಬ್ಲ್ಯು-ಸಿಟಿಟಿಸಿಯ ಆಕಾಶ್ 11-6, 3-11, 11-9, 11-5, 11-8ರಿಂದ ತಮ್ಮದೇ ತಂಡದ ಸಮ್ಯಕ್ ಕಶ್ಯಪ್ ಅವರನ್ನು ಸೋಲಿಸಿದರು. ಸಿಂಗಲ್ಸ್ ವಿಭಾಗದಲ್ಲೂ ಆಕಾಶ್ ಅವರಿಗೆ ಪ್ರಶಸ್ತಿ ಒಲಿಯಿತು. ಈ ವಿಭಾಗದ ಫೈನಲ್‌ನಲ್ಲಿ ಅವರು 11-6, 9-11, 11-8, 11-8, 12-10ರಿಂದ ಸಮ್ಯಕ್ ಅವರನ್ನು ಪರಾಭವಗೊಳಿಸಿದರು. ಮಹಿಳಾ ಸಿಂಗಲ್ಸ್ ವಿಭಾಗದಲ್ಲಿ ಕೆನರಾ ಬ್ಯಾಂಕ್‌ನ ಮರಿಯಾ ರೋನಿ 11-9, 11-9, 11-7, 11-9ರಿಂದ ಪಿಎಸ್‌ಟಿಟಿಎನ ಅನರ್ಘ್ಯಾ ಮಂಜುನಾಥ್ ವಿರುದ್ಧ ಗೆದ್ದು ಪ್ರಶಸ್ತಿಗೆ ಮುತ್ತಿಟ್ಟರು. 19 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಫೈನಲ್‌ನಲ್ಲಿ ಬಿಎನ್‌ಎಂನ ದೇಶ್ನಾ 14-12, 11-2, 5-11, 8-11, 9-11, 11-2, 11-9ರಿಂದ ಅನರ್ಘ್ಯಾ ಅವರನ್ನು ಮಣಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

17 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಪಿಎಸ್‌ಟಿಟಿಯ ರೋಹಿತ್ ಶಂಕರ್ 11-9, 9-11, 11-5, 7-11, 11-7, 11-3ರಿಂದ ಸಿಎಂ ತಂಡದ ತೇಶುಭ್ ದಿನೇಶ್ ಅವರನ್ನು ಸೋಲಿಸಿ ಪ್ರಶಸ್ತಿ ಜಯಿಸಿದರು.

ನಾನ್ ಮೆಡಲ್ಸ್ ವಿಭಾಗದ ಫೈನಲ್‌ನಲ್ಲಿ ಎಸ್‌ಬಿಟಿಟಿಎ ತಂಡದ ಆರ್ಯ ಎ. ಜೈನ್ 5-11, 12-10, 11-6, 11-7ರಿಂದ ಸಿಎಂ ತಂಡದ ಪ್ರಜ್ವಲ್ ಜಿ.ಎಸ್. ಅವರನ್ನು ಸೋಲಿಸಿದರು.

ದೇಶ್ನಾ ಹಾಗೂ ಸಿಟಿಬಿ ತಂಡದ ಅನಿರ್ಬನ್ ಚೌಧರಿ ವರ್ಷದ ಆಟಗಾರ್ತಿ ಮತ್ತು ಆಟಗಾರ ಗೌರವ ಪಡೆದರು.

ಸುವರ್ಣಿಕಾ, ಧನುಷ್‌ಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಸುವರ್ಣಿಕಾ ರಾಧಾಕೃಷ್ಣ ಮತ್ತು ಧನುಷ್ ಬಾಬು ಅವರು ಇಲ್ಲಿ ನಡೆಯುತ್ತಿರುವ 60ನೇ ರಾಷ್ಟ್ರೀಯ ರೋಲರ್ ಸ್ಕೇಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಕರ್ನಾಟಕ ರೋಲರ್ ಸ್ಕೇಟಿಂಗ್ ಸಂಸ್ಥೆ ಆಶ್ರಯದಲ್ಲಿ ತ್ಯಾಗರಾಜನಗರದಲ್ಲಿರುವ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಸ್ಕೇಟಿಂಗ್ ರಿಂಕ್‌ನಲ್ಲಿ ಸೋಮವಾರ ನಡೆದ ಜೂನಿಯರ್ ಮಹಿಳೆಯರ (14 ರಿಂದ 17 ವರ್ಷ) 200 ಮೀ. ಡುಯಲ್ ಟಿಟಿ ವಿಭಾಗದಲ್ಲಿ ಸುವರ್ಣಿಕಾ ಅಗ್ರಸ್ಥಾನ ಪಡೆದರು. ತಮಿಳುನಾಡಿನ ಎಸ್.ಗೋಪಿಕಾ ಬೆಳ್ಳಿ ಗೆದ್ದರೆ, ಕರ್ನಾಟಕದ ದೇಶಿಲ್ ಅಮಂಡಾ ಅವರು ಕಂಚು ತಮ್ಮದಾಗಿಸಿಕೊಂಡರು.

ಧನುಷ್, ಸೀನಿಯರ್ ಪುರುಷರ 200 ಮೀ. ಡುಯಲ್ ಟಿಟಿ ಸ್ಪರ್ಧೆಯಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನ ಜಯಿಸಿದರು.

ಸುವರ್ಣಿಕಾ ರಾಧಾಕೃಷ್ಣ ಗುರಿಯತ್ತ ಸಾಗಿದ ಕ್ಷಣ –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ವುಡ್ ಮಿಂಚು: ಇಂಗ್ಲೆಂಡ್‌ಗೆ ಸರಣಿ

ಮುಲ್ತಾನ್ (ಎಎಫ್‌ಪಿ): ವೇಗದ ಬೌಲರ್ ಮಾರ್ಕ್ ವುಡ್ ಗಳಿಸಿದ ನಾಲ್ಕು ವಿಕೆಟ್‌ಗಳ ಬಲದಿಂದ ಇಂಗ್ಲೆಂಡ್ ತಂಡವು ಪಾಕಿಸ್ತಾನ ವಿರುದ್ಧದ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯವನ್ನು 26 ರನ್‌ಗಳಿಂದ ಗೆದ್ದುಕೊಂಡಿತು. ಇದರೊಂದಿಗೆ ಮೂರು ಪಂದ್ಯಗಳ ಸರಣಿಯಲ್ಲಿ 2–0 ಮುನ್ನಡೆ ಗಳಿಸಿತು.

ಗೆಲುವಿಗೆ 355 ರನ್‌ಗಳ ಗುರಿ ಪಡೆದಿದ್ದ ಪಾಕಿಸ್ತಾನ ನಾಲ್ಕನೇ ದಿನದಾಟವಾದ ಸೋಮವಾರ ಭೋಜನ ವಿರಾಮದ ಬಳಿಕ ಎಲ್ಲ ವಿಕೆಟ್ ಕಳೆದುಕೊಂಡಿತು. 328 ರನ್‌ಗಳಿಗೆ ಆಲೌಟ್ ಆಯಿತು. ಮಾರ್ಕ್ ವುಡ್ 65 ರನ್ ನೀಡಿ ನಾಲ್ಕು ವಿಕೆಟ್ ಕಬಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ 281, ಪಾಕಿಸ್ತಾನ: 202, ಎರಡನೇ ಇನಿಂಗ್ಸ್: ಇಂಗ್ಲೆಂಡ್ 275, ಪಾಕಿಸ್ತಾನ: 102.1 ಓವರ್‌ಗಳಲ್ಲಿ 328 (ಸೌದ್ ಶಕೀಲ್ 94, ಇಮಾಮ್ ಉಲ್ ಹಕ್ 60, ಮೊಹಮ್ಮದ್ ನವಾಜ್ 45, ಅಬ್ರಾರ್ ಅಹಮ್ಮದ್ 17; ಮಾರ್ಕ್ ವುಡ್ 65ಕ್ಕೆ 4, ಒಲಿ ರಾಬಿನ್ಸನ್ 23ಕ್ಕೆ 2, ಜೇಮ್ಸ್ ಆ್ಯಂಡರ್ಸನ್ 44ಕ್ಕೆ 2). ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 26 ರನ್‌ಗಳ ಜಯ. ಸರಣಿಯಲ್ಲಿ 2–0 ಮುನ್ನಡೆ

ಕೇಂದ್ರೀಯ ಗುತ್ತಿಗೆ: ರಹಾನೆ, ಇಶಾಂತ್‌ಗೆ 'ಕೊಕ್' ಸಾಧ್ಯತೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತನ್ನ ಆಟಗಾರರ ಕೇಂದ್ರಿಯ ಗುತ್ತಿಗೆ ಪಟ್ಟಿಯನ್ನು ಡಿ.21 ರಂದು ನಡೆಯಲಿರುವ ಅಪೆಕ್ಸ್ ಸಮಿತಿ ಸಭೆಯಲ್ಲಿ ಪರಿಷ್ಕರಿಸಲಿದೆ.

ಸಭೆಯಲ್ಲಿ ಒಟ್ಟು 12 ವಿಷಯಗಳ ಕುರಿತು ಚರ್ಚೆ ನಡೆಯಲಿದ್ದು, ನೂತನ ಕೇಂದ್ರೀಯ ಗುತ್ತಿಗೆ ಪಟ್ಟಿ ಬಿಡುಗಡೆ ಮಾಡುವುದು ಪ್ರಮುಖ ವಿಷಯ ಎನಿಸಿಕೊಂಡಿದೆ. ರಾಷ್ಟ್ರೀಯ ತಂಡದಲ್ಲಿ ಸ್ಥಾನ ಕಳೆದು ಕೊಂಡಿರುವ ಅಜಿಂಕ್ಯ ರಹಾನೆ ಮತ್ತು ಇಶಾಂತ್ ಶರ್ಮ ಅವರನ್ನು ಪಟ್ಟಿಯಿಂದ ಕೈಬಿಡುವ ಸಾಧ್ಯತೆಯಿದ್ದು, ಶುಭಮನ್ ಗಿಲ್ ಹಾಗೂ ಸೂರ್ಯಕುಮಾರ್ ಯಾದವ್ ಬಡ್ತಿ ಪಡೆಯುವ ನಿರೀಕ್ಷೆಯಿದೆ. ಟಿ20 ಮಾದರಿಯಲ್ಲಿ ಭವಿಷ್ಯದ ನಾಯಕ ಎಂದೇ ಬಿಂಬಿತವಾಗಿರುವ ಹಾರ್ದಿಕ್ ಪಾಂಡ್ಯ, 'ಸಿ'ಯಿಂದ 'ಬಿ' ಶ್ರೇಣಿಗೆ ಬಡ್ತಿ ಹೊಂದಬಹುದು. ವೃದ್ಧಿಮನ್ ಸಹಾ ಅವರನ್ನೂ ಕೈಬಿಡುವ ಸಾಧ್ಯತೆಯಿದೆ.

ಷೇರುಪೇಟೆ ವಹಿವಾಟು 51



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,496
ಇಂದಿನ ಅಂತ್ಯ	18,497
▲	1
ದಿನದ ಗರಿಷ್ಠ	18,521

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹540
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹540

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1515)
ಸೋಯಾ (ರಿಫೈನ್ಡ್)	₹1210 (1225)
ಸೂರ್ಯಕಾಂತಿ (ರಿಫೈನ್ಡ್)	₹1330 (1350)
ಪಾಮೋಲಿನ್	₹912 (930)

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹139.50
ಆರ್‌ಎಸ್‌ಎಸ್-5	₹131.50
ಗುಡ್ ಲಾಟ್	₹124.50

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1500-2200
ಮಧ್ಯಮ	₹1000-1500
ಸಣ್ಣ	₹500-1000

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹500-655
ದ್ವಿತಳಿ (ಬಿ.ವಿ) ₹519-822

ಹರಳು, ಚಿನ್ನಾಭರಣ ರಫ್ತು ಹೆಚ್ಚಳ

ಮುಂಬೈ (ಪಿಟಿಐ): ಹರಳು ಮತ್ತು ಚಿನ್ನಾಭರಣ ರಫ್ತು 2021ರ ನವೆಂಬರ್‌ಗೆ ಹೋಲಿಸಿದರೆ 2022ರ ನವೆಂಬರ್‌ನಲ್ಲಿ ಶೇ 11.83ರಷ್ಟು ಹೆಚ್ಚಾಗಿದೆ ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನ ಮಂಡಳಿ (ಜಿಜೆಇಪಿಸಿ) ಸೋಮವಾರ ತಿಳಿಸಿದೆ.

ಮೌಲ್ಯದ ಲೆಕ್ಕದಲ್ಲಿ ₹ 17,755 ಕೋಟಿಯಿಂದ ₹19,885 ಕೋಟಿಗೆ ಏರಿಕೆ ಆಗಿದೆ ಎಂದು ಹೇಳಿದೆ.

2022ರ ಏಪ್ರಿಲ್‌ನಿಂದ ನವೆಂಬರ್ ಅವಧಿಯಲ್ಲಿ ಭಾರತ ಒಟ್ಟು ರಫ್ತಿನಲ್ಲಿ ಅಮೆರಿಕ ಮತ್ತು ಹಾಂಗ್‌ಕಾಂಗ್ ಹೆಚ್ಚಿನ ಪಾಲು ಹೊಂದಿವೆ ಎಂದು ಒಕ್ಕೂಟದ ಅಧ್ಯಕ್ಷ ವಿಪುಲ್ ಶಾ ತಿಳಿಸಿದ್ದಾರೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹12900
ಎಸಿ	₹6580
ಆರ್‌ಪಿ	₹8500
ಆರ್‌ಸಿ	₹4530

ಮುಂಬೈ ಧಾರಣೆ

ಶೇಂಗಾ

12–12–2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	10050-10150

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1525)
ಒಂದು ವಾರದ ಡೆಲಿವರಿ	1535 (1520)
ಸೋಯಾ ಕಚ್ಚಾ	1120 (1140)
ಪಾಮ್ ವಾರದ ಡೆಲಿವರಿ	910 (928)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,700 (53,875)
ಬೆಳ್ಳಿ ಕೆ.ಜಿ 67.050 (66,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಆರ್‌ಬಿಐ ವರದಿ ಬಹಿರಂಗ ಇಲ್ಲ: ಚೌಧರಿ

3 ತ್ರೈಮಾಸಿಕಗಳಲ್ಲಿ ಹಣದುಬ್ಬರ ನಿಯಂತ್ರಿಸಲು ವಿಫಲ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರವನ್ನು ಶೇ 6ರಲ್ಲಿ ನಿಯಂತ್ರಿಸಲು ಸತತವಾಗಿ ಮೂರು ತ್ರೈಮಾಸಿಕಗಳಲ್ಲಿ ವಿಫಲ ಆಗಿರುವ ಕುರಿತು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡಿರುವ ವರದಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವುದಿಲ್ಲ ಎಂದು ಕೇಂದ್ರ ಸರ್ಕಾರ ಸೋಮವಾರ ತಿಳಿಸಿದೆ.

ಆರ್‌ಬಿಐ ತನ್ನ ವರದಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿದೆ. ಆದರೆ 1934ರ ಆರ್‌ಬಿಐ ಕಾಯ್ದೆಯ ನಿಬಂಧನೆಗಳು ಹಾಗೂ ಆರ್‌ಬಿಐ ಹಣಕಾಸು ನೀತಿ ಸಮಿತಿ ಮತ್ತು ಹಣಕಾಸು ನೀತಿ ಪ್ರಕ್ರಿಯೆಯ ನಿಯಮಗಳು ವರದಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಲು ಅವಕಾಶ ನೀಡುವುದಿಲ್ಲ ಎಂದು ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಅವರು ಸಂಸತ್‌ಗೆ ಪ್ರತಿಕ್ರಿಯೆ ನೀಡಿದ್ದಾರೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ನೇತೃತ್ವದ ಹಣಕಾಸು ನೀತಿ ಸಮಿತಿಯು (ಎಂಪಿಸಿ) ವರದಿಯನ್ನು ಸಿದ್ಧಪಡಿಸಲಿದೆ.

2022ರ ಜನವರಿಯಿಂದ–ಸೆಪ್ಟೆಂಬರ್ ಅವಧಿಯಲ್ಲಿ ಚಿಲ್ಲರೆ ಹಣದುಬ್ಬರವು ಶೇ 6ಕ್ಕಿಂತಲೂ ಹೆಚ್ಚಿನ ಮಟ್ಟದಲ್ಲಿ ಇತ್ತು. ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ಹಣದುಬ್ಬರವು ಶೇ 6.3ರಷ್ಟು, ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಶೇ 7.3ರಷ್ಟು ಹಾಗೂ ಜುಲೈ–ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಶೇ 7ರಷ್ಟು ಇತ್ತು.

ಹಣದುಬ್ಬರವನ್ನು ನಿಯಂತ್ರಿಸಲು ಮುಂಚಿತವಾಗಿಯೇ ಕ್ರಮ ಕೈಗೊಂಡಿದ್ದಲ್ಲಿ ಅದರಿಂದ ಆರ್ಥಿಕತೆ ಮತ್ತು ನಾಗರಿಕರು ಹೆಚ್ಚಿನ ಬೆಲೆ ತೆರಬೇಕಾಗುತ್ತಿತ್ತು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಈಚೆಗೆ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು. ಆ ಮೂಲಕ ಬೆಲೆ ಏರಿಕೆ ಪರಿಸ್ಥಿತಿಯನ್ನು ನಿರ್ವಹಣೆಯ ಮಾಡಿರುವ ರೀತಿಯನ್ನು ಸಮರ್ಥಿಸಿಕೊಂಡಿದ್ದಾರೆ.

ಹಣದುಬ್ಬರ ನಿಯಂತ್ರಣದಲ್ಲಿ ಆರ್‌ಬಿಐ ವಿಫಲವಾಗಿರುವುದನ್ನು ಒಪ್ಪಿಕೊಂಡ ಅವರು, ಹಣದುಬ್ಬರದಲ್ಲಿ ಆಗುತ್ತಿರುವ ಏರಿಕೆಗೆ ಅನುಗುಣವಾಗಿ ಬಡ್ಡಿದರ ಹೆಚ್ಚಳ ಮಾಡದೇ ಆರ್ಥಿಕತೆಗೆ ಬೆಂಬಲ ನೀಡಲಾಗುತ್ತಿದೆ ಎಂದು ಹೇಳಿದ್ದಾರೆ.

ಟಾಟಾ ಸಮೂಹದಿಂದ 100 ಆ್ಯಪಲ್ ಮಳಿಗೆ?

ಬೆಂಗಳೂರು (ರಾಯಿಟರ್ಸ್): ದೇಶದಲ್ಲಿ ಆ್ಯಪಲ್ ಕಂಪನಿಯ ಉತ್ಪನ್ನಗಳನ್ನು ಮಾತ್ರವೇ ಮಾರಾಟ ಮಾಡುವ 100 ಮಳಿಗೆಗಳನ್ನು ತೆರೆಯಲು ಟಾಟಾ ಸಮೂಹವು ಮುಂದಾಗಿದೆ ಎಂದು ವರದಿಯೊಂದು ತಿಳಿಸಿದೆ.

ಎಲೆಕ್ಟ್ರಾನಿಕ್ಸ್ ಉತ್ಪನ್ನಗಳನ್ನು ಮಾರಾಟ ಮಾಡುವ ಟಾಟಾ ಸಮೂಹದ ಇನ್ಫಿನಿಟಿ ರಿಟೇಲರ್ ಕ್ರೋಮಾ ಕಂಪನಿಯು ಆ್ಯಪಲ್‌ನ ಅಧಿಕೃತ ಮರುಮಾರಾಟಗಾರ ಆಗಲಿದ್ದು, ಶಾಪಿಂಗ್ ಮಾಲ್ ಸೇರಿದಂತೆ ಹಲವು ಕಡೆಗಳಲ್ಲಿ ಮಳಿಗೆಗಳನ್ನು ಆರಂಭಿಸಲಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಈ ಕುರಿತು ಟಾಟಾ ಸಮೂಹ ಮತ್ತು ಆ್ಯಪಲ್ ಪ್ರತಿಕ್ರಿಯೆ ನೀಡಿಲ್ಲ.

ಸಿಮೆಂಟ್ ಉದ್ದಿಮೆಯಿಂದ ಹೊರಬಂದ ಜೆಪಿ

ನವದೆಹಲಿ (ಪಿಟಿಐ): ಜೈಪ್ರಕಾಶ್ ಅಸೋಸಿಯೇಟ್ಸ್ ಲಿಮಿಟೆಡ್ (ಜೆಎಎಲ್) ಮತ್ತು ಅದರ ಸಮೂಹವು ತನ್ನ ಸಿಮೆಂಟ್ ಉದ್ದಿಮೆ ವಹಿವಾಟನ್ನು ದಾಲ್ಮಿಯಾ ಭಾರತ್ ಲಿಮಿಟೆಡ್‌ಗೆ ಮಾರಾಟ ಮಾಡುವುದಾಗಿ ಸೋಮವಾರ ತಿಳಿಸಿದೆ.

ಸಾಲದಹೊರೆಯನ್ನುತಗ್ಗಿಸಿಕೊಳ್ಳಲು ಜೆಎಎಲ್ ಈ ನಿರ್ಧಾರಕ್ಕೆ ಬಂದಿದೆ.

ದಾಲ್ಮಿಯಾ ಸಿಮೆಂಟ್ ಭಾರತ್ ಲಿಮಿಟೆಡ್ ಕಂಪನಿಯು 94 ಲಕ್ಷ ಟನ್ ಸಿಮೆಂಟ್ ತಯಾರಿಕಾ ಸಾಮರ್ಥ್ಯದ ಘಟಕ ಮತ್ತು ಉಷ್ಣವಿದ್ಯುತ್ ಘಟಕವನ್ನು ಜೆಎಎಲ್‌ನಿಂದ ₹ 5,666 ಕೋಟಿಗೆ ಖರೀದಿಸುವ ಒಪ್ಪಂದ ಮಾಡಿಕೊಂಡಿದೆ ಎಂದು ಅದರ ಮಾತೃಸಂಸ್ಥೆ ದಾಲ್ಮಿಯಾ ಭಾರತ್ ಲಿಮಿಟೆಡ್ ಷೇರುಪೇಟೆಗೆ ತಿಳಿಸಿದೆ.

ದಾಲ್ಮಿಯಾಗೆ ತನ್ನ ವಾರ್ಷಿಕ ಸಿಮೆಂಟ್ ತಯಾರಿಕಾ ಸಾಮರ್ಥ್ಯವನ್ನು 3.59 ಕೋಟಿ ಟನ್‌ಗಳಿಂದ 4.53 ಕೋಟಿ ಟನ್‌ಗೆ ಹೆಚ್ಚಿಸಿಕೊಳ್ಳಲು ಮತ್ತು ತನ್ನ ವಹಿವಾಟನ್ನು ದೇಶದಾದ್ಯಂತ ವಿಸ್ತರಿಸಲು ಈ ಒಪ್ಪಂದ ನೆರವಾಗಲಿದೆ ಎಂದು ಅದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-54500
ಚಿತ್ರದುರ್ಗ	
ಆಪಿ	39819-40222
ಬೆಟ್ಟೆ	31149-31569
ಕೆಂಪುಗೋಟು	27609-28010
ರಾಶಿ	39339-39779
ಕಾರ್ಕಳ	
ಹೊಸತು	25000-37500
ಹಳತು	40000-54500
ಕುಮಟ	
ಚಿಪ್ಪು	25189-32089
ಕೋಕ	15019-28019
ಫ್ಯಾಕ್ಟರಿ	10199-19829
ಹಳೆಚಾಲಿ	36099-39509
ಹೊಸಚಾಲಿ	30019-33000
ಸಾಗರ	
ಬಿಳಿಗೋಟು	21899-30229
ಕೋಕ	16899-30599
ಚಾಲಿ	25989-38749
ಕೆಂಪುಗೋಟು	20099-31899
ರಾಶಿ	34009-41169
ಸಿಪ್ಪೆಗೋಟು	15669-20001
ಶಿವಮೊಗ್ಗ	
ಬೆಟ್ಟೆ	44599-49300
ಗೊರಬಲು	17000-32159
ಹೊಸತು	38159-41099
ರಾಶಿ	39069-41219
ಸರಕು	52909-79396
ಸಿದ್ದಾಪುರ	
ಬಿಳಿಗೋಟು	27399-32819
ಚಾಲಿ	35499-39299
ಕೋಕ	25389-28499
ಕೆಂಪುಗೋಟು	28199-28689
ರಾಶಿ	39869-40199
ತಟ್ಟಿಬೆಟ್ಟೆ	33119-36809
ಶಿರಸಿ	
ಬೆಟ್ಟೆ	32699-38500
ಬಿಳಿಗೋಟು	21089-34399
ಚಾಲಿ	37066-40619
ಕೆಂಪುಗೋಟು	21699-30269
ರಾಶಿ	37769-41399
ಯಲ್ಲಾಪುರ	
ಅಪಿ	50409-50409
ಬಿಳಿಗೋಟು	24899-33699
ಕೋಕ	16109-26611
ಕೆಂಪುಗೋಟು	37099-40119
ರಾಶಿ	40710-44799
ತಟ್ಟಿಬೆಟ್ಟೆ	37099-40119

ತಗ್ಗಿದ ಆಹಾರ ವಸ್ತುಗಳ ಬೆಲೆ: ಗರಿಷ್ಠ ಮಟ್ಟದಿಂದ ಇಳಿದ ಹಣದುಬ್ಬರ

ಚಿಲ್ಲರೆ ಹಣದುಬ್ಬರ 11 ತಿಂಗಳ ಕನಿಷ್ಠ

ನವದೆಹಲಿ (ಪಿಟಿಐ): ಚಿಲ್ಲರೆ ಹಣದುಬ್ಬರವು ನವೆಂಬರ್‌ನಲ್ಲಿ 11 ತಿಂಗಳ ಕನಿಷ್ಠ ಮಟ್ಟವಾದ ಶೇ 5.88ಕ್ಕೆ ಇಳಿಕೆ ಕಂಡಿದೆ. ಆಹಾರ ವಸ್ತುಗಳ ದರ ಇಳಿಕೆ ಆಗಿರುವುದೇ ಇದಕ್ಕೆ ಕಾರಣ.

11 ತಿಂಗಳಿನಲ್ಲಿ ಇದೇ ಮೊದಲ ಬಾರಿಗೆ ಚಿಲ್ಲರೆ ಹಣದುಬ್ಬರವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಹಾಕಿಕೊಂಡಿರುವ ಗರಿಷ್ಠ ಮಿತಿಯಾದ ಶೇ 6ಕ್ಕಿಂತಲೂ ಕೆಳಕ್ಕೆ ಇಳಿಕೆ ಕಂಡಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ಗ್ರಾಹಕರ ದರ ಸೂಚ್ಯಂಕ (ಸಿಪಿಐ) ಆಧರಿಸಿದ ಚಿಲ್ಲರೆ ಹಣದುಬ್ಬರವು ಸತತ ಎರಡನೇ ತಿಂಗಳಿನಲ್ಲಿಯೂ ಇಳಿಕೆ ಕಂಡಿದೆ. ಅಕ್ಟೋಬರ್‌ನಲ್ಲಿ ಶೇ 6.77ರಷ್ಟು ಇತ್ತು.

2021ರ ನವೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.91ರಷ್ಟು ಇತ್ತು.

ಆಹಾರ ಉತ್ಪನ್ನಗಳ ಹಣದುಬ್ಬರವು ಅಕ್ಟೋಬರ್‌ನಲ್ಲಿ ಶೇ7.01ರಷ್ಟು ಇದ್ದಿದ್ದು ನವೆಂಬರ್‌ನಲ್ಲಿ ಶೇ4.67ಕ್ಕೆ ಇಳಿಕೆ ಆಗಿದೆ.

ಚಿಲ್ಲರೆ ಹಣದುಬ್ಬರವು ಜನವರಿ–ಮಾರ್ಚ್ ಅವಧಿಯಲ್ಲಿ ಶೇ 6ಕ್ಕಿಂತಲೂ ಕೆಳಗೆ ಬರಲಿದೆ ಎಂದು ಆರ್‌ಬಿಐ ಅಂದಾಜು ಮಾಡಿದೆ.

'ಹಣದುಬ್ಬರ ಪ್ರಮಾಣವು ಕಡಿಮೆಯಾಗುವ ನಿರೀಕ್ಷೆ ಇದೆ. ಆದರೆ, ಹಣದುಬ್ಬರದ ಮೇಲಿನ ಸಮರಕೊನೆಗೊಂಡಿಲ್ಲ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಕಳೆದ ವಾರ ನಡೆದ ಹಣಕಾಸು ನೀತಿ ಸಮಿತಿ (ಎಂಪಿಸಿ) ಸಭೆಯಲ್ಲಿ ಹೇಳಿದ್ದರು.

ಹಣದುಬ್ಬರವನ್ನು ನಿಯಂತ್ರಿಸಲು ಆರ್‌ಬಿಐ ಕಳೆದ ವಾರ ರೆಪೊ ದರವನ್ನು ಶೇ 0.35ರಷ್ಟು ಹೆಚ್ಚಳ ಮಾಡಿದೆ. 2022ರ ಮೇ ತಿಂಗಳಿನಿಂದ ಈವರೆಗೆ ರೆಪೊ ದರವನ್ನು ಒಟ್ಟು ಶೇ 2.25ರಷ್ಟು ಏರಿಕೆ ಮಾಡಲಾಗಿದೆ.

ಚಿಲ್ಲರೆ ಹಣದುಬ್ಬರವು ಅನಿರೀಕ್ಷಿತವಾಗಿ ನವೆಂಬರ್‌ನಲ್ಲಿ ಶೇ 6ಕ್ಕಿಂತಲೂ ಕೆಳಕ್ಕೆ ಇಳಿಕೆ ಕಂಡಿದೆ. ಆಹಾರ ಹಣದುಬ್ಬರ ಮತ್ತು ತರಕಾರಿಗಳ ಬೆಲೆಯು ಇಳಿಕೆ ಆಗುತ್ತಿರುವುದನ್ನು ಇದು ಸೂಚಿಸುತ್ತಿದೆ ಎಂದು ಐಸಿಆರ್‌ಎನ ಮುಖ್ಯ ಆರ್ಥಿಕ ತಜ್ಞೆ ಅದಿತಿ ನಾಯರ್ ಹೇಳಿದ್ದಾರೆ.



ಆಹಾರ ವಸ್ತುಗಳ ದರ ಇಳಿಕೆಗೆ ಕೇಂದ್ರ ಸರ್ಕಾರ ಕೈಗೊಂಡ ಕ್ರಮಗಳಿಂದಾಗಿ ಹಣದುಬ್ಬರವು ಶೇ 6ಕ್ಕಿಂತಲೂ ಕೆಳಕ್ಕೆ ಇಳಿಕೆ ಕಾಣುವಂತಾಯಿತು

ಹಣಕಾಸು ಸಚಿವಾಲಯ

ಕುಸಿದ ಕೈಗಾರಿಕಾ ಉತ್ಪಾದನೆ

ದೇಶದ ಕೈಗಾರಿಕಾ ಉತ್ಪಾದನೆಯು ಅಕ್ಟೋಬರ್‌ನಲ್ಲಿ ಶೇ 4ರಷ್ಟು ಇಳಿಕೆ ಕಂಡಿದೆ. 26 ತಿಂಗಳಿನಲ್ಲಿ ಕಂಡಿರುವ ಅತಿ ಹೆಚ್ಚಿನ ಕುಸಿತ ಇದಾಗಿದೆ. ಈ ಹಿಂದೆ 2020ರ ಆಗಸ್ಟ್‌ನಲ್ಲಿ ಕೈಗಾರಿಕಾ ಉತ್ಪಾದನೆಯು ಶೇ (–) 7.1ರಷ್ಟು ಇತ್ತು.

ತಯಾರಿಕಾ ವಲಯದ ಬೆಳವಣಿಗೆ ಇಳಿಕೆ ಆಗಿರುವುದು ಹಾಗೂ ಗಣಿ ಮತ್ತು ವಿದ್ಯುತ್ ವಲಯವು ಮಂದಗತಿಯ ಬೆಳವಣಿಗೆ ಕಂಡಿರುವುದೇ ಇದಕ್ಕೆ ಕಾರಣ. ಕೈಗಾರಿಕಾ ಉತ್ಪಾದನೆ ಸೂಚ್ಯಂಕವು (ಐಐಪಿ) 2021ರ ಅಕ್ಟೋಬರ್‌ನಲ್ಲಿ ಶೇ 4.2ರಷ್ಟು ಬೆಳವಣಿಗೆ ಕಂಡಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಮಾಹಿತಿಯ ಪ್ರಕಾರ, ತಯಾರಿಕಾ ವಲಯದ ಬೆಳವಣಿಗೆಯು 2022ರ ಅಕ್ಟೋಬರ್‌ನಲ್ಲಿ ಶೇ 5.6ರಷ್ಟು ಇಳಿಕೆ ಆಗಿದೆ. ಗಣಿ ವಲಯ ಶೇ 2.5ರಷ್ಟು ಮತ್ತು ವಿದ್ಯುತ್ ವಲಯ ಶೇ 1.2ರಷ್ಟು ಅಲ್ಪ ಬೆಳವಣಿಗೆ ಕಂಡಿವೆ.

ಏಪ್ರಿಲ್–ಅಕ್ಟೋಬರ್ ಅವಧಿಯಲ್ಲಿ ಐಐಪಿ ಬೆಳವಣಿಗೆಯು ಶೇ 5.3ರಷ್ಟು ಆಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಶೇ 20.5ರಷ್ಟು ಆಗಿತ್ತು.

ಸಂಕ್ಷಿಪ್ತ ಸುದ್ದಿ

ನೇರ ತೆರಿಗೆ ಸಂಗ್ರಹ ಶೇ 24ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ನವೆಂಬರ್ ಅವಧಿಯಲ್ಲಿ ನಿವ್ವಳ ನೇರ ತೆರಿಗೆ ಸಂಗ್ರಹವು ₹8.77 ಲಕ್ಷ ಕೋಟಿಯಷ್ಟು ಆಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ಸೋಮವಾರ ಹೇಳಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ತೆರಿಗೆ ಸಂಗ್ರಹದಲ್ಲಿ ಶೇ 24ರಷ್ಟು ಹೆಚ್ಚಾಗಿದೆ ಎಂದು ಅದು ತಿಳಿಸಿದೆ.

2022–23ನೇ ಹಣಕಾಸು ವರ್ಷಕ್ಕೆ ನೇರ ತೆರಿಗೆ ಮೂಲಕ ₹14.20 ಲಕ್ಷ ಕೋಟಿ ವರಮಾನ ಸಂಗ್ರಹ ಆಗಲಿದೆ ಎಂದು ಬಜೆಟ್‌ನಲ್ಲಿ ಅಂದಾಜು ಮಾಡಲಾಗಿದೆ. ಇದಕ್ಕೆ ಹೋಲಿಸಿದರೆ ಈವರೆಗೆ ಸಂಗ್ರಹ ಆಗಿರುವ ಮೊತ್ತದ ಪ್ರಮಾಣವು ಶೇ 61.79ರಷ್ಟು ಆಗಿದೆ ಎಂದು ಸಚಿವಾಲಯವು ಟ್ವೀಟ್ ಮಾಡಿದೆ. 2021–22ನೇ ಹಣಕಾಸು ವರ್ಷದಲ್ಲಿ ನೇರ ತೆರಿಗೆ ಮೂಲಕ ₹14.10 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು.

5000 ನೇಮಕ: ಮೆಕ್‌ಡೊನಾಲ್ಡ್ಸ್

ಗುವಾಹತಿ (ಪಿಟಿಐ): ಮೆಕ್‌ಡೊನಾಲ್ಡ್ಸ್ ಇಂಡಿಯಾ ಕಂಪನಿಯು 5 ಸಾವಿರ ಜನರನ್ನು ನೇಮಿಸಿಕೊಳ್ಳುವುದಾಗಿ ಸೋಮವಾರ ತಿಳಿಸಿದೆ.

ದೇಶದ ಉತ್ತರ ಮತ್ತು ಪೂರ್ವ ಭಾಗದಲ್ಲಿ ಮೂರು ವರ್ಷಗಳಲ್ಲಿ ತನ್ನ ಮಳಿಗೆಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಮುಂದಾಗಿದ್ದು, ಇದರ ಭಾಗವಾಗಿ ಈ ನೇಮಕಕ್ಕೆ ನಿರ್ಧರಿಸಲಾಗಿದೆ ಎಂದು ಅದು ಹೇಳಿದೆ.

ರೂಪಾಯಿ ಕುಸಿತ ತಡೆಯಲು ಕರೆನ್ಸಿ ಮಾರಿದ ಆರ್‌ಬಿಐ

ನವದೆಹಲಿ (ಪಿಟಿಐ): ರೂಪಾಯಿ ಹೆಚ್ಚಿನ ಕುಸಿತ ಕಾಣುವುದನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ಮೀಸಲು ಸಂಗ್ರಹದಲ್ಲಿ ₹2.74 ಲಕ್ಷ ಕೋಟಿಯನ್ನು ಪ್ರಸಕ್ತ ಹಣಕಾಸು ವರ್ಷದ ಆರು ತಿಂಗಳಿನಲ್ಲಿ ಮಾರಾಟ ಮಾಡಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸೋಮವಾರ ಲೋಕಸಭೆಗೆ ಈ ಮಾಹಿತಿ ನೀಡಿದ್ದಾರೆ.

ರಾಜ್ಯಗಳಿಗೆ ಜಿಎಸ್‌ಟಿ ಬಾಕಿ ಮೊತ್ತ ಪಾವತಿಸಲು ಕೇಂದ್ರ ಸರ್ಕಾರ ಸಿದ್ಧವಿದೆ. ಆದರೆ, ಎಷ್ಟು ಮೊತ್ತ ಸಿಗಬೇಕು ಎನ್ನುವ ಕುರಿತು ಆಯಾ ರಾಜ್ಯಗಳ ಅಕೌಂಟೆಂಟ್ ಜನರಲ್ (ಎ.ಜಿ.) ಪ್ರಮಾಣಪತ್ರ ನೀಡಬೇಕು. ಪ್ರಮಾಣಪತ್ರ ಸಿಗುವುದು ತಡವಾದರೆ ಜಿಎಸ್‌ಟಿ ಪರಿಹಾರದ ಮೊತ್ತ ಪಾವತಿಯಲ್ಲಿ ವಿಳಂಬ ಆಗುತ್ತದೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದ್ದಾರೆ. 2022–23ರಲ್ಲಿ ನವೆಂಬರ್ 30ರವರೆಗೆ ಡಾಲರ್ ಶೇ 7.8ರಷ್ಟು ಏರಿಕೆ ಕಂಡಿದೆ. ರೂಪಾಯಿ ಶೇ 6.9ರಷ್ಟು ಇಳಿಕೆ ಆಗಿದೆ ಎಂದು ತಿಳಿಸಿದ್ದಾರೆ.

ರೂಪಾಯಿ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಸೋಮವಾರ 23 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹82.51ರಂತೆ ವಿನಿಮಯಗೊಂಡಿತು.

ಮೊದಲ ಸೆಮಿಫೈನಲ್ ಪಂದ್ಯ ಇಂದು: ಫೈನಲ್ ಕನಸಲ್ಲಿ ಅರ್ಜೆಂಟೀನಾ

ಕ್ರೊವೇಷ್ಯಾ ತಡೆ ದಾಟುವರೇ ಮೆಸ್ಸಿ?

ದೋಹಾ (ರಾಯಿಟರ್ಸ್/ ಎಪಿ): ಲಯೊನೆಲ್ ಮೆಸ್ಸಿ ಮತ್ತು ಅರ್ಜೆಂಟೀನಾ ತಂಡದ ವಿಶ್ವಕಪ್ ಟ್ರೋಫಿಯ ಕನಸು ಜೀವಂತವಾಗಿ ಉಳಿದುಕೊಂಡಿದೆ. ಆದರೆ ಲುಕಾ ಮಾಡ್ರಿಚ್ ಅವರನ್ನೊಳಗೊಂಡ ಕ್ರೊವೇಷ್ಯಾ ತಂಡ, ಸೆಮಿಫೈನಲ್‌ನಲ್ಲಿ ತಡೆಯಾಗಿ ನಿಂತಿದೆ.

ಫಿಫಾ ವಿಶ್ವಕಪ್ ಟೂರ್ನಿಯ ನಾಲ್ಕರಘಟ್ಟದ ಹಣಾಹಣಿಯಲ್ಲಿ ಅರ್ಜೆಂಟೀನಾ –ಕ್ರೊವೇಷ್ಯಾ ತಂಡಗಳು ಮಂಗಳವಾರ ತಡರಾತ್ರಿ ಎದುರಾಗಲಿವೆ. ಲುಸೈಲ್ ಕ್ರೀಡಾಂಗಣದಲ್ಲಿ ಸೇರಲಿರುವ 88 ಸಾವಿರಕ್ಕೂ ಅಧಿಕ ಪ್ರೇಕ್ಷಕರ ಮುಂದೆ ನಡೆಯುವ ಪಂದ್ಯ, ಫುಟ್‌ಬಾಲ್ ಪ್ರೇಮಿಗಳ ಕುತೂಹಲಕ್ಕೆ ಕಾರಣವಾಗಿದೆ.

ಆಧುನಿಕ ಫುಟ್‌ಬಾಲ್‌ನ ದಿಗ್ಗಜ ಆಟಗಾರರಾದ ನೇಮರ್ ಮತ್ತು ಕ್ರಿಸ್ಟಿಯಾನೊ ರೊನಾಲ್ಡೊ ತಮ್ಮ ತಂಡಗಳು ಸೋತ ಕಾರಣ ಕಣ್ಣೀರು ಹಾಕುತ್ತಾ ಟೂರ್ನಿಗೆ ಗುಡ್‌ಬೈ ಹೇಳಿದ್ದಾರೆ. ಮೆಸ್ಸಿ ಅವರಿಗೆ ಅದೇ ಸಂಕಟ ಎದುರಾಗದಿರಲಿ ಎಂಬುದು ವಿಶ್ವದ ವಿವಿಧೆಡೆಯಿರುವ ಅವರ ಕೋಟ್ಯಂತರ ಅಭಿಮಾನಿಗಳ ಪ್ರಾರ್ಥನೆಯಾಗಿದೆ.

ಆದರೆ, ಕಳೆದ ಬಾರಿಯ ರನ್ನರ್ ಅಪ್ ಕ್ರೊವೇಷ್ಯಾ ತಂಡದವರು ಮೆಸ್ಸಿ ಬಳಗವನ್ನು ಮನೆಗೆ ಕಳುಹಿಸಲು ಎಲ್ಲ ತಯಾರಿ ನಡೆಸಿದ್ದಾರೆ. ನೇಮರ್ ಅವರ ವಿಶ್ವಕಪ್ ಗೆಲ್ಲುವ ಕನಸನ್ನು ಕ್ವಾರ್ಟರ್ ಫೈನಲ್‌ನಲ್ಲಿ ನುಚ್ಚುನೂರು ಮಾಡಿರುವ ಕ್ರೊವೇಷ್ಯಾ, ಮತ್ತೊಬ್ಬ ಸ್ಟಾರ್ ಆಟಗಾರನಿಗೂ ಆಘಾತ ನೀಡುವ ಛಲದೊಂದಿಗೆ ಕಣಕ್ಕಿಳಿಯಲಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ಸೌದಿ ಅರೇಬಿಯಾ ಎದುರು ಆಘಾತ ಅನುಭವಿಸಿದ್ದ ಅರ್ಜೆಂಟೀನಾ, ಆ ಬಳಿಕ ಪುಟಿದೆದ್ದು ನಿಂತಿದೆ. ನೆದರ್ಲೆಂಡ್ಸ್ ವಿರುದ್ಧದ ಕ್ವಾರ್ಟರ್ ಫೈನಲ್ ಪಂದ್ಯವನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ರೋಚಕವಾಗಿ ಜಯಿಸಿತ್ತು.

‘ಬ್ರೆಜಿಲ್‌ಗೆ ಸರಿಸಾಟಿಯಾಗಿ ನಿಂತ ಕ್ರೊವೇಷ್ಯಾ, ಬಲಿಷ್ಠ ತಂಡ ಎಂಬುದರಲ್ಲಿ ಎರಡು ಮಾತಿಲ್ಲ. ಮಿಡ್‌ಫೀಲ್ಡ್‌ನಲ್ಲಿ ಆಡುವ ಎಲ್ಲ ಆಟಗಾರರೂ ಅತ್ಯುತ್ತಮ ಫಾರ್ಮ್‌ನಲ್ಲಿದ್ದಾರೆ’ ಎಂದು ಮೆಸ್ಸಿ ಅವರು ಎದುರಾಳಿಗಳ ಬಗ್ಗೆ ಎಚ್ಚರಿಕೆಯ ಮಾತನ್ನಾಡಿದ್ದಾರೆ.

ಅರ್ಜೆಂಟೀನಾ ಕೋಚ್ ಲಯೊನೆಲ್ ಸ್ಕಾಲೊನಿ ಅವರು ನೆದರ್ಲೆಂಡ್ಸ್ ವಿರುದ್ಧ ಐವರು ಡಿಫೆಂಡರ್‌ಗಳನ್ನು ಕಣಕ್ಕಿಳಿಸಿದ್ದರು. ಅದಕ್ಕಾಗಿ ಲಿಸಾಂಡ್ರೊ ಮಾರ್ಟಿನೆಜ್ ಅವರಿಗೆ ಅಂತಿಮ ಇಲೆವೆನ್‌ನಲ್ಲಿ ಸ್ಥಾನ ನೀಡಿದ್ದರು. ಮಿಡ್‌ಫೀಲ್ಡ್‌ನಲ್ಲಿ ಆಟವನ್ನು ನಿಯಂತ್ರಿಸುವ ಕ್ರೊವೇಷ್ಯಾ ವಿರುದ್ಧ ಅವರು ಯಾವ ತಂತ್ರ ಅನುಸರಿಸುವರು ಎಂಬುದನ್ನು ನೋಡಬೇಕು.

37 ವರ್ಷದ ಲುಕಾ ಮಾಡ್ರಿಚ್ ಅವರ ಅನುಭವ ಕ್ರೊವೇಷ್ಯಾಕ್ಕೆ ನೆರವಾಗಲಿದೆ. ಮಾಡ್ರಿಚ್ ಈ ಟೂರ್ನಿಯಲ್ಲಿ ಯಾವುದೇ ಗೋಲು ಗಳಿಸಿಲ್ಲ. ಮಾತ್ರವಲ್ಲ, ಇತರರ ಗೋಲಿಗೆ ‘ಅಸಿಸ್ಟ್’ ಕೂಡಾ ನೀಡಿಲ್ಲ. ಆದರೆ ಅವರ ಸಾನ್ನಿಧ್ಯ ತಂಡಕ್ಕೆ ಚೈತನ್ಯ ತುಂಬುತ್ತದೆ. ಮಾರ್ಸೆಲೊ ಬ್ರೊವಿಸಿಚ್ ಮತ್ತು ಮಟೆಯೊ ಕೊವಸಿಚ್ ಅವರೂ ಮಿಡ್‌ಫೀಲ್ಡ್‌ಗೆ ಬಲ ತುಂಬುವರು.

ಉಭಯ ತಂಡಗಳು ಒಟ್ಟಾರೆಯಾಗಿ ಐದು ಸಲ ಪರಸ್ಪರ ಎದುರಾಗಿದೆ-ಯಾದರೂ, ವಿಶ್ವಕಪ್‌ನಲ್ಲಿ ಎರಡು ಸಲ ಮಾತ್ರ ಸೆಣಸಾಟ ನಡೆಸಿವೆ. 1998ರ ಟೂರ್ನಿಯ ಲೀಗ್ ಹಂತದಲ್ಲಿ ಅರ್ಜೆಂಟೀನಾ 1–0 ರಲ್ಲಿ ಗೆದ್ದಿದ್ದರೆ, 2018ರ ಟೂರ್ನಿಯ ಲೀಗ್ ಪಂದ್ಯದಲ್ಲಿ ಕ್ರೊವೇಷ್ಯಾ 3–0 ರಲ್ಲಿ ಜಯಿಸಿತ್ತು.



- ಬ್ರೆಜಿಲ್ (2002) ಬಳಿಕ ಸತತ ಎರಡು ವಿಶ್ವಕಪ್ ಟೂರ್ನಿಯ ಫೈನಲ್ ಪ್ರವೇಶಿಸುವ ಮೊದಲ ತಂಡ ಎನಿಸಿಕೊಳ್ಳುವ ಅವಕಾಶ ಕ್ರೊವೇಷ್ಯಾಕ್ಕೆ ದೊರೆತಿದೆ.
- ವಿಶ್ವಕಪ್ ಟೂರ್ನಿಯಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಫಲಿತಾಂಶ ನಿರ್ಣಯಗೊಂಡ ತನ್ನ ಎಲ್ಲ ನಾಲ್ಕೂ ಪಂದ್ಯಗಳನ್ನು ಕ್ರೊವೇಷ್ಯಾ ಗೆದ್ದಿದೆ.
- ಲಯೊನೆಲ್ ಮೆಸ್ಸಿ ತಮ್ಮ ಎರಡನೇ ವಿಶ್ವಕಪ್ ಫೈನಲ್ ಎದುರು ನೋಡುತ್ತಿದ್ದಾರೆ. 2014ರ ಫೈನಲ್‌ನಲ್ಲಿ ಅವರನ್ನೊಳಗೊಂಡ ಅರ್ಜೆಂಟೀನಾ ತಂಡ ಜರ್ಮನಿ ಎದುರು ಸೋತಿತ್ತು.
- 1978 ಮತ್ತು 1986 ರಲ್ಲಿ ಚಾಂಪಿಯನ್ ಆಗಿರುವ ಅರ್ಜೆಂಟೀನಾ, ಮೂರು ಸಲ ರನ್ನರ್ಸ್ ಅಪ್ ಆಗಿದೆ.

ಬಲಾಬಲ

5	ಒಟ್ಟು ಪಂದ್ಯ
2	ಅರ್ಜೆಂಟೀನಾ ಜಯ
2	ಕ್ರೊವೇಷ್ಯಾ ಜಯ
1	ಡ್ರಾ

ಇಂದಿನ ಸೆಮಿಫೈನಲ್

ಅರ್ಜೆಂಟೀನಾ Vs ಕ್ರೊವೇಷ್ಯಾ — ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನಿಮಾ ಆ್ಯಪ್

ಲುಕಾ ಮಾಡ್ರಿಚ್ (ಎಡ) ಹಾಗೂ ಲಯೊನೆಲ್ ಮೆಸ್ಸಿ —ಎಎಫ್‌ಪಿ ಚಿತ್ರಗಳು

‘ಸುಂದರ ಕನಸು ಅಸ್ತಮಿಸಿದೆ’

ಲಿಸ್ಬನ್ (ಎಪಿ/ಎಎಫ್‌ಪಿ): ವಿಶ್ವಕಪ್ ಟೂರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದಿರುವ ಪೋರ್ಚುಗಲ್ ತಂಡದ ಸ್ಟಾರ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಅಂತರರಾಷ್ಟ್ರೀಯ ಫುಟ್‌ಬಾಲ್‌ಗೆ ನಿವೃತ್ತಿ ಪ್ರಕಟಿಸುವ ಬಗ್ಗೆ ಸ್ಪಷ್ಟವಾಗಿ ಏನೂ ಹೇಳಿಲ್ಲ.

ಮೊರೊಕ್ಕೊ ವಿರುದ್ಧದ ಸೋಲಿನ ಬಗ್ಗೆ ಇದೇ ಮೊದಲ ಬಾರಿ ಪ್ರತಿಕ್ರಿಯಿಸಿರುವ ಅವರು, ‘ವಿಶ್ವಕಪ್ ಗೆಲ್ಲಬೇಕೆಂಬ ಸುದೀರ್ಘ ಕನಸು ಕೊನೆಗೊಂಡಿದೆ. ಆ ಕನಸು ಇರುವವರೆಗೂ ಎಲ್ಲವೂ ತುಂಬಾ ಸುಂದರವಾಗಿತ್ತು’ ಎಂದು ತಮ್ಮ ‘ಇನ್‌ಸ್ಟಾಗ್ರಾಂ’ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಕ್ರಿಸ್ಟಿಯಾನೊ ರೊನಾಲ್ಡೊ

‘16 ವರ್ಷಗಳಲ್ಲಿ ಐದು ವಿಶ್ವಕಪ್ ಟೂರ್ನಿಗಳಲ್ಲಿ ಪಾಲ್ಗೊಂಡೆ. ಪೋರ್ಚುಗಲ್ ಜನರ ಬೆಂಬಲದೊಂದಿಗೆ ಶ್ರೇಷ್ಠ ಆಟಗಾರರ ಜತೆ ಆಡುವಾಗ ನನ್ನ ಪೂರ್ಣ ಸಾಮರ್ಥ್ಯ ತೋರಿಸಿದ್ದೇನೆ. ರಾಷ್ಟ್ರೀಯ ತಂಡದ ಸೇವೆಗೆ ಯಾವತ್ತೂ ಬೆನ್ನು ತಿರುಗಿಸಿಲ್ಲ’ ಎಂದಿದ್ದಾರೆ.

ಸ್ವಿಟ್ಜರ್‌ಲೆಂಡ್ ಮತ್ತು ಮೊರೊಕ್ಕೊ ವಿರುದ್ಧದ ಪಂದ್ಯಗಳಲ್ಲಿ ಆರಂಭಿಕ ಇಲೆವೆನ್‌ನಲ್ಲಿ ತಮ್ಮನ್ನು ಕಣಕ್ಕಿಳಿಸದೇ ಇರುವುದರ ಬಗ್ಗೆ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ‘ಆತುರದಲ್ಲಿ ಪ್ರತಿಕ್ರಿಯಿಸುವುದಕ್ಕೆ ಅರ್ಥವಿಲ್ಲ’ ಎಂದಷ್ಟೇ ಹೇಳಿದ್ದಾರೆ. 37 ವರ್ಷದ ರೊನಾಲ್ಡೊ ಅವರಿಗೆ ಇದು ಕೊನೆಯ ವಿಶ್ವಕಪ್ ಟೂರ್ನಿ ಆಗಿತ್ತು.

ಮುಂದಿನ ಯೂರೋ ಕಪ್ 2024 ರಲ್ಲಿ ನಡೆಯಲಿದ್ದು, ರೊನಾಲ್ಡೊ ಆಡುವುದು ಅನುಮಾನ. ಮುಂಬರುವ ವಿಶ್ವಕಪ್ 2026 ರಲ್ಲಿ ನಡೆಯಲಿದ್ದು, ಆ ವೇಳೆ ಅವರಿಗೆ 41 ವರ್ಷ ಆಗಿರುತ್ತದೆ. ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ ತೊರೆದಿರುವ ಅವರು ಭವಿಷ್ಯದ ಬಗ್ಗೆ ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ರೊನಾಲ್ಡೊ ಕತಾರ್‌ನಲ್ಲಿ ಒಂದು ಗೋಲು ಮಾತ್ರ ಗಳಿಸಿದ್ದರು. ಘಾನಾ ವಿರುದ್ಧದ ಪಂದ್ಯದಲ್ಲಿ ಪೆನಾಲ್ಟಿ ಕಿಕ್ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದ್ದರು. ಐದು ವಿಶ್ವಕಪ್ ಟೂರ್ನಿಗಳಲ್ಲಿ ಗೋಲು ಗಳಿಸಿದ ಏಕೈಕ ಆಟಗಾರ ಎಂಬ ದಾಖಲೆಯನ್ನು ಮಾಡಿದ್ದರು.

ಏರ್ ಪಿಸ್ತೂಲ್: ದಿವ್ಯಾಗೆ ಚಿನ್ನ

ಭೋಪಾಲ್ (ಪಿಟಿಐ): ಕರ್ನಾಟಕದ ಟಿ.ಎಸ್.ದಿವ್ಯಾ ಅವರು ಇಲ್ಲಿ ಕೊನೆಗೊಂಡ 65ನೇ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಸೋಮವಾರ ನಡೆದ ಮಹಿಳೆಯರ 10 ಮೀ. ಏರ್ ಪಿಸ್ತೂಲ್ ವಿಭಾಗದ ಫೈನಲ್‌ನಲ್ಲಿ ಅವರು 16–14 ಪಾಯಿಂಟ್ಸ್‌ಗಳಿಂದ ಉತ್ತರ ಪ್ರದೇಶದ ಸಂಸ್ಕೃತಿ ಬನಾ ವಿರುದ್ಧ ಗೆದ್ದರು. ಹರಿಯಾಣದ ರಿದಂ ಸಂಗ್ವಾನ್ ಕಂಚಿನ ಪದಕ ಪಡೆದುಕೊಂಡರು.

ಒಲಿಂಪಿಯನ್ ಮನು ಭಾಕರ್, ಜೂನಿಯರ್ ಮಹಿಳೆಯರ ಏರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದರು. ಫೈನಲ್‌ನಲ್ಲಿ 17–13 ರಲ್ಲಿ ತೆಲಂಗಾಣದ ಇಶಾ ಸಿಂಗ್ ಅವರನ್ನು ಮಣಿಸಿದರು. ಮಹಿಳೆಯರ ಏರ್ ಪಿಸ್ತೂಲ್ ವಿಭಾಗದ ಅರ್ಹತಾ ಸುತ್ತಿನಲ್ಲಿ 583 ಪಾಯಿಂಟ್ಸ್‌ಗಳೊಂದಿಗೆ ಮನು ಅಗ್ರಸ್ಥಾನ ಪಡೆದಿದ್ದರು. ದಿವ್ಯಾ (578) ಮತ್ತು ಸಂಸ್ಕೃತಿ (577) ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನ ಗಳಿಸಿದ್ದರು. ಬಳಿಕ ನಡೆದ ರ‍್ಯಾಂಕಿಂಗ್ ವಿಭಾಗದಲ್ಲಿ ಕ್ರಮವಾಗಿ ಮೊದಲ ಎರಡು ಸ್ಥಾನಗಳನ್ನು ಪಡೆದ ದಿವ್ಯಾ (254.2) ಮತ್ತು ಸಂಸ್ಕೃತಿ (251.6) ಅವರು ಚಿನ್ನದ ಪದಕಕ್ಕೆ ಪೈಪೋಟಿ ನಡೆಸಲು ಅರ್ಹತೆ ಗಿಟ್ಟಿಸಿಕೊಂಡಿದ್ದರು.

ಟಿ. ಎಸ್. ದಿವ್ಯಾ

ವೇಟ್‌ಲಿಫ್ಟಿಂಗ್ ಕೋಚ್ ರಾಜೇಂದ್ರ ನಿಧನ

ಪುತ್ತೂರು (ದಕ್ಷಿಣ ಕನ್ನಡ): ರಾಷ್ಟ್ರೀಯ ವೇಟ್‌ಲಿಫ್ಟರ್, ಅಂತರ ವಿಶ್ವವಿದ್ಯಾಲಯ ಸ್ಪರ್ಧೆಗಳ ಪದಕ ವಿಜೇತ, ಕೋಚ್ ಇಲ್ಲಿನ ಪಡೀಲು ನಿವಾಸಿ ರಾಜೇಂದ್ರ ಪ್ರಸಾದ್ (42) ಹೃದಯಾಘಾತದಿಂದ ಸೋಮವಾರ ನಿಧನರಾಗಿದ್ದಾರೆ. ಅವರಿಗೆ ತಂದೆ, ತಾಯಿ, ಪತ್ನಿ ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಪುತ್ತೂರು ಸೇಂಟ್ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಯಾಗಿದ್ದ ಸಂದರ್ಭದಲ್ಲಿ ಅಖಿಲ ಭಾರತ ಅಂತರ ವಿ.ವಿ ಚಾಂಪಿಯನ್‌ಷಿಪ್‌ಗಳಲ್ಲಿ ಮಂಗಳೂರು ವಿ.ವಿಯನ್ನು ಪ್ರತಿನಿಧಿಸಿದ್ದ ಅವರು ನಂತರ ಸೇಂಟ್ ಫಿಲೋಮಿನಾ ಮತ್ತು ಉಜಿರೆಯ ಎಸ್‌ಡಿಎಂ ಕಾಲೇಜಿನಲ್ಲಿ ಕೋಚ್ ಆಗಿದ್ದರು. ಈಚಿನ ಕೆಲವು ವರ್ಷಗಳಿಂದ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದಲ್ಲಿ ಕೋಚ್ ಆಗಿದ್ದರು.

ರಾಜೇಂದ್ರ

ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕ ವಿಜೇತ ಕುಂದಾಪುರದ ಗುರುರಾಜ್ ಪೂಜಾರಿ ಸೇರಿದಂತೆ ಅನೇಕ ವೇಟ್‌ಲಿಫ್ಟರ್‌ಗಳು ಅವರ ಶಿಷ್ಯಂದಿರು. ರಾಜೇಂದ್ರ ಪ್ರಸಾದ್ ಅಂತ್ಯಕ್ರಿಯೆ ಸೋಮವಾರ ಸಂಜೆ ನಡೆಯಿತು.

ಹಾಕಿ: ಜೈನ್, ಮಂಗಳೂರು ವಿ.ವಿಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೈನ್ ವಿಶ್ವವಿದ್ಯಾಲಯ ಮತ್ತು ಮಂಗಳೂರು ವಿಶ್ವವಿದ್ಯಾಲಯ ತಂಡಗಳು ಇಲ್ಲಿ ನಡೆಯುತ್ತಿರುವ ದಕ್ಷಿಣ ವಲಯ ಅಂತರ ವಿ.ವಿ. ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಗೆಲುವು ಪಡೆದವು.

ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೆನಾದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಜೈನ್ ವಿ.ವಿ ತಂಡ 7–1 ಗೋಲುಗಳಿಂದ ಅನಂತಪುರದ ಕೃಷ್ಣದೇವರಾಯ ವಿ.ವಿ ತಂಡವನ್ನು ಸೋಲಿಸಿತು.

ಜೈನ್ ತಂಡದ ಎಂ.ಎ.ಗೌತಮ್ (1 ಮತ್ತು 34ನೇ ನಿ.) ಎರಡು ಗೋಲುಗಳನ್ನು ಗಳಿಸಿದರೆ, ಬಿ.ಆರ್. ಬಿಪಿನ್ (3), ಎನ್.ಜಿ.ಸೋಮಯ್ಯ (7), ಸಿ.ಸಿ.ಮೌರ್ಯ ತಿಮ್ಮಯ್ಯ (16), ಎಚ್.ಎ.ವಚನ್ (23) ಮತ್ತು ಎ.ಎ.ದೇಶ್ ಪೂವಯ್ಯ (38) ಗೋಲು ಗಳಿಸಿದರು. ಕೃಷ್ಣದೇವರಾಯ ವಿ.ವಿ ಪರ ಚಂದ್ರಮೌಳಿ (32ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಮಂಗಳೂರು ವಿ.ವಿ ತಂಡ 4–0 ಗೋಲುಗಳಿಂದ ವೆಲ್ಲೋರಿನ ವಿಐಟಿ ವಿ.ವಿಯನ್ನು ಮಣಿಸಿತು. ಎಂ.ಡಿ. ನಾಣಯ್ಯ (4 ಮತ್ತು 7ನೇ ನಿ.), ಎಂ.ಕೆ. ಮುತ್ತಪ್ಪ (26) ಹಾಗೂ ಪಿ.ಎ.ಸುಬ್ರಮಣಿ (37) ಅವರು ವಿಜಯಿ ತಂಡದ ಪರ ಗೋಲು ಹೊಡೆದರು.

ರಾಣಿ ಚನ್ನಮ್ಮ ವಿ.ವಿ ತಂಡದವರು ಲಕ್ಷ್ಮಣ್ (27ನೇ ನಿ.) ತಂದಿತ್ತ ಏಕೈಕ ಗೋಲಿನ ನೆರವಿನಿಂದ ಸವಿತಾ ವಿ.ವಿ ತಂಡವನ್ನು ಸೋಲಿಸಿದರು. ಇನ್ನೊಂದು ಪಂದ್ಯದಲ್ಲಿ ಟಿಎನ್‌ಪಿಇಎಸ್ ವಿ.ವಿ 3–0 ಗೋಲುಗಳಿಂದ ಮೈಸೂರು ವಿ.ವಿ ತಂಡವನ್ನು ಮಣಿಸಿತು.

ಇತರ ಪಂದ್ಯಗಳಲ್ಲಿ ಅಣ್ಣಾಮಲೈ ವಿವಿ ತಂಡವು 4–3ರಲ್ಲಿ ಕಾರುಣ್ಯ ವಿವಿ ವಿರುದ್ಧ ಗೆದ್ದರೆ, ಉಸ್ಮಾನಿಯಾ ವಿವಿ 15–0ರಲ್ಲಿ ವಿಐಎಲ್‌ಎಸ್ ತಂಡವನ್ನು ಸೋಲಿಸಿತು.

ಕಬಡ್ಡಿ: ಬುಲ್ಸ್‌ಗೆ ದಬಾಂಗ್ ಸವಾಲು

ಮುಂಬೈ: ಟ್ರೋಫಿ ಜಯದ ಗುರಿ ಗುರಿಯಿಟ್ಟುಕೊಂಡಿರುವ ಬೆಂಗಳೂರು ಬುಲ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಮೊದಲ ಎಲಿಮಿನೇಟರ್‌ನಲ್ಲಿ ಮಂಗಳವಾರ ದಬಾಂಗ್ ಡೆಲ್ಲಿ ಸವಾಲು ಎದುರಿಸಲಿದೆ.

ಇಲ್ಲಿಯ ಡೋಮ್ ಎನ್‌ಎಸ್‌ಸಿಐ ಎಸ್‌ವಿಪಿ ಕ್ರೀಡಾಂಗಣದಲ್ಲಿ ನಡೆಯುವ ಹಣಾಹಣಿಯಲ್ಲಿ ವಿಜೇತ ತಂಡವು ಸೆಮಿಫೈನಲ್‌ಗೆ ಅರ್ಹತೆ ಗಳಿಸಲಿದೆ.

ಬೆಂಗಳೂರು ತಂಡವು ಮೂರನೇ ಸ್ಥಾನದೊಂದಿಗೆ ಪ್ಲೇ ಆಫ್ ಅರ್ಹತೆ ಗಳಿಸಿದೆ. ಡೆಲ್ಲಿ ಆರನೇ ಸ್ಥಾನದಲ್ಲಿದೆ. ಇಲ್ಲಿ ಗೆದ್ದ ತಂಡವು ಸೆಮಿಯಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡದ ಎದುರು ಆಡಲಿದೆ.

ಇಂದಿನ ಪಂದ್ಯಗಳು (ಎಲಿಮಿನೇಟರ್ಸ್)

ಬೆಂಗಳೂರು ಬುಲ್ಸ್ – ದಬಾಂಗ್ ಡೆಲ್ಲಿ; ಆರಂಭ: ರಾತ್ರಿ 7.30

ಯುಪಿ ಯೋಧಾಸ್ – ತಮಿಳ್ ತಲೈವಾಸ್; ಆರಂಭ: ರಾತ್ರಿ 8.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

#5-star safety rating applicable on Altroz only. *Terms and conditions apply. This offer is available on select models. Please contact nearest Tata Motors Passenger Vehicles dealership for more details. Images and illustrations are indicative and for information purposes only. Discount mentioned is at the discretion of Tata Motors Passenger Vehicles Limited. All Features/specifications are not available in all variants and may vary for different variants. Specifications/features are subject to change without prior information. Please consult an authorised Tata Motors dealer for latest information on features/specifications before deciding to place an order. Colours may vary due to printing limitations. Local taxes and Octroi extra. All offers are at sole discretion of Tata Motors and can be changed by Tata Motors without any prior notice. Offer available till stocks last.

ADISHAKTI CARS	KEY MOTORS	KHT MOTORS	KROPEX AUTO	PRERANA MOTORS	SREE AUTO
Hebbal: 7506023837; Dasarahalli: 9167982568	Kanakapura Road, Mysore Road, Kanakapura City, Bannerghatta Road, Sunkadakatte Magadi Road, Nelamangala: 7506023980	Whitefield: 7506023988; Domlur, Kolar: 7506024006	Hosur Road, Koramangala, Sarjapur road, Mahadevapura: 7506024016	Lalbagh Road: 7506024020; BTM Layout: 7506024118; Rajajinagar: 7506024039; Yelahanka: 9619489334	Tumkur, Tiptur, Kunigal, Chikkaballapur: 7506024318